# ಅನಿಕೇತನ

(ಅನುವಾದ ಸಾಹಿತ್ಯಕ್ಕೆ ಮೀಸಲಾದ ತ್ರೈಮಾಸಿಕ)

---

ಈ ಸಂಚಿಕೆಯಲ್ಲಿ...

ರಾಬರ್ಟ್ ಹೆರಿಕ್ ○ ಅನ್ನಾ ಅಖ್ಮತೋವಾ ○ ಆಡೆನ್
ರಾಬರ್ಟ್ ಫ್ರಾಸ್ಟ್ ○ ಬನ್‌ಫೂಲ್ ○ ಮೊಪಾಸ
ಶೋಭಾ ವಾರಿಯರ್ ○ ರಾವೂರಿ ಭರದ್ವಾಜ
ಭೀಷ್ಮ ಸಾಹನಿ ○ ಶೀನಪ್ಪ ಹೆಗ್ಗಡೆ ○ ವಿಲ್‌ಡುರಾಂಟ್....
ಮೊದಲಾದವರು

---

ಕರ್ನಾಟಕ ಸಾಹಿತ್ಯ ಅಕಾಡೆಮಿ
ಬೆಂಗಳೂರು

ಸಂ. 3-2
ಜುಲೈ 1990 - ಸೆಪ್ಟೆಂಬರ್ 1990

# ಅನಿಕೇತನ

(ಅನುವಾದ ಸಾಹಿತ್ಯಕ್ಕೆ ಮೀಸಲಾದ ತ್ರೈಮಾಸಿಕ)

ಸಂಪಾದಕರು :

ಬಿ. ವೈ. ಲಲಿತಾಂಬ
ಡಾ. ಆರ್ವಿಯೆಸ್. ಸುಂದರಂ
ಡಾ. ಎಚ್. ಎಸ್. ವೆಂಕಟೇಶಮೂರ್ತಿ

ಕರ್ನಾಟಕ ಸಾಹಿತ್ಯ ಅಕಾಡೆಮಿ
ಬೆಂಗಳೂರು - 560 002

ಅನಿಕೇತನ

ಕರ್ನಾಟಕ ಸಾಹಿತ್ಯ ಅಕಾಡೆಮಿಯ ತ್ರೈಮಾಸಿಕ

ಸಂ. 3-2, ಜುಲೈ 1990 - ಸೆಪ್ಟೆಂಬರ್ 1990

ಪ್ರಧಾನ ಸಂಪಾದಕರು :

ಡಾ. ಜಿ. ಎಸ್. ಶಿವರುದ್ರಪ್ಪ
ಅಧ್ಯಕ್ಷರು
ಕರ್ನಾಟಕ ಸಾಹಿತ್ಯ ಅಕಾಡೆಮಿ

ನಿರ್ವಾಹಕರು :

ರಿಜಿಸ್ಟ್ರಾರ್
ಕರ್ನಾಟಕ ಸಾಹಿತ್ಯ ಅಕಾಡೆಮಿ
ನಂ. 14/7-ಅ, ನೃಪತುಂಗ ರಸ್ತೆ, ಬೆಂಗಳೂರು-560 002

ವಾರ್ಷಿಕ ಚಂದಾ : ರೂ. 10
ಆಜೀವ ಚಂದಾ : ರೂ. 100

ಮುದ್ರಕರು :

ರಶ್ಮಿ ಮುದ್ರಣ
ಸುಧಾಮನಗರ, ಬೆಂಗಳೂರು-560 027

## ಅಧ್ಯಕ್ಷರ ಮಾತು

ಕನ್ನಡೇತರ ಸಾಹಿತ್ಯವನ್ನು ಕನ್ನಡಿಗರಿಗೆ ಪರಿಚಯ ಮಾಡಿಕೊಡುವುದರ ಮೂಲಕ ಕನ್ನಡಿಗರ ಸಾಹಿತ್ಯಕ ಅರಿವನ್ನು ವಿಸ್ತರಿಸುವ ಉದ್ದೇಶಕ್ಕೆ ಬದ್ಧವಾದ ಇಂಥದೊಂದು ತ್ರೈಮಾಸಿಕವನ್ನು ಕಳೆದ ಮೂರು ವರ್ಷಗಳಿಂದ, ಕಾಲಕ್ಕೆ ಸರಿಯಾಗಿ ತರುವ ಪ್ರಯತ್ನ ಸುಲಭವಾದದ್ದಲ್ಲ ಮತ್ತು ಈ ಬಗೆಯ ಒಂದು ಪ್ರಯತ್ನ ಇಡೀ ಭಾರತೀಯ ಪರಿಸರದ ಯಾವ ಪ್ರಾಂತೀಯ ಭಾಷೆಯಲ್ಲಿಯೂ ನಡೆದಿಲ್ಲ ಎಂದರೆ ಅದು ಉತ್ಪ್ರೇಕ್ಷೆಯ ಮಾತಲ್ಲ.

ಕೇವಲ ಅನುವಾದಕ್ಕೆ ಮೀಸಲಾದ ಇಂಥದೊಂದು ಪತ್ರಿಕೆಯ ಜವಾಬ್ದಾರಿಯನ್ನು ವಹಿಸಿಕೊಂಡು, ಅತ್ಯಂತಪ್ರೀತಿ ಮತ್ತು ಶ್ರದ್ಧೆಯಿಂದ, ಸಂಪಾದನಾ ಕಾರ್ಯವನ್ನು ನಿರ್ವಹಿಸಿದ ಡಾ. ಎಚ್. ಎಸ್. ವೆಂಕಟೇಶಮೂರ್ತಿ, ಡಾ. ಆರ್ವಿಯಸ್. ಸುಂದರಂ ಮತ್ತು ಶ್ರೀಮತಿ ಲಲಿತಾಂಬ ಅವರಿಗೆ ಅಕಾಡೆಮಿಯ ಪರವಾಗಿ ಅಭಿನಂದನೆ ಹಾಗೂ ವಂದನೆಗಳನ್ನು ಸಲ್ಲಿಸುತ್ತೇನೆ. ಈ ಪತ್ರಿಕೆಯ ಜತೆಗೆ ನಿಂತ ಕನ್ನಡದ ಅನೇಕ ಲೇಖಕರಿಗೂ, ಚಂದಾದಾರರಿಗೂ ಮತ್ತು ಕಾಲಕಾಲಕ್ಕೆ ಸರಿಯಾಗಿ ಇದರ ಮುದ್ರಣ ಕಾರ್ಯವನ್ನು ನೆರವೇರಿಸಿದ ಬೆಂಗಳೂರಿನ ರಶ್ಮಿ ಮುದ್ರಣದ ಶ್ರೀ ಎಂ. ರಾಮಕೃಷ್ಣ ಅವರಿಗೂ ನಮ್ಮ ವಂದನೆಗಳು. ಸಾಹಿತ್ಯ ಅಕಾಡೆಮಿಯ ಮುಂದಿನ ಪದಾಧಿಕಾರಿಗಳು, ಈ ಪತ್ರಿಕೆಯನ್ನು ಇನ್ನಷ್ಟು ಸಮರ್ಥವಾಗಿ ನಡೆಯಿಸುವುದರ ಮೂಲಕ, ಈ ಪರಂಪರೆಯನ್ನು ಮುಂದುವರಿಸುವರೆಂದು ಆಶಿಸುತ್ತೇನೆ,

**ಡಾ. ಜಿ. ಎಸ್. ಶಿವರುದ್ರಪ್ಪ**
ಪ್ರಧಾನ ಸಂಪಾದಕರು
ಹಾಗೂ
ಸಾಹಿತ್ಯ ಅಕಾಡೆಮಿ ಅಧ್ಯಕ್ಷರು

# ಸಂಪಾದಕೀಯ

ಈ ಸಂಪಾದಕ ಮಂಡಲಿ ಸಂಪಾದಿಸಿರುವ ಕೊನೆಯ ಸಂಚಿಕೆ ಈಗ ತಮ್ಮ ಕೈಯಲ್ಲಿದೆ. ನಾವು ಈವರೆಗೆ ಸಂಪಾದಿಸಿದ ಸಂಚಿಕೆಗಳು ಕನ್ನಡ ಸಾಹಿತ್ಯಾಸಕ್ತರಿಗೆ ಪ್ರಿಯವಾಗಿದ್ದರೆ, ಅದಕ್ಕೆ ಕಾರಣ ಅಕಾಡೆಮಿಯ ಅಧ್ಯಕ್ಷರು ಮತ್ತು ಸದಸ್ಯರು ಸಂಪಾದಕ ಮಂಡಲಿಗೆ ನೀಡಿದ ಸಂಪೂರ್ಣ ಸ್ವಾಯತ್ತತೆ ಮತ್ತು ಸಹಕಾರ, ಹಾಗೂ ಕನ್ನಡ ಲೇಖಕರು ನಮ್ಮ ಕೋರಿಕೆ ಮನ್ನಿಸಿ ಅನುವಾದಗಳನ್ನು ವಿಶ್ವಾಸದಿಂದ ಕಾಲ ಕಾಲಕ್ಕೆ ಒದಗಿಸಿದ್ದು. ಈ ಕಾರಣಕ್ಕಾಗಿ ಸಂಪಾದಕ ಮಂಡಲಿ, ಲೇಖಕರಿಗೂ, ಅಕಾಡೆಮಿಗೂ ಆಭಾರಿಯಾಗಿದೆ. ಅನಿಕೇತನದ ಈವರೆಗಿನ ಸಂಚಿಕೆಗಳು ಈ ಪತ್ರಿಕೆಯ ಸ್ವರೂಪ-ಸಾಧ್ಯತೆಗಳನ್ನು ತಕ್ಕಮಟ್ಟಿಗಾದರೂ ಪ್ರಸ್ತುತಪಡಿಸಿದ್ದರೆ ನಮ್ಮ ಶ್ರಮ ಸಾರ್ಥಕವಾದಂತೆ ಎಂದು ಭಾವಿಸುತ್ತೇವೆ,

—ಸಂಪಾದಕರು

# ಪರಿವಿಡಿ

## ಕವಿತೆಗಳು



## ಕತೆಗಳು



## ದಾಖಲೆ

## ವೈಚಾರಿಕ

# ಕವಿತೆಗಳು

# ರಾಬರ್ಟ್ ಹೆರಿಕ್‌ನ ಕೆಲವು ಪದ್ಯಗಳು

ಅನು : ರಾಮಚಂದ್ರ ದೇವ

[ರಾಬರ್ಟ್ ಹೆರಿಕ್ (1591–1674) ಇಂಗ್ಲಿಷ್ ಕವಿ. ಮೈನರ್ ಎಂದು ಕರೆಯಬಹುದಾದ ಕವಿ. ಅವನ ಕೆಲವು ಪದ್ಯಗಳನ್ನು ಪುನರ್‌ಸೃಷ್ಟಿಸಲು ಪ್ರಯತ್ನಿಸಲಾಗಿದೆ.] —ಲೇಖಕ

## 1. ನನ್ನ ಹಾಡು

ನಾನು ಹಾಡುತ್ತೇನೆ ಪುಸ್ತಕ ಕುರಿತು
ಮೊಗ್ಗು, ಹಕ್ಕಿ, ಲತಾಕುಂಜ ಕುರಿತು ;
ಏಪ್ರಿಲ್, ಮೇ, ಜೂನ್, ಜುಲೈ ತಿಂಗಳಿನ ಹೂವು
ವರ, ವಧು, ಮಧುಚಂದ್ರ ಕುರಿತು ;
ಯವ್ವನ ಮತ್ತು ಪ್ರೇಮ
ಇಬ್ಬನಿ ಮತ್ತು ಮಳೆ
ಲೇಪನ, ಎಣ್ಣೆ, ಸಾಂಬಾರ ಮತ್ತು ರುಚಿ ಕುರಿತು ;
ಕಾಲದ ಪರಿವರ್ತನೆ ಕುರಿತು ;
ಗುಲಾಬಿಯ ಕೆಂಪು
ತಾವರೆಯ ಬಿಳುಪು
ವಿವಿಧಬಗೆಯ ಬಣ್ಣಗಳ ಕಲಮೇಳ ಕುರಿತು ;
ಈ ಇಳೆಯ ವಿವಿಧ ನಿಸ್ವನ ಕುರಿತು ;
ನರಕದ ಕುರಿತು ;
ಹಾಡುತ್ತೇನೆ ಅಪರಾಜಿ ಸದಾ ಮೈತಳೆದು ಕರೆವ
ಕರೆಕರೆಯುತ್ತಲೇ ಇರುವ
ಥರಥರದ ಸ್ವರ್ಗವ ಕುರಿತು.

## 2. ವಿಮರ್ಶಕರಿಗೆ

ಬರೆಯುವುದರಿಂದ
ಕವನ, ಕಥೆ, ನಾಟಕ
ನಿಮಗೆ, ವಿಮರ್ಶಕರಿಗೆ
ಗಡ್ಡ ಪ್ರಫುಲ್ಲಿತ
ಬಗಲ ಚೀಲ ಸುಭೂಷಿತ
ಸೆಮಿನಾರು, ಕಮಿಟಿಗಳ ಕುರ್ಚಿ ಸುಶೋಭಿತ
ವಿಮರ್ಶಕರಿಗೆ ನಿಮಗೆ

ನಿಮ್ಮ ಬುದ್ಧಿ ತೋರಿಸಲಿಕ್ಕೆ ನಾನೊಂದು ಕಾರಣ ಕೊಟ್ಟೆ
ಜೀವನಕ್ಕೊಂದು ಉಪಾಯ ಕೊಟ್ಟೆ
ಹಿಡಿಯಲಿಕ್ಕೊಂದು ಸ್ಥಾನ ಕೊಟ್ಟೆ

ಹೊರಲಿಕ್ಕೆ ಕೊಟ್ಟು ಪುಸ್ತಕ
ತುರಿಸಲಿಕ್ಕೆ, ಹೇನು ಬೆಳಸಲಿಕ್ಕೆ
ಉಂಟು ನಿಮಗೊಂದೊಂದು ಮಸ್ತಕ.

## 3. ಪದ್ಯ

ನನ್ನ ಪದ್ಯ ಪ್ರಿಂಟಾಗಲಿಕ್ಕೆ ಮೊದಲು
ನಾನು ಸತ್ತರೆ, ಜೂಲಿಯಾ
ವಿನಯದಿಂದ ಕೇಳುತ್ತೇನೆ, ಚೆಲುವೆ,
ನನ್ನ ಪದ್ಯಗಳನ್ನು ಸುಟ್ಟು
ನಿನ್ನ ಅಂಗಾಲು ಕಾಯಿಸಿಕೋ -
ಪರಿಪೂರ್ಣವಲ್ಲದ ಪದ್ಯ ಅರೆಪೂರ್ಣ ಬದುಕುವ ಬದಲು.

## 4. ಲೇಸು

ಆಂಥಿಯಾ ಒಂದು ದಿನ ಲೇಸು ಕಟ್ಟೆಂದು ಹೇಳಿದಳು.
ಕಟ್ಟಿಮುಗಿಸಿದವ
ಕಣಕಾಲಿಂದ ಮೇಲಕ್ಕೆ ಮುತ್ತಿಟ್ಟೆ.
"ರ್‍ಯಾಸ್ಕಲ್" ಎಂಬಂತೆ ಆಕೆ ನನ್ನನ್ನು ನೋಡದೇ ಇದ್ದಿದ್ದಲ್ಲಿ
ಮೊಣಕಾಲಿಗೇ ಮುತ್ತಿಟ್ಟುಬಿಡುತ್ತಿದ್ದೆ.
ಅಥವಾ ಪೂಲೇಸು ಕಟ್ಟುವ ಬದಲು
ಬೇರೇನಾದರೂ ಕಟ್ಟು ಹೇಳಿದ್ದಲ್ಲಿ
– ಉದಾ.ಗೆ ಮೊಲೆಕಟ್ಟು, ಇಲ್ಲ ಲಂಗದ ಲಾಡಿ,
ಅವನ್ನೆಲ್ಲಾ ಕಟ್ಟಿ ಅನುಭವವಿಲ್ಲ, ಆದರೂ ನಿಧಾನಕ್ಕೆ
ಬಿಚ್ಚಿದರೂ ಕಟ್ಟಿದ್ದೂ ತಿರುತಿರುಗಿ
ಇಡೀದಿನ ಅದಕ್ಕಾಗಿ ಬೇಕಾದರೂ ಸರಿಯೆ –
ತಪಸ್ಸಿಗೆ ಕೂತ ನಿಷ್ಠೆಯಿಂದ
ಕಟ್ಟಿಯೇ ಬಿಡುತ್ತಿದ್ದೆ.

## 5. ರೂಪಾಂತರ

ಈ ನನ್ನ ದೇಹ ರೂಪಾಂತರಿಸಿ
ವೈನ್ ಬಳ್ಳಿ ಆದಂತೆ
ಕನಸು ಕಂಡೆ.
ಅಲ್ಲಲ್ಲಿ ಅಂತಿಂತು ಹಬ್ಬಿ
ಲುಸಿಯಾಳನ್ನ ಮುತ್ತಿತ್ತು ಬಳ್ಳಿ.
ನನ್ನ ಚಿಗುರುಗಳಿಂದ ಅವಳ ಪುಟ್ಟಕಾಲನ್ನ ತೊಡೆಯನ್ನ
ನೆಕ್ಕಿದೆ.
ಅವಳ ಹೊಟ್ಟೆ ಸುತ್ತಿ, ನಿತಂಬಕ್ಕೆ ಬಳಿಬಂದು,
ಕಾಲಂಗಳ ನಡು ತೂರಿ
ಕಂಡಿ ನುಗ್ಗಿದೆ.
ತಲೆ ಮೇಲೆ ಎಲೆ ತಂಗಿ
ಹಣೆ ಮೇಲೆ ಮೊಗ್ಗಾಗಿ

ಮೊಲೆ ಮೇಲೆ ಹೂವರಳಿ
ಚೆಲವೆ ಲುಸಿಯಾ
ಮದಿರೆಯ ದೇವ ಬಾಕ್ಕನ ರೀತಿ ಕಂಡಳು,
ಬಳ್ಳಿಗಳಿಂದ ಸೆರೆಯಾಗಿ ಕೈದಿಯಂತಿರುವ ಈ ಈಕೆ
ಇನ್ನು ತಪ್ಪಿಸಲಾರಳೆಂದು ಖುಷಿಯಿಂದ ಚಿಗುರಿ ನಿಗುರಿ
ಸಂದಿಗೊಂದಿಗೆ ಹೆಟ್ಟಿ ಒಳತೂರುತ್ತಲಿದ್ದಾಗ

ಗಾಡಿ ಇಳಿದು ಎದ್ದೆನೋ
ಕನಸನಷ್ಟೆ ಮೆದ್ದೆನೋ

## 6. ಕಾಲ

ಕಾಲದೊಡನೆ ಪ್ರತಿಏಕ ನಶಿಸಿ ಸಾಯುತ್ತದೆ.
ಉದಾಹರಣೆಗೆ
ಟೊಂಗೆ ಕೊಂಬೆ ಹೆಗ್ಗಲ್ಲು ಬೇರು ಎಲೆ ಹಣ್ಣು
ಮೊದಲಾದ್ದ ಹೆಗ್ಗಲಿಸಿ
ಸರ್ವಾಧಿಕಾರಿಯ ಹಾಗೆ
ನಿಂತಿದ್ದ ಆ ಠೊಣೆ ವೃಕ್ಷ
ಬೆಳೆದದ್ದ ಬೀಗಿದ್ದ ಎಂತೋ ಅಂತೆ
ನಿಂತಲ್ಲಿಯೇ ಅಥವಾ ಬಿದ್ದು
ಸಾಯುವುದ ಸಮೇತ
ಅರಣ್ಯ ಕಾಣುತ್ತದೆ.

# ವಿ-ರಸ

ಮೂಲ (ರಷ್ಯನ್) : ಅನ್ನಾ ಅಖ್ಮತೋವಾ
ಅನು : ಸುಬ್ರಾಯ ಚೊಕ್ಕಾಡಿ

ದೊಡ್ಡ ಶಾಲಿನ ಹಿಂದೆ ಬೆರಳುಗಳ ಬಿಗಿಹಿಡಿದೆ
ಯಾಕೆ ನಿಸ್ತೇಜ ಕಾಣಿಸುವೆ ನೀನೀ ರಾತ್ರಿ ? –
ಕಾರಣವೆ ? ಮಾಡಿದೆನವನ ಮಿತಿಮೀರಿ ಕುಡಿವಂತೆ
ಕಹಿಯಾದ, ಮಿತಿಯಿರದ ದುಃಖಗಳ ಮದ್ಯವನು.

ಮರೆಯುವೆನೆ ನಾನು ? ಹೊರನಡೆದ ತೂರಾಡುತ್ತ
ಬಿಗಿದ ತುಟಿಗಳ ಮೇಲೆ ಗೆರೆಕೊರೆದ ದುಃಖ
ಓಡಿದೆನು ಕೆಳಗೊಡನೆ ಹುಚ್ಚು ಹಿಡಿದವಳಂತೆ
ಹಿಂಬಾಲಿಸುತ ಅವನ ಇಕ್ಕಟ್ಟು ಬೀದಿಯಲಿ.

ಬೊಬ್ಬಿಟ್ಟೆ – "ನಾ ತಮಾಷೆಗೆ ಅಂದೆ, ನಿಜವಾಗಿ !
ತೊರೆಯದಿರು ನನ್ನ, ಸತ್ತೇಬಿಡುವೆ ನಾನು"
ನಗುತ - ಭಯಹುಟ್ಟಿಸುವ ಹಾಗೆ - ಶೀತಲವಾಗಿ
ಹೇಳಿದನು, "ಗಾಳಿಯಲಿ ನಿಲ್ಲಬೇಡ"

# ನಾವು

ಮೂಲ (ರಷ್ಯನ್) : ಅನ್ನಾ ಅಖ್ಮತೋವಾ
ಅನು : ಸುಬ್ರಾಯ ಚೊಕ್ಕಾಡಿ

ಕಪಟವಿಲ್ಲದ, ಸರಳಸಂತೋಷಗಳ, ಬೆಚ್ಚಗಿನ
ಸರಳ ಬದುಕಿದೆ ಶುಭ್ರಗಗನವಿರುವಲ್ಲೆಲ್ಲೊ
ಮಬ್ಬಿನಲಿ ನುಸುಳಿಹೋಗುವ ಹುಡುಗಿ, ನೆರೆಯ ಹುಡುಗನ ಕಡೆಗೆ
ಪೊದೆಯಾಚೆ ಪ್ರೀತಿಯ ಮಾತು, ವೃಕ್ಷವಷ್ಟೇ ಶ್ರೋತೃ.

ನಾವೋ - ಬದುಕಿದ್ದೇವೆ ಸಂದರ್ಭಕ್ಕೆ ತಕ್ಕಂಥ ಗಿಲೀಟು ಬದುಕನ್ನ
ಭೇಟಿಯಾಗುತ್ತೇವೆ ಅನಿವಾರ್ಯ - ವಿಧ್ಯುಕ್ತ ಕ್ರಿಯೆಯ ಹಾಗೆ
ಹೇಳಲೇನೋ ಹೊರಟ ನಿನಗಿಲ್ಲ ಪೂರ್ಣಗೊಳಿಸುವುದಕ್ಕೆ ಇಲ್ಲಿ ಅವಕಾಶ
ಬೀಸಿ ಚಿಲ್ಲರೆ ಗಾಳಿ ಮಾಡುವುದು ಚೆಲ್ಲಾಪಿಲ್ಲಿ, ಶಬ್ದಗಳ ಯೋಚನೆಗಳ.

ಆದರೂ ಈ ಜಗದ ಯಾವುದೇ ಅಮೂಲ್ಯ ವಸ್ತುವಿಗೂ ಬದಲಾಗಿ
ಕೊಡೆವು ಇದನು ;
ಸ್ವರ್ಗ ಹಾಗೂ ನರಕ ಒಳಗೊಂಡ ಘನವಾದ ಈ ಶಿಲಾ ನಗರವನ್ನು
ವಿಸ್ತಾರ ನದಿಯನ್ನು ಒಡಲಲ್ಲಿ ಹುಗಿದಿಟ್ಟುಕೊಂಡಿರುವ ಹೊಳೆವ ಮಂಜನ್ನ
ಅಸ್ಪಷ್ಟವಾಗಿಯಾದರೂ ಕೇಳಿಬರುತಿರುವ ಕಲಾದೇವಿಯ ಧ್ವನಿಯನು.

# ಖೇದಗೊಂಡ ನಿರಾಶ್ರಿತರ ಹಾಡು

ಮೂಲ (ಇಂಗ್ಲಿಷ್) : ಡಬ್ಲ್ಯು. ಎಚ್. ಆಡೆನ್
ಅನುವಾದ : ಶಂಕರ ಕಟಗಿ

[ಹಿನ್ನೆಲೆ

1933ರಲ್ಲಿ ಹಿಟ್ಲರ್‌ನ ನಾಯಕತ್ವದ 'ನಾಜಿ' ಸರಕಾರ ಜರ್ಮನಿಯಲ್ಲಿ ಅಧಿಕಾರಕ್ಕೆ ಬಂತು. ಹಿಟ್ಲರ್‌ನಿಗೆ 'ಆರ್ಯ' ಜನಾಂಗದ ಸಂಪ್ರದಾಯ ಶ್ರೇಷ್ಠತೆಯಲ್ಲಿ ನಂಬಿಕೆ ಇತ್ತು. ಅದರ ಪರಿಣಾಮವಾಗಿ ಜರ್ಮನಿಯಲ್ಲಿ ವಾಸಿಸುತ್ತಿದ್ದ ಬಹುಸಂಖ್ಯಾತ 'ಜ್ಯೂ'ಗಳಿಗೆ ಕಿರುಕುಳ ಪ್ರಾರಂಭವಾಯ್ತು. ಮಿಲಿಯನ್‌ಗಟ್ಟಲೆ 'ಜ್ಯೂ'ಗಳು ಮಾನಸಿಕ ಹಿಂಸೆಯಿಂದ ಬಳಲತೊಡಗಿದರು. ಪ್ರಾಣಭಯ 'ಜ್ಯೂ'ಗಳಿರುವ ಪ್ರದೇಶವಲ್ಲೆಲ್ಲ ಪಸರಿಸಿತು. ಹೀಗಾಗಿ ಸಾವಿರಾರು 'ಜ್ಯೂ' ಮಂದಿ ಜೀವ ಉಳಿಸಿಕೊಳ್ಳಲು ಕಂಗೆಟ್ಟು ನಿರಾಶ್ರಿತರಾಗಿ ಜರ್ಮನಿಯ ಸರಹದ್ದು ದಾಟತೊಡಗಿದರು.]

ಈ ಪಟ್ಟಣದಲ್ಲಿ ಹತ್ತು ಮಿಲಿಯನ್ನಿನಷ್ಟು ಆತ್ಮಗಳಿವೆ,
ಕೆಲವರು ಮಹಲುಗಳಲಿ ವಿಶ್ರಮಿಸುತ್ತಿದ್ದಾರೆ,
ಇನ್ನೂ ಕೆಲವರು ಜೋಪಡಿಗಳಲ್ಲಿ ಬದುಕುತ್ತಿದ್ದಾರೆ ;
ಆದರೆ ನಮಗಿಲ್ಲಿ ತಂಗಲು ತುಸು ಜಾಗವಿಲ್ಲ ಗೆಳತಿ,
ನಮಗಿಲ್ಲಿ ತಂಗಲು ತುಸು ಜಾಗವಿಲ್ಲ.

ಹಿಂದೊಂದು ಕಾಲಕ್ಕೆ ನಮಗೊಂದು ದೇಶವಿತ್ತು,
ಸೀಮೆ ಸರಹದ್ದುಗಳಲಿ ಸುಂದರ ಕನಸುಗಳಿದ್ದವು,
ಅಟ್ಲಾಸನು ನೋಡು, ನಿನಗೆಲ್ಲ ಅರಿವಾಗಬಹುದು ;
ನಾವೀಗ ಅಲ್ಲಿ ಹೋಗಲಾರೆವು ಗೆಳತಿ,
ನಾವೀಗ ಅಲ್ಲಿ ಹೋಗಲಾರೆವು.

ಹಳ್ಳಿ ಹೋಬಳಿಗಳ ಸ್ಮಶಾನದ ಗೋರಿಗಳ ಮೇಲೆ
ಹಳೆಯ 'ಯು' ಮರಗಳು ಬರಡಾಗಿ ನಿಂತಿವೆ

ವಸಂತ ಬಂದಾಗೊಮ್ಮೆ ಕೆಣೆಗಟ್ಟಿದ—
ರಗಂತವೊಗ್ಗಾಗಿ ಅರಳುತ್ತಿವೆ
ಹಳೆಯ ಪಾಸ್‌ಪೋರ್ಟ್ ಪತ್ರ ಚಿಂದಿಯಾಗಿವೆ ಗೆಳತಿ,
ಹಳೆಯ ಪಾಸ್‌ಪೋರ್ಟ್ ಪತ್ರ ಚಿಂದಿಯಾಗಿವೆ.

ನಾಜಿ ದಂಡಾಧಿಕಾರಿ ಧಡಮ್ಮನೆ ಮೇಜು ಗುದ್ದಿ ಅಬ್ಬರಿಸುತ್ತಾನೆ:
'ನೀವೀಗ ಪಾಸ್‌ಪೋರ್ಟ್ ಹೊಂದಿರದಿದ್ದರೆ
ಅಧಿಕೃತವಾಗಿ ನೀವೆಲ್ಲ ಹೆಣಗಳೆಂದು ಪರಿಗಣಿಸಲಾಗುವುದು ;
ಆದರಿನ್ನೂ ನಮ್ಮ ಪುಪ್ಪುಸಗಳು ಬಡಿದುಕೊಳ್ಳುತ್ತಿವೆ ಗೆಳತಿ,
ನಮ್ಮ ಪುಪ್ಪುಸಗಳು ಬಡಿದುಕೊಳ್ಳುತ್ತಿವೆ.

ಸಭೆಯೊಂದರಲ್ಲಿ ನನಗವರು
ಕುರ್ಚಿ ದಯಪಾಲಿಸಿ ನಯವಾಗಿ ಹೇಳಿದರು :
'ಮುಂದಿನ ವರುಷ ಬರುವಿರಂತೆ-ಸಧ್ಯ ಇಲ್ಲಿಂದ ತೊಲಗಿ'
ಯಾವ ದಿಕ್ಕಿಗೆ ನಾವು ಹರಿದು ಹೋಗುವುದು ಹೇಳು ಗೆಳತಿ,
ಯಾವ ದಿಕ್ಕಿಗೆ ನಾವು ಹರಿದು ಹೋಗುವುದು ಹೇಳು ?

ಸಾರ್ವಜನಿಕ ಸಭೆಯಲ್ಲಿ—
ಭಾಷಣಕಾರ ಎದ್ದು ನಿಂತು ಖಡಾಮುಡಿಯಾಗಿ ನುಡಿದ :
'ಅಕಸ್ಮಾತ್ ನಾವಿವರನ್ನು ಇರಲು ಸಮ್ಮತಿಸಿದರೆ,
ನಿತ್ಯ ಊಟದ ನಮ್ಮ ರೊಟ್ಟಿಯನು ಕದಿಯುತ್ತಾರೆ',
ಅವನು, ನಿನ್ನ ಮತ್ತು ನನ್ನ ಬಗ್ಗೆ ಮಾತನಾಡುತ್ತಿದ್ದ ಗೆಳತಿ,
ನಿನ್ನ ಮತ್ತು ನನ್ನ ಬಗ್ಗೆ ಮಾತನಾಡುತ್ತಿದ್ದ.

ಬಾನೊಳಗೆ ಗುಡುಗು ಸಿಡಿಲಿನ ಸದ್ದು ಮೊಳಗುವಾಗ
ಹಿಟ್ಲರ್ ಮಹಾಶಯ ಬಂದೂಕಿನ ಗೂಡು ಹಾಕುತ್ತಿದ್ದ
ಯುರೋಪ್ ಖಂಡವನ್ನೆ ರೌದ್ರವಗೊಳಿಸಿ ಗುಡುಗಿದ :
'ಜ್ಯೂ ಜನಾಂಗವನ್ನೆಲ್ಲ ಗುಂಡಿಟ್ಟು ಕೊಲ್ಲಬೇಕು
ಬಂದೂಕು, ಸೆಲ್ಲುಗಳಿಗೆ ವಿರಾಮ ದೊರೆಯಬೇಕು'.
ಅವನ ಮನಸೊಳಗೆ ನಮ್ಮ ಸಾವು ನೋವಿನ ಬದುಕು ಗೆಳತಿ,
ನಮ್ಮ ಸಾವು ನೋವಿನ ಬದುಕು.

ಪೂಡಲ್ ಅಂಬೊ ನಾಯಿಗಳು ಮಹಲಿನೊಳಗೆ
ಜಾಕೀಟು ಧರಿಸುತ್ತಿರುವುದನು ಕಂಡೆ,

ನುಣುಪಾದ ಬಾಗಿಲುಗಳು ಬೆಕ್ಕುಗಳಿಗೆ
ತೆರೆದುಕೊಳ್ಳುವುದನು ಕಂಡೆ,
ಅವು ಯಾವೂ ಜರ್ಮನ್ ಜ್ಯೂ ಮಂದಿಯಲ್ಲ ಗೆಳತಿ,
ಜರ್ಮನ್ ಜ್ಯೂ ಮಂದಿಯಲ್ಲ.

ಸಮುದ್ರದ ಕಡೆ ಹೋದಾಗ—
ಬಂದರುಗಳಲಿ ಹಡಗುಗಳು ಸರಕು ಸಾಗಿಸುತ್ತಿದ್ದವು
ಅದರಲ್ಲಿ ಎಷ್ಟು ಶವಗಳ ಮೂಟೆಗಳಿದ್ದವೋ ಯಾರಿಗೆ ಗೊತ್ತು
ನನ್ನಿಂದ ಹತ್ತೇ ಹೆಜ್ಜೆ ದೂರದ ತೀರದಲಿ
ಸುಂದರ ಮೀನುಗಳು ಈಜುತ್ತಿದ್ದವು
ಅವು ಸ್ವತಂತ್ರವಾಗಿದ್ದವು ಗೆಳತಿ
ನನ್ನ ಕಾಲಿಗೆ ಕೋಳಗಳಿದ್ದವು.

ಬಿಳಿ ಬೆಟ್ಟದ ಫರ್ ಮರಗಳ ಸಂದಿಯಲಿ ಸಾಗಿದ್ದೆ
ಟೊಂಗೆ ಟೊಂಗೆಯಲಿ ಪಕ್ಷಿಗಳು
ರೆಕ್ಕೆ ಬಿಚ್ಚಿ ಸುಳಿಸುವುದ ಕಂಡೆ. ಅವು ರಾಜಕಾರಣಿಗಳಾಗಿರಲಿಲ್ಲ
ಅದಕ್ಕಾಗಿ ಕೋಮಲ ಕಂಠದಿಂದ ಹಾಡುತ್ತಿದ್ದವು.
ಅವು ಖೇದಗೊಂಡ ಜ್ಯೂಗಳಲ್ಲ ಗೆಳತಿ
ಖೇದಗೊಂಡ ಜ್ಯೂಗಳಲ್ಲ.

ಸಾವಿರ ಅಂತಸ್ತುಗಳ ಭವ್ಯ ಭವನದ ಕನಸು ಕಂಡೆ ;
ಸಾವಿರ ಸಾವಿರ ಕಿಡಕಿ ಬಾಗಿಲುಗಳಿದ್ದವು
ಆ ಭವನದ ಒಂದು ಬಾಗಿಲವೂ,
ನಮ್ಮದಾಗಿರಲಿಲ್ಲ ಗೆಳತಿ, ನಮ್ಮದಾಗಿರಲಿಲ್ಲ.

'ಹ್ಯಾಪಿನೆಸ್' ಪ್ರದೇಶಕ್ಕೆ ಎರಡು ತಿಕೇಟು ಪಡೆಯಲು
ಮೇಲ್ ಗಾಡಿಯು ಸಿಗಬಹುದೆಂದು ಸ್ಟೇಷನ್‌ಗೆ ಓಡಿದೆ
ಯಾವ ಬೋಗಿಯಲ್ಲೂ ನಮಗೆ ಜಾಗವಿರಲಿಲ್ಲ ಗೆಳತಿ,
ಯಾವ ಬೋಗಿಯಲ್ಲೂ ನಮಗೆ ಜಾಗವಿರಲಿಲ್ಲ.

ಹಿಮಪಾತದ ಕೆಳಗೆ ಸಹಸ್ರ ಸೈನಿಕರು
ಶಸ್ತ್ರ ಸಜ್ಜಿತರಾಗಿ ಶಿಸ್ತಿನ ಹೆಜ್ಜೆ ಹಾಕುತ್ತ, ದೇಕುತ್ತ,
ಪರೆಡ್ ನಡೆಸಿದ್ದರು. ಅವರು ನಮ್ಮನ್ನೇ—
ದಿಟ್ಟಿಸುತ್ತಿದ್ದರು ಗೆಳತಿ, ನಮ್ಮನ್ನೇ ದಿಟ್ಟಿಸುತ್ತಿದ್ದರು.

# ಜಪಾನೀ ಹಾಯಿಕುಗಳು

ಅನು : ಜಿ. ಕುಮಾರಪ್ಪ

೧

ಸತ್ತ ನನ್ನೆಲ್ಲ ಆಸೆಗಳೂ
ಬರಿದಾದ ಕನಸುಗಳೂ ಮತ್ತೆ ವಸಂತದಲ್ಲಿ
ಹಸಿರು ತಳೆಯುತ್ತವೆ.

೨

ಎಲ್ಲಾ ಹಾಡಿನ ಮೂಲ
ಭತ್ತ ನಾಟುವ ರೈತನ
ಬಿಡುವಿರದ ಗುನು ಗುನು

೩

ಕೆಳಗೆ ಬೀಳುತ್ತಿರುವ ಹೂವು
ಕೊಂಬೆಗೆ ಹಿಂತಿರುಗುತ್ತಿದೆಯೇ ?
ಓಹ್, ಇಲ್ಲ ಒಂದು ಬಿಳಿಯ ಪತಂಗ

೪

ಚೆರ‍್ರಿಯ ಬಿಳಿ ಮೊಗ್ಗುಗಳ ಮೇಲೆ
ಬಿಳಿಯ ಮೋಡದ ತುಣುಕುಗಳು
ಸಂಜೆ ಬೆಳಕಲ್ಲಿ ಹೊಳೆವ ಪರ್ವತಗಳು

೫

ಓಹ್ ! ಬೇಸಿಗೆಯಿರುಳ ಆ ಚಂದ್ರ
ನಾನು ರಾತ್ರಿಯೆಲ್ಲಾ
ಕೊಳವ ಸುತ್ತುವಂತೆ ಮಾಡಿದ

೬

ಹಗಲೆಲ್ಲಾ ಮಂಜು ಪಿಸುಗುಟ್ಟುತ್ತಿರೆ
ಆಗಸವನ್ನಷ್ಟೇ ಉಳಿಸಿ
ಭೂಮಿ ಮರೆಯಾಯ್ತು

೭

ಕೋಗಿಲೆ ಹಾಡತೊಡಗಿದಾಗ
ಬೇರೆ ಮರವನ್ನು ಹುಡುಕಿಕೊಂಡು
ಗುಬ್ಬಿ ಹಾರಿತು

೮

ನನ್ನ ಕೃತಘ್ನ ಪ್ರೇಯಸಿ
ದೂರವಾಗಿರುವ ಈ ಚಳಿಗಾಲದ ಮಂಜು
ಓಹ್ ! ಅದೆಷ್ಟು ಕಟು

೯

ನನ್ನ ಕಿರು ಹಳ್ಳಿಯ ಸೊಳ್ಳೆಗಳೂ
ದೊಡ್ಡವರ ಕಡಿಯಲಂಜುವುದಿಲ್ಲ

೧೦

ಹಾಳು ಬಿರುಗಾಳಿ ತನ್ನ
ಮೊದಲ ಬಲಿಯ ಕೊಂಡೇ ಬಿಟ್ಟಿತು
ಊರ ಬದಿಯ ಬೆದರುಗೊಂಬೆಯ

೧೧

ವಸಂತ ಕಾಲದ ಮಳೆ
ನಿಮ್ಮ ನಗರವನ್ನೂ ಮುಟ್ಟಿದ
ಸುದ್ದಿಯನ್ನೋದಲು ನಮಗೆ ಖುಷಿ

೧೨

ಗಾಳಿಗೆ ಸಿಕ್ಕ ಈ ಗೂಡಿನೊಳಗೆ
ಹಸಿದ ಕಿರು ಬಾಯಿಯು ತೆರೆವೆ, ವ್ಯರ್ಥ,
ಓ ಮಲ ಪಕ್ಷಿಯೇ.

೧೩

ಪ್ರಿಯವಾದ ಉಂಡೆಗಳಿಗಾಗಿ
ಈ ಸುಂದರ ಹೂಗಳನ್ನೆಲ್ಲಾ ಜೋಡಿಸುವಾ
ಅಕ್ಕಿ ಇಲ್ಲದುದಕ್ಕಾಗಿ

೧೪

ಏಯ್, ನನ್ನ ಈ ಚಿಕ್ಕ ಗುಡಿಸಲನ್ನು
ಹೊಸದಾಗಿ ತೇಪೆ ಹಾಕಿದೆ.
ಹೋಳಿವ ಬೆಳಕಿನ ಹೊಂಗಿರಣಗಳು ಕಾಣುತ್ತಿವೆ.

೧೫

ನನ್ನ ನತದೃಷ್ಟ ಹಳ್ಳಿಗಳು
ಹೊಸ ಮೀನು ಹೂಗಳ ಕಾಣದಿವೆ,
ಈ ಚಂದಿರನನೆಲ್ಲರೂ ಹಂಚಿಕೊಳ್ಳಬಹುದು.

೧೬

ನನ್ನ ಮೂರು ಪ್ರಿಯತಮ ವಸ್ತುಗಳು
ತಿಂಗಳ ಬೆಳಕು.... ಅರಳಿ ನಿಂತ ಚೆರ್ರಿ....
ಈಗ ಹೋಗುತ್ತಿದ್ದೇನೆ ನಿಶ್ಶಬ್ದ ಮಂಜನ್ನರಸಿ.

೧೭

ಒಂದೆಲೆ ಉದುರುತ್ತಿದೆ,
ಅಯ್ಯೋ.... ಅಯ್ಯೋ.... ಒಂದೊಂದೇ
ಒಂದೊಂದೇ ಉದುರುತ್ತಿವೆ.

೧೮

ಪ್ಲಮ್ ಮರಗಳೆಲ್ಲಾ ಅರಳಿ ನಿಂತಿರುವ
ಈ ದಿನಗಳಲ್ಲಿ ಸಾಯಲು
ಅಯ್ಯೋ, ನನಗೆಷ್ಟು ವ್ಯಥೆ.

೧೯

ಅಲೆದಾಟ, ಕನಸು
ಜ್ವರದ ತಾಪದಲಿ ಕನಸು
ಸದಾ ಅಲೆದಾಡುವ ಕನಸ ಕಾಣುವ ಕನಸು.

೨೦

ಎಲೆಗಳಷ್ಟೇ ಅಲುಗುತ್ತಿವೆ,
ಅಯ್ಯೋ ಎಲೆಗಳಷ್ಟೇ ಅಲುಗುತ್ತಿವೆ,
ಗಾಳಿಗುಂಟಾ ತೇಲುತ್ತಾ.

೨೧

ನಡುದಾರಿಯಲ್ಲೇ ಜ್ವರದ ತಾಪ
ಬರಡು ಭೂಮಿಯಲ್ಲಿ ಮುಂದೆ ಸಾಗಲು
ಮತ್ತೆ ಕನಸುಗಳೇಳುತ್ತಿವೆ.

೨೨

ಪ್ರೇಮಿಗಳನ್ನು ನಾನು ಬಲ್ಲೆ
ಅರಳಿದ ಚೆರ್ರಿ.... ಕೋಗಿಲೆ....
ತೃಪ್ತಿಯಿಂದ ಮಲಗುತ್ತೇನೆ.

೨೩

ಇಬ್ಬನಿ ಆವಿಯಾಗಲೇಬೇಕು
ನಮ್ಮ ಜಗತ್ತೆಲ್ಲವೂ ಇಬ್ಬನಿಯೇ.... ಅಷ್ಟೇ ಪ್ರಿಯತಮ
ಅಷ್ಟೇ ನವೀನ.... ಅಷ್ಟೇ ಕ್ಷಣಿಕ.

೨೪

ಮನಸೆಳೆವ ಚೆರ್ರಿ ಹೂಗಳ ಮಧ್ಯೆ
ಮರ ಕುಟುಕ
ಒಣ ಮರವನ್ನು ಹುಡುಕುತ್ತದೆ.

೨೫

ಕೊನೆಯ ಹೆದ್ದಾರಿಯಲಿ
ನಾ ಬಿದ್ದು ಮತ್ತೆ ಏಳಲಾಗದಾಗ
ಮಲಗುತ್ತೇನೆ ಹೂಗಳೊಡನೆ.

## ಕೆಲವು ಜಪಾನೀ ಹೈಕುಗಳು

ಕನ್ನಡಕ್ಕೆ : ಎಚ್. ಡುಂಡಿರಾಜ್

೧

ನೀರಿಗಾಗಿ ನಾನಿನ್ನು
ಭಿಕ್ಷೆ ಬೇಡಬೇಕು
ನನ್ನ ಕೊಳವನ್ನು
ಆಕ್ರಮಿಸಿವೆ ಕಮಲಗಳು

(—ಪಿಯೋ)

೩

ವಿದಾಯ !
ಪುಷ್ಪ ಪಾತ್ರೆಯ ಆಳದ
ಮಧು ಬಿಟ್ಟು ಏದಲಲೊಲ್ಲದ
ಜೇನು ನೊಣದಂತೆ

(-ಭಾಷೊ)

೩

ನನ್ನ ನೆರೆಮನೆಯವನಿಗೆ
ಇರುಳಿಡೀ ಕೊಳಲಿನಲ್ಲಿ
ಕಿರುಚಲು. ಓ ಚಂದ್ರನೇ
ನೀನೇಕೆ ಸ್ಫೂರ್ತಿ ಕೊಡುವೆ ?

(-ಕೊಯೊ)

೪

ದಳಗಳು ಉದರುತ್ತವೆ
ಮೆತ್ತಗೆ ಸದ್ದಿಲ್ಲದೆ
ಶಾಂತವಾಗಿ
ಅವು ಸಿದ್ಧವಿದ್ದಾಗ

(-ಎಸುಜಿನ್)

೫

ಒಂದು ವರ್ಷ ಕಳೆಯಿತು
ಆದರೆ ನಾನಿನ್ನೂ
ತಿಳಿದಿಲ್ಲ ನನ್ನ
ಹೊಸ ಧಣಿಯ ಹೆಸರನ್ನು

(-ರೈರೆಝಾನ್)

# ರಾಬರ್ಟ್ ಫ್ರಾಸ್ಟ್ ಕವಿತೆಗಳು

ಅನು : ಎ. ಕೆ. ಜನಾರ್ದನ್

ರಾಬರ್ಟ್ ಫ್ರಾಸ್ಟ್ (1874–1963) ಪ್ರಾಯಶಃ ಅಮೆರಿಕದ ಅತ್ಯಂತ ಹೆಸರುವಾಸಿಯಾದ ನವ್ಯಕವಿ. ಅವನ ಕವನಗಳು ಮೇಲುನೋಟಕ್ಕೆ ಬಲು ಸರಳವಾಗಿರುವಂತೆ ಕಂಡರೂ, ಅವುಗಳಲ್ಲಿ ಕವಿಯ ಸಂಕೀರ್ಣ ಚಿಂತನಾಲಹರಿ ಹುದುಗಿಕೊಂಡಿದೆ. ಅಮೆರಿಕದ ಹಳ್ಳಿಗಾಡು ಪ್ರದೇಶಗಳಲ್ಲಿ ದಿನನಿತ್ಯ ಕಾಣಸಿಗುವ ಘಟನೆಗಳನ್ನೊಳಗೊಂಡ ಅವನ ಕವನಗಳು ಸಾರ್ವತ್ರಿಕ ಅರ್ಥಪೂರ್ಣತೆಯ ಕ್ಷಿತಿಜದತ್ತ ಹೊರಳುತ್ತವೆ. ಕಾವ್ಯ, ಫ್ರಾಸ್ಟನ ಪಾಲಿಗೆ ಪ್ರಮುಖವಾಗಿ ರೂಪಕ ಯೋಗ್ಯವಾಗಿ ಗೋಚರಿಸುತ್ತಿತ್ತು. ಹೀಗಾಗಿ ವಸ್ತು ಯಾವುದೇ ಆದರೂ ಅದಕ್ಕೆ ನಾಟಕದ ಮೆರುಗು ಕೊಟ್ಟು, ಕಾವ್ಯ ಪ್ರೇಮಿಗಳ ಮುಂದಿಡುತ್ತಿದ್ದ. ಫ್ರಾಸ್ಟನ ಕಾವ್ಯದಲ್ಲಿ ಸ್ಪಷ್ಟವಾಗಿ ಕಾಣುವ ಸ್ವಾರಸ್ಯಕರವಾದ ಅಂಶಗಳೆಂದರೆ–ಸರಳ ಭಾಷೆಯ ಸತ್ವಪೂರ್ಣ ಬಳಕೆ, ಅತ್ಯಂತ ಸೂಕ್ಷ್ಮವಾದ ಅವಲೋಕನ ಶಕ್ತಿ ಹಾಗೂ ಮಾನವ ಸಹಜವಾದ ಪ್ರೇರಕ ಶಕ್ತಿಗಳ ಆಳವಾದ ಅರಿವು.

ಶಾಲಾ ಉಪಾಧ್ಯಾಯನೊಬ್ಬನ ಮಗನಾಗಿ ರಾಬರ್ಟ್ ಫ್ರಾಸ್ಟ್ ಹುಟ್ಟಿದ್ದು ಅಮೆರಿಕದ ಸ್ಯಾನ್‌ಫ್ರಾನ್ಸಿಸ್ಕೊದಲ್ಲಿ. ಹನ್ನೊಂದು ವರ್ಷದ ಬಾಲ್ಯದಲ್ಲೇ ತಂದೆಯನ್ನು ಕಳೆದುಕೊಂಡ. ಹದಿನೇಳನೆಯ ವಯಸ್ಸಿಗೆ, ಶಾಲೆಗೆ ಶರಣು ಹೊಡೆದು ಹಲವಾರು ವೃತ್ತಿಗಳ ರುಚಿ ನೋಡಿದ–ಪಾದರಕ್ಷೆಗಳ ತಯಾರಿಕೆ, ಪತ್ರಿಕೋದ್ಯಮ, ವ್ಯವಸಾಯ ಹಾಗೂ ಶಾಲೆಯಲ್ಲಿ ಮಾಸ್ತರಿಕೆ. ಆದರೆ ಉದ್ದಕ್ಕೂ ಫ್ರಾಸ್ಟನಿಗಿದ್ದುದು ಒಂದೇ ಹಂಬಲ, ಒಂದೇ ಆಸಕ್ತಿ–ಕಾವ್ಯ ರಚನೆ. ಇಪ್ಪತ್ತೊಂದನೆಯ ವಯಸ್ಸಿನಲ್ಲಿ ತನ್ನ ಪ್ರೌಢಶಾಲಾ ಸಹಪಾಠಿ ಎಲಿನಾರಳನ್ನು ಮದುವೆಯಾದ. 1912ರಲ್ಲಿ ಫ್ರಾಸ್ಟ್ ಇಂಗ್ಲೆಂಡಿಗೆ ತೆರಳಿದ್ದು ಅವನ ಸಾಹಿತ್ಯಕ ಒಲವಿಗೆ ಒಂದು ಅರ್ಥಪೂರ್ಣ ತಿರುವನ್ನು ತಂದುಕೊಟ್ಟಿತು. ಅಲ್ಲಿನ ನವ್ಯಕಾವ್ಯ ಚಳವಳಿಯಲ್ಲಿ ಪಾಲ್ಗೊಂಡ ಫ್ರಾಸ್ಟ್ ಕಾವ್ಯ ಸೃಷ್ಟಿಯಲ್ಲಿ ತಲ್ಲೀನನಾದ. 1913ರಲ್ಲಿ ಪ್ರಕಟವಾದ ಅವನ ಮೊಟ್ಟಮೊದಲನೆಯ ಕವನ ಸಂಗ್ರಹ "ಎ ಬಾಯ್ಸ್ ವಿಲ್" ಕಾವ್ಯ ಪ್ರೇಮಿಗಳ ಗಮನ ಸೆಳೆದು, ಮರುವರ್ಷ ಪ್ರಕಟವಾದ "ನಾರ್ತ್ ಆಫ್ ಬೋಸ್ಟನ್" ಸಂಕಲನಕ್ಕೆ ಶುಭನಾಂದಿಯಾಯಿತು. ಈ ಎರಡನೆಯ ಕವನ ಸಂಕಲನ, ಅಮೆರಿಕದ ಕಾವ್ಯ ಕ್ಷೇತ್ರದ ಇತಿಹಾಸದಲ್ಲಿ ಗಮನಾರ್ಹ

ಕೃತಿಯೆಂಬ ಮನ್ನಣೆ ಗಳಿಸಿತು. 1915ರಲ್ಲಿ ಅಮೆರಿಕಕ್ಕೆ ಹಿಂತಿರುಗಿದ ಫ್ರಾಸ್ಟ್ ನ್ಯೂ ಹ್ಯಾಂಪ್‌ಶೈರ್‌ನಲ್ಲಿ ನೆಲೆಸಿದ. ಈ ಪ್ರದೇಶದ ವೈಶಿಷ್ಟ್ಯಪೂರ್ಣ ನೆಲ–ಜಲ–ಬೆಟ್ಟ–ಗುಡ್ಡ–ಕಾಡು–ಮೋಡಗಳು ಅವನ ಕಾವ್ಯದ ಬಹುಭಾಗಕ್ಕೆ ಸ್ಫೂರ್ತಿ ನೀಡಿವೆ. ಅವನ 'ನ್ಯೂ ಹ್ಯಾಂಪ್‌ಶೈರ್' ಕವನ ಸಂಕಲನ ಪುಲಿಟ್ಜರ್ ಪ್ರಶಸ್ತಿ* ಪಡೆದು ಫ್ರಾಸ್ಟನ ಕಾವ್ಯ ಸೃಷ್ಟಿಗೆ ಒಂದು ಹೊಸ ಆಯಾಮ ದೊರಕಿಸಿಕೊಟ್ಟಿತು. ಹತ್ತಾರು ವಿಶ್ವವಿದ್ಯಾನಿಲಯಗಳ ಗೌರವ–ಪದವಿಗಳಿಗೆ ಪಾತ್ರನಾದ ಈ ಕವಿ ಒಂದು ಅರ್ಥದಲ್ಲಿ ಅಮೆರಿಕದ ರಾಷ್ಟ್ರಕವಿ ಎಂಬ ಕೀರ್ತಿಗೂ ಪಾತ್ರನಾದ. ವಿಫುಲವಾಗಿ ದೇಶ ಸಂಚಾರ ಮಾಡಿ ಹತ್ತಾರು ಕಡೆ ಭಾಷಣ ಕಾವ್ಯ–ವಾಚನ ಕಾರ್ಯಕ್ರಮಗಳನ್ನು ನಡೆಸಿಕೊಟ್ಟು ನಾಡಿನ ಕಾವ್ಯ ಪ್ರೇಮಿಗಳ ಹೃದಯಕ್ಕೆ ಹೆಚ್ಚು ಹೆಚ್ಚು ಹತ್ತಿರವಾಗಲು ಯತ್ನಿಸಿದ. 'ವೆಸ್ಟ್ ರನ್ನಿಂಗ್ ಬ್ರೂಕ್' ಮತ್ತು 'ಎ ವಿಟ್‌ನೆಸ್ ಟ್ರೀ' ಫ್ರಾಸ್ಟನ ಇನ್ನೆರಡು ಗಮನಾರ್ಹ ಕವನ–ಸಂಗ್ರಹಗಳು. ದಿ॥ ಜಾನ್ ಎಫ್. ಕೆನೆಡಿ 1967ರಲ್ಲಿ ಅಮೆರಿಕದ ಅಧ್ಯಕ್ಷ ಸ್ಥಾನದ ಗದ್ದುಗೆ ಏರುವ ಸಂದರ್ಭದಲ್ಲಿ ಫ್ರಾಸ್ಟನಿಗೆ ಅವನ 'ದಿ ಗಿಫ್ಟ್ ಔಟ್‌ರೈಟ್' ಎಂಬ ಕವನ ಓದಲು ಆಹ್ವಾನ ಕಳುಹಿಸಲಾಯಿತು.

"ಕವನ, ಹರ್ಷದಲ್ಲಿ ಆರಂಭವಾಗಿ ವಿವೇಕದಲ್ಲಿ ಮುಕ್ತಾಯಗೊಳ್ಳುವಂತಹುದು" ಎಂದೊಮ್ಮೆ ಹೇಳಿದ್ದ ಫ್ರಾಸ್ಟ್. ಕವಿಯು ಈ ನಿಲುವು ಬಲು ಸಾಧಾರಣವಾಗಿ ತೋರುವ ಅವನ ಕಾವ್ಯದ ಜನಪ್ರಿಯತೆಯ ಕಾರಣವನ್ನು ಸ್ಪಷ್ಟಪಡಿಸುತ್ತದೆ. ಆಡು ಮಾತಿನ ಸೊಗಡಿನ ಸರಳ ಭಾಷೆಯ ಪ್ರಯೋಗದಲ್ಲಿ ಪರಿಣತನಾದ ಈ ಕವಿಯ ಶೈಲಿ ಸಹಜವಾಗಿಯೇ ಉಲ್ಲಾಸ ಹಾಗೂ ವಿವೇಕಗಳ ಹದವಾದ ಸಮ್ಮಿಶ್ರಣ.

ಭಾರತದ ಮಾಜಿ ಪ್ರಧಾನಿ ದಿ॥ ಜವಹರಲಾಲ್ ನೆಹರು ಅವರಿಗೆ ಬಹಳ ಪ್ರಿಯವಾಗಿದ್ದ ಫ್ರಾಸ್ಟನ ಕವನವೊಂದರ ಕೊನೆಯ ಈ ನಾಲ್ಕು ಸಾಲುಗಳು, ಅವರು ಸಾವನ್ನಪ್ಪಿದ ದಿನ, ಅವರ ಮೇಜಿನ ಮೇಲಿದ್ದ ಹಾಳೆಯೊಂದರಲ್ಲಿ ಅವರ ಹಸ್ತಾಕ್ಷರದಲ್ಲೇ ಬರೆಯಲ್ಪಟ್ಟಿದ್ದುವು :

ಈ ಕಾನನ, ಸುಂದರ ನಿಗೂಢ ಹಾಗೂ ಕರಾಳ ಕಪ್ಪು.
ನನ್ನ ಪಾಲಿಗೆ ಮಾತ್ರ ಇನ್ನೂ ಮಾಡಿಮುಗಿಸಲಿರುವ ಕೊಟ್ಟ ಮಾತುಗಳಿಷ್ಟು,
ಮತ್ತೆ ಮಲಗುವ ಮುನ್ನ, ಹತ್ತು ಹರಿದಾರಿ ಹಾದಿ,
ಮತ್ತೆ ಮಲಗುವ ಮುನ್ನ ಹತ್ತು ಹರಿದಾರಿ ಹಾದಿ.

–ಲೇಖಕ

---

* ಇದಲ್ಲದೆ, ಮತ್ತೆ ಮೂರು ಬಾರಿ ಫ್ರಾಸ್ಟ್ ಈ ಪ್ರಶಸ್ತಿಯನ್ನು ಪಡೆದುಕೊಂಡ

## ಬರ್ಚ್ ವೃಕ್ಷಗಳು*

ನೆಟೆದು ನೆಟ್ಟಗೆ ನಿಂತ, ಇನ್ನೂ ಹೆಚ್ಚು ಶ್ಯಾಮಲ ವರ್ಣದ ವೃಕ್ಷಗಳ ಸಾಲುಬದಿಯಲ್ಲಿ
ಎಡಕೊಮ್ಮೆ, ಬಲಕೊಮ್ಮೆ ತೂಗಿ ತೊನೆದಾಡುವ ಬರ್ಚ್ ಮರಗಳ
ನಾ ಕಂಡಾಗೆಲ್ಲ, ಯಾರೋ ಮೇಲೇರಿ ಜೀಕುತಿರಬಹುದೆ, ಎಂದು
ಭ್ರಮಿಸುವುದು, ನನ್ನ ಪಾಲಿಗೆ, ಬೆಚ್ಚನೆಯ ಯೋಚನೆ.
ಆದರೂ, ಈ ಜೀಕಾಟಕ್ಕೆ ಅವನೆಲ್ಲ ಅಷ್ಟು ಕೆಳಮಟ್ಟ ಬಗ್ಗಿಸಿ, ಅಲ್ಲೇ
ಉಳಿವಂತೆ ಮಾಡುವುದಂತೂ ಆಗದ ಕೆಲಸ. ಈ ಕೆಲಸ
ಹಿಮ-ಬಿರುಗಾಳಿಯದೇ. ಶಿಶಿರ ಋತುವಿನ ಮಳೆ ಹೊಯ್ದು ಮುಗಿದ
ಬಿಸಿಲ ಮುಂಜಾನೆ, ಬರ್ಫಿನ ಹೊರೆ ಹೊತ್ತುನಿಂತ ಈ ಬರ್ಚ್ ಮರಗಳನ್ನು
ನೀವು ನೋಡಿರಬಹುದು. ಮಂದಾನಿಲ ಬಿರುಸಿನ ಬೀಸುಗಾಳಿಯಾದಾಗ,
ಈ ವೃಕ್ಷಗಳೆಲ್ಲಾ ಡಿಕ್ಕಿ ಹೊಡೆದು ಮೈಯನ್ನು ಜಜ್ಜಿಕೊಳ್ಳುತ್ತಾ, ಹತ್ತು ಹಲವು ಬಣ್ಣಗಳ
ಬಿಂಬಿಸುತ್ತಾ ನಿಂತಾಗ, ಆ ಗಾಜಿನ ಕವಚಗಳೆಲ್ಲಾ ಫಳ-ಫಳಾರನೆ ಸೀಳಿ
ತುಷಾರದ ಚಿಪ್ಪುಗಳೆಲ್ಲಾ ಕಳಚಿ ತೊಪ-ತೊಪನೆ ಕೆಳಗುದುರಿ,
ಹಿಮದ ಹಾಸಿಗೆ ಮೇಲೆ ರಾಶಿ-ರಾಶಿ. ಬಾಚಿ ಬಿಸಾಡಿದಷ್ಟೂ
ಮುಗಿಯದ ಕೆಲಸ. ಸ್ವರ್ಗದ ಒಳಗೋಪುರ ಧೊಪ್ಪನೆ ಕುಸಿದು
ಬಿದ್ದೇ ಹೋಯಿತೆಂಬ ನಿಮ್ಮ ಭ್ರಮೆ !
ಈ ಚೂರು ಛಿದ್ರಗಳೆಲ್ಲ ಘರ್ನ್‌ಗುತ್ತಿಯು ಬಳಿ ಗುಡಿಸಿ ಹಾಕಿದ ಗುಡ್ಡೆ ಗುಡ್ಡೆ,
ಈ ಮರ ಮುರಿದು ಬೀಳುವ ಜಾತಿಗಂತೂ ಸೇರಿದ್ದಲ್ಲ ; ನೆಲಕೊಮ್ಮೆ
ಒಮ್ಮೆಯಷ್ಟೆ, ಸಾಕಷ್ಟು ಸಮಯ, ಬಗ್ಗಿಸಲ್ಪಟ್ಟಿದ್ದಷ್ಟಕ್ಕೆ, ಮತ್ತೊಮ್ಮೆ
ಮುಂದೆಂದೂ, ನೆಟ್ಟಗಾಗುವುದೇ ಇಲ್ಲ :
ಜೋಡಿ ಮುಂಗೈ, ಮಂಡಿಗಳೂರಿ, ತೊಯ್ದ ತುರುಬಿನ ರಾಶಿಯನೆಲ್ಲ
ಮುಖದ ಮುಂದಿಳಿಬಿಟ್ಟು ಬಿಸಿಲತಾಪಕೆ ಒಡ್ಡಿ ಒಣಗಿಸಲು ತೊಡಗಿರುವ
ಬಾಲೆಯರ ಹಾಗೆ, ತಮ್ಮ ಬೆನ್ನ ಹಿಂದೆಯೇ ನೆಲದ ಮೇಲೆ
ಎಲೆಗಳನ್ನೆಳೆದಾಡುವ ಈ ಬರ್ಚ್ ಟೊಂಗೆಗಳು, ಬಿಲ್ಲಿನತೆರದಿ ಬಾಗಿರುವ
ಕಾಂಡಗಳು, ಕಾಡಿನಲಿ ವರುಷಗಳುರುಳಿದ ಬಳಿಕ ನಿಮಗೆ
ಕಾಣಸಿಗಬಹುದು.
ಓ... ನಾ, ಮತ್ತೇನೋ ಹೇಳಹೊರಟಿದ್ದೆ.... ಅಷ್ಟರಲ್ಲೇ
ಹಿಮ-ಬಿರುಗಾಳಿಯ ಸತ್ಯ ನನ್ನ ಒಳತೋಟಿಯಲಿ ಮಿಂಚಿ-
ನನಗಂತೂ, ಯಾರೋ ಒಬ್ಬ ಹುಡುಗ, ಬೇಸ್‌ಬಾಲ್ ಆಟ ಕಲಿವ
ಶಹರಿನಿಂದ, ಬಲು ದೂರವಿರುವ ಹೈದ,

ದನ ಮೇಯಿಸಲು ಹೋಗುವ-ಬರುವ ದಾರಿಯಲಿ. ಈ ಮರಗಳೇರಿ
ಜಗ್ಗಿ - ಬಗ್ಗಿಸುವುದೇ ಬಲು ಪ್ರಿಯವಾಯಿತು.
ತನ್ನಷ್ಟಕ್ಕೆ ತಾನೆ ಆಡಿಕೊಳ್ಳುವ ಈ ಪೋರ, ಬಿಸಿಲು, ಚಳಿ, ಎನ್ನದೆ
ಒಂಟಿಯಾಗೇ, ಅಪ್ಪನ ಮರಗಳನೆಲ್ಲಾ ಒಂದನ್ನೂ ಬಿಡದೆ
ಮತ್ತೆ ಮತ್ತೆ ಸವಾರಿ ಮಾಡಿ, ಅವುಗಳ ಗಡಸನ್ನೆಲ್ಲಾ,
ಮೇಲೆ ಹೆಸರಿಲ್ಲದಂತೆ ಕಿತ್ತಾಚೆಗೊಗೆದಿದ್ದ. ಈ ಹುಡುಗ
ಕಲಿಯುವುದೇನಲ್ಲ ಇತ್ತೊ, ಅದನೆಲ್ಲ ಕಲಿತಿದ್ದ-
ಆತುರದಲ್ಲಿ ಸರಸರನೆ ಮೇಲೇರಿ, ಅವುಗಳ ಮೇಲೆಲ್ಲಾ
ತೂಗಾಡಿ, ಹಿಂಡಿ ಹಿಪ್ಪೆ ಮಾಡಿ, ಮತ್ತೆ ಮೇಲೇಳದಂತೆ
ನೆಲಕಚ್ಚಿಸುವುದು-ಸಿದ್ಧವೆಂಬ ಅರಿವನ್ನ
ಮನದಾಳಕ್ಕೆ ಇಳಿಸಿದ್ದ. ಅವನ ಸಂಯಮ ಸಹನೆ ಅಪೂರ್ವ-
ಬಟ್ಟಲಲಿ ದ್ರವತುಂಬ ಹೊರಟ ನಿಮ್ಮ ಎಚ್ಚರ, ಜೋಪಾನ
ಅದು ಭರ್ತಿಯಾದಾಗ ಮುಗಿಯಲಿಲ್ಲ-
ಬಟ್ಟಲ ಕಂಠ ತುಂಬಿ ತುಳುಕಾಡುವಂತಾದ ಮೇಲೂ,
ಮತ್ತಷ್ಟು ಕೊಸರು.
ಕೊಂಬೆ ತುದಿಯಿಂದ ಪಾದಗಳ ಇಳಿಬಿಟ್ಟು ಕೆಳಹಾರಿ
ನೆಲ ಸಿಗುವವರೆಗೂ, ಈಜುವ ತೆರದಿ ಕಾಲುಗಳ ಬಡಿದಾಟ.
ಹೀಗೇ, ನಾ ಕೂಡ, ಹಿಂದೊಮ್ಮೆ ಈ ಬರ್ಚ್ ಮರಗಳ ಮೇಲೇರಿ
ಜೀಕಿ, ಜೋಕಾಲಿಯಾಡಿದ್ದೆ: ಈಗ, ಮತ್ತೊಮ್ಮೆ ಆ ಭೂತಕ್ಕೆ
ನೆಗೆಯುವಾಸೆ ;
ಈ ಜಗದ ಜಂಜಾಟ ಮನವ ಹಿಂಡಿ ಹಿಪ್ಪೆಯಾಗಿಸಿದಾಗ,
ಇಲ್ಲಿಯ ಪಯಣ ದಾರಿ ಕಾಣದ ಕಾಡುಮೇಡಾದಾಗ,
ಹರಡಿ ಹಬ್ಬಿದ ರಕ್ಕಸ ಜೇಡರ ಬಲೆ ಮುಖಕ್ಕೆ ರಪ್ಪೆಂದು ರಾಚಿದಾಗ,
ಮುಳ್ಳಿನ ಟೊಂಗೆ ನನ್ನ ಕಣ್ಣೊಂದ ಗೀರಿ ರಕ್ತ ಚಿಮ್ಮಿಸಿದಾಗ,
ಆಗ—
ಈ ಜಗವ ತೊರೆದು, ತುಸುಕಾಲ ಕಣ್ಮರೆಯಾಗುವಾಸೆ,
ಮತ್ತಿಲ್ಲಿಗೇ ಹಿಂತಿರುಗಿ ಹೊಸಬಾಳ ಹೂಡುವ ಬಯಕೆ.
ನನ್ನೀ ಹಂಬಲಗಳ ತಪ್ಪಾಗಿ ಗ್ರಹಿಸಿ
ನನ್ನಾಶೋತ್ತರಗಳಿಗೆ ಭಾಗಶಃ "ತಥಾಸ್ತು" ಹೇಳಿ,
ಯಾವ ದೈವವೂ ನನ್ನನ್ನು ಇಲ್ಲಿಂದ-
ಮತ್ತೆಂದೂ ಇಲ್ಲಿಗೆ ಬಾರದ ಹಾಗೆ-ಬಾಚಿಕೊಳ್ಳದಿರಲಿ.
ಪ್ರೀತಿ ಪ್ರೇಮಗಳ ಈ ಲೋಕವೇ ಸರಿ :

ಮತ್ತೆಲ್ಲಿ ಇದಕ್ಕಿಂದ ಉತ್ತಮ ನೆಲೆ ಸಿಕ್ಕೀತೋ ನಾ ಬೇರೆ ಕಾಣೆ.
ನನಗಂತೂ, ಬರ್ಚ್‌ಮರವೇರಿ, ಮೇಲೇರಿ ಹೋಗುವ ತವಕ,
ಹಿಮಶ್ವೇತ-ಕಾಂಡತಬ್ಬಿ ಕೃಷ್ಣವರ್ಣ-ಕೊಂಬೆಗಳ ಹತ್ತಿ
ಸ್ವರ್ಗದ ದಿಕ್ಕಿನಲ್ಲೇ, ನನ್ನ ಭಾರ ತಡೆಯುವವರೆಗೂ
ಏರುವಾಸೆ. ನನ್ನ ಹೊರೆ ಮಿತಿಮೀರಿದಾಗ, ವೃಕ್ಷಶಿಖರ
ಶಿರಬಾಗಿ, ನೆಲಮುಟ್ಟಿ ನನ್ನನೀ ಧರೆಗಿಳಿಸಿದಾಗ
ಪಯಣದ ನಿರ್ಗಮನ-ಆಗಮನ ಎರಡೂ ಮುಗಿದು.
ಮನ, ಮುದ ತುಂಬಿ. ತೃಪ್ತಿಯು ತಂಪು.
ಬರ್ಚ್ ಮರಗಳ ಜೀಕಿ ಜೋಕಾಲೆಯಾಡುವುದಕಿಂತ,
ಇಲ್ಲಿ, ಇನ್ನೆಷ್ಟೋ ವ್ಯರ್ಥ ಕೆಲಸ-ಕಾರ್ಯಗಳುಂಟು.

---

* 'Birches'

## ಆಯ್ಕೆ ಮಾಡದ ಹಾದಿ*

ಹಳದಿ ಕಾಡೊಂದು, ಅಲ್ಲೊಂದು ಕವಲೊಡೆದ ಹಾದಿ,
ಎರಡರಲ್ಲೂ ತೆರಳಿ ಪಯಣಿಸುವ ನನ್ನ ಹುಚ್ಚು ಹಂಬಲದ
ಕಟು ಸತ್ಯ ತಟ್ಟಿದಾಗ ನಾ ತಪ್ತ, ಒಂದು ಹಾದಿಯುದ್ದಕೂ
ದೃಷ್ಟಿ ಹರಿವಷ್ಟು ದೂರ-ಅದು ಹೊರಳಿ ದಟ್ಟ ಪೊದೆಗಳೊಳಸುಗ್ಗಿ
ಕಣ್ಮರೆಯಾಗುವ ತನಕ-ದಿಟ್ಟಿಸುತಲೇ ನಿಂತೆ ;

ಮತ್ತೆ ಈ ದಾರಿಯಷ್ಟೇ ಸರಿ ಕಂಡ, ಮತ್ತೊಂದ ಹಿಡಿದೆ,
ಹುಲ್ಲು ಬೆಳೆಯಿಸಿಕೊಂಡು ಹಾಲುಸಾಗಿ ಕಂಡ ಇದು,
ಅದಕಿಂತ ಮಿಗಿಲೇನೋ ಎಂಬ ಆಮಿಷ ;
ಹಾಗೆ ನೋಡಿದಾಗ, ನಿಜಕೂ ಈ ಎರಡು ಹಾದಿಗಳೂ
ಒಂದೇ ಹದಕ್ಕೆ ಸವೆದಿದ್ದುವು,

ಆ ಮುಂಜಾನೆ. ಅವೆರಡರ ಉದ್ದಕ್ಕೂ ಹಾದ ತುಳಿತಕೆ ಸಿಕ್ಕ ಕಪ್ಪಾಗದ ಎಲೆಗಳು.
ಓ. ಮುಂದೆ ಎಂದಾದರೊಂದು ದಿನಕೆಂದು ಮತ್ತೊಂದ ಮೀಸಲಿಟ್ಟೆ.
ಮರುಘಳಿಗೆ, ಒಂದು ಹಾದಿ ಮುಗಿದಂತೆ ಮತ್ತೊಂದು, ಇನ್ನೊಂದು
ಎಂಬ ವಾಸ್ತವದ ಅರಿವು ಮೂಡಿ,
ಮತ್ತಿಲ್ಲಿ ನಾ ಮರಳಿ ಬಂದೇನೇ ಎಂಬ ಸಹಜ ಸಂದೇಹ.

ವರುಷಗಳುರುಳಿದ ಬಳಿಕ, ನಿರಾಸೆಯ ನಿಟ್ಟುಸಿರಲ್ಲೋ
ಹೆಮ್ಮೆಯ ಹುಮ್ಮಸ್ಸಿನಲ್ಲೋ ನಾ ಹೇಳಬಹುದು, ಹೀಗೆ:
ಕಾಡೊಂದರ ಕವಲು ದಾರಿಯಲಿ ನಿಂತ ನಾನು ಆರಿಸಿದ್ದು
ಹೆಚ್ಚು ಸವೆಯದ ಹಾದಿ
ಈ ಮಾರ್ಪಾಟಿಗೆಲ್ಲಾ–ಆ ಆಯ್ಕೆಯೇ ಮೂಲ.

---

* The Road Not Taken

## ಮಂಜು ಮುಸುಕಿದ ಸಂಜೆ ಕಾಡ ಬಳಿ ನಿಂತಾಗ*

ಈ ಅಡವಿಯೊಡೆಯ ನನಗೆ ತಿಳಿದವನಿರಬೇಕು.
ಅವನ ಮನೆ–ಮಠ ಮಾತ್ರ ಹಳ್ಳಿಯಲ್ಲೇ;
ಅವನ ಈ ಕಾನನವೆಲ್ಲ ಹಿಮದಿಂದ ಆವೃತವಾಗುವುದ
ಗಮನಿಸುವ ನನ್ನನ್ನು ಆತ ನೋಡುವುದೇ ಇಲ್ಲ.

ಈ ಹೆಪ್ಪುಗಟ್ಟಿದ ಸರೋವರಕೂ, ಕಾನನಕೂ ನಡುವೆ
ಅದೂ. ವರುಷದ ಈ ಅತ್ಯಂತ ಸುದೀರ್ಘ ಸಂಜೆ
ತೋಟದಮನೆ ಹತ್ತಿರವೆಲ್ಲೂ ಕಾಣದಿದ್ದರೂ,
ಇಲ್ಲಿ, ನಾ ನಿಲ್ಲಿಸಿರುವುದ ನೋಡಿ, ನನ್ನ ಗಿಡ್ಡ ಕುದುರೆಗೆ ವಿಚಿತ್ರವೆನಿಸಿರಬೇಕು.

ಅಪ್ಪಿ-ತಪ್ಪಿ ನಾನಿಲ್ಲಿ ನಿಂತೆನೊ ಏನೋ ಎಂದು
ಕಡಿವಾಣದ ಕಿರು-ಗಂಟೆಗಳನ್ನು ಗೋಣು ಹಾಕಿ ಝಣ-ಝಣಿಸಿ ಕೇಳಿಯೂ ಆಗಿದೆ.
ಇದು ಬಿಟ್ಟರೆ, ಹಗುರಾಗಿ ತೇಲಿ ಬರುವ ಗಾಳಿ ಹಾಗೂ ಹಿಮದ
ತುಣುಕುಗಳ ಅವರೋಹಣದ ಸಪ್ಪಳ ಮಾತ್ರ.

ಈ ಕಾನನ, ಸುಂದರ, ನಿಗೂಢ ಹಾಗೂ ಕರಾಳ ಕಪ್ಪು.
ನನ್ನ ಪಾಲಿಗೆ ಮಾತ್ರ ಇನ್ನೂ ನಡೆಸಿಕೊಡಲಿರುವ ಕೊಟ್ಟ ಮಾತುಗಳೆಷ್ಟೋ,
ಮತ್ತೆ ಮಲಗುವ ಮುನ್ನ ಹತ್ತು ಹರಿದಾರಿ ಹಾದಿ,
ಮತ್ತೆ ಮಲಗುವ ಮುನ್ನ ಹತ್ತು ಹರಿದಾರಿ ಹಾದಿ.

---

* Stopping by Woods on a Snowy Evening

# ತೆಲುಗು ಮಿನಿ ಕವನಗಳು

ಅನು : ಆರ್ವಿಯಸ್. ಸುಂದರಂ

['ಮಿನಿ ಕವನ' ಎಂಬುದನ್ನು ಪ್ರತ್ಯೇಕ ಸಾಹಿತ್ಯ ಪ್ರಕಾರವೆನ್ನಬೇಕೇ, ಕಾವ್ಯದ ಅನೇಕ ಅಭಿವ್ಯಕ್ತಿಗಳಲ್ಲಿ ಅದೂ ಒಂದು ಎಂದರೆ ಸಾಕೇ ಎಂಬುದರ ಬಗ್ಗೆ ಆಧುನಿಕ ತೆಲುಗು ಸಾಹಿತ್ಯ ಲೋಕದಲ್ಲಿ ಚರ್ಚೆ ನಡೆದಿದೆ, ನಡೆಯುತ್ತಿದೆ. ಮಿನಿ ಕವನದ ನಿರ್ವಾಣವಿಲ್ಲ. ಭಾವಾಭಿವ್ಯಕ್ತಿಗಳನ್ನು ಕುರಿತಂತೆ ವಿಶ್ವವಿದ್ಯಾಲಯಗಳಲ್ಲಿ ಸಂಶೋಧನೆ ನಡೆದಿದೆ. 'ಮಿಂಚಿನಷ್ಟು ಮಿನಿ ಕವನದ ಆಯುಸ್ಸು. ಆದರೆ ಕಾಲದುದ್ದಕ್ಕೂ ಅದರ ವರ್ಚಸ್ಸು' ಎಂದಿದ್ದಾರೆ ಡಾ॥ ಸಿ. ನಾರಾಯಣರೆಡ್ಡಿ. ಮಿನಿ ಕವನಗಳೆನಿಸಿಕೊಂಡ ಕೆಲವು ತೆಲುಗು ಚುಟುಕಗಳ ಅನುವಾದ ಇಲ್ಲಿವೆ. —ಲೇಖಕ]

## 1. ಆಚೆ ದಡ

ಏಕೆ ಈ ಭಯ ?
ಮನೆಯಲ್ಲಿ ಕತ್ತಲು.

ಏನೀ ಅಪಸ್ವರ ?
ಕಿತ್ತು ಹೋಯಿತು ತಂತಿ.

ಆ ಬಣ್ಣದ ನೆರಳುಗಳಾವುವು ?
ಸಾವು, ಬದುಕು.

ಎಲ್ಲಿಗೆ ಹೋಗುವೆ ಈ ರಾತ್ರಿ ?
ಆಚೆ ದಡಕ್ಕೆ.... (1934)

—ಶ್ರೀ ಶ್ರೀ

## 2. ಆಃ

ಕೆಂಡಗಳನೆಸೆಯುತ್ತಾ
ಮುಗಿಲತ್ತ ನಾನು ಹಾರಿದರೆ
ನಿಬ್ಬೆರಗಾಗಿ ಇವರು—
ನೆತ್ತರನು ಕಕ್ಕುತ್ತಾ
ನೆಲಕ್ಕೆ ನಾನುರುಳಿದರೆ
ನಿರ್ದಯಿಗಳಾಗಿ ಇವರೇ.... (1935)

—ಶ್ರೀ ಶ್ರೀ

## 3. ಕಣ್ಣು

ಕಣ್ಣು ಬಿಚ್ಚಿದರೆ ಜನನ
ಕಣ್ಣು ಮುಚ್ಚಿದರೆ ಮರಣ
ರೆಪ್ಪೆ ಬಡಿತವಲ್ಲವೆ ಈ ಪಯಣ.

—ಚಂದ್ರಸೇನ್

## 4. ಜೆಪಿ

ಹುಟ್ಟು ನಿನ್ನದು
ಸಾವು ನಿನ್ನದು
ಬದುಕೆಲ್ಲ ದೇಶದ್ದು.

## 5. ನಿರಾಶೆ_ದುರಾಶೆ

ರವಿ ಮೂಡುವುದೇಯಿಲ್ಲ ಎಂದುಕೊಳ್ಳುವುದು
ನಿರಾಶೆ
ಮೂಡಿ ಹಾಗೇ ಇರಬೇಕೆಂದುಕೊಳ್ಳುವುದು
ದುರಾಶೆ.

—ಕಾಳೋಜಿ

## 6. ಜೀವನ

ನಿಮ್ಮ ವ್ಯಾಕರಣ ಹೇಗಿದ್ದರೇನು
ಈ ವಾಕ್ಯದಲ್ಲಿ
ಕ್ರಿಯೆ ಮುಖ್ಯ ನನಗೆ.

—ಕೆ. ಎಸ್. ರಮಣ

## 7. ವಸ್ತು

ಬೆಳಗ್ಗೆ
ವಿಧಾನಸಭೆಯ ಮುಂದೆ
ಗುಡಿಸುವವರಿಗೆ
ನಿನ್ನೆಯ ಘೋಷಣೆಗಳು ಸಿಕ್ಕುತ್ತವೆ
ಕಸ
ಚೀಲಕ್ಕೆ ತುಂಬಿಸುವಾಗ
ಗಾಜಿನ ಚೂರುಗಳಂತೆ
ವಾಗ್ದಾನಗಳು ಚುಚ್ಚಿಕೊಳ್ಳುತ್ತವೆ.

—ಡಾ॥ ಎನ್. ಗೋಪಿ

## 8. ಜೈಜೈ

ಹುಲಿ
ಮೇಕೆಯನ್ನು ಕೊಂದರೆ
ಜೈಜೈ
ಮೇಕೆ
ಹುಲಿಯನ್ನು ಕೊಂದರೆ
ಜೈಲು.

—ಆಸು ರಾಜೇಂದ್ರ

## 9. ತಾಜ್‌ಮಹಲ್

ಪ್ರೀತಿ
ಎಲ್ಲಿ ಹುಟ್ಟಿತೋ ಏನೋ
ಇಲ್ಲಿ ಸಮಾಧಿಯಾದರೂ
ಇನ್ನೂ ಬದುಕಿದೆ.

—ಆಸು ರಾಜೇಂದ್ರ

## 10. ಕಾವ್ಯವಸ್ತು

ಗ್ರಾಮೀಣರ ಕಾಮನಬಿಲ್ಲು
ನಗರಕ್ಕೆ ಕಾವ್ಯದ ವಸ್ತು
ಹಕ್ಕಿಕೂರುವ ಮರದ ಕೊಂಬೆಯೇ
ಕವಿಯ ಕಣ್ಣಿಗೆ ವಿಮಾನಾಶ್ರಯ.

## 11. ಕವಿ

ನದಿಗಳ ಕನಸು
ಹೊಲದಲ್ಲಿ ಫಲಿಸುವುದು
ಕವಿಗಳ ಕನಸು
ಮನುಷ್ಯರಲ್ಲಿ ಫಲಿಸುವುದು.

—ಶೇಷೇಂದ್ರ

## 12. ಕ್ರಿಯಾಶೂನ್ಯರು

ಕ್ರಿಯಾಶೂನ್ಯರು
ಕರ್ತವ್ಯವನ್ನು ಮರೆತು
ಕರ್ಮವನ್ನೆ ನಿಂದಿಸುವರು.

—ಪಠಾಭಿ

## 13. ಕುಡುಕ

ಸಾರಾಯಿ ಕುಡಿದವನು
ಷರಾಯಿ ಜಾರಿ ಬೀಳುತ್ತಿದ್ದರೂ ತಾನು
ದೈಸ್ರಾಯಿ ಎಂದು ಕೊಳ್ಳುತ್ತಾನೆ.

—ಪರಾಭಿ

## 14. ಅಲ್ಲ

ಜೀವನವೆಂಬ ವಾಕ್ಯದಲ್ಲಿ
ಪ್ರೀತಿ
ಫುಲ್‌ಸ್ಟಾಪ್ ಅಲ್ಲ, ಕಾಮಾ.

— ಸಾರಥಿ

## 15. ನಾಯಕ

ಪದವಿಯಲ್ಲಿದ್ದಾಗ
ಕಂಬಳಿ ಹುಳು
ಚುನಾವಣೆ ಬಂದರೆ
ಚಿಟ್ಟೆ!

—ಎಸ್. ಪ್ರಭಾಕರ್

# ತೊತ್ತಿನ ಸಂತೋಷ

ಮೂಲ (ಬಂಗಾಳಿ) : ವಿಜಯಃ ಮುಖೋಪಾಧ್ಯಾಯ
ಅನು : ಸುಮತೀಂದ್ರ ನಾಡಿಗ

ನನ್ನ ಮನೆಗೆ ಬಂದೆ ನಾನು
ಮನೆಯೆ ಕಾಣಲಿಲ್ಲ,
ದೊಡ್ಡದೊಂದು ಬಾಗಿಲಿತ್ತು
ಕೆಲವು ಕಿಟಕಿ ಇದ್ದವು,
ಯಾರು ಬೇಕು ನಿನಗೆ ಎಂದು
ನನ್ನ ಕೇಳಿಬಿಟ್ಟವು.

ನನ್ನ ನಾನು ಕೇಳಿಕೊಂಡೆ
ಯಾರು ಬೇಕು ನಿನಗೆ ?
ಮನೆಯು ಖಾಲಿಯಾಗಿದೆ
ಮನೆಯೆ ಇಲ್ಲವಾಗಿದೆ.

ಬಾಡಿಗೆಗೆ ಇರುವಳಂತೆ
ಅಥವಾ ಒಬ್ಬ ಅತಿಥಿಯಂತೆ
ನನ್ನ ಕಣ್ಣು ನಂಬದಂತೆ,
ನನ್ನ ದೇಹ ಭಾರವನ್ನು
ಹೇಗೋ ಕಾಲು ತೂಗಿದಂತೆ,
ಮರದ ಕುರ್ಚಿಯಲ್ಲಿ ಕೂತು
ನಾನೊಬ್ಬಳೆ ಅನಿಸಿತು ;

ನನ್ನ ನಾನು ಕೇಳಿಕೊಂಡೆ,
ಯಾರು ಬೇಕು ನಿನಗೆ ?

ಪ್ಲಾಸ್ಟಿಕ್ಕಿನ ಬೊಂಬೆ ನಾನು
ನನ್ನ ಕೂದಲನ್ನು ಹಿಡಿದು ನೀನು ಕುಣಿಸುವೆ
ನೀನು ತಾಳ ಬಡಿದ ಹಾಗೆ ನಾನು ಕುಣಿಯುವೆ.
ನನ್ನ ನಿನ್ನ ಬಂಧಿಸಿರುವ
ಸೂತ್ರ ಜಗ್ಗಿ ಬಿಟ್ಟ ಹಾಗೆ
ಒಮ್ಮೆ ನಾನು ಕೂಡುವೆ, ಒಮ್ಮೆ ನಾನು ನಿಲ್ಲುವೆ.

ಹೀಚುವ ಈ ಸೂತ್ರದ ತುದಿ
ಬಹಳ ದಿನಗಳಿಂದ ನಾನು ಹೇಳಿದಂತೆ ಕೇಳುವೆ,
ಈಗ ನನ್ನ ಕೂದಲನ್ನು ಯಾರೇ ಹಿಡಿದು ಜಗ್ಗಿದರೂ
ನೋವೆ ಇಲ್ಲವಾಗಿದೆ,
ನೀನು ಆಡಿಸಾಡಿದಂತೆ ನೋಡು ಹೇಗೆ ಕುಣಿಯುವೆ.

ಸ್ವತಂತ್ರವಾಗಿ ನಿಲ್ಲಲಿಕ್ಕೆ ಕೊಡವಿಕೊಳ್ಳಲಿಲ್ಲ ನಾನು,
ಸೂತ್ರ ಸಡಿಲ ಬಿಡದಿರು.
ನಿನ್ನ ಹಿಡಿತದಲ್ಲಿ ಬದುಕು, ನೀ ಬಿಟ್ಟರೆ ಸಾವು ನನಗೆ
ಪ್ಲಾಸ್ಟಿಕ್ಕಿನ ಗೊಂಬೆ ಬದುಕು
ಅದೇ ನನ್ನ ಗೆಲುವು.

# ದುರ್ದಿನ

ಮೂಲ (ಬಂಗಾಳಿ) : ಶರತ್ ಮುಖೋಪಾಧ್ಯಾಯ
ಅನು : ಸುಮತೀಂದ್ರ ನಾಡಿಗ

ಮರೆಯದಿರು ನಿನ್ನ ಹೆಗಲಿನ ಮೇಲೆ
ಮೃದುವಾಗಿ ಕೈಯಿಟ್ಟು ಸಂತೈಸಿದವರನ್ನು,
ಸುಡುವ ಹಣೆ ಮೇಲೆ ಒದ್ದೆ ಬಟ್ಟೆಯನಿಟ್ಟು
ತಣ್ಣಗಿಟ್ಟವರನ್ನು,
ನಿನ್ನ ದುಃಖಗಳನ್ನು ಬೆಚ್ಚನೆಯ ಕಂಬಳಿಯಲ್ಲಿ
ಮುಚ್ಚಿದವರನ್ನು,
ನಿನ್ನ ಜೊತೆಗಿದ್ದವರ ಋಣವನ್ನು ಸ್ಮರಿಸು.

ಕಿವಿಗೆ ಕರ್ಕಶವಾಗಿ
ಈ ವಿವೇಕದ ಮಾತು ನಿನಗೆ ಕೇಳಿಸಿತೆ ?
ಋಷಿಮುಖದ ಈ ಕತ್ತೆ ಕಿರುಬಗಳು
ಸಹಾನುಭೂತಿಯನು ಚಾಚುವುದಕ್ಕೆ
ಕಾಯುತ್ತವೆ,
ನಿನ್ನ ದುರದೃಷ್ಟಕ್ಕೆ ಕಣ್ಣೀರು ಸುರಿಸುತ್ತ
ಒಳಗೊಳಗೆ ಬೀಗುತ್ತವೆ.
ನಿನ್ನ ಹೆಗಲಿನ ಮೇಲೆ ತಮ್ಮ ಕೈಯನ್ನಿಡಲು
ಧೈರ್ಯ ಪಡಕೊಳ್ಳುತ್ತ
ಕೃತಜ್ಞತೆಗೆ ಕಾಯುತ್ತವೆ,
ಸಂಧಿವಾತದ ಹಾಗೆ ಕಾಯುತ್ತವೆ.

ಇಂಥವರಿಗಿಂತ, ಮಜಾ ಮಾಡುವ
ಸಂತೋಷ ಚಿಮ್ಮುತ್ತಿರುವ ಗೆಳೆಯರೇ ವಾಸಿ.
ಹಬ್ಬದ ದಿವಸ ಕುಣಿದಾಡುವರು,
ನಿನ್ನ ದುರ್ದಿನದಲ್ಲಿ ಒಬ್ಬನನ್ನೇ ಬಿಟ್ಟು
ಮಾಯವಾಗುವರು.

## ಪಾರ್ಕಿನಲ್ಲಿ

ಅವರು
ಪಾರ್ಕಿನಲ್ಲಿ ತುಂಬಾ ಹತ್ತಿರವಾಗಿದ್ದರು.
ಹೊರಗೆ ಬಂದಾಗ
ದೂರವಾದ ಹಾಗೆ ಕಂಡರು.
ಹುಡುಗಿ ಮೌನವಾಗಿ
ಕೆಂಪು ಶಾಲು ಬೆನ್ನಿನಿಂದ ಜೋಲುತ್ತಿತ್ತು.
ಹುಡುಗನ ಮುಖದಲ್ಲಿ
ಆರೋಗ್ಯಕರವಾದ ಕಪ್ಪನೆಯ ದಪ್ಪನೆಯ
ಕೂದಲಿತ್ತು.
ಅವನ ಸಂದಿಗ್ಧತೆಯನ್ನು ವ್ಯಕ್ತಪಡಿಸುವ ಹಾಗೆ
ಅವನ ಕೈಬೆರಳೂ ಜೇಬಿನಲ್ಲಿ ಇಳಿದಿದ್ದವು.

ಅದಕ್ಕೆ ನಾನೇಕೆ ತಲೆಕೆಡಿಸಿಕೊಳ್ಳಬೇಕು ?
ಅವರು ನನ್ನ ಮಕ್ಕಳಂತೂ ಅಲ್ಲ.
ಆದರೆ ನಾನು
ಎಂದೂ ಮಾಡದ್ದನ್ನು ಮಾಡಿಬಿಟ್ಟೆ,
ನನ್ನ ಹೆದರಿದ ಕಣ್ಣುಗಳನ್ನು ಆಕಾಶಕ್ಕೆತ್ತಿ
ಬೇಡಿಕೊಂಡೆ : "ದೇವರೇ.
ಅವರ ಸಖ್ಯ ಉಳಿಯಲಿ.
ಅವರ ಸಖ್ಯ ಉಳಿಯಲಿ, ದೇವರೇ,
ನನಗೆ ಇನ್ನೇನೂ ಆಸೆಯಿಲ್ಲ.

## ಒಮ್ಮೆ

ಒಮ್ಮೆ ಅವನಿಗೆ ಈ ಪ್ರಪಂಚದ ಬಗ್ಗೆ
ತುಂಬ ಕುತೂಹಲವಿತ್ತು,
ಎರಡೂ ಮರಗಿವಿಗಳನ್ನು ಅಗಲಿಸಿ
ಮೌನವನ್ನು ಗದ್ದಲವನ್ನೂ ಕೇಳುವುದು
ಅವನಿಗೆ ಖುಷಿಕೊಡುತ್ತಿತ್ತು.
ತನ್ನ ಉದ್ದನೆಯ ಸೊಂಡಿಲನ್ನು ಚಾಚಿ
ಪ್ರತಿಯೊಂದು ಮನೆಯ ಸುದ್ದಿ ತಿಳಿಯುವುದಕ್ಕೆ
ಅವನಿಗೆ ಆಸಕ್ತಿಯಿತ್ತು.

ಈಗ ಆ ಆನೆಗೆ ಯಾವ ಕುತೂಹಲವೂ ಇಲ್ಲ.
ಮುಖಗಂಟಿಕ್ಕಿ ಒಬ್ಬನೇ ನಿಲ್ಲುತ್ತಾನೆ,
ನೊಣಗಳನ್ನು ಓಡಿಸಲಿಕ್ಕೆ ಇಷ್ಟವಿಲ್ಲದ ಕಿವಿಗಳನ್ನು
ಆಡಿಸುತ್ತಾನೆ,
ದೊಡ್ಡ ಸೊಂಡಿಲನ್ನು ಸೂರ್ಯನ ಕಡೆಗೆ ಎತ್ತಿ
ಆಮೇಲೆ ನೀರಿನಲ್ಲಿ ಇಳಿಸುತ್ತಾನೆ,
ತನ್ನ ಮೇಲೆ ನೀರನ್ನು ಸುರಿದುಕೊಳ್ಳುತ್ತಾನೆ,
ತಣ್ಣನೆ ನೀರನ್ನು ಸುರಿದುಕೊಳ್ಳುತ್ತಾನೆ.
ಜಗತ್ತಿನ ಬಗ್ಗೆ ನಿರಾಸಕ್ತಿಯ
ಈ ಆನೆಯ ಆಟವೆಲ್ಲ,
ಈಗ, ತನ್ನ ಜೊತೆಗೇ ನಡೆದಿದೆ.

# ಕತೆಗಳು

# ಸಾವಿತ್ರಿಬಾಲಾ

ಮೂಲ (ಬಂಗಾಳಿ) : ಬನ್‌ಫೂಲ್
ಅನು : ಎಸ್. ವಿ. ಶ್ರೀನಿವಾಸರಾವ್

[ಮೂಲಲೇಖಕ 'ಬನ್‌ಫೂಲ್'. ಇವರ ನಿಜ ಹೆಸರು ಶ್ರೀ ಬಲಾಯಿಚಾಂದ್ ಮುಖ್ಯೋಪಾಧ್ಯಾಯ. ಬಹುಮುಖಪ್ರತಿಭೆಯ ಶ್ರೀಯುತರು ಕಥೆ, ಕವಿತೆ, ಕಾದಂಬರಿ, ನಾಟಕ, ಪ್ರಬಂಧ ಮುಂತಾಗಿ ಎಲ್ಲ ಸಾಹಿತ್ಯ ಕ್ಷೇತ್ರಗಳಲ್ಲೂ ಸಿದ್ಧಹಸ್ತರು. ಕೇಂದ್ರ ಸರ್ಕಾರವು ಇವರಿಗೆ 1957ರಲ್ಲಿ ಪದ್ಮಭೂಷಣ ಪ್ರಶಸ್ತಿ ನೀಡಿ ಗೌರವಿಸಿದೆ. ಕಲ್ಕತ್ತಾ ವಿಶ್ವವಿದ್ಯಾನಿಲಯದ 'ಸ್ಮೃತಿ' ಪುರಸ್ಕಾರ, 1952ರಲ್ಲಿ ಲಭಿಸಿದ್ದರೆ; 1961ರಲ್ಲಿ 'ಆನಂದ' ಪುರಸ್ಕಾರ, 1962ರಲ್ಲಿ 'ರವೀಂದ್ರ' ಪುರಸ್ಕಾರ ಲಭಿಸಿವೆ.]

'ರಿಪುನಾಶ್' ಆತನ ಈ ಹೆಸರು ವಿಚಿತ್ರವಾಗಿ ತೋರುತ್ತದೆ. ಆತನ ಅಣ್ಣನ ಹೆಸರು 'ತಮೋನಾಶ್'. ಆದರೆ ವಿಧಿಯ ಕೈವಾಡ, ಆತನ ಎದಿರು ಯಾರೂ ಯಾರ ನಾಶವನ್ನೂ ಮಾಡಲಾರರು. ಆತ ತನ್ನನ್ನೇ, ತಾನೇ ನಾಶಮಾಡಿಕೊಂಡ. ತಮೋ ನಾಶನ ಜೀವನದಲ್ಲಿ ಕೊಂಚವೂ ಬೆಳಕು ಬರದಾಗಿತ್ತು. ಅ....ಆ....ಕ....ಖ ಅಕ್ಷರ ಮಾಲೆಯೂ ಇಣಕದಾಗಿತ್ತು. ಆತ ಸಂಪೂರ್ಣವಾಗಿ ಅನಕ್ಷರಸ್ಥನಾಗಿಯೇ ಉಳಿದ. ಬ್ರಾಹ್ಮಣ ವಂಶವಲ್ಲಿ ಈ ಮಕ್ಕಳು ಹುಟ್ಟಿದ್ದುದರಿಂದ ಇವರಿಗೆ ಸಾಂಪ್ರದಾಯಿಕವಾಗಿ ನಾಮಕರಣವಾಗಿತ್ತು. ಅವರ ತಂದೆ ಪಾಠಶಾಲೆಯ ವಿದ್ವಾಂಸರು. ಹೆಸರು ಮೋಹನಾಶ್. ಸಂಕ್ಷಿಪ್ತವಾಗಿ ಜನಗಳು ಈತನನ್ನು ಮೋಹನ್ ಪಂಡಿತ ಎಂದು ಕರೆಯುತ್ತಿದ್ದರು. ಈಗಿನ ಸಮಾಜದಲ್ಲಿ ಸಂಸ್ಕೃತ ಪಂಡಿತರಿಗೆ ಮರ್ಯಾದೆ ಕಡಿಮೆ ಆಗಿದೆ. ಮೇಲಾಗಿ ಅವರಂತೂ ಮಹಾ ದರಿದ್ರರಾಗಿದ್ದರು. ಅವರು ಆಗಾಗ್ಗೆ ಪೌರೋಹಿತ್ಯ ಸಹ ನಡೆಸುತ್ತಿದ್ದುದುಂಟು. ಇವರು ಮರಣ ಹೊಂದಿದಾಗ ತಮೋ ನಾಶ್‌ಗೆ ಆರು ವರ್ಷ ಮತ್ತು ರಿಪುನಾಶ್‌ಗೆ ಮೂರು ವರ್ಷ ವಯಸ್ಸು. ಇವರ

ತಾಯಿ ಬೇರೆ ಮನೆಗಳಲ್ಲಿ ಅಡಿಗೆ ಕೆಲಸ ಮಾಡಿ ಸಂಸಾರ ನಿರ್ವಹಿಸುತ್ತಿದ್ದಳು. ತಮೋನಾಶ್ ಹದಿನಾರು ವರ್ಷದ ಹೊತ್ತಿಗೆ ಸೊಕ್ಕಿ ಬೆಳೆದಿದ್ದ. ದಿನವೆಲ್ಲಾ ಯೌವ್ವನದ ಹುರುಪಿನಲ್ಲೇ ಇರುತ್ತಿದ್ದ. ಅಲ್ಲಿ ಗೂಂಡಾಗಳ ಗುಂಪೊಂದಿತ್ತು. ಇದರಲ್ಲಿ ತಮೋನಾಶನ ಹೆಸರು 'ತಮುನಾ'. ಗೂಂಡಾಗಿರಿ ಮಾಡಿ ತಮೋನಾಶ್ ಗಳಿಸುತ್ತಿದ್ದ ಸಂಪಾದನೆಯಲ್ಲಿ ಕೆಲಭಾಗವನ್ನು ತಾಯಿಗೆ ನೀಡುತ್ತಿದ್ದ. ಉಳಿದುದನ್ನು ಗುಂಡು ಹಾಕಿ ಮೋಜು ಮಾಡಲು ಉಡಾಯಿಸುತ್ತಿದ್ದ. ಈ ತರಹದ ಮೋಜು ಜೀವನ ಹೆಚ್ಚು ದಿನ ನಡೆಸಲು ಸಾಧ್ಯವಾಗಲಿಲ್ಲ. ಗೂಂಡಾಗಿರಿಯಲ್ಲಿ ಯಾರದೋ ಚೂರಿಯ ಏಟಿಗೆ ಬಲಿಯಾದ. ಈತನ ಶವ ಒಂದು ದಿನ ಫುಟ್‌ಪಾತ್ ಮೇಲೆ ದೊರಕಿತು. ಬಹಳ ಹೊತ್ತು ಅಲ್ಲೇ ಬಿದ್ದಿದ್ದ ಈ ಶವವನ್ನು ಅನಂತರ ಪೋಲೀಸ್‌ನವರು ಶವಪರೀಕ್ಷೆಗಾಗಿ ಕೊಂಡೊಯ್ದರು. ಡಾಕ್ಟರುಗಳು ಈತನ ಶರೀರವನ್ನು ಸೀಳಿ ಕತ್ತರಿಸಿ ಶವಾಗಾರಕ್ಕೆ ಒಪ್ಪಿಸಿದರು. ತಮೋನಾಶ್ ತಾಯಿ ಶವಸಂಸ್ಕಾರಕ್ಕೆ ಬೇಕಾಗುವಷ್ಟು ಜನ ಹಾಗೂ ಹಣವನ್ನು ಕೂಡಿಸಲು ಅಸಮರ್ಥಳಾದುದರಿಂದ ಆಕೆ ಶವವನ್ನು ಪಡೆಯಲು ಯಾವ ಪ್ರಯತ್ನವನ್ನೂ ನಡೆಸಲಿಲ್ಲ.

ಆಕೆ ಈಗಾಗಲೇ ಸಾಕಷ್ಟು ಸಾಲದ ಹೊರೆಯಿಂದ ಪರಿತಪಿಸುತ್ತಿದ್ದುದರಿಂದ ಮತ್ತೆ ಸಾಲ ಮಾಡಲು ಮುಂದಾಗಲಿಲ್ಲ. ಶವಗಾರದ ವಾರಸುದಾರ ತಮೋನಾಶ್‌ನ ಅಸ್ಥಿಗಳನ್ನು ತೆಗೆದು ಅನಾಟಮಿ ವಿದ್ಯಾರ್ಥಿಗಳ ಉಪಯೋಗಕ್ಕಾಗಿ ಕೊಟ್ಟು ಕೆಲವು ರೂಪಾಯಿ ಗಳಿಸಿದ. ಹೀಗೆ ತಮೋನಾಶ್‌ನ ಜೀವನ ಕಥೆ ಪರಿಸಮಾಪ್ತಿಗೊಂಡಿತು. ತಮೋನಾಶ್‌ನ ತಾಯಿ ಸಾವಿತ್ರಿ ಸಹ ಮಗನ ಮರಣದ ಬಗ್ಗೆ ಹೆಚ್ಚಿಗೆ ರೋದಿಸಲಿಲ್ಲ. ಆದರೆ ಆಕೆಯ ಅಂತರಾಳದ ನೋವಿನ ಉಸಿರು ಹೊರಹೊಮ್ಮುತ್ತಿತ್ತು. ಅದಕ್ಕೆ ಯಾವ ಭಾಷೆಯೂ ಇರಲಿಲ್ಲ. ನೋಟಕ್ಕೆ ಕಂಡುಬರುತ್ತಿರಲಿಲ್ಲ. ಆದರೂ ಆ ನೋವು ಬಹು ದಾರುಣವಾಗಿತ್ತು. ಆಕೆ ಅಡಿಗೆ ಮಾಡುತ್ತಿದ್ದ ಮನೆಯ ಯಜಮಾನ ಈಕೆಯ ಸ್ಥಿತಿ ನೋಡಿ ಕನಿಕರಿಸಿ ಎರಡು ರೂಪಾಯಿ ಸಂಬಳ ಏರಿಸಿದ. ಆದರೆ ಸಾವಿತ್ರಿ ಅದನ್ನು ನಿರಾಕರಿಸಿಬಿಟ್ಟಳು. ತಲೆತಗ್ಗಿಸಿ ನುಡಿದಳು : "ಅಗತ್ಯ ಇಲ್ಲ. ಬೇಡ ಬಿಡಿ."

ರಿಪುನಾಶ್ ದಿನವೂ ರಸ್ತೆಯಲ್ಲಿ ಉಂಡಾಡಿ ಗುಂಡನಂತೆ ತಿರುಗುತ್ತಿದ್ದ. ರಸ್ತೆಯಲ್ಲಿ ಸುತ್ತಿ ತಿರುಗುವ ನಿರುದ್ಯೋಗಿಗಳು. ಯಾವುದೋ ರಸ್ತೆಯಲ್ಲಿ ಜರುಗುವ ತಮಾಷೆ, ವಾಹನಗಳ ದುರ್ಘಟನೆ ನೋಡಿ ದಿನ ತಳ್ಳುವ ಜನಗಳೇ ಈತನ ಸಹಪಾಠಿಗಳಾಗಿದ್ದರು. ಆತ ಆ ಗುಂಪಿನಲ್ಲಿ 'ರಿಫುನ್' ಎಂದೇ ಪ್ರಚಲಿತನಾಗಿದ್ದ. ಆದರೆ ರಿಫುನ್ 'ತಮುನಾ'ನಂತೆ ಸದೃಢನಾಗಿರಲಿಲ್ಲ. ತೆಳುಮುಖ, ತೆಳು ಶರೀರ. ಈತ ಸುಮ್ಮನೆ ರಸ್ತೆಯಲ್ಲಿ ಸುತ್ತಾಡುತ್ತಿದ್ದ. ಕೆಲ ಸಾರಿ ಸಾಮಾನು ಹೊತ್ತು ಸ್ವಲ್ಪ ಹಣ ಸಂಪಾದಿಸುತ್ತಿದ್ದ. ಬೀಡಿ ಸೇದುವುದನ್ನು ಕಲಿತುಬಿಟ್ಟಿದ್ದುದರಿಂದ ಪ್ರತಿದಿನ ಒಂದು ಕಟ್ಟು ಬೀಡಿ ಸೇದಿ ಉಳಿದ ಕೆಲ ಕಾಸನ್ನು ಅಮ್ಮನ ಕೈಲಿ ಹಾಕುತ್ತಿದ್ದ. ಹೀಗೆ ದಿನ

ಗಳು ಕಳೆಯುತ್ತಿದ್ದವು. ರಿಫನ್‌ಗೆ 16-17 ವರ್ಷಗಳಾದಾಗ ಒಂದು ಘಟನೆ ನಡೆಯಿತು. ಕಾಪಿ ಪುಸ್ತಕಗಳ ಒಂದು ಕಟ್ಟನ್ನು ಹೊತ್ತು ಒಬ್ಬ ಗ್ರಾಹಕನ ಕಾರಿನ ಕ್ಯಾರಿಯರ್ ಮೇಲಿರಿಸುತ್ತಿದ್ದಾಗ ಗಂಟಲು ಕೆರೆದಂತಾಯಿತು. ಕೆಮ್ಮು ಬಂತು. ಕಾರಿನ ಮಾಲೀಕ ಇವನಿಗೆ 12 ಆಣೆ ಕೂಲಿ ನೀಡಿ ಹೊರಟುಹೋದ. ಫುಟ್‌ಪಾತ್ ಮೇಲೆ ಕುಳಿತು ರಿಫನ್ ಕೆಮ್ಮಲು ಪ್ರಾರಂಭಿಸಿದ. ಇದ್ದಕ್ಕಿದ್ದಂತೆಯೇ ಕೆಮ್ಮಿದಾಗ ಕಫದ ಜೊತೆಯಲ್ಲಿ ಗಡ್ಡೆಕಟ್ಟಿದ ರಕ್ತದ ತುಣುಕೊಂದು ಬಿದ್ದಂತೆನಿಸಿತು. ರಿಫನ್ ತಲಕ್ಷಣ ಆ ರಕ್ತದತ್ತ ದೃಷ್ಟಿ ಬೀರಿ ಅನಂತರ ನಡೆಯ ಹತ್ತಿದ.

ಸಾವಿತ್ರಿ ರಿಫನ್‌ನನ್ನು ಕರೆದುಕೊಂಡು ಅದೇ ಬೀದಿಯ ಡಾಕ್ಟರೊಬ್ಬನ ಬಳಿ ಕರೆದೊಯ್ದಳು. ಡಾಕ್ಟರ್ ಆತನ ಎದೆ ಬೆನ್ನು ಪರೀಕ್ಷಿಸಿ ಆತನಿಗೆ ಕ್ಷಯರೋಗ ತಗುಲಿದೆ ಎಂದು ತಿಳಿಸಿದ. ಮತ್ತೆ ನುಡಿದ "ನನಗೇನೊ ನೀವು ಫೀಜು ಕೊಡ ಬೇಕಾಗಿಲ್ಲ. ಆದರೆ ಔಷಧ, ಇಂಜೆಕ್ಷನ್‌ಗಳನ್ನಂತೂ ಕೊಳ್ಳಲೇ ಬೇಕಾಗುತ್ತದೆ. ಈ ರೋಗಕ್ಕೆ ಮುಖ್ಯವಾಗಿ ಒಳ್ಳೆಯ ಆಹಾರ ಅತ್ಯಗತ್ಯ. ರೊಟ್ಟಿ, ಬೆಣ್ಣೆ, ಮಾಂಸ, ಮೀನು, ಹಣ್ಣು ಮುಂತಾದವು."

ಸಾವಿತ್ರಿ ಸುಮ್ಮನೆ ಡಾಕ್ಟರತ್ತ ಮೂಕದೃಷ್ಟಿ ಹರಿಸಿದಳು. ಅವಳ ಮುಖದ ಅಸಹಾಯ ದೃಷ್ಟಿ ಆತನ ಮನಸ್ಸನ್ನು ಕಟ್ಟಿರಬೇಕು. ಆತನೇ ನುಡಿದ "ನಿನ್ನ ಕೈಲಿ ಇವೆಲ್ಲಾ ನಿರ್ಧರಿಸಲು ಸಾಧ್ಯವಿಲ್ಲದಿದ್ದಲ್ಲಿ ಇವನನ್ನು ಆಸ್ಪತ್ರೆಗೆ ಸೇರಿಸುವುದೇ ಉತ್ತಮ, ನಿನಗೆ ಒಂದು ಕಾಗದ ಬರೆದುಕೊಡುತ್ತೇನೆ, ಅದನ್ನು ತೆಗೆದುಕೊಂಡು ಆಸ್ಪತ್ರೆಗೆ ಹೋಗು".

ಸಾವಿತ್ರಿ ಆ ಕಾಗದ ಹಿಡಿದು ಏಳು ದಿನ ಪರ್ಯಂತ ಆಸ್ಪತ್ರೆಗೆ ಸುತ್ತಿದಳು. ಆದರೆ ಏನೂ ಪ್ರಯೋಜನ ಆಗಲಿಲ್ಲ. ಅಲ್ಲಿನ ಒಬ್ಬ ರೋಗಿ ನುಡಿದ "ಇಲ್ಲೂ ಹಣ ವಿಲ್ಲದೆ ಏನೂ ಕೆಲಸ ಆಗಲ್ಲ.... ಲಂಚ ಕೊಡಬೇಕಾಗುತ್ತೆ."

ಈ ಮಾತನ್ನು ಕೇಳಿದ ನಂತರ ರಿಫನ್ ಮತ್ತೆ ಆಸ್ಪತ್ರೆಗೆ ಹೋಗಲಿಲ್ಲ. ಅಷ್ಟೊಂದು ಹಣವನ್ನು ಆತ ಹೊಂಚುವುದು ತಾನೇ ಹೇಗೆ ? ಏನೊಂದು ಔಷಧೋಪಚಾರವಿಲ್ಲದೆ ಆತ ದಿನ ಕಳೆಯತೊಡಗಿದ. ರಸ್ತೆಯಲ್ಲಿ ಮೂಟೆಹೊರುವ ಕೆಲಸವನ್ನು ಮತ್ತೆ ಪ್ರಾರಂಭಿಸಿದ. ಒಂದು ದಿನ ಆತನ ಜೊತೆಗಾರನೊಬ್ಬ ಹೇಳಿದ "ನೋಡು ನನಗೆ ಒಂದು ಮಾತು ಜ್ಞಾಪಕ ಬರುತ್ತಿದೆ ನೀನು ಹೇಗಾದರೂ ಆರು (6) ತಿಂಗಳು ಅಲೀಪುರ ಜೈಲಿನಲ್ಲಿ ಕಳೆಯಬಲ್ಲೆಯಾದರೆ ನಿನ್ನ ಟಿ.ಬಿ. ಹೊರಟು ಹೋಗುತ್ತೆ."

ಜೈಲಿಗೆ ಹೋಗುವುದರಿಂದ ಟಿ.ಬಿ. ಕಾಯಿಲೆ ವಾಸಿಯಾಗುತ್ಯೆ ? ರಿಫನ್‌ಗೆ ಮೊದಲು ಇದರ ಅರ್ಥ ಆಗಲಿಲ್ಲ.

ಸ್ನೇಹಿತ ಮತ್ತೆ ವಿವರಿಸಿದ " 'ಹರು' ಜೈಲಿನಿಂದ ಸ್ವಸ್ಥನಾಗಿ ಹಿಂತಿರುಗಿದ್ದಾನೆ.

ಮೊದಲು ಆತನಿಗೂ ಟಿ.ಬಿ ಅಂಟಿತ್ತು. ಅಲ್ಲಿ ಒಳ್ಳೆಯ ಆಸ್ಪತ್ರೆ ಇದೆ. ಖರ್ಚಿಲ್ಲದೆ ಔಷಧೋಪಚಾರ ನಡೆಯುತ್ತೆ. ನೀನು ಹೇಗಾದರೂ ಜೈಲಿಗೆ ಹೋಗಿ ಬಾ."

ಇದಾದ ಕೆಲ ದಿನಗಳಲ್ಲೇ ರಿಫನ್ ಟ್ರ್ಯಾಮ್ ಗಾಡಿಯಲ್ಲಿ ಪಿಕ್‌ಪಾಕೆಟ್ ಮಾಡುವಾಗ ಮಾಲು ಸಹಿತ ಸಿಕ್ಕಿಬಿದ್ದ. ಜನಗಳು ಈತನನ್ನು ಚೆನ್ನಾಗಿ ಥಳಿಸಿ ಕೊನೆಗೆ ಪೋಲೀಸ್‌ಗೆ ಒಪ್ಪಿಸಿದರು.

ನ್ಯಾಯಾಲಯದಲ್ಲಿ ನ್ಯಾಯಾಧೀಶರು ಪ್ರಶ್ನಿಸಿದರು. 'ಈ ಆರೋಪದ ವಿರುದ್ಧ ಹೋರಾಡಲು ನೀನು ಯಾರಾದರೂ ಲಾಯರನ್ನು ನೇಮಿಸಿಕೊಳ್ಳಬಹುದು. ಲಾಯರನ್ನು ನೇಮಿಸಿಕೊಳ್ಳಲು ನಿನ್ನ ಬಳಿ ಹಣವಿಲ್ಲದಿದ್ದರೆ, ಸರ್ಕಾರದ ಕಡೆಯಿಂದ ಲಾಯರೊಬ್ಬರನ್ನು ನಾನು ಕೊಡಬಲ್ಲೆ."

ರಿಫನ್ ಕೈಜೋಡಿಸಿ ನುಡಿದ "ಸ್ವಾಮಿ, ನನಗೆ ಲಾಯರಿನ ಅವಶ್ಯಕತೆ ಇಲ್ಲ, ಪೋಲೀಸರು ಹೇಳುತ್ತಿರುವುದೆಲ್ಲಾ ಸತ್ಯ. ಕಳ್ಳತನ ಮಾಡುವ ಉದ್ದೇಶದಿಂದಲೇ ನಾನು ಆ ಸಜ್ಜನನ ಜೇಬಿನಲ್ಲಿ ಕೈಹಾಕಿದ್ದುದು."

ನ್ಯಾಯಾಧೀಶರು ತೀರ್ಪಿತ್ತರು "ಐವತ್ತು ರೂಪಾಯಿ ಜುಲ್ಮಾನೆ, ಅದನ್ನು ಕಟ್ಟಲಾಗದಿದ್ದರೆ ಒಂದು ತಿಂಗಳು ಸಜೆ."

ರಿಫನ್ ಕೈಜೋಡಿಸಿಕೊಂಡು ಬೇಡಿದ, "ಸ್ವಾಮಿ, ನ್ಯಾಯದೇವತೆಗಳೇ, ನಾನು ಹಣ ಕಟ್ಟಲಾರೆ, ನನ್ನ ಶಿಕ್ಷೆ, ಜೈಲುವಾಸ ಒಂದು ತಿಂಗಳು ಸಾಲದು. ಮಹಾಪ್ರಭುಗಳು ಆರು ತಿಂಗಳು ದಯಪಾಲಿಸಬೇಕು."

ಈ ಮಾತು ಕೇಳಿ ನ್ಯಾಯಾಧೀಶರಿಗೆ ಆಶ್ಚರ್ಯವಾಯಿತು. "ನೀನು ಏಕೆ ಆರು ತಿಂಗಳ ಸಜೆಯನ್ನು ಬಯಸುತ್ತೀಯಾ ?"

"ನನಗೆ ಟಿ.ಬಿ. ಕಾಯಿಲೆ ಆಗಿದೆಯಂತೆ. ಅಲೀಪುರ ಜೈಲಿನಲ್ಲಿ ಟಿ.ಬಿ.ಗೆ ಒಳ್ಳೆಯ ಆರೈಕೆ ನಡೆಯುತ್ತದೆ, 6 ತಿಂಗಳಲ್ಲಿ ರೋಗ ವಾಸಿಯಾಗುತ್ತದೆ."

ನ್ಯಾಯಾಧೀಶರು ತಮ್ಮ ತೀರ್ಪನ್ನು ಬದಲಿಸಲಿಲ್ಲ. ಜೈಲಿನ ಆಸ್ಪತ್ರೆಯಲ್ಲಿ ಕಾಯಿಲೆ ವಾಸಿಯಾಗಲಿಲ್ಲ. ರಿಫನ್ ಕೆಮ್ಮುಕೆಮ್ಮುತ್ತಲೆ ಒಂದು ತಿಂಗಳ ನಂತರ ಜೈಲಿನಿಂದ ಹೊರಬಂದ. ಇದಾದ ನಂತರವೂ ಆತ ಒಂದು ತಿಂಗಳು ಜೀವಿಸಿದ್ದ.

ಒಂದು ದಿನ ಅರ್ಧ ರಾತ್ರಿ ಕಳೆದಿತ್ತು. ರಿಫನ್ ಕೆಮ್ಮುತ್ತಾ ಹಾಸಿಗೆಯ ಮೇಲೆ ಎದ್ದು ಕುಳಿತ. ರಕ್ತವನ್ನು ಕಕ್ಕಿ ಆತ ಇಹಲೋಕ ತ್ಯಜಿಸಿದ.

ಸಾವಿತ್ರಿ ಮೂಕಳಾಗಿ ಕುಳಿತಳು. ಆಕೆಯ ಕಣ್ಣಲ್ಲಿ ನೋವಿನ ಹಬೆ ಚಿಮ್ಮುತ್ತಿತ್ತು. ಒಂದು ಹನಿ ಕಣ್ಣೀರನ್ನು ಸುರಿಸಲಿಲ್ಲ.

ಇದಾದ ಎರಡು ತಿಂಗಳ ನಂತರ ಚುನಾವಣೆಯ ಕಾಲ ಬಂತು. ಸಾವಿತ್ರಿ ಕೂಡ ಒಬ್ಬ ಓಟುದಾರಳಾಗಿದ್ದಳು. ಒಬ್ಬ ಅಭ್ಯರ್ಥಿ ಮಹಾಶಯ ಆಕೆಯ ಮನೆಗೂ ದಯಮಾಡಿಸಿದ.

ಸಾವಿತ್ರಿ ಕೆಂಡಕಾರುವ ಕಣ್ಣನ್ನುಅವನತ್ತ ತಿರುಗಿಸಿ ನುಡಿದಳು "ತಮಗೆ ಮತ ನೀಡಬೇಕೆ? ತಾವು ನಮಗೆ ಏನು ಉಪಕಾರ ಮಾಡಿದ್ದೀರಿ? ತಾವು ಅಧಿಕಾರದಲ್ಲಿದ್ದಾಗ ನನ್ನ ವಿದ್ವಾಂಸ ಪತಿ, ಭಿಕಾರಿಯಂತೆ ಸತ್ತ. ನನ್ನ ದೊಡ್ಡ ಮಗನಿಗೆ ಏನೂ ವಿದ್ಯಾಭ್ಯಾಸ ಕಲಿಸಲಾಗಲಿಲ್ಲ. ಗೂಂಡಾಗಳ ಚೂರಿಗೆ ಆತ ಆಹುತಿ ಆದ. ಚಿಕ್ಕಹುಡುಗ ಟಿ.ಬಿ.ಯಿಂದ ಸತ್ತ. ಆತನಿಗೆ ಏನೂ ಚಿಕಿತ್ಸೆ ನಡೆಸಲಾಗಲಿಲ್ಲ. ಎಲ್ಲ ಕಡೆಯೂ ಎಲ್ಲರಿಗೂ ಲಂಚಬೇಕು: ನಾನು ನಿಮಗೆ ಏಕೆ ಓಟು ಕೊಡಲಿ? ನಡೆಯಿರಿ, ನಾನು ಯಾರಿಗೂ ಓಟು ಮಾಡುವುದಿಲ್ಲ."

ಅಭ್ಯರ್ಥಿ ಹೇಳಲು ಪ್ರಯತ್ನಿಸಿದ "ಆದರೆ ನೋಡಿ ಈ ಗಣತಂತ್ರದಲ್ಲಿ...."

ಆದರೆ ಸಾವಿತ್ರಿ ಆತ ಮಾತನ್ನು ಮುಗಿಸಲು ಬಿಡಲಿಲ್ಲ. ಮಧ್ಯದಲ್ಲೇ ಅಬ್ಬರಿಸಿದಳು. "ಮೊದಲು ನನ್ನ ಮನೆಯಿಂದ ಹೊರಗೆ ಹೋಗಿ."

ಆ ಸಜ್ಜನರು ತಕ್ಷಣ ಹೊರನಡೆದರು. ಸಾವಿತ್ರಿ ಫಟಾರನೆ ಬಾಗಿಲನ್ನು ಮುಚ್ಚಿದಳು.

# ಸೈಮನ್ನನ ಅಪ್ಪ

ಮೂಲ (ಫ್ರೆಂಚ್) : ಮೊಪಾಸಾ
ಅನು : ಶ್ರೀನಿವಾಸ್ ಎ. ಸುತ್ರಾವೆ

ಆದೇ ತಾನೇ ಹನ್ನೆರಡು ಹೊಡೆದಿತ್ತು. ಸ್ಕೂಲು ಬಿಟ್ಟಾಕ್ಷಣ ಹೊರಗೋಡುವ ಅವಸರದಲ್ಲಿ ಹುಡುಗರು ಒಬ್ಬರಮೇಲೊಬ್ಬರು ಬಿದ್ದರು. ಆದರೆ ಎಂದಿನಂತೆ ಊಟಕ್ಕೆ ಮನೆಗೆ ಓಡುವ ಬದಲು ನಾಲ್ಕು ಹೆಜ್ಜೆ ನಡೆದು, ಗುಂಪಾಗಿ ಸೇರಿ ಗುಸು ಗುಸು ಮಾತಾಡಲು ಶುರುಮಾಡಿದರು.

ಏಕೆಂದರೆ ಆ ದಿನ ಬೆಳಿಗ್ಗೆ ಲಾ ಬ್ಲ್ಯಾಂಕಾಟೆಯ ಮಗ ಸೈಮನ್ ಮೊದಲ ಬಾರಿಗೆ ಶಾಲೆಗೆ ಬಂದಿದ್ದ.

ಅವರೆಲ್ಲ ತಮ್ಮ ತಮ್ಮ ಮನೆಗಳಲ್ಲಿ ಮನೆಯವರು ಲಾ ಬ್ಲ್ಯಾಂಕಾಟೆಯ ಬಗ್ಗೆ ಮಾತಾಡಿಕೊಳ್ಳುತ್ತಿದ್ದುದನ್ನು ಕೇಳಿದ್ದರು. ಹೊರಗಡೆ ಜನ ಅವಳಿಗೆ ಚನ್ನಾಗೇ ಮಾತಾಡಿಸುತ್ತಿದ್ದರೂ ಹುಡುಗರ ತಾಯಂದಿರು ಅವಳನ್ನು ಕೀಳಾಗಿ ಕಾಣುತ್ತಿದ್ದರು. ಯಾಕೆ ಹಾಗೆ ಎಂದು ಹುಡುಗರಿಗೆ ಅರ್ಥವಾಗಿದ್ದಿಲ್ಲ.

ಸೈಮನ್ನನ ಪರಿಚಯ ಕೂಡ ಅವರಿಗೆ ಸರಿಯಾಗಿ ಇದ್ದಿಲ್ಲ. ಏಕೆಂದರೆ ಅವನು ಹೊರಗಡೆ ಎಲ್ಲೂ ಹೋಗುತ್ತಲೇ ಇರಲಿಲ್ಲ; ಅವರ ಜೊತೆ ಸೇರಿಕೊಂಡು ಹಳ್ಳಿಯ ಬೀದಿಗಳಲ್ಲಾಗಲೀ, ನದೀ ತೀರದಲ್ಲಾಗಲೀ ಅವನು ಕುಣಿದಾಡುತ್ತಿರಲಿಲ್ಲ. ಹಾಗಾಗಿ ಅವನೇನೂ ಅವರ ಸ್ನೇಹಿತನಾಗಿರಲಿಲ್ಲ. ಒಂದು ಥರ ಹಿಗ್ಗಿನಿಂದ ಹಾಗೂ ಆಶ್ಚರ್ಯದಿಂದ ಅವನನ್ನು ನೋಡಿ ಒಬ್ಬರ ಕಿವಿಯಲ್ಲಿ ಒಬ್ಬರು ಪಿಸುಗುಟ್ಟಿದರು : 'ನಿಂಗೊತ್ತಾ.....ಸೈಮನ್‌ಗೆ... ಅಪ್ಪ ಇಲ್ಲ.' ಎಲ್ಲ ಗೊತ್ತಿರುವವರ ಥರ, ಕಣ್ಣು ಹೊಡೆದು. ಈ ಮಾತನ್ನು ಮೊದಲು ಆಡಿದ್ದು ಹದಿನಾಲ್ಕು-ಹದಿನೈದು ವರ್ಷದ ಒಬ್ಬ ಹುಡುಗ.

ಲಾ ಬ್ಲ್ಯಾಂಕಾಟೆಯ ಮಗ ಶಾಲೆಯ ಹೊಸ್ತಿಲಲ್ಲಿ ನಿಂತಿದ್ದ. ಅವನಿಗೆ ಏಳೋ ಎಂಟೋ ವರ್ಷ. ಸ್ವಲ್ಪ ಬಿಳಿಚಿಕೊಂಡಿದ್ದ, ತುಂಬ ನೀಟಾಗಿದ್ದ, ಒಂದು ಥರ ಪುಕ್ಕಲು ಪುಕ್ಕಲಾಗಿ, ಏನೋ ಮುಜುಗರ ಪಟ್ಟವನಂತಿದ್ದ.

ಮನೆಗೆ ವಾಪಸ್ ಹೊರಟಿದ್ದ ಸಮಯಕ್ಕೆ ಸರಿಯಾಗಿ ಶಾಲೆಯ ಹುಡುಗರು ಪಿಸಿಪಿಸಿ ಮಾತಾಡುತ್ತ, ಕನಿಕರವಿಲ್ಲದೆ ಚೇಷ್ಟೆ ಮಾಡುವ ಮಕ್ಕಳಂತೆ ಅವನನ್ನೇ ದಿಟ್ಟಿಸಿ ನೋಡುತ್ತ ಅವನ ಸುತ್ತ ನೆರೆದರು. ಆಶ್ಚರ್ಯಚಕಿತನಾಗಿ, ಸಂಕೋಚದಿಂದ ಅವನು ಅವರ ಮಧ್ಯೆ ನಿಂತಿದ್ದ. ಅವರ ಉದ್ದೇಶ ಏನು ಎಂಬುದು ಅವನಿಗೆ ಅರ್ಥವಾಗಿರಲಿಲ್ಲ. ಸುದ್ದಿ ಹರಡಿದ್ದ ಹುಡುಗ ತನ್ನ ಸ್ನೇಹಿತರ ಮೇಲೆ ತಾನು ಬೀರಿದ್ದ ಪರಿಣಾಮದ ಯಶಸ್ಸಿನಿಂದ ಎದೆಯುಬ್ಬಿಸಿ ಸೈಮನ್‌ಗೆ ಕೇಳಿದ :

'ಲೋ, ನಿನ್ನ ಹೆಸರೇನೋ ?'

ಅವನು 'ಸೈಮನ್' ಎಂದು ಉತ್ತರಕೊಟ್ಟ.

'ಎಂಥ ಸೈಮನ್ ?' ಎಂದು ಮರುಪ್ರಶ್ನೆ ಮಾಡಿದ ಆ ಹುಡುಗ.

ಸೈಮನ್ ಗಾಬರಿಯಿಂದ, ಗೊಂದಲಗೊಂಡು, ಪುನರುಚ್ಚರಿಸಿದ : 'ಸೈಮನ್'.

ಆ ಹುಡುಗ ಅವನಿಗೆ ಬಯ್ಯುವ ಹಾಗೆ ಹೇಳಿದ : 'ಯಾರಿಗೂ ಬರೀ ಸೈಮನ್ ಅಂತ ಹೆಸರಿರಲ್ಲ. ಅದರ ಜೊತೆ ಮತ್ತೇನೋ ಹೆಸರಿರುತ್ತೆ.... ಓಹೋಹೋ ಸೈಮನ್ ಅಂತೆ.'

ಸೈಮನ್‌ಗೆ ಅಳು ಬಂತು. ಮೂರನೆಯ ಸಲವೂ ಅವನು ಹೇಳಿದ್ದು :

'ನನ್ನ ಹೆಸರು ಸೈಮನ್ ಅಂತ.'

ಪೋರರು ನಗಲು ಶುರುಮಾಡಿದರು. ಆ ಹುಡುಗ ಏನೋ ಗೆದ್ದವನಂತೆ, ದನಿ ಏರಿಸಿ, ತನ್ನ ಸ್ನೇಹಿತರಿಗೆ ಹೇಳಿದ : ಈಗ ಗೊತ್ತಾಯ್ತಲ್ಲ, ಇವನಿಗೆ ಅಪ್ಪ ಇಲ್ಲ ಂತ'.

ಸ್ವಲ್ಪ ಹೊತ್ತು ಗಾಢ ಮೌನ. ಮಕ್ಕಳಿಗೆ ಈ ವಿಷಯ – ಒಬ್ಬ ಹುಡುಗನಿಗೆ ಅಪ್ಪ ಇಲ್ಲ ಅನ್ನುವುದು – ಕೇಳಿ ಅತ್ಯಾಶ್ಚರ್ಯವಾಯಿತು. ಅವನು ಯಾವುದೋ ಒಂದು ವಿಚಿತ್ರ ವಸ್ತುವೆಂಬಂತೆ, ಅಸಹಜ ಪ್ರಾಣಿಯೆಂಬಂತೆ, ಅವನ ಕಡೆ ನೋಡಿದರು. ಇಲ್ಲಿಯವರೆಗೆ ಅವರಿಗೆ ಅರ್ಥವಾಗಿರದಿದ್ದ ಲಾ ಬ್ಲ್ಯಾಂಕಾಟೆಯ ಬಗ್ಗೆ ಅವರ ತಾಯಂದಿರಿಗಿದ್ದ ತುಚ್ಛ ಭಾವನೆ ಅವರ ಮನಸ್ಸಿನಲ್ಲೂ ಬಂತು. ಕುಸಿದು ಬೀಳುವುದರಿಂದ ತಪ್ಪಿಸಿಕೊಳ್ಳಲೆಂದು ಸೈಮನ್ ಒಂದು ಮರಕ್ಕೆ ಆತುಕೊಂಡು ನಿಂತಿದ್ದ. ಯಾವುದೋ ಅನಾಹುತದಿಂದಾಗಿ ನೆಲಕ್ಕೆ ಗಟ್ಟಿಯಾಗಿ ಅಂಟಿಕೊಂಡಿದ್ದನೇನೋ ಎಂಬಂತೆ ಭಧ್ರವಾಗಿ ನಿಂತಿದ್ದ. ಅವನು ಏನೋ ವಿವರಿಸಲಿಕ್ಕೆ ಪ್ರಯತ್ನಪಟ್ಟ, ಆದರೆ ಏನು ಉತ್ತರ ಕೊಡುವುದು ಎಂಬುದು ಅವನಿಗೆ ಹೊಳೆಯಲಿಲ್ಲ. ತನಗೆ ಅಪ್ಪ ಇಲ್ಲ ಎನ್ನುವ ಈ ಭಯಂಕರ ಆರೋಪದಿಂದ ಹೇಗೆ ಮುಕ್ತನಾಗಬೇಕು ಎನ್ನುವುದು ಅವನಿಗೆ ತಿಳಿಯಲಿಲ್ಲ. ಕೊನೆಗೆ ಹುಚ್ಚು ಧೈರ್ಯದಿಂದ ಅವರಿಗೆ ಹೇಳಿದ :

'ಇಲ್ಲ, ನಂಗೆ ಅಪ್ಪಾ ಇದಾನೆ.'

'ಎಲ್ಲಿದಾನೆ ?' ಎಂದು ಆ ಹುಡುಗ ಕೇಳಿದ.

ಸೈಮನ್ ಮಾತಾಡಲಿಲ್ಲ. ಏಕೆಂದರೆ ಅವನಿಗೆ ಅವನ ಅಪ್ಪ ಎಲ್ಲಿದ್ದಾನೆ ಎಂಬುದು ಗೊತ್ತಿದ್ದಿಲ್ಲ. ಮಕ್ಕಳು ಕೇಕೆ ಹಾಕಿದರು. ಪಶುಗಳಂತಿದ್ದ ಶ್ರಮಜೀವಿಗಳ ಈ ಮಕ್ಕಳಿಗೆ ಒಂದು ಹುಂಜ ಗಾಯಗೊಂಡಾಗ ಪೌಲವಾಸೆಯು ಅಂಗಳದ ಇತರೆ ಹುಂಜ ಗಳಿಗೆ ಅದನ್ನು ಸಾಯಿಸುವ ಕೆಟ್ಟ ಆಸೆಯಾಗುವಂಥ ಮನಸ್ಸು ಸೈಮನ್ ಬಗ್ಗೆ ಉಂಟಾಯಿತು. ತನ್ನ ತಾಯಿಯೊಡನೆ ಒಬ್ಬನೇ ವಾಸವಾಗಿದ್ದ ಒಬ್ಬ ಹುಡುಗ ಆ ಗುಂಪಿನಲ್ಲಿ ಸೈಮನ್ನನ ಕಣ್ಣಿಗೆ ಬಿದ್ದ.

'ನಿಂಗೂ ಅಪ್ಪ ಇಲ್ಲ, ಅಲ್ವಾ?' ಎಂದ ಅವನು.

'ಇದಾನೆ' ಎಂದ ಆ ಹುಡುಗ. 'ನಂಗೆ ಅಪ್ಪ ಇದಾನೆ.'

'ಎಲ್ಲಿದಾನೆ ?' ಎಂದು ಕೇಳಿದ ಸೈಮನ್.

'ತೀರಿಕೊಂಡಿದಾನೆ', ಎಂದ ಆ ಚಿಳ್ಳೆ – ಬಹಳ ಗಾಂಭೀರ್ಯದಿಂದ. 'ಅವನು ...ನಮ್ಮಪ್ಪ...ಸಮಾಧಿಯಲ್ಲಿದ್ದಾನೆ.'

ಅಪ್ಪ ಇಲ್ಲದೆ ಇರುವ ಹುಡುಗನನ್ನು ತುಳಿದುಹಾಕುವಷ್ಟು ದೊಡ್ಡವನಾಗಿ ಈ ಹುಡುಗ ಬೆಳೆದಿದ್ದಾನೆ ಅನ್ನಿಸಿ ಆ ಕೇಟಲೆಯ ಮಕ್ಕಳು ಹೌದು, ಹೌದು ಎನ್ನುತ್ತ ಗೊಣಗುಟ್ಟಿದರು. ಬಹುತೇಕ ಅಪರಾಧಿಗಳು, ಕುಡುಕರು, ಕಳ್ಳರು, ಹೆಂಡಂದಿರಿಗೆ ಹೊಡೆಯುವಂಥವರ ಮಕ್ಕಳಾದ ಆ ಪಟಿಂಗರು ತಂದೆಯಿಲ್ಲದ ಸೈಮನ್ನನ್ನು ನುಂಗಿಸಿ ಬಿಡುವರಂತೆ ಮುನ್ನುಗ್ಗಿದರು.

ಸೈಮನ್ನಿನ ಪಕ್ಕದಲ್ಲೇ ಇದ್ದ ಹುಡುಗನೊಬ್ಬ ನಾಯಿ ಬಾಲವಾಡಿಸುವ ತರಹ ನಾಲಗೆ ಚಾಚಿ, ಜೋರಾಗಿ ಹೇಳಿದ :

'ಅಪ್ಪ ಇಲ್ಲ! ಅಪ್ಪ ಇಲ್ಲ!'

ಸೈಮನ್ ತನ್ನ ಎರಡೂ ಕೈಗಳಿಂದ ಅವನ ಕೂದಲನ್ನು ಹಿಡಿದೆಳೆದು ಅವನನ್ನು ಕಾಲಿನಿಂದ ಒದ್ದ. ಆ ಹುಡುಗ ಸೈಮನ್ನನ ಗಲ್ಲ ಕಡಿದ. ಇಬ್ಬರ ನಡುವೆ ಭಯಂಕರ ಗುದ್ದಾಟ ಶುರುವಾಯಿತು. ಸೈಮನ್‌ಗೆ ಏಟು ಬಿತ್ತು : ಅವನ ಅಂಗಿ ಹರಿಯಿತು ; ಗಾಯಗೊಂಡ ; ಚಪ್ಪಾಳೆ ತಟ್ಟುತ್ತಿದ್ದ ಅಪಾಪ್ರೋಲಿ ಹುಡುಗರ ಮಧ್ಯೆ ನೆಲದ ಮೇಲೆ ಉರುಳಿ ಬಿದ್ದ. ಅಂಗಿಯ ಧೂಳು ಒರೆಸಿಕೊಳ್ಳುತ್ತ ಯಾಂತ್ರಿಕವಾಗಿ ಮೇಲೆದ್ದ. ಒಬ್ಬ ಹುಡುಗ ಜೋರಾಗಿ ಹೇಳಿದ :

'ಹೋಗಿ ನಿಮ್ಮಪ್ಪನಿಗೆ ಹೇಳು.'

ಸೈಮನ್ ಉಡುಗಿಹೋಗಿದ್ದ. ಆ ಹುಡುಗರು ಅವನಿಗಿಂತಲೂ ಹೆಚ್ಚು ಬಲ ವಾಗಿದ್ದರು. ಅವರು ಅವನಿಗೆ ಒದ್ದಿದ್ದರೂ, ಅವನು ಅವರಿಗೆ ಯಾವ ಉತ್ತರವನ್ನೂ ಕೊಡಲಾರದವನಾಗಿದ್ದ. ಏಕೆಂದರೆ ತನಗೆ ಅಪ್ಪ ಇಲ್ಲ ಎಂದು ಅವನಿಗೆ ಗೊತ್ತಿತ್ತು. ಸ್ವಾಭಿಮಾನದಿಂದ ಕಣ್ಣೀರನ್ನು ತಡೆಯಲು ಪ್ರಯತ್ನಪಟ್ಟ. ಉಸಿರು ಕಟ್ಟಿದಂತಾ ಯಿತು. ಬಿಕ್ಕಿ ಬಿಕ್ಕಿ ಅಳಲಾರಂಭಿಸಿದ ; ನಡುಗಿದ. ಕಾಡುಮನುಷ್ಯರು ತಮ್ಮ

ಭಯಾನಕ ಹಬ್ಬಗಳಲ್ಲಿ ನರ್ತಿಸುವಂತೆ, ಕ್ರೌರ್ಯತುಂಬಿದ ಸಂತೋಷದಿಂದ ಸೈಮನ್‌ನ ಎದುರಾಳಿಗಳು ಪರಸ್ಪರ ಕೈಹಿಡಿದುಕೊಂಡು, ಅವನ ಸುತ್ತ ವೃತ್ತಾಕಾರವಾಗಿ ನೆರೆದು, ಕುಣಿಯುತ್ತ, ತಮ್ಮ ಪಲ್ಲವಿಯನ್ನು ಪುನಃ ಹಾಡಿದರು :

'ಅಪ್ಪ ಇಲ್ಲ! – ಅಪ್ಪ ಇಲ್ಲ!'

ಸೈಮನ್ ಅಳು ನಿಲ್ಲಿಸಿದ. ರೋಷಾವೇಶದಿಂದ ತನ್ನ ಕಾಲ ಬಳಿ ಬಿದ್ದಿದ್ದ ಕಲ್ಲುಗಳನ್ನೆತ್ತಿಕೊಂಡು ಬಲವಾಗಿ ಆ ಪೀಡಕರತ್ತ ಎಸೆದ. ಇಬ್ಬರು ಮೂವರಿಗೆ ಪೆಟ್ಟು ಬಿತ್ತು. ಅವರು ಚೀರುತ್ತ ಓಡಿಹೋದರು. ಉಗ್ರವಾಗಿ ಕಂಡ ಅವನನ್ನು ನೋಡಿ ಉಳಿದ ಹೇಡಿಗಳು ದಿಕ್ಕಾಪಾಲಾಗಿ ಓಡಿದರು – ಕೆರಳಿದ ಮನುಷ್ಯನನ್ನು ಕಂಡು ಹೆದರಿ ಕಾಗೆ ಹಾರಿಹೋಗುವಂತೆ. ಈಗ ಒಂಟಿಯಾಗುಳಿದ, ತಂದೆಯಿಲ್ಲದ ಸೈಮನ್ ಹೊಲಗಳತ್ತ ಓಡಿದ ; ನದಿಯಲ್ಲಿ ಮುಳುಗಿ ಸಾಯುವ ನಿರ್ಧಾರ ಮಾಡಿದ.

ಎಂಟು ದಿನದ ಹಿಂದೆ ಭಿಕ್ಷುಕನೊಬ್ಬ ತನ್ನ ಬಳಿ ಹಣ ಇಲ್ಲದ್ದಕ್ಕಾಗಿ ನದಿಗೆ ಬಿದ್ದ ಘಟನೆ ಅವನಿಗೆ ನೆನಪಾಯಿತು. ಆ ಭಿಕ್ಷುಕನನ್ನು ಜನ ನೀರಿಂದ ಮೇಲೆತ್ತಿದ್ದರು. ಸಾಧಾರಣವಾಗಿ ಯಾವಾಗಲೂ ದರಿದ್ರವಾಗಿ, ಅಸಹ್ಯವಾಗಿ ಕಾಣುತ್ತಿದ್ದ ಅವನನ್ನು ನೀರಿಂದ ಮೇಲೆತ್ತಿದಾಗ ಅವನ ಬಿಳಿಚಿದ ಗಲ್ಲ, ತೊಯ್ದಿದ್ದ ಉದ್ದನೆಯ ಗಡ್ಡ ಮತ್ತು ತೆರೆದ ಕಣ್ಣುಗಳನ್ನು ಸೈಮನ್ ನೋಡುತ್ತ ನಿಂತಿದ್ದ. ಅವನ ಪಕ್ಕದಲ್ಲಿ ನಿಂತಿದ್ದ ಜನ ಹೇಳಿದ್ದರು.

'ಸತ್ತಿದಾನೆ.'

ಒಬ್ಬ ಹೇಳಿದ್ದ :

'ಈಗಿವನು ನಿಜವಾಗ಼್ೂ ಸಂತೋಷದಿಂದಿದಾನೆ.'

ಹಣವಿದ್ದಿಲ್ಲದ ಆ ನಿರ್ಭಾಗ್ಯ ಮನುಷ್ಯನಂತೆಯೇ, ಸೈಮನ್ ಕೂಡ ತನಗೆ ತಂದೆ ಇಲ್ಲದ್ದಕ್ಕಾಗಿ ಮುಳುಗಿ ಸಾಯಬೇಕೆಂದುಕೊಂಡ.

ಅವನು ನದಿಯ ಹತ್ತಿರ ಬಂದು ನಿಂತ. ಕೆಲವು ಮೀನುಗಳು ತಿಳಿಯಾದ ನೀರಿನಲ್ಲಿ ಚುರುಕಾಗಿ ವಿಹರಿಸುತ್ತ, ನೀರಿನ ಮೇಲೆ ಹಾರುತ್ತಿದ್ದ ನೊಣಗಳನ್ನು ಹಿಡಿಯಲು ನೆಗೆಯುತ್ತಿದ್ದವು. ಅವುಗಳನ್ನು ನೋಡುವ ಸಲುವಾಗಿ ಅವನು ಅಳುವುದನ್ನು ನಿಲ್ಲಿಸಿದ. ಆ ಮೀನುಗಳ ಆಟ ಅವನಿಗೆ ತುಂಬ ಇಷ್ಟವಾಯಿತು. ಮಧ್ಯೆಮಧ್ಯೆ ಮರಗಳು ತೂಗಾಡುವಂತೆ ಮಾಡುವ ಬಿರುಗಾಳಿಯಂತೆ ಅವನ ಮನಸ್ಸಿನಲ್ಲಿ ಮತ್ತೆ ಮತ್ತೆ ಆ ಸಾಯುವ ಯೋಚನೆ ತೂರಿಕೊಂಡು ಬರುತ್ತಿತ್ತು.

'ನಂಗೆ ಅಪ್ಪ ಇಲ್ಲವಲ್ಲ. ಅದಕ್ಕೇ ಮುಳುಗಿ ಸಾಯೋದೊಳ್ಳೇದು.'

ಹವಾ ಚನ್ನಾಗಿತ್ತು. ಸೊಗಸಾದ ಬಿಸಿಲಿನಿಂದಾಗಿ ಹುಲ್ಲು ಬೆಚ್ಚಗಿತ್ತು. ನೀರು ಕನ್ನಡಿಯಂತೆ ಹೊಳೆಯುತ್ತಿತ್ತು. ಸ್ವಲ್ಪ ಹೊತ್ತು ಸೈಮನ್ನನ ಮನಸ್ಸಿಗೆ ಹಿತವೆನಿಸಿತು – ಅಳು ನಿಂತಾಗ ಒಂದು ಥರ ಆಲಸ್ಯ ಉಂಟಾಗುವಂತೆ. ಅಲ್ಲೇ ಹುಲ್ಲಿನ ಮೇಲೆ ಹಾಗೇ ನಿದ್ದೆಮಾಡಬೇಕೆನಿಸಿತು.

ಒಂದು ಸಣ್ಣ, ಹಸಿರು ಬಣ್ಣದ ಕಪ್ಪೆ ಅವನು ಕಾಲಡಿಯಿಂದ ಆಚೆ ಜಿಗಿಯಿತು. ಅವನು ಅದನ್ನು ಹಿಡಿಯಲು ಪ್ರಯತ್ನಿಸಿದ. ಆದರೆ ಅದು ತಪ್ಪಿಸಿಕೊಂಡಿತು. ಮತ್ತೆ ಮೂರು ಸಲ ಹಾಗೇ ಮಾಡಿದ. ಕೊನೆಗೆ ಅದರ ಹಿಂಗಾಲೊಂದನ್ನು ಹಿಡಿದ. ಆ ಪ್ರಾಣಿ ತಪ್ಪಿಸಿಕೊಳ್ಳುವ ಪ್ರಯತ್ನ ಮಾಡುತ್ತಿದ್ದುದನ್ನು ನೋಡಿ ನಕ್ಕ. ಅದು ತನ್ನ ಉದ್ದನೆಯ ಕಾಲುಗಳ ಮೇಲೆ ನಿಂತು ಜೋರಾಗಿ ನೆಗೆದು ಕಾಲುಗಳನ್ನು ಗಟ್ಟಿಯಾಗಿ, ಕಬ್ಬಿಣದ ಸಲಾಕಿಗಳಂತೆ, ಉದ್ದಕ್ಕೆ ಚಾಚಿತು. ದುಂಡನೆಯ, ಹೊಂಬಣ್ಣದ ವೃತ್ತದಲ್ಲಿನ ಅದರ ಕಣ್ಣುಗಳು ಅಗಲವಾಗಿ ತೆರೆದಿದ್ದವು. ಅದು ಮುಂಗಾಲನ್ನು ಕೈಗಳಂತೆ ಬಳಸಿ ಜಿಗಿಯಿತು. ಅದನ್ನು ನೋಡಿ ಅವನಿಗೆ ಮರದ ಆಟದ ಸಾಮಾನೊಂದರ ನೆನಪಾಯಿತು. ಆ ಆಟದ ಸಾಮಾನಿನ ಪುಟ್ಟ ಸೈನಿಕರ ಕವಾಯತಿನಂತೆಯೇ ಇತ್ತು, ಆ ಕಪ್ಪೆಯ ಚಲನೆ. ಈಗ ಸೈಮನಿಗೆ ಮನೆಯ ಮತ್ತು ತಾಯಿಯ ನೆನಪು ಬಂತು. ದುಃಖ ಉಕ್ಕಿ ಬಂದು ಅಳಲಾರಂಭಿಸಿದ. ಕೈಕಾಲು ನಡುಗಿತು. ಮಂಡಿಯೂರಿ, ಮಲಗಲು ಹೋಗುವ ಮುನ್ನ ಪ್ರಾರ್ಥನೆ ಮಾಡುವಂತೆ, ಪ್ರಾರ್ಥಿಸಿದ. ಆದರೆ ಬಿಕ್ಕಬಿಕ್ಕಿ ಅಳುತ್ತಿದ್ದನಾದ್ದರಿಂದ ಪ್ರಾರ್ಥನೆಯನ್ನು ಪೂರ್ಣಗೊಳಿಸಲಾಗಲಿಲ್ಲ. ಯೋಚಿಸುವುದನ್ನು ನಿಲ್ಲಿಸಿದ, ಏನನ್ನೂ ಗಮನಿಸಲಿಲ್ಲ, ಹಾಗೇ ಅಳುತ್ತಾ ನಿಂತುಬಿಟ್ಟ.

ಇದ್ದಕ್ಕಿದ್ದ ಹಾಗೆ ಯಾರೋ ಅವನ ಭುಜದ ಮೇಲೆ ಕೈಇಟ್ಟರು. ಗಡಸು ದನಿಯ ಆ ಮನುಷ್ಯ ಕೇಳಿದ :

'ಏನು ಮರಿ, ಏನು ದುಃಖ ನಿಂದು ?'

ಸೈಮನ್ ಹಿಂತಿರುಗಿ ನೋಡಿದ. ಕಪ್ಪು ಗಡ್ಡದ, ಗಂಟುಕಟ್ಟಿದ ಕೂದಲಿನ, ಉದ್ದಕ್ಕಿದ್ದ ಒಬ್ಬ ಕೆಲಸಗಾರ ಅವನನ್ನು ಕರುಣೆಯಿಂದ, ಸ್ನೇಹಭಾವದಿಂದ, ನೋಡುತ್ತ ನಿಂತಿದ್ದ. ಸೈಮನ್ ಅಳುತ್ತಲೇ ಹೇಳಿದ :

'ನಂಗೆ ಹುಡುಗ್ರು ಹೊಡೆದ್ರು....ಯಾಕೆಂದರೆ....ನಂಗೆ .. ಅಪ್ಪ... ಇಲ್ಲ ಅಂತ.'

'ಏನು !' ಎಂದ ಆ ವ್ಯಕ್ತಿ ಮುಗುಳ್ನಗುತ್ತ, 'ಯಾಕೆ, ಪ್ರತಿಯೊಬ್ಬರಿಗೂ ಒಬ್ಬ ಅಪ್ಪ ಇರ್ತಾನಲ್ಲ.'

ದುಃಖಿಯಾದ ಆ ಮಗು ಬಹಳ ಸಂಕಟದಿಂದ ಹೇಳಿತು :

'ಆದ್ರೆ ನಂಗೆ....ನಂಗೆ.... ಅಪ್ಪ ಇಲ್ಲ.'

ಆ ಮನುಷ್ಯ ಗಂಭೀರನಾದ. ಈ ಹುಡುಗ ಲಾ ಬ್ಲ್ಯಾಂಕಾಟೆಯ ಮಗ ಎಂದವನಿಗೆ ಗೊತ್ತಾಯಿತು. ಅವನು ಅವರ ಮನೆಯ ಹತ್ತಿರವೇ ವಾಸಕ್ಕೆ ಬಂದದ್ದು ಇತ್ತೀಚಿಗಷ್ಟೇ ಆಗಿದ್ದರೂ ಆಕೆಯ ಇತಿಹಾಸ ಅವನಿಗೆ ಒಂದು ಥರ ಅಸ್ಪಷ್ಟವಾಗಿ ಗೊತ್ತಿತ್ತು.

'ಇರ್ಲಿ, ಸಮಾಧಾನ ಮಾಡ್ಕೋ ಮಗ. ನಡಿ, ಈಗ ಅಮ್ಮನ ಹತ್ತಿರ ಹೋಗ್ತೀಯಂತೆ. ನಿಂಗೆ ಅಪ್ಪಾ ಸಿಗ್ತಾನೆ.'

ಅವರು ಮನೆಯ ಕಡೆ ಹೊರಟರು. ದೊಡ್ಡವನು ಚಿಕ್ಕವನ ಕೈಹಿಡಿದು ಕೊಂಡು ನಡೆದಿದ್ದ. ಅವನು ಮತ್ತೆ ಮಂಗುಳ್ನಕ್ಕ - ಏಕೆಂದರೆ ಲಾ ಬ್ಲ್ಯಾಂಕಾಟೆ ಯನ್ನು ನೋಡಿ ಅವನಿಗೇನೂ ನಿರಾಸೆಯಾಗಿರಲಿಲ್ಲ; ಅವಳು ಆ ಹಳ್ಳಿಯಲ್ಲೇ ಅತ್ಯಂತ ಸುಂದರ ಹುಡುಗಿಯಾಗಿದ್ದಳು ಎಂದು ಅವನು ಕೇಳಿದ್ದ; ಒಂದು ಸಲ ತಪ್ಪು ಮಾಡಿದ್ದ ಹುಡುಗಿ ಇನ್ನೊಂದು ಸಲ ತಪ್ಪು ಮಾಡಬಹುದು ಎಂದು ಅವನಪ್ಪಿಗವನೇ ಅಂದು ಕೊಂಡ.

ಅವರು ಒಂದು ಸಣ್ಣ, ನೀಟಾದ, ಸುಣ್ಣ ಬಳಿದ ಮನೆಯ ಮುಂದೆ ನಿಂತರು.

'ಇದೇ ಮನೆ', ಎಂದ ಸೈಮನ್. 'ಅಮ್ಮ' ಎಂದು ಕೂಗಿದ.

ಒಬ್ಬ ಹೆಂಗಸು ಹೊರಬಂದಳು. ಅವಳು ಬಂದ ತಕ್ಷಣ ಆ ಕೆಲಸಗಾರ ಮಂಗುಳ್ನಗುತ್ತ ಹೊರಡಲನುವಾದ. ಏಕೆಂದರೆ ಒಬ್ಬನಿಂದ ಆಗಲೇ ಮೋಸಹೋಗಿದ್ದ ಅವಳು ಖಂಡಿತ ಜಾಗರೂಕಳಾಗಿರುತ್ತಾಳೆ, ಅವಳ ಹತ್ತಿರ ತನ್ನ ಹುಡುಗಾಟವೇನೂ ನಡೆಯುವುದಿಲ್ಲ ಎಂದವನಿಗೆ ಗೊತ್ತಿತ್ತು. ಗಾಬರಿಯಿಂದ, ಕೈಯಲ್ಲಿ ಟೋಪಿ ಹಿಡಿದು ಕೊಂಡು, ಅವನು ತೊದಲಿದ :

'ನೋಡಿ, ಇವರೆ, ದಾರಿ ತಪ್ಪಿಸ್ಕೊಂಡು ನದೀ ತೀರದಲ್ಲಿ ನಿಂತಿದ್ದ ನಿಮ್ಮ ಮಗನ್ನ ಮನೆಗೆ ಕರಕೊಂಡು ಬಂದಿದೇನೆ.'

ಸೈಮನ್ ತನ್ನ ತಾಯಿಯನ್ನು ಅಪ್ಪಿಕೊಂಡು, ಅಳುತ್ತ ಹೇಳಿದ :

'ಇಲ್ಲ, ಅಮ್ಮ, ನಾನು ಮುಳುಗಿ ಸಾಯಬೇಕು ಅಂದುಕೊಂಡಿದ್ದೆ. ಯಾಕೆಂದರೆ ಹುಡುಗ್ರು ನಂಗೆ ಹೊಡೆದ್ರು. ನಂಗೆ ಅಪ್ಪ ಇಲ್ಲ ಅಂತ ಹೊಡೆದ್ರು.'

ಆ ಹೆಂಗಸಿನ ಮುಖ ಕೆಂಪಾಯಿತು. ದುಗುಡವುಕ್ಕಿ ಆಕೆ ಮಗನನ್ನು ಗಟ್ಟಿ ಯಾಗಿ ಅಪ್ಪಿಕೊಂಡಳು. ಅವಳ ಕಣ್ಣಿಂದ ನೀರು ಹರಿಯತೊಡಗಿತು. ಅವಳನ್ನು ನೋಡಿ ಆ ಮನುಷ್ಯನಿಗೆ ತುಂಬ ಸಂಕಟವಾಯಿತು. ಅಲ್ಲಿಂದ ಹೊರಟುಹೋಗು ವುದು ಹೇಗೆ ಎಂಬುವುದು ಗೊತ್ತಾಗದೆ ಹಾಗೇ ಸ್ವಲ್ಪ ಹೊತ್ತು ನಿಂತ. ಸೈಮನ್ ಇದ್ದಕ್ಕಿದ್ದ ಹಾಗೆ ಅವನ ಬಳಿ ಓಡಿ ಹೋಗಿ ಕೇಳಿದ :

'ನೀವು ನನ್ನ ಅಪ್ಪ ಆಗ್ತೀರಾ ?'

ಸ್ವಲ್ಪ ಹೊತ್ತು ಗಾಢ ಮೌನ. ಲಾ ಬ್ಲ್ಯಾಂಕಾಟೆಯು ಮೂಕಳಾಗಿ, ನಾಚಿಕೆ ಯಿಂದ ಚಡಪಡಿಸುತ್ತ ಎದೆಯ ಮೇಲೆ ಎರಡೂ ಕೈಗಳನ್ನಿಟ್ಟುಕೊಂಡು ಗೋಡೆಗೆ ವಾಲಿದಳು. ಯಾವ ಉತ್ತರವೂ ಬಾರದೇ ಇದ್ದುದ್ದನ್ನು ನೋಡಿ ಆ ಮಗು ಹೇಳಿತು:

'ಆಗಲ್ಲ ಅನ್ನೋದಾದ್ರೆ, ನಾನು ಮುಳುಗಿ ಸಾಯಲಿಕ್ಕೆ ಮತ್ತೆ ಹೋಗ್ತೀನಿ.'

ಆ ಕೆಲಸಗಾರ ಈ ಮಾತನ್ನು ತಮಾಷೆಯೆಂದು ಪರಿಗಣಿಸಿ ನಗುತ್ತ ಹೇಳಿದ :

'ಓ, ಖಂಡಿತ ಆಗಬಹುದು.'

'ಹಾಗಾದ್ರೆ ನಿಮ್ಮ ಹೆಸರೇನು ?' ಎಂದ ಆ ಹುಡುಗ. ಯಾಕಂದ್ರೆ, ಹುಡುಗ್ರು ಕೇಳಿದ್ರೆ ನಾ ಹೇಳ್ಬೇಕಲ್ಲ.

'ಫಿಲಿಪ್' ಎಂದ ಆ ವ್ಯಕ್ತಿ.

ಹೆಸರನ್ನು ಸರಿಯಾಗಿ ನೆನಪಿಸಲೆಂದು ಸ್ವಲ್ಪ ಹೊತ್ತು ಸೈಮನ್ ಮಾತಾಡದೆ ನಿಂತ. ಈಗ ಅವನಿಗೆ ನೆಮ್ಮದಿ ಅನಿಸಿ, ಹೇಳಿದ :

'ಸರಿ ಹಾಗಾದ್ರೆ, ಫಿಲಿಪ್, ನೀವೇ ನನ್ನ ಅಪ್ಪ.'

ಆ ಕೆಲಸಗಾರನು ಹುಡುಗನನ್ನು ಎತ್ತಿಕೊಂಡು ಅವನ ಎರಡೂ ಗಲ್ಲಕ್ಕೆ ಮುತ್ತು ಕೊಟ್ಟು, ಕೆಳಗಿಳಿಸಿ, ತಕ್ಷಣ ದಾಪುಗಾಲು ಹಾಕಿ ಹೊರಟ.

ಆ ಮಗು ಮಾರನೆಯ ದಿನ ಶಾಲೆಗೆ ಹೋದಾಗ ಹುಡುಗರು ಅವನನ್ನು ಮತ್ಸರದ ನಗೆಯಿಂದ ಬರಮಾಡಿಕೊಂಡರು. ಶಾಲೆ ಬಿಟ್ಟಾಗ ಅವರು ಪುನಃ ಗೇಲಿ ಮಾಡಲು ಹೊರಟಾಗ ಅವನು ಜೋರಾಗಿ, ಕಲ್ಲೆಸೆಯುವಂತೆ, ಹೇಳಿದ : 'ನಮ್ಮ ಅಪ್ಪನ ಹೆಸರು ಫಿಲಿಪ್ ಅಂತ.'

ಹುಡುಗರು ಕೇಕೆ ಹಾಕಿದರು.

'ಯಾವ ಫಿಲಿಪ್ ?.... ಎಂಥ ಫಿಲಿಪ್ ? ಅದ್ಯಾವ ಫಿಲಿಪ್ಪಪ್ಪ ? ಎಲ್ಲಿ ಸಿಕ್ಕಪ್ಪ ನಿನ್ನ ಫಿಲಿಪ್ !'

ಸೈಮನ್ ಉತ್ತರ ಕೊಡಲಿಲ್ಲ. ನಡುಗದೆ, ಉಡುಗದೆ, ತನ್ನ ಕಣ್ಣುಗಳಿಂದಲೇ ಅವರನ್ನು ಎದುರಿಸಿ, ಓಡಿಹೋಗುವ ಬದಲು ವೀರಮರಣವನ್ನಪ್ಪಲೆಂಬಂತೆ ಅಚಲವಾಗಿ ನಿಂತ. ಗುದ್ದಾಟವನ್ನು ತಪ್ಪಿಸಲು ಉಪಾಧ್ಯಾಯರು ಮಧ್ಯೆ ಬಂದರು. ಕೊನೆಗೆ ಸೈಮನ್ ಮನೆಗೆ ವಾಪಸ್ಸಾದ.

ಆಗಾಗ್ಗೆ, ಸುಮಾರು ಮೂರು ತಿಂಗಳು, ಆ ಉದ್ದಕ್ಕಿದ್ದ ಕೆಲಸಗಾರ - ಫಿಲಿಪ್ - ಬ್ಲ್ಯಾಂಕಾಟೆಯ ಮನೆಯನ್ನು ಹಾದುಹೋಗುತ್ತಿದ್ದ. ಒಂದೊಂದು ಸಲ, ಕಿಟಕಿಯ ಹತ್ತಿರ ಬಟ್ಟೆ ಹೊಲಿಯುತ್ತ ಕುಳಿತ್ತಿದ್ದ ಅವಳೊಡನೆ ಮಾತಾಡುವ ಧೈರ್ಯಮಾಡುತ್ತಿದ್ದ. ಅವಳು ಸೌಜನ್ಯದಿಂದ, ಗಂಭೀರವಾಗಿ, ತಮಾಷೆಮಾಡದೆ - ಆದರೆ ಯಾವತ್ತೂ ಅವನು ಒಳಬರಲು ಆಸ್ಪದ ನೀಡದೆ - ಅವನ ಜೊತೆ ಮಾತಾಡುತ್ತಿದ್ದಳು. ಆದರೂ, ಸೊಗಸುಗಾರನಾದ ಆತನಿಗೆ, ಎಲ್ಲ ಗಂಡಸರಿಗೆ ಅನ್ನಿಸುವಂತೆ, ಅವಳೊಡನೆ ಹರಟಿದಾಗ ಅವಳು ಯಾವತ್ತಿಗಿಂತಲೂ ಹೆಚ್ಚು ಸುಂದರವಾಗಿ ಕಾಣುತ್ತಿದ್ದಾಳೆ ಎಂದವನಿಗನ್ನಿಸುತ್ತಿತ್ತು.

ಪತಿತೆಯಾದವಳ ಸ್ಥಿತಿ ತುಂಬ ನಾಜೂಕಿನದಾದ್ದರಿಂದ ಲಾ ಬ್ಲ್ಯಾಂಕಾಟೆ ಎಷ್ಟೇ ಸೂಕ್ಷ್ಮವಾಗಿ ನಡೆದುಕೊಂಡರೂ ಅಕ್ಕಪಕ್ಕದವರು ಗುಸುಗುಸು ಮಾತಾಡುತ್ತಿದ್ದರು.

ಸೈಮನ್‌ಗೆ ತನ್ನ ಹೊಸ ಅಪ್ಪನ ಬಗ್ಗೆ ತುಂಬ ಪ್ರೀತಿ ಹುಟ್ಟಿತು. ಪ್ರತಿದಿನ ಸಾಯಂಕಾಲ ದಿನದ ಕೆಲಸ ಮುಗಿದಾಗ ಅವನ ಜೊತೆ ಸೈಮನ್ ತಿರುಗಾಡಲಿಕ್ಕೆ ಹೋಗುತ್ತಿದ್ದ. ಶಾಲೆಗೆ ಪ್ರತಿನಿತ್ಯ ಹೋಗುತ್ತಿದ್ದ. ಅಲ್ಲಿ ಅವನ ಸಹಪಾಠಿಗಳ ಜೊತೆ ಈಗ ಸಲೀಸಾಗಿ ಬೆರೆಯುತ್ತಿದ್ದ.

ಆದರೂ, ಒಂದು ದಿನ ಅವನ ಜೊತೆ ಈ ಹಿಂದೆ ಜಗಳವಾಡಿದ್ದ ಹುಡುಗ ಅವನಿಗೆ ಹೇಳಿದ :

'ನೀನು ಸುಳ್ಳು ಹೇಳ್ತೀಯ. ನಿಂಗೆ ಫಿಲಿಪ್ ಅನ್ನೋ ಅಪ್ಪ ಖಂಡಿತ ಇಲ್ಲ.'

ಕ್ಷೋಭೆಗೊಂಡು ಸೈಮನ್ ಕೇಳಿದ : 'ಯಾಕ್ಹಾಗೆ ಹೇಳ್ತೀಯ ?'

ಆ ಹುಡುಗ ಕೈಯುಜ್ಜಿಕೊಂಡು ಹೇಳಿದ :

'ಯಾಕೇಂದರೆ. ಅಂಥವನಿದ್ದಿದ್ದರೆ ಅವನು ನಿಮ್ಮ ಅಮ್ಮನ ಗಂಡ ಆಗಿರ್‍ತಿದ್ದ.'

ಈ ಮಾತಿನಲ್ಲಿ ಸತ್ಯಾಂಶ ಇದ್ದುದನ್ನು ನೋಡಿ ಸೈಮನ್ ಗೊಂದಲಗೊಂಡ.

'ಆದ್ರೂ ಅವನು ನಮ್ಮ ಅಪ್ಪಾನೇ,' ಎಂದ ಸೈಮನ್.

'ಇರಬಹುದು, ಆದ್ರೂ ಒಟ್ಟಿನಲ್ಲಿ ಅವನು ನಿಮ್ಮ ಅಪ್ಪ ಆಗಲ್ಲ' ಎಂದ ಆ ಪೋರ, ತಿರಸ್ಕಾರದಿಂದ.

ಲಾ ಬ್ಲ್ಯಾಂಕಾಟೆಯ ಮಗ ಮುಖ ಕೆಳಗೆ ಹಾಕಿ, ಯೋಚನೆ ಮಾಡುತ್ತ, ಫಿಲಿಪ್‌ ಕೆಲಸಮಾಡುತ್ತಿದ್ದ ಲಾಯರ್‌ಜೋನ್ಸ್‌ನ ಕಮ್ಮಾರಸಾಲೆಯತ್ತ ನಡೆದ.

ಆ ಕಮ್ಮಾರಸಾಲೆ ಮರಗಳ ಮಧ್ಯೆ ಹೂತುಹೋದಂತಿತ್ತು ; ಕತ್ತಲಿಂದ ತುಂಬಿತ್ತು. ಭಯಂಕರವಾದ ಕುಲುಮೆಯ ಬೆಂಕಿಯ ಬೆಳಕಲ್ಲಿ ಕಾಣಿಸುತ್ತಿದ್ದುದು ಅಡಿಗಲ್ಲ ಮೇಲೆ ಭಯಂಕರ ಶಬ್ದಮಾಡುತ್ತ ಸುತ್ತಿಗೆಯನ್ನು ಬಡಿಯುತ್ತಿದ್ದ ಐವರು ಕಮ್ಮಾರರು. ಬೆಂಕಿಯ ಜ್ವಾಲೆಯಲ್ಲಿ ತಾವು ಬಡಿಯುತ್ತಿದ್ದ ಕೆಂಪಗೆ ಕಾದ ಕಬ್ಬಿಣದ ಮೇಲೆ ಕಣ್ಣು ನೆಟ್ಟ ಅವರು ರಾಕ್ಷಸರಂತೆ ಕಾಣುತ್ತಿದ್ದರು. ಅಲ್ಲಿಗೆ ಬಂದ ಸೈಮನ್ನನು ಫಿಲಿಪ್‌ಗೆ ಕೇಳಿದ :

'ಫಿಲಿಪ್, ಲಾ ಮಿಕಾಂಡೆಯ ಹುಡುಗ ಹೇಳ್ತಾನೆ ನೀವು ಒಟ್ಟಿನಲ್ಲಿ ನಮ್ಮಪ್ಪ ಅಲ್ಲ ಅಂತ. ಏನು ಹಂಗಂದ್ರೆ ?'

'ಅವನು ಯಾಕೆ ಹಾಗೆ ಹೇಳಿದ್ದು ?' ಎಂದ ಆ ಕಮ್ಮಾರ.

ಆ ಮಗು ಮುಗ್ಧತೆಯಿಂದ ಉತ್ತರ ಕೊಟ್ಟಿತು :

'ಯಾಕಂದ್ರೆ ನೀವು ನಮ್ಮ ಅಮ್ಮನ ಗಂಡ ಅಲ್ಲ ಅಂತ.'

ಈ ಮಾತನ್ನು ಕೇಳಿದ ಅಲ್ಲಿದ್ದವರ್‍ಯಾರೂ ನಗಲಿಲ್ಲ. ಫಿಲಿಪ್ ತಲೆಯ ಹಿಂದೆ ಕೈಕಟ್ಟಿಕೊಂಡು ಹಾಗೇ ಸುಮ್ಮನೆ ನಿಂತು ಯೋಚಿಸಿದ. ಅವನ ನಾಲ್ಕು ಸಂಗಾತಿಗಳು ಅವನನ್ನು ನೋಡುತ್ತಿದ್ದರು. ಆ ದೈತ್ಯರ ಮುಂದೆ ಈ ಪಿಳ್ಳೆ ಸೈಮನ್ ಉತ್ತರಕ್ಕಾಗಿ ಕಾದಿದ್ದ. ಕಮ್ಮಾರರಲ್ಲೊಬ್ಬ ಎಲ್ಲರ ಪರವಾಗಿ ಎಂಬಂತೆ ಫಿಲಿಪ್‌ಗೆ ಹೇಳಿದ :

'ಏನೇ ಆದ್ರೂ ಲಾ ಬ್ಲ್ಯಾಂಕಾಟೆ ಒಳ್ಳೆಯ, ಪ್ರಾಮಾಣಿಕ ಹುಡುಗಿ. ತನ್ನ ದುರದೃಷ್ಟದಲ್ಲೂ ಧೈರ್ಯದಿಂದ ನಿಂತವಳು. ಅವಳು ಒಬ್ಬ ಪ್ರಾಮಾಣಿಕ ಮನುಷ್ಯನಿಗೆ ತಕ್ಕ ಹೆಂಡ್ತಿ ಆಗ್ತಾಳೆ.'

'ಅದು ನಿಜ', ಎಂದರು ಉಳಿದ ಮೂವರು.

ಆ ಕಮ್ಮಾರ ಮುಂದುವರೆದು ಹೇಳಿದ :

'ಕಾಲು ಜಾರಿದವಳು ಅಂದ್ರೆ ಅದವಳ ತಪ್ಪಾ ? ಅವಳಿಗೆ ಮದುವೆ ಮಾಡ್ಕೋತೀನಿ ಅಂತ ಮಾತುಕೊಟ್ಟವನು ಮೋಸ ಮಾಡಿದ. ಅವಳ ಹಾಗೇ ಪಾಪ ಮಾಡ್ದೋರು ಬೇಕಾದಷ್ಟು ಜನ ಇದಾರೆ. ಮತ್ತವರಿಗೆ ಮರ್ಯಾದೆ ಕೊಡೋ ಜನಾನೂ ಇದಾರೆ.'

'ಅದು ನಿಜ', ಎಂದು ಒಟ್ಟಿಗೇ ಅಂದರು ಉಳಿದ ಮೂವರು.

ಆ ಕಮ್ಮಾರ ಮುಂದುವರೆಸಿದ :

'ಪಾಪ, ಆ ಹುಡುಗಿ ಮಗನ್ನ ಓದಿಸಲಿಕ್ಕೆ ಒಬ್ಬಳೇ ಎಷ್ಟು ಕಷ್ಟಪಟ್ಟಿದಾಳೆ ! ಎಷ್ಟು ಅತ್ತಿದಾಳೆ ! ಚರ್ಚಿಗೆ ಹೋಗೋದೊಂದು ಬಿಟ್ರೆ ಬೇರೆ ಎಲ್ಲಿಗೂ ಹೋಗಲ್ಲ. ಆ ಭಗವಂತನಿಗೆ ಎಲ್ಲ ಗೊತ್ತು.'

'ಅದೂ ನಿಜ', ಎಂದರು ಉಳಿದವರು.

ಈ ಮಾತಿನ ನಂತರ ಕುಲುಮೆಯ ಬೆಂಕಿಗೆ ಗಾಳಿಯನ್ನೂದುವ ಶಬ್ದ ಬಿಟ್ಟು ಬೇರೆ ಯಾವ ಶಬ್ದವೂ ಕೇಳಿಸಲಿಲ್ಲ. ಫಿಲಿಪ್ ಬಗ್ಗಿ ಸೈಮನ್‌ಗೆ ಹೇಳಿದ :

'ನಿಮ್ಮಮ್ಮನಿಗೆ ಹೋಗಿ ಹೇಳು ನಾನವಳ ಹತ್ತಿರ ಮಾತಾಡಾಕೆ ಬರ್ತೀನಿ ಅಂತ.'

ಆ ಮಗುವನ್ನು ಹೊರಕ್ಕೆ ಕಳಿಸಿ ಅವನು ಪುನಃ ತನ್ನ ಕೆಲಸ ಶುರುಮಾಡಿದ. ಐದು ಸುತ್ತಿಗೆಗಳು ಒಟ್ಟಿಗೇ ಅಡಿಗಲ್ಲ ಮೇಲೆ ಅಪ್ಪಳಿಸಿದವು. ರಾತ್ರಿಯವರೆಗೆ ಆ ಐವರ ಕೆಲಸ ನಡೆಯಿತು. ಆದರೆ ಹಬ್ಬಗಳಂದು ಚರ್ಚಿನ ಗಂಟೆಯ ನಾದ ಬೇರೆ ಗಂಟೆಗಳ ನಾದವನ್ನು ಮೀರಿಸುವಂತೆ ಫಿಲಿಪ್‌ನ ಸುತ್ತಿಗೆಯ ಶಬ್ದ ಬೇರೆಯವರ ಸುತ್ತಿಗೆಗಳ ಶಬ್ದವನ್ನು ಮೀರಿಸಿತು. ಅವನು ರಭಸದಿಂದ ಕೆಲಸ ಮಾಡಿದ.

ಅವನು ಲಾ ಬ್ಲಾಂಕಾಟೆಯ ಮನೆಬಾಗಿಲು ತಟ್ಟಿದಾಗ ಆಕಾಶದಲ್ಲಿ ನಕ್ಷತ್ರಗಳು ಮಿನುಗುತ್ತಿದ್ದವು. ಅವನು ತನ್ನ ಭಾನುವಾರದ ನೀಟಾದ ಬಟ್ಟೆಯನ್ನು ಧರಿಸಿದ್ದ. ಗಡ್ಡವನ್ನು ಚನ್ನಾಗಿ ಸಮರಿದ್ದ. ತರುಣ ಹೆಂಗಸು ಲಾ ಬ್ಲಾಂಕಾಟೆ ಬಾಗಿಲ ಬಳಿ ಬಂದು ದುಃಖತುಂಬಿದ ದನಿಯಲ್ಲಿ ಹೇಳಿದಳು :

'ರಾತ್ರಿಯಾದಾಗ ಹೀಗೆ ಬರೋದ ತಪ್ಪು, ಫಿಲಿಪ್ ಅವರೇ.'

ಅವನು ಉತ್ತರ ಕೊಡಬೇಕೆಂದು ಬಯಸಿದ. ಆದರೆ ಗೊಂದಲಗೊಂಡು ಸರಿಯಾಗಿ ಮಾತಾಡಲಾಗದೆ ಅವಳ ಮುಂದೆ ನಿಂತಿದ್ದ.

ಅವಳು ಮಾತು ಮುಂದುವರೆಸಿದಳು.

'ನನ್ನ ಬಗ್ಗೆ ಜನ ಮತ್ತೆ ಮಾತಾಡೋದು ಚನ್ನಾಗಿರಲ್ಲ ಅಂತ ನಿಮಗೆ ಗೊತ್ತಿಲ್ಲವಾ ?'

ಅವನು ತಕ್ಷಣ ಹೇಳಿದ :

'ನೀವು ನನ್ನ ಹೆಂಡ್ತಿಯಾಗೋದಾದ್ರೆ, ಅವರ ಮಾತಿನಿಂದ ನನಗೇನಂತೆ !'

ಯಾವ ಉತ್ತರವೂ ಬರಲಿಲ್ಲ. ಆದರೆ ಅವನಿಗೆ ಆ ಕೋಣೆಯ ಕತ್ತಲಲ್ಲಿ ಯಾರೋ ಕುಸಿದುಬಿದ್ದ ಶಬ್ದ ಕೇಳಿದಂತಾಯಿತು. ತಕ್ಷಣ ಅವನು ಒಳ ಬಂದ. ಮಲಗಿದ್ದ ಸೈಮನ್‌ಗೆ ಚುಂಬನದ ಶಬ್ದ ಹಾಗು ತನ್ನ ತಾಯಿ ಮೆಲ್ಲಗೆ ಮಾತಾಡಿದ ಶಬ್ದ ಕೇಳಿಸಿತು. ಒಮ್ಮೆಲೆ ಅವನ ಸ್ನೇಹಿತ ಅವನನ್ನು ತನ್ನ ಕೈಗಳಿಂದ ಮೇಲೆತ್ತಿ ತನ್ನ ಮುಖದ ಎದುರು ಹಿಡಿದು ನಿಲ್ಲಿಸಿ ಹೇಳಿದ :

"ನೀನು ಇನ್ನ ನಿನ್ನ ಸ್ಕೂಲಿನ ಹುಡುಗರಿಗೆ ಹೋಗಿ ಹೇಳ್ಬಹುದು – ನಿಮ್ಮ ಅಪ್ಪನ ಹೆಸರು ಫಿಲಿಪ್ ರೆಮಿ ಅಂತ. ಅದೇ, ಕಮ್ಮಾರ ಫಿಲಿಪ್ ರೆಮಿ ಅಂತ ಹೇಳು. ಆಮೇಲೆ, ನಿಂಗೇನಾದ್ರೂ ತೊಂದ್ರೆ ಕೊಟ್ರೆ ಅವನು ನಿಮ್ಮ ಕಿವಿ ಹಿಂಡ್ತಾನೆ ಅಂತ ಹೇಳು."

ಮಾರನೆಯ ದಿನ ಶಾಲೆ ಭರ್ತಿಯಾಗಿದ್ದಾಗ ಮತ್ತು ಪಾಠಗಳು ಶುರುವಾಗುವ ಹೊತ್ತಿಗೆ ಬಿಳಿಚಿಕೊಂಡಿದ್ದ, ತುಟಿ ಅದರುತ್ತಿದ್ದ ಪುಟ್ಟ ಸೈಮನ್ ಎದ್ದು ನಿಂತು ಹೇಳಿದ.

"ನಮ್ಮ ಅಪ್ಪ ಫಿಲಿಪ್ ರೆಮಿ ಅಂತ. ಕಮ್ಮಾರ ಫಿಲಿಪ್ ರೆಮಿ. ಯಾರಾದ್ರೂ ನಂಗೆ ತೊಂದ್ರೆ ಕೊಟ್ರೆ ಅವರ ಕಿವಿ ಹಿಂಡಿ ಬಡೀತಾನಂತೆ."

ಈ ಸಲ ಯಾರೂ ನಗಲಿಲ್ಲ. ಯಾಕೆಂದರೆ, ಕಮ್ಮಾರ ಫಿಲಿಪ್ ರೆಮಿ ಎಲ್ಲರಿಗೂ ಚನ್ನಾಗಿ ಗೊತ್ತಿದ್ದ ಮತ್ತು ಜಗತ್ತಿನಲ್ಲಿ ಯಾರೂ ಹೆಮ್ಮೆಪಟ್ಕೊಳ್ಳುವಂಥ ಒಬ್ಬ ಅಪ್ಪ ಆಗಿದ್ದ ಅಂತ.

# ಪಾಟಿ

ಮೂಲ (ಮಲಯಾಳಂ) : ಶೋಭಾ ವಾರಿಯರ್

ಅನು : ಪ್ರಿಯ ಸಿ. ಹೆಚ್.

ಪೋಸ್ಟ್ ಆಫೀಸಿನ ಹೊರಗೆ ನಿಂತುಕೊಂಡು ಪಾಟಿ "ಅಯ್ಯಾ" ಎಂದು ಕರೆದಳು. ಅವಳ ದನಿಯಲ್ಲಿ ಭಯ ತುಂಬಿಕೊಂಡಿತ್ತು. ಸಣ್ಣ ಸ್ವರವಾದುದರಿಂದಲೇ ಇರಬೇಕು, ಅದನ್ನು ಯಾರೂ ಕೇಳಿಸಿಕೊಳ್ಳಲಿಲ್ಲ. ಪಾಟಿ ಪುನಃ ಗದ್ಗದ ಕಂಠದಿಂದ "ಅಯ್ಯಾ" ಎಂದು ಕರೆದಳು. ಈ ಸಲ ಅದು ಪೋಸ್ಟ್‌ಮ್ಯಾನ್ ಆರುಮುಗನಿಗೆ ಕೇಳಿಸಿತು. "ಯಾರದು ಪಾಟಿಯೇನು ? ಒಂದು ವಾರದಿಂದ ಎಲ್ಲಿದ್ದೆ ? ನೀನು ಸತ್ತೆ ಹೋದೆಯೆಂದು ನಾವು ತಿಳಿದಿದ್ದೆವಲ್ಲ ?" ಆರುಮುಗ ಹಾಸ್ಯ ಮಾಡುವಂತೆ ಗಟ್ಟಿಯಾಗಿ ನಕ್ಕುಬಿಟ್ಟ. ಆರುಮುಗನ ನಗು ಕೇಳಿ ಎಲ್ಲರೂ ತಲೆಯೆತ್ತಿದರು.

"ಇದೇನು ಆರುಮುಗ ? ನಿನಗೆ ಹುಚ್ಚು ಹಿಡಿಯಿತೇ ? ಪಾಟಿಯನ್ನು ಹೀಗನ್ನುವುದೇ ?"

"ಪಾಟೀ.... ನೀವು ಒಂದು ವಾರದಿಂದ ಎಲ್ಲಿದ್ದಿರಿ ?" ಸುಬ್ರಮಣಿ ಕೇಳಿದ.

"ನನಗಲ್ಲ, ಹುಚ್ಚು ನಿನಗೆ" ಆರುಮುಗ ಕೋಪದಿಂದ ನುಡಿದ. ಅದನ್ನು ಲೆಕ್ಕಿಸದೆ ಸುಬ್ರಹ್ಮಣಿ ಪತ್ರಗಳನ್ನು ವಿಂಗಡಿಸತೊಡಗಿದ.

"ಅಯ್ಯಾ ಎಲ್ಲಿದಾರೆ ಕಣ್ಣಾ" ಪಾಟಿ ಬಾಗಿಲ ಮರೆಯಿಂದ ಪ್ರಶ್ನಿಸಿದಳು.

"ಅಯ್ಯಾ ಇನ್ನೂ ಬಂದಿಲ್ಲ ಪಾಟಿ. ಮನೆಯಲ್ಲಿದ್ದಾರೇನೋ ಹೋಗಿ ನೋಡು" ಸುಬ್ರಹ್ಮಣಿ ತಲೆಯೆತ್ತದೆ ಮರುಕ ತುಂಬಿದ ದನಿಯಲ್ಲಿ ಹೇಳಿದ.

"ಮುರುಗಾ" ಎಂದವಳೆ ಪಾಟಿ ಕುಸಿದು ಕುಳಿತಳು. ಒಂದು ವಾರದಿಂದ ಪೋಸ್ಟ್‌ಆಫೀಸ್ ಗುಡಿಸಲು ಅವಳು ಬಂದಿರಲಿಲ್ಲ. ಇದರ ಕಾರಣ ಗೊತ್ತಾದರೆ ಎಲ್ಲರೂ ನಗಬಹುದೆಂದು ಪಾಟಿಗೆ ಗೊತ್ತು. ಅದಕ್ಕಾಗಿಯೇ ಆಕೆ ಪ್ರತಿಕ್ರಿಯೆ ವ್ಯಕ್ತಪಡಿಸಲಿಲ್ಲ.

ಅದೊಂದು ಶನಿವಾರ ಸಂಜೆ ಆಫೀಸಿನ ಹೂಜಿಯಲ್ಲಿ ನೀರು ತುಂಬಿ ಹೊರಟಿದ್ದಳು. ಗೇಟು ದಾಟಿ ಒಂದು ಫರ್ಲಾಂಗೂ ಕಳೆದಿರಲಿಲ್ಲ. ಏನಾಯಿತೆಂದು ಪಾಟಿಗೇ

ನೆನಪಿಲ್ಲ. ಯಾವುದಕ್ಕೋ ತಾನು ಡಿಕ್ಕಿ ಹೊಡೆದೆನೆಂದೂ ಕೆಳಕ್ಕೆ ಬಿದ್ದೆನೆಂದೂ ಮಾತ್ರ ಗೊತ್ತು. ಬಲವಾದ ಒದೆ ಮತ್ತು ತಿವಿತಗಳಿಂದಾಗಿ ದಾರಿಗೆ ಅಡ್ಡ ನಿಂತಿದ್ದ ಆಡಿಗೋ ಅಲ್ಲ ಇನ್ನಾವುದಕ್ಕೋ ಡಿಕ್ಕಿ ಹೊಡೆದೆನೆಂದು ಅವಳಿಗೆ ತಿಳಿಯಿತು. ಯಾರೋ ಬಂದು ಎತ್ತಿ ಕುಳ್ಳಿರಿಸುವುದಕ್ಕೆ ಯತ್ನಿಸಿದಾಗ ಪಾಟಿ ನೆಲಕ್ಕೆ ಕುಸಿದಳು.

"ಪಾಟಿ, ನಿನಗೆ ಕಣ್ಣು ಕಾಣಿಸುವುದಿಲ್ಲವೇನು ? ದಾರಿಯಲ್ಲಿ ಸಿಕ್ಕಿದ ಆಡುಗಳಿಗೆ ಡಿಕ್ಕಿ ಹೊಡೆದರೆ ಇದೇ ಫಲ"

ಪಾಟಿಯ ಕಣ್ಣಿಗೆ ಪೊರೆಯ ಬಾಧೆ ಉಂಟಾಗಿ ಹಲವು ದಿನಗಳಾದುವು. ದಿನ ಹೋದಂತೆ ದೃಷ್ಟಿ ಮಂದವಾಗುತ್ತಿತ್ತು. ಈಗ ಎಲ್ಲವನ್ನೂ ಮಂಕಾಗಿ ಮಾತ್ರವೇ ಕಾಣಲು ಸಾಧ್ಯವಾಗುತ್ತಿತ್ತು. ಆಪರೇಷನ್ ಮಾಡಿದರೆ ಮಾತ್ರವೇ ವಾಸಿಯಾಗ ಬಹುದೆಂದು ಪೋಸ್ಟ್ ಆಫೀಸಿನ ಸುಬ್ರಹ್ಮಣಿ ಹೇಳುತ್ತಿದ್ದ. ಪಾಟಿ ಒಂದು ದಿನ ಶರವಣನೊಡನೆ ಹೇಳಿದ್ದಕ್ಕೆ "ಮುದುಕಿಗೆ ಇಷ್ಟು ಕಂಡರೆ ಸಾಕು". ಶರವಣ ಮತ್ತು ಶೈವಮುತ್ತು ಒಂದೇ ಬಗೆಯ ಅಭಿಪ್ರಾಯಪಟ್ಟರು. ಇಂದಲ್ಲ ನಾಳೆ ಸಾಯಲಿದ್ದ ಮುದುಕಿಯ ಆಪರೇಷನಿಗಾಗಿ ಹಣ ವ್ಯಯಮಾಡುವುದಕ್ಕೆ ಅವರಿಗೆ ಅಂದರೆ ಪಾಟಿಯ ಮೊಮ್ಮಕ್ಕಳಿಬ್ಬರಿಗೂ ಆಸಕ್ತಿ ಇರಲಿಲ್ಲ,

ಯಾವಾಗಲೂ ಸೂರ್ಯೋದಯಕ್ಕಿಂತ ಮೊದಲೇ ಪಾಟಿ ಏಳುತ್ತಿದ್ದಳು. ಯಾವ ಹೊತ್ತಿಗೂ ಗಡಿಯಾರ ನೋಡದೆ ಕ್ಲಿಪ್ತವಾಗಿ ಸಮಯ ಹೇಳುವ ಶಕ್ತಿ ಪಾಟಿಗಿತ್ತು. ಇದು ಪೋಸ್ಟ್‌ಆಫೀಸಿನ ಎಲ್ಲರಿಗೂ ತಿಳಿದ ವಿಷಯ. ಆಗಾಗ ಪಾಟಿಯನ್ನು ಕಂಡೊ ಡನೆ "ಈಗ ಎಷ್ಟು ಗಂಟೆ ಪಾಟಿ" ಎಂದು ಸುಬ್ರಹ್ಮಣಿ ಕೇಳುತ್ತಿದ್ದ.

"ಏನು ಕಣ್ಣಾ, ನನ್ನನ್ನು ಕಾಡಿಸಲು ಕೇಳುತ್ತಿರುವೆಯೇನು ?" ಎಂದು ಹಲ್ಲಿಲ್ಲದ ಬಾಯಿ ತೆರೆದು ನಗುತ್ತಾ ಪಾಟಿ ಮರುಪ್ರಶ್ನೆ ಹಾಕುತ್ತಿದ್ದಳು. ಮತ್ತೆ ಸಮಯವನ್ನು ಹೇಳುವ ಕೆಲಸ. ಸುಬ್ರಹ್ಮಣಿಯ ಪ್ರಶ್ನೆ ಮತ್ತು ಅದಕ್ಕೆ ಪಾಟಿಯ ಉತ್ತರಗಳನ್ನು ದಿನಾ ಹಲವು ಸಲ ಕೇಳಬಹುದಾಗಿತ್ತು.

ಪಾಟಿಯ ನಗು ಕಂಡಾಗ ವೆಂಕಟಕೃಷ್ಣನಿಗೆ ಒಂದು ಸಂದೇಹ, ಪಾಟಿಯ ಬಾಯಿ ಯಲ್ಲಿ ಹಲ್ಲುಗಳೇನಾದರೂ ಉಳಿದಿವೆಯೋ ಎಂದು. ಉಂಟಲ್ಲ ಎಂದು ಹೇಳಿ ವೀಳ್ಯ ಜಗಿದು ಕೆಂಪಾಗಿಸಿದ ಒಂದೆರಡು ದವಡೆ ಹಲ್ಲುಗಳನ್ನು ಬಾಯಿತೆರೆದು ತೋರಿಸುತ್ತಿದ್ದಳು. "ಹಲ್ಲೆಂದರೆ ಇದೋ !" ಎಂದು ಎಲ್ಲರೂ ಗೇಲಿ ಮಾಡಿ ನಗುತ್ತಿದ್ದರು.

"ಇಗೋ ನೋಡು, ವೀಳ್ಯ, ಅಡಿಕೆಗಳನ್ನು ಜಗಿದು ತಿನ್ನುತ್ತಿದ್ದೇನೆ. ಸಾಯುವ ತನಕ ವೀಳ್ಯ ಜಗಿಯಲು ಒಂದು ಹಲ್ಲಾದರೂ ಉಳಿದರೆ ಸಾಕಿತ್ತು" ಎಂದು ನಿಟ್ಟುಸಿರಿ ನೊಂದಿಗೆ ಪಾಟಿ ಹೇಳುತ್ತಿದ್ದಳು.

"ಪಾಟಿ, ಒಂದು ಹಲ್ಲು ಮಾತ್ರ ಇದ್ದರೆ ಜಗಿಯಲು ಸಾಧ್ಯವಿಲ್ಲ" ಎಂದು ಆರು ಮುಗ ಗಟ್ಟಿಯಾಗಿ ನಗುತ್ತಿದ್ದ.

"ಪಾಟಿಗೆ ಎಷ್ಟು ಪ್ರಾಯವಾಯಿತು" ಎಂದು ಪ್ರಶ್ನಿಸುವುದು ಸುಬ್ರಹ್ಮಣಿಗೆ ಇಷ್ಟದ ಕೆಲಸವಾಗಿತ್ತು. ಕೆಲವೊಮ್ಮೆ ಇಪ್ಪತ್ತೆಂದೂ, ಕೆಲವೊಮ್ಮೆ ಅರುವತ್ತೆಂದೂ, ಕೆಲವೊಮ್ಮೆ ನೂರೆಂದೂ ಪಾಟಿ ಹೇಳಿದರೆ, ಅದನ್ನು ಕೇಳಿ ಎಲ್ಲರೂ ಗಹಗಹಿಸಿ ನಗುತ್ತಿದ್ದರು. ಮೊದಮೊದಲು ಅವರು ಯಾಕೆ ನಗುತ್ತಾರೆಂದು ಪಾಟಿಗೆ ಹೊಳೆಯುತ್ತಿರಲಿಲ್ಲ. ತಾನು ಒಬ್ಬ ಜೋಕರೆಂದು ತಿಳಿಯದೆ ಪಾಟಿಯೂ ಅವರೊಂದಿಗೆ ನಕ್ಕು ಬಿಡುತ್ತಿದ್ದಳು.

"ನಾವು ಯಾಕೆ ನಗುತ್ತಿದ್ದೇವೆಂದು ಗೊತ್ತಿದೆಯೇನು ?" ಸುಬ್ರಹ್ಮಣಿ ಹೀಗೆ ಪ್ರಶ್ನಿಸಿದರೆ,

"ನನಗೆ ತಿಳಿಯಬೇಕಾಗಿಲ್ಲ. ನೀನು ನನ್ನನ್ನು ಗೇಲಿ ಮಾಡಿಯೋ ಪರಿಹಾಸ್ಯ ಮಾಡಿಯೋ ನಗುವವನಲ್ಲ ಅಲ್ಲವೇ ?" ಹೀಗೆ ಅಮಾಯಕಳಾಗಿ ಉತ್ತರಿಸುತ್ತಿದ್ದಳು.

ಎಲ್ಲರೂ ಸುಬ್ರಹ್ಮಣಿಯನ್ನು – ಅದರಲ್ಲೂ ಆರುಮುಗ – ಪಾಟಿಯ ಕಣ್ಣನೇ ಎಂದು ಕರೆಯುತ್ತಿದ್ದರು. ಪಾಟಿಗೆ ಸುಬ್ರಹ್ಮಣಿ ಎಂದರೆ ಪ್ರಾಣಕ್ಕಿಂತ ಪ್ರಿಯ.

ಇದಕ್ಕೆ ಕಾರಣವಿದೆ, ಪಾಟಿಯ ಸ್ವಂತ ಮಕ್ಕಳೂ ಕೂಡಾ ತೋರದ ಪ್ರೀತಿಯನ್ನು ಪೋಸ್ಟ್‌ಆಫೀಸಿನ ಅಪರಿಚಿತರು ಪ್ರತ್ಯೇಕವಾಗಿ ಸುಬ್ರಹ್ಮಣಿ ಪಾಟಿಯಲ್ಲಿ ತೋರುತ್ತಿದ್ದರು. ಪಾಟಿಯ ಸೊಸೆ ಅಥವಾ ಶರವಣ ಮತ್ತು ಶೈವಮುತ್ತುವಿನ ತಾಯಿ ಹೇಳಿದ ಮಾತು ಇದು :

"ಹಾಳು ಮುದುಕಿ ಸಾಯುವುದಿಲ್ಲವಲ್ಲಾ" ಎಂದು. ಕೈಗಳೆರಡನ್ನೂ ಎತ್ತಿ "ಸಾಯಿ ಮುದುಕೀ" ಎಂದು ಹೇಳಿ ಅವಳು ಅಂಗಳದಲ್ಲಿ ಕ್ಯಾಕರಿಸಿ ಉಗುಳುತ್ತಿದ್ದುದೂ ಇದೆ. ಪಾಟಿ ಮಾತನಾಡದೆ ಸೆಗಣಿ ಸಾರಿಸಿದ ಅಂಗಳದ ಒಂದು ಮೂಲೆಯಲ್ಲಿ ಕುಳಿತುಕೊಳ್ಳುತ್ತಿದ್ದಳು.

"ತಿಂದು ಮುಗಿಸುವುದಕ್ಕೆ ಹುಟ್ಟಿದ ಈ ಹೆಣ ಸಾಯುವುದಿಲ್ಲವಲ್ಲ. ಅವರು ತಂದುಕೊಡುವ ನೂರು ರೂಪಾಯಿ ಇಲ್ಲದಿರುತ್ತಿದ್ದರೆ ಎಂದೋ ನಾನು ಕೊಂದು ಹುಗಿದು ಹಾಕಿ ಬಿಡುತ್ತಿದ್ದೆ. "ಓ ಶರವಣಾ, ಒಂದು ಒದೆ ಕೊಡೋ.... ಮುದುಕಿ ಸಾಯಲಿ" ಪಾಟಿಯ ಸೊಸೆ ಆಗಾಗ ಆರ್ಭಟಿಸುತ್ತಿದ್ದಳು.

"ತಾನೇಕೆ ಶವವಾಗಿಲ್ಲ. ಕಣ್ಣಿಗೆ ಪೊರೆ ಬರುವ ಬದಲು ಕಿವಿ ಹುಗಿದು ಹೋಗಿದ್ದರೆ" ಎಂದು ಪಾಟಿ ದೇವರೊಡನೆ ಪ್ರಾರ್ಥಿಸುತ್ತಿದ್ದಳು.

"ಇವೆಲ್ಲಾ ಕೇಳುವುದು ನನ್ನ ವಿಧಿಯಾಗಿರಬಹುದು. ಮುರುಗಾ, ಈ ಮುದುಕಿಯನ್ನು ಯಾಕೆ ಕೊಂಡು ಹೋಗುವುದಿಲ್ಲ ?" ಪಾಟಿ ಗಟ್ಟಿಯಾಗಿ ರೋದಿಸುತ್ತಿದ್ದಳು. ಆಗ ಬಿಳಿ ಪೊರೆ ಆವರಿಸಿದ ಕಣ್ಣುಗಳಿಂದ ಧಾರಾಕಾರವಾಗಿ ಕಣ್ಣೀರು ಹರಿಯುತ್ತಿತ್ತು.

ಅದಿಗೆ ಚಿಕ್ಕ ಹೊಡೆದು ಬಂದ ಕಾಲು ನೋವಿನಿಂದ ಒಂದು ವಾರ ಮನೆಯಲ್ಲಿ ಮಲಗಬೇಕಾಗಿ ಬಂದಾಗ ಪಾಟಿ ಅನುಭವಿಸಿದ ನೋವು ಅಸಾಧಾರಣವಾದುದು. ನೆಲಕ್ಕೆ ಕಾಲೂರಿದಾಗ ಉಂಟಾಗುತ್ತಿದ್ದ ಅತಿಯಾದ ನೋವನ್ನು ಸಹಿಸಲಾರದೆ, ಕೆಲ

ವೊಮ್ಮೆ ಬಿದ್ದಾಗಲೂ, ಎತ್ತಿಹಿಡಿಲಿಗೆ ಕೊಂಡೊಯ್ಯುವುದಕ್ಕೆ ಯಾರೂ ಬರುತ್ತಿರಲಿಲ್ಲ. ಎಲ್ಲವೂ ದೇವರ ಕೃಪೆಯಿಂದ ಮಾತ್ರ ಸರಿಯಾಯಿತೆಂದು ಪಾಟಿ ನಂಬುತ್ತಾಳೆ. ಹರಿದು ಚಿಂದಿಯಾದ ಒಂದು ಚಾಪೆಯಲ್ಲಿ ಸುರುಟಿ ಮಲಗಿಕೊಂಡು ಪಾಟಿ ತನ್ನ ಒಳ್ಳೆಯ ಕಾಲವನ್ನು ನೆನೆಯುತ್ತಿದ್ದಳು. ಅದೆಷ್ಟು ಹಿಂದೆ ! ಕೊರಳಲ್ಲಿ ಮಾಲೆಯೂ, ಕಿವಿಯಲ್ಲಿ ಓಲೆ, ಮೂಗಿನಲ್ಲಿ ಮೂಗುತಿ, ರೇಷ್ಮೆ ಸೀರೆಗಳೂ, ಹಿತ್ತಾಳೆ ಪಾತ್ರೆಗಳೂ, ಇವೆಲ್ಲ ವನ್ನೂ ಕೊಡಿಸಿ ಅವಳ ತಂದೆ ಮದುವೆ ಮಾಡಿ ಕಳುಹಿಸಿದ್ದ. ಕೊರಳಿನ ಮಾಲೆ, ಮೂಗುತಿ, ಕಿವಿಯೋಲೆ ಹೀಗೆ ಒಂದೊಂದನ್ನೇ ಗಂಡ ಮಾರಿಬಿಟ್ಟ. ಹಾಗೆ ಶರಾಬು ಕುಡಿಯುತ್ತಿದ್ದರೂ ನೆರೆಹೊರೆಯ ಇತರ ಗಂಡಸರಂತಲ್ಲ ನನ್ನ ಗಂಡ ಎಂದು ಅಭಿ ಮಾನದಿಂದ ಪಾಟಿ ನೆನೆಯುತ್ತಿದ್ದಳು. ಒಮ್ಮೆಯೂ ಪಾಟಿಯನ್ನು ಆತ ಹೊಡೆದದ್ದಿಲ್ಲ. ಕೆಲಸ ಸಿಕ್ಕಿದರೆ ಆತ ಚೆನ್ನಾಗಿ ಸಂಪಾದಿಸುತ್ತಿದ್ದ. ಸಂಪಾದಿಸಿದ್ದೆಲ್ಲವನ್ನೂ ಕೊಂಡು ಹೋಗಿ ಶರಾಬಿನಂಗಡಿಯಲ್ಲಿ ಕಳೆಯುತ್ತಿದ್ದ. ಎಷ್ಟೇ ರಾತ್ರಿಯಾಗಲಿ ಎಷ್ಟೇ ಕುಡಿದಿರಲಿ ಮನೆಗೆ ಬರುತ್ತಾ ಅವನ ಎರಡೂ ಕೈಗಳಲ್ಲಿ ಒಂದೊಂದು ಕಟ್ಟಿರುತ್ತಿತ್ತು. ಸಣ್ಣ ಎಲೆಯ ಕಟ್ಟಿನಲ್ಲಿ ಮಲ್ಲಿಗೆ ಮಾಲೆ, ದೊಡ್ಡ ಎಲೆಯ ಕಟ್ಟಿನಲ್ಲಿ ಇಡ್ಲಿ. ಮನೆ ಸೇರಿದೊಡನೆ ನಿದ್ರಿಸುತ್ತಿದ್ದ ಹೆಂಡತಿಯನ್ನು "ನನ್ನ ಜೀವವೇ" ಎಂದು ಕರೆದೆಬ್ಬಿಸುತ್ತಿದ್ದ. ತಲೆಗೆ ಮಲ್ಲಿಗೆ ಹೂವನ್ನು ಮುಡಿಸುತ್ತಿದ್ದ. ಇನ್ನೊಂದು ಕಟ್ಟನ್ನು ಮುಂದಿರಿಸಿ "ತಿನ್ನು ಇಡ್ಲಿ" ಎಂದು ಹೇಳುತ್ತಿದ್ದ. ನಿದ್ದೆಗಣ್ಣಿನಲ್ಲಿ ಪಾಟಿ ಇಡ್ಲಿ ತಿನ್ನುವಾಗ ಅವನು ಹಿಂದೆ ಕುಳಿತು ಮಲ್ಲಿಗೆಯ ಪರಿಮಳವನ್ನು ಸವಿಯುತ್ತಿದ್ದ. ಆಗಾಗ್ಗೆ "ನೀನು ನನ್ನ ಜೀವ, ನೀನು ನನ್ನ ಸ್ವಂತ, ನೀನು ನನ್ನ ಕಣ್ಮಣಿ" ಎಂದು ಹೇಳುತ್ತಾ ಸಿನೆಮಾ ದಲ್ಲಿ ಕೇಳಿಬರುವ ಎಲ್ಲಾ ಡಯಲಾಗ್‌ಗಳನ್ನೂ ಆತ ಬಡಬಡಿಸುತ್ತಿದ್ದ. ಅದನ್ನೆಲ್ಲಾ ನೆನೆಯುವಾಗ ಪಾಟಿಗೆ ಇಂದೂ ಮೈ ನವಿರೇಳುತ್ತಿತ್ತು. ಮನಸ್ಸಿನಲ್ಲಿ ದುಃಖ ತುಂಬಿ ಬಂದಾಗ ಪಾಟಿ ತನ್ನ ಗಂಡನ ಕುರಿತು ನೆನೆಯುತ್ತಾ ಆ ಸವಿನೆನಪುಗಳಲ್ಲಿ ಮುಳುಗೆದ್ದು ಎಲ್ಲವನ್ನೂ ಮರೆಯಲು ಶ್ರಮಿಸುತ್ತಿದ್ದಳು.

ಅಂದು ಗೌರವರ್ಣದ ಸುಂದರಿಯಾಗಿದ್ದ ತಾನು ಇಂದು ಎಂಥಾ ಕುರೂಪಿ ಯಾಗಿಬಿಟ್ಟೆ ! ಪಾಟಿ ತನ್ನ ಸುಕ್ಕುಗಟ್ಟಿದ ಕೈಕಾಲುಗಳನ್ನು ನೋಡುತ್ತಾ ಆಲೋಚಿಸು ತ್ತಿದ್ದಳು. ಗಂಡ ತೀರಿಕೊಂಡೊಡನೆ ಪಾಟಿಗೆ ಒಳ್ಳೆಯ ಕಾಲವೂ ಕೊನೆಗೊಂಡಿತು. ಅಂದು ಒಳ್ಳೆಯ ಸೀರೆ, ರವಿಕೆಗಳನ್ನುಟ್ಟು ನಡೆಯುತ್ತಿದ್ದವಳಿಗೆ ಇಂದು ರವಿಕೆಯಿಲ್ಲ. ಮಾಸಿದ ಒಂದೇ ಒಂದು ಸೀರೆ. ಈ ಸೀರೆ ಸೀರೆಯನ್ನು ಒಗೆಯುವ ದಿವಸ ನೊಸೆ ಯಾನ್ನು ಯಾಚಿಸಿ ಬೇರೊಂದನ್ನು ಪಡೆಯಬೇಕಾಗಿತ್ತು.

ಕಣ್ಣಿನ ತೊರೆ ಬಾಧಿಸಿದ ಅನಂತರ ರಸ್ತೆಯಲ್ಲಿ ಬಿದ್ದಿದ್ದ ಗಾಜಿನ ಚೂರು ಗಳೊಂದೂ ಕಾಣಿಸದಾದವು. ಒಂದೆರಡು ಸಲ ಗಾಜಿನಚೂರು ತಾಗಿ ಕಾಲು ಗಾಯಗೊಂಡು ಹುಣ್ಣಾಯಿತು. ಅನಂತರ ಪಾಟಿ ಒಂದು ಜೋಡಿ ಚಪ್ಪಲಿ

ಕೊಂಡಳು. ನೂರು ರೂಪಾಯಿಯಿಂದ ಚಪ್ಪಲಿಗೆ ಬೇಕಾದ್ದನ್ನು ತೆಗೆದು ಉಳಿದ ಹಣವನ್ನು ಸೊಸೆಗೆ ಕೊಡುವಾಗ ಭಯವೆನ್ನಿಸಿತ್ತು. ನಡುಗುತ್ತಾ ಸರಿದು ನಿಂತಿದ್ದ ಪಾಟಿಯ ಮುಂದೆ ಸೊಸೆ ಸಿಂಹದಂತೆ ಗರ್ಜಿಸಿದಳು.

"ಮುದುಕಿ, ಬಾಕಿ ಹಣವೆಲ್ಲಿ?"

"ಚಪ್ಪಲಿ ಕೊಂಡುಕೊಂಡೆ" ಎಂದು ಪಾಟಿ ಮೆಲ್ಲನೆ ನುಡಿದಳು. ಶರವಣ ಮತ್ತು ಸೊಸೆ ಆ ರಾತ್ರಿ ಪಾಟಿಗೆ ಊಟ ಕೊಡಲಿಲ್ಲ. ನೂರು ರೂಪಾಯಿಗಿಂತ ಒಂದು ಪೈಸೆಯಾದರೂ ಕಡಿಮೆ ತಂದುಕೊಡುವುದಾದರೆ ಈ ಮನೆಯೊಳಗೆ ಕಾಲಿರಿಸಬೇಡ" ಎಂದು ಅವರಿಬ್ಬರೂ ಹೇಳಿದರು. ಆ ಮನೆ ತನ್ನ ಗಂಡನದೆಂಬುದನ್ನು ಅವರೆಲ್ಲ ಮರೆತಿದ್ದರು. ಪಾಟಿ ಬೇಸರದಿಂದ ಅದನ್ನು ನೆನೆದಳು. ಆ ರಾತ್ರಿ ಸೂರ್ಯ ಉದಯಿಸುವವರೆಗೂ ಪಾಟಿ ಅತ್ತಳು. ದೇವರೊಡನೆ "ನನ್ನನ್ನು ಕೊಂಡು ಹೋಗು" ಎಂದು ಹಲವು ಸಲ ಹೇಳಿದಳು. ದೇವರಿಗೆ ಅವಳ ದಯನೀಯ ಧ್ವನಿ ಕೇಳಿಸಲಿಲ್ಲ.

ಪಾಟಿಯ ಕೆಲಸ ಕಸಗುಡಿಸುವುದು ಮಾತ್ರವಲ್ಲ, ಹೂಜಿಯಲ್ಲಿ ನೀರನ್ನೂ ತಂದಿಡಬೇಕು. ಕೆಲವರು ನೀರು ಕುಡಿದು ಹೂಜಿ ಮತ್ತು ಲೋಟಗಳನ್ನು ಕೆಳಗಿಡುತ್ತಿದ್ದರು. ಬಗ್ಗಿ ಕುಳಿತು ಕಸಗುಡಿಸುವಾಗ ಪಾಪದ ಪಾಟಿ ಅದನ್ನು ಕಂಡಿರುವುದಿಲ್ಲ. ಹಿಡಿಸೂಡಿಯಿಂದ ಗುಡಿಸುವಾಗ ಹೂಜಿಗೆ ತಗುಲಿ ಅದು ಬಿದ್ದು ಒಡೆದರೆ ಕೋಣೆಯಿಡೀ ನೀರು. ಆರುಮುಗ ಪಾಟಿಯನ್ನು ಬೆದರಿಸುತ್ತಿದ್ದ. ಉಳಿದವರೆಲ್ಲಾ ಪಾಟಿಯನ್ನು ಸಾಂತ್ವನ ಪಡಿಸಿದರು. ಎರಡು ದಿನಗಳೊಳಗೆ ಪಾಟಿ ಮತ್ತೊಂದು ಹೂಜಿಯನ್ನು ಒಡೆದುಬಿಡಬೇಕೆ! ಈ ಸಲ ನೀರು ತುಂಬಿಕೊಂಡು ಒಳಗೆ ಬರುವಾಗ ಹೊಸ್ತಿಲು ಎಡವಿದ್ದಳು. ಅಂದು ಪೋಸ್ಟ್‌ಮಾಸ್ತರರು ಕೇಳಿದರು,

"ಏನು ಪಾಟಿಗೆ ಕಣ್ಣು ಕಾಣಿಸುವುದಿಲ್ಲವೇ ? ಹೀಗಾದರೆ ಇನ್ನು ಹೇಗೆ ಕೆಲಸ ಮಾಡುವೆ ?"

ಆಗ ಪಾಟಿ "ಅಯ್ಯಾ ನಾನು ಚೆನ್ನಾಗಿ ಗುಡಿಸುವೆ. ಈ ಸಲ ಕ್ಷಮಿಸಿ" ಎಂದು ಅವರ ಕಾಲಿಗೆ ಬಿದ್ದು ಅತ್ತಳು. ಅದನ್ನು ನೋಡಿ ಸುಬ್ರಹ್ಮಣಿಗೆ ಮಾತ್ರ ಸಹಿಸದಾಯಿತು. ಅವನು ಬೇಗ ಬಂದು ಪಾಟಿಯನ್ನು ಹಿಡಿದೆಬ್ಬಿಸಿದನು. "ಪಾಟಿಯ ಕಣ್ಣು ಗುಣಹೊಂದಿದ ಮೇಲೆ ಮಾತ್ರ ಇನ್ನುಳಿದ ಕೆಲಸ". ಅವನು ಹೀಗೆಂದೊಡನೆಯೇ ಉಳಿದವರು ನಕ್ಕರು. ಪಾಟಿ ಆಡಿಗೆ ಡಿಕ್ಕಿ ಹೊಡೆದು ಒಂದು ವಾರ ಮಲಗುವಂತಾದದ್ದು ಈ ಘಟನೆ ನಡೆದ ಮೇಲೆ.

"ಏನು ಪಾಟಿ, ಒಂದು ವಾರ ಎಲ್ಲಿದ್ದೆ ?" ಎಂದು ಪೋಸ್ಟ್‌ಮಾಸ್ತರರು ಕೇಳಿದರು,

"ಅಯ್ಯಾ, ಕಣ್ಣು ಕಾಣದೆ ಒಂದು ದನಕ್ಕೆ ಡಿಕ್ಕಿ ಹೊಡೆದೆ. ಈಗ ಹುಷಾರಾಗಿದ್ದೇನೆ. ನಾಳೆಯಿಂದ ನಾನು ಗುಡಿಸಲೇ ?" ಪಾಟಿ ಕೇಳಿದಳು.

ಪೋಸ್ಟ್‌ಮಾಸ್ಟರರು ಒಂದು ತಮಾಷೆ ವಿಷಯ ಕೇಳಿಸಿಕೊಂಡವರ ಹಾಗೆ ಗಟ್ಟಿಯಾಗಿ ನಕ್ಕರು. ನಗು ನಿಂತ ಮೇಲೆ,

"ಪಾಟೀ.... ನಿನಗೆ ಹುಶಾರಿಲ್ಲ ತಾನೆ? ನಾಳೆಯಿಂದ ಬೇರೊಬ್ಬರನ್ನು ಬರುವಂತೆ ಹೇಳಿದ್ದೇನೆ" ಎಂದರು.

"ಅಯ್ಯೋ ಸ್ವಾಮಿ, ಹಾಗೆ ಹೇಳಬೇಡಿ. ನಾನೆಲ್ಲ ಚೆನ್ನಾಗಿ ಜಾಗ್ರತೆಯಿಂದ ಮಾಡುವೆ" ಪಾಟಿ ಅತ್ತುಬಿಟ್ಟಳು.

"ಬೇಡ ಪಾಟಿ, ನೀನಿನ್ನು ಮನೆಗೆ ಹೋಗಿ ಸುಖವಾಗಿ ವಿರಮಿಸಿಕೊ, ಎಂದಾದರೂ ವಿರಮಿಸ ಬೇಡವೇ...." ಪೋಸ್ಟ್‌ಮಾಸ್ಟರರು ಮುಗುಳುನಕ್ಕು ಕೋಣೆಯೊಳಗೆ ಹೋದರು.

ಪಾಟಿಗೆ ತನ್ನ ಕಾಲುಗಳು ನಡುಗುತ್ತಿರುವುದಾಗಿಯೂ, ಯಾರೋ ತನ್ನ ಕೊರಳು ಹಿಡಿದು ಹಿಸುಕುತ್ತಿರುವುದಾಗಿಯೂ ತೋಚಿತು. "ಮುರುಗಾ, ಕಾಪಾಡು" ಎಂದು ಕರೆದು ಹೇಳೋಣ ಎಂದು ತೋಚಿತು. ಆದರೆ ದನಿ ಹೊರಡಲಿಲ್ಲ.

# ಒಂದು ಇಲಿಯ ಕಥೆ

ಮೂಲ (ತೆಲುಗು) : ಡಾ. ರಾವೂರಿ ಭರದ್ವಾಜ
ಅನು : ಬಿ. ಆರ್. ಲಕ್ಷ್ಮಣರಾವ್
ಸ. ರಘುನಾಥ್

"ಹಿಂದೊಂದು ನೊಣ ಮನೆ ಸಾರಿಸ್ತಾ ಸಾರಿಸ್ತಾ ತನ್ನ ಹೆಸರನ್ನೇ ಮರೆತು ಬಿಟ್ಟಿತಂತೆ.... ಹಾಗೆ ಮರೆತು ಹೋಗೋದಿಕ್ಕೆ ನೊಣದ ಕಾರಣಗಳೇನೋ ನೊಣಕ್ಕಿದ್ದವು. ನಿಮ್ಮಮಟ್ಟಿಗೆ ಅಂಥಾ ಯಾವ ಕಾರಣಾನೂ ಇಲ್ಲ. ನಾನು ಏನೇ ಹೇಳಿದರೂ ನಿಮ್ಮ ಕಿವೀವರೆಗೆ ಬರೊಲ್ಲ. ಬಂದರೂ, ಅದನ್ನು ನೀವು ಕಿವಿಗೆ ಹಾಕ್ಕೊಳ್ಳಲ್ಲ. ನಿಮಗೆ ಹೇಳೋದು, ಆ ಗೋಡೆಗೆ ಹೇಳೋದೂ ಎರಡೂ ಒಂದೆ" ಅಂದಳು, ನನ್ನವಳು ಬೇಸರದ ಧ್ವನಿಯಲ್ಲಿ.

"ನೂರು" ಅಂದೆ ಮೆಲ್ಲನೆ.

"ಅದೇನು ?"

"ನೀನೀ ಕಥೆ ಹೇಳಿದ್ದು, ಇದು ನೂರನೇ ಸಲ."

ಅವಳು ನಗಲು ಹೋಗಿ ಸುಮ್ಮನಾದಳು ಅನ್ನಿಸಿತು.

"ಅಂದರೆ ನಾನೆಷ್ಟು ಸಲ ಈ ಕಥೆ ಹೇಳಿದೆ ಅನ್ನೋದನ್ನ ಲೆಕ್ಕ ಇಟ್ಟುಕೊಂಡಿದ್ದೀರಿ ಅಂತಾಯ್ತು." ಒಂದು ಕ್ಷಣಹೊತ್ತು ನನ್ನನ್ನು ನೋಡಿದಳು. "ನಿಮ್ಮಪ್ಪ ಬಿಳಿದೊರೆಗಳೊಂದಿಗೆ ಹೋರಾಡಿ ಸ್ವರಾಜ್ಯ ತಂದರು. ನಿಮ್ಮಣ್ಣ ಕರೀದೊರೆಗಳೊಂದಿಗೆ ಹೋರಾಡಿ ಸ್ವಾತಂತ್ರ್ಯ ತಂದ. ಆದರೂ ಏನು ಬಂತು ಲಾಭ ? ನಾನು ನಿಮ್ಮ ಕೈಲಿ ಒಂದು ಹುಟ್ಟುಮುಂಡೆ. ಇಲೀಬೋನು ತರಿಸಲಾರದೆ ಹೋದೆ" ಅಂದಳು ಸಣ್ಣದಾಗಿ ನಿಟ್ಟುಸಿರಿಟ್ಟು.

ನನ್ನ ಅತ್ತೆಮಾವರದು ದೇಶಭಕ್ತ ವಂಶವೆಂದು, ನಿಮಗೆ ಈಗಾಗಲೇ ಗೊತ್ತಾಗಿರಬೇಕು. ಅಂಥಾ ವಂಶದಲ್ಲಿ ಹುಟ್ಟಿದವರ ಮೈಗೆ ಹತ್ತುವ ಎಲ್ಲಾ ಲಕ್ಷಣಗಳೂ ನನ್ನಾಕೆಗೆ ಹತ್ತಿದೆ. ವಿಚಿತ್ರವೆಂದರೆ, ಇಷ್ಟು ವರ್ಷಗಳಿಂದ ಜೊತೆಗೂಡಿ ಸಂಸಾರ ಮಾಡುತ್ತಿದ್ದರೂ ಆ ಲಕ್ಷಣಗಳಲ್ಲಿ ಯಾವೊಂದೂ ನನ್ನ ಮೈಗೆ ಹತ್ತದ್ದು. ಅದಕ್ಕೆ

ನನಲ್ಲಿ ವಿಷಾದವೂ ಇಲ್ಲ ಅನ್ನಿ. ಅಂದರೆ ಆ ಲಕ್ಷಣಗಳನ್ನು ಒಪ್ಪುವುದೂ ನನ್ನಿಂದ ಸಾಧ್ಯವಾಗುತ್ತಿಲ್ಲ.

ಇಲಿಬೋನು ತರುವುದರಲ್ಲಿ ನನ್ನ 'ಕೈಲಾಗದತನ' ಅನ್ನೋದು ಏನೂ ಇಲ್ಲ. ಆಲಸ್ಯ ಇಲ್ಲವೇ ಇಲ್ಲ. ಘಮಘಮಿಸುವ ತಿಂಡಿಗಳನ್ನು ಬೋನಿನಲ್ಲಿಟ್ಟು, ಅದಕ್ಕಾಗಿ ಬರುವ ಇಲಿಗಳನ್ನು ಆ ಬೋನಿನಲ್ಲಿ ಬೀಳುವಂತೆ ಮಾಡುವುದರಲ್ಲಿ ನನಗೆ ಮೋಸದ ಹೊರತಾಗಿ, ದ್ರೋಹದ ಹೊರತಾಗಿ ಮತ್ತೇನೂ ಕಾಣಿಸುವುದಿಲ್ಲ.

ನಾನು ಮೋಸವರಿಯದ, ದ್ರೋಹವರಿಯದ ನಿಷ್ಕಪಟಿಯೇನಲ್ಲ. ಬುದ್ಧಿವಂತರನ್ನು ಪಲ್ಟಿ ಹೊಡೆಸುವುದರಲ್ಲಿ ಒಂದು ಸ್ಪರ್ಧೆ, ಖುಷಿ ಇರುತ್ತೆಂದೂ ಸಹ ನಾನು ಬಲ್ಲೆ. ನನ್ನ ದೃಷ್ಟಿಯಲ್ಲಿ ಇಲಿಗಳು ಬುದ್ಧಿಶಾಲಿಗಳಲ್ಲ. ಅವು ಹುಚ್ಚು ಮುಂಡೇವು, ಮುಗ್ಧ ಜೀವಿಗಳು. ಅವುಗಳನ್ನು ನೋಡಿ ಕರುಣೆ ತೋರಬೇಕೇ ಹೊರತು ಹಿಡಿದು ಕೊಲ್ಲಬಾರದೆಂಬುದು ನನ್ನ ಉದ್ದೇಶ. ಆ ಮಾತನ್ನೇ ಅವಳಿಗೆ ಹೇಳಿದೆ.

"ನನ್ನ ಮಾತಿಗಿಂತಲೂ, ಆ ಗತಿಗೆಟ್ಟ ಇಲಿಗಳತ್ತ ನೀವು ಯಾಕೆ ವಾಲುತ್ತಿದ್ದೀರೋ ನನಗೆ ಅರ್ಥವಾಗುತ್ತಿಲ್ಲ. ನಾನು 'ಹೌದು' ಅಂದದ್ದನ್ನು ನೀವು 'ಅಲ್ಲ' ಅನ್ನುವುದೇ ದೀಕ್ಷೆ ಮಾಡಿಕೊಂಡಂತೆ ಕಾಣುತ್ತಿದೆ" ಅಂದು ಸಿರಸಿರಗುಟ್ಟಿದಳು.

ಈ ವ್ಯವಹಾರವನ್ನು ಮತ್ತೂ ಮುಂದುವರೆಸುವುದು ಜಾಣತನವಲ್ಲ ಅನ್ನಿಸಿತು. ಹಾಗನ್ನಿಸಿದ್ದರಿಂದ ನಾನೇ ಮೊದಲು ರಾಜಿ ಸಂಭಾಷಣೆಗೆ ಪ್ರಾರಂಭಿಸಿದೆ,

"ನೋಡೆಜಮಾನಿ, ನೀನು ಪ್ರತಿಯೊಂದನ್ನೂ ಭೂತಗನ್ನಡಿಯಿಂದ ನೋಡಬೇಡ. ಆ ಗತಿಗೆಟ್ಟ ಇಲಿಬೋನು ತರದಿರಲು ನನ್ನ ಸೋಮಾರಿತನವೆ ಕಾರಣ. ಮತ್ತೇಂಥದೂ ಇಲ್ಲ. ಸಾಯಂಕಾಲಕ್ಕೆ ನಾನು ಬೋನು ತಂದರೆ ಸರಿತಾನೆ" ಎಂದು ಅವಳ ಮೇಲೆ ಆಣೆ ಪ್ರಮಾಣ ಮಾಡಿದೆ.

"ಅದನ್ನೂ ನೋಡಿಬಿಡ್ತೀನಿ" ಅಂದಳು ನನ್ನ ಮಾತಿನ ಮೇಲೆ ವಿಶ್ವಾಸವಿಲ್ಲದವಳಂತೆ.

ಪರಮೇಶ್ವರನ ಕರುಣಾಕಟಾಕ್ಷದಿಂದಾದರೆ ಏನು, ನನ್ನ ಪೂರ್ವಜನ್ಮದ ಸುಕೃತ ವಿಶೇಷದಿಂದಾದರೆ ಏನು, ಒಟ್ಟಿನಲ್ಲಿ ನಾನು ತಂದ ಇಲಿಬೋನು ನನ್ನಾಕೆಗೆ ಮೆಚ್ಚುಗೆಯಾಯಿತು. ಅದರಲ್ಲಿ ಪಕೋಡ, ಈರುಳ್ಳಿ ಹೋಳು ಇಟ್ಟು ಇಲಿಗಳು ಹೆಚ್ಚು ಓಡಾಡುವ ಮೂಲೆಯಲ್ಲಿಟ್ಟು, ದಿನಾ ಭದ್ರವಾಗಿ ಮುಚ್ಚುತ್ತಿದ್ದ ಬಾಗಿಲನ್ನು ಆ ದಿನ ಓರೆಯಾಗಿ ತೆರೆದಿಟ್ಟು - ಇಷ್ಟು ದಿನಕ್ಕೆ ತನ್ನ ಹಠ ನೆರವೇರಿದ್ದಕ್ಕೆ ಸಂತಸಪಟ್ಟು, ನಿದ್ದೆಗೆ ಉಪಕ್ರಮಿಸಿದಳು.

ಕ್ಷಮಿಸಿ !

ನನಗೋ ನಿದ್ದೆ ಹತ್ತಿ ಬರಲಿಲ್ಲ. ಯಾವ ಕ್ಷಣದಲ್ಲಾದರೂ ಇಲಿ ಬೋನಿನಲ್ಲಿ ಸಿಕ್ಕಿಕೊಳ್ಳುವುದೆಂಬ ಭಯ ನನ್ನನ್ನು ಆಪಾದಮಸ್ತಕ ನಡುಗಿಸುತ್ತಿದೆ. ಇರುವೆ

ಸುಂಯುಕ್ ಅಂದರೂ ನನ್ನ ಪ್ರಾಣ ಹಾರಿ ಬೀಳುತ್ತಿದೆ. ಒಂದಾನೊಂದು ಕ್ಷಣದಲ್ಲಿ ಆ ಬೋನಿನಲ್ಲಿ ಕೀಲಂ ತಪ್ಪಿಸುವುದೋ, ಇಲ್ಲ, ಇಲಿಗಳು ಒಳತೂರದಂತೆ ಬಾಗಿಲುಗಳನ್ನು ಮುಚ್ಚುವುದೊ ಮಾಡದಿರುವುದು ನನ್ನಿಂದ ಅಸಾಧ್ಯವೆನ್ನಿಸತೊಡಗಿತು.

"ನೀವು ಇಲ್ಲಿಗೆ 'ಬರೊಲ್ಲವೇನೋ' ಅಂದುಕೊಂಡೆ. ಬರದಿದ್ದರೆ ಏನು ಮಾಡಬೇಕೆಂದೂ ತಿಳಿಯಲಿಲ್ಲ. ನಿಮ್ಮನ್ನು ಪಕ್ಕಕ್ಕೆ ಕರೆಯೋದು ಹೇಗೆಂದೂ ಗೊತ್ತಾಗದೆ, ಇಷ್ಟು ಹೊತ್ತೂ ಒದ್ದಾಡುತ್ತಿದ್ದೆ. ಅದೃಷ್ಟ ನೀವೇ ಬಂದಿರಿ."

ಅದು ಹೊಸಧ್ವನಿ. ನನಗೆ ಅಷ್ಟು ದೂರದಿಂದ ಪಿಸುಗುಟ್ಟಿದಂತೆ ಕೇಳಿಸಿತು. ಕಣ್ಣು ಕಿರಿದು ಮಾಡಿ ನೋಡುತ್ತಿದ್ದೆ.

"ನಾನಿಲ್ಲಿದ್ದೀನಿ. ಸ್ವಲ್ಪ ಬಗ್ಗಿ ನೋಡದ ಹೊರತು ಕಾಣಿಸೊಲ್ಲ. ಭಯ ಪಡಬೇಡಿ.... ಕಳೆದವಾರ - ಹತ್ತು ದಿನಗಳಿಂದ ನಿಮ್ಮಾಕೆಗೆ ಕಣ್ತುಂಬ ನಿದ್ದೆಯಿಲ್ಲ. ನಮ್ಮನ್ನ ಹಿಡ್ಕೊಳ್ಳೋಕೆ ನೀವು ತಂದ ಹೊಸತಾದ ಬೋನನ್ನು ನೋಡಿದ ಮೇಲೆ ಅವರು ಮೈಮರೆತು ನಿದ್ದೆ ಮಾಡ್ತಿದ್ದಾರೆ" ಅಂದಿತು ಇಲಿ, ಸ್ವಲ್ಪ ಎಗಸೆಕ್ಕೆಯಿಂದ.

ಕೊಲೆ ಮಾಡುವುದಕ್ಕೆ ಒಂದು ನಿಮಿಷ ಮುಂಚಿತವಾಗಿ, ಸಿಕ್ಕಿಕೊಂಡ ಕೊಲೆಗಾರನಂತೆ ನಾನು ಇಲಿಗೆ ಸಿಕ್ಕಿಬಿದ್ದಿದ್ದೆ.

"ಹೀಗೆ ಒಳಕ್ಕೆ ಬಾ. ಪಕ್ಕದ ರೂಮಲ್ಲಿ ನನ್ನ ಹೆಂಡ್ತಿ ಇದ್ದಾಳೆ. ಅನಗತ್ಯವಾಗಿ ಅವಳ ನಿದ್ದೇನ ಹಾಳು ಮಾಡೋದೇಕೆ ? ಇಲ್ಲಾದರೆ ಬಾಗಿಲುಗಳನ್ನು ಕೂಡ ಮುಚ್ಚಿಕೊಂಡು ನಾವು ಸ್ವೇಚ್ಛೆಯಿಂದ ಮಾತಾಡಿಕೋಬಹುದು" ಅಂದೆ ಮೆಲುಧ್ವನಿಯಲ್ಲಿ.

ಇಲ್ಲಿ ಘೊಳ್ಳಾರನೆ ನಕ್ಕಿತು. ಒಂದೇ ನೆಗೆತಕ್ಕೆ ಒಳಕ್ಕೆ ಬಂದು, ಎದುರಿನಲ್ಲಿದ್ದ ಸಿಮೆಂಟು ಕಟ್ಟೆಯ ಮೇಲೆ ಕುಳಿತುಕೊಂಡಿತು. ನಾನು ಕುರ್ಚಿಯಲ್ಲಿ ಕುಳಿತೆ.

"ನನ್ನ ಹೆಂಡ್ತಿ ಆ ರೂಮಲ್ಲಿದ್ದಾಳೆಂದು, ಅವಳ ನಿದ್ದೆ ಹಾಳುಮಾಡೋದೇಕೆಂದು, ನಾನು ಅಂದಕೂಡಲೇ ನೀನು ಘೊಳ್ಳಾರನೆ ನಕ್ಕಿದ್ದು ಯಾಕೆ ? ಅವಳಿಗೆ ನಾನು ಭಯ ಪಡ್ತಿದ್ದೀನೀಂತ, ಅದಕ್ಕೇ ಹಾಗಂದೆ ನಾನು ಅಂತ ನಿನ್ನ ಅನುಮಾನ. ನೀನು ನಕ್ಕಿದ್ದೂ ಅದಕ್ಕೇಂತ ನನ್ನ ಅನುಮಾನ. ಹೌದಾ ?"

"ಅಯ್ಯೋ, ಅದೇನಲ್ಲ !" ಅಂದಿತು ಇಲಿ - ಆಶ್ಚರ್ಯಗೊಂಡು. "ನೀವು ನಿಮ್ಮ ಹೆಂಡ್ತಿಗೆ ಭಯ ಪಡೋದು, ಅವರು ನಿಮಗೆ ಭಯಪಡೋದು ನಿಮ್ಮ ವ್ಯಕ್ತಿಗತ ಸಮಸ್ಯೆಗಳು. ಅದರಲ್ಲಿ ನಗಲು ಅಂಥಾದ್ದೇನೂ ಇಲ್ಲ. ನಾನು ನಕ್ಕಿದ್ದೇಕೆಂದರೆ, 'ಸ್ವೇಚ್ಛೆಯಿಂದ ಮಾತಾಡಬಹುದು' ಅಂತ ನೀವಂದದ್ದಕ್ಕೆ. ಸಮಾನ ಘಾಯದೆ ಉಳ್ಳೋರು ಮಾತ್ರವೇ ಸ್ವೇಚ್ಛೆಯಿಂದ ಮಾತಾಡಿಕೊಳ್ಳಬಲ್ಲರು. ಹೆಚ್ಚು ಕಡಿಮೆ ಅನ್ನೋದು ಯಾವ ರೂಪದಲ್ಲೇ ಆಗಲಿ, ಯಾವ ಇಬ್ಬರ ನಡುವೆ ಇದ್ದರೂ ಅಲ್ಲಿ ಸ್ವೇಚ್ಛೆ ಅನ್ನೋದು ಸತ್ತೇ ಹೋಗಿರುತ್ತೆ. ಬಲವಂತರು ಹೇಳ್ತಾರೆ, ಅಬಲರು ಕೇಳ್ತಾರೆ. ಬಲವಂತರು ಆಜ್ಞೆ ಮಾಡ್ತಾರೆ, ಬಲಹೀನರು ವಿನಯದಿಂದ ಅದನ್ನು ಪಡೀತಾರೆ. ಇಲ್ಲಿ ಸ್ವೇಚ್ಛೆಗೆ ಜಾಗವೇ ಇಲ್ಲ. ನೀವು ಬಲವಂತರು. ನನಗೆ ಬಲ

ವಿಲ್ಲ. ನೀವು ಹೇಳ್ತೀರಿ, ನಾನು ಕೇಳ್ತೀನಿ. ಆದ್ದರಿಂದ ನಾವು ಸ್ವೇಚ್ಛೆಯಾಗಿ ಮಾತಾಡಿಕೊಳ್ಳೋದು ಅನ್ನೋದು ಅಕ್ಷರಕ್ಷರ ಸುಳ್ಳೇ."

ಯಕ್ಕತ್ತಿನ ಸ್ವಲ್ಪ ಕೆಳಕ್ಕೆ ಗುಬಿಲ್ಲೆಂದು ಹೊಡೆತ ತಿಂದಂತೆ ತಲೆ ಗಿಮ್ಮೆಂದಿತು. ಆ ಸ್ಥಿತಿಯಿಂದ ಹೊರಬರಲು ನನಗೆ ಸ್ವಲ್ಪ ಕಾಲಾವಕಾಶ ಬೇಕಾಯಿತು.

"ನನ್ನವಳ ಕಿರುಕುಳ ತಡೀಲಾರದೆ ನಾನು ಬೋನು ತಂದದ್ದು ಕಣಯ್ಯ. ಅದರಲ್ಲಿ ಘಮ್ಮನ್ನೊ ಏನನ್ನೋ ಇಟ್ಟು, ನೀವು ಓಡಾಡೋ ಜಾಗದಲ್ಲಿ ಬೋನು ಇಟ್ಟದ್ದು ನನ್ನ ಹೆಂಡ್ತಿ. ಅದು ತಿಳೀದೆ ನೀವು ಆ ಬೋನಿನಲ್ಲಿ ಎಲ್ಲಿ ಸಿಕ್ಕಿಕೊಂಡು ಸಾಯ್ತೀರೋ ಅನ್ನೋ ಭಯ ನನ್ನದು. ಹಾಗೆ ಸಾಯದಂತೆ ಸಹಾಯ ಮಾಡೋಣಾಂತ ಬರ್‍ತಿದ್ದೆ. ಅಷ್ಟರಲ್ಲಿ ನೀನೇ ಎದುರಾದೆ" ಅಂದೆ.

ನಾನು ಈ ಮಾತು ಹೇಳುತ್ತಿದ್ದಷ್ಟು ಹೊತ್ತೂ ಇಲಿ ನನ್ನ ಮುಖದತ್ತ ಪರಿಶೀಲನಾ ದೃಷ್ಟಿ ನೆಟ್ಟಿತು.

"ನಿಮಗೆ ಸಾವೆಂದರೆ ಭಯಾನಾ ? ಇಲ್ದೆ ಹೋದ್ರೆ ನನ್ನಂಥ ಅಲ್ಪ ಜೀವಿಗಳು ಸಾಯುವುದೆಂದರೆ ಮಾತ್ರ ಭಯಾನೋ ? ಅಂದಿತು ಇಲಿ, ಕುಪ್ಪೆ ಕೆದಕುವ ಧೋರಣೆಯಲ್ಲಿ.

"ಸಾವೂಂದ್ರೆ ಭಯವಿಲ್ಲ - ಅದು ಸಹಜವಾದ್ದಾದಲ್ಲ. ಇಲ್ಲಿ ನಡೀತಿರೋದೇನೂಂದ್ರೆ ನಿನಗೆ ಬೇಕಾದ ತಿಂಡೀನ ಬಲಿಯಾಗಿ ಹಾಕಿ, ನಿನ್ನ ಮೋಸಮಾಡಿ, ದ್ರೋಹ ಮಾಡಿ, ಬೋನಿನಲ್ಲಿ ಇರುಕಿಸಿ, ಕೊಲ್ತಿದ್ದೀವಿ. ಮೋಸದಿಂದ ತುಂಬಿದ ಈ ಥರದ ಕೊಲೆಯೆಂದರೆ ನನಗೆ ಅಸಹ್ಯ. ಆದಕ್ಕೇ - ಈ ಗುಟ್ಟನ್ನು ಬಚ್ಚಿಟ್ಕೊಳ್ಳೋಕಾಗದೆ - ನಿನ್ನನ್ನ ಬಿಡಿಸೋಣಾಂತ ಬಂದರೆ...." ಇಲಿ ಅದೊಂದು ಥರದಲ್ಲಿ ನನಗೆ ನಮಸ್ಕಾರ ಮಾಡಿತು.

"ನೀವಂದ ಮಾತುಗಳೆಲ್ಲ ನಿಜವೇ ಆದರೆ ನಿಮ್ಮಲ್ಲಿನ ದಯೆಗೆ ಎಷ್ಟು ಬಾರಿ ಕೃತಜ್ಞತೆ ಹೇಳಿದರೂ ಕಡಿಮೆಯೆ.... ನೀವು ನನ್ನನ್ನು ಕ್ಷಮಿಸುತ್ತೀನಿ ಅಂದರೆ ಒಂದು ಮಾತು ಹೇಳುವೆ. ನೀವಂದದ್ದರಲ್ಲಿ ನನಗೆ ನಟನೆ ಕಾಣಿಸುತ್ತಿದೆಯೆ ಹೊರತು, ನಿಯತ್ತು ಕಾಣಿಸ್ತಾ ಇಲ್ಲ. ಯಾಕೆಂದರೆ - ತಿಂಡಿಯ ಬಲಿ ತೋರಿಸಿ, ಇಲಿಗಳನ್ನ ಮೋಸಮಾಡಿ ಕೊಲ್ಲುತ್ತಿರೊ ವಿಧಾನಾನ ನೀವು ಭರಿಸಲಾಗದೆ ಹೋಗುತ್ತಿದ್ದೇನೆ ಅಂತಿದ್ದೀರಿ, ನೀವು. ಇದಕ್ಕೂ ಭಯಂಕರವಾದ ಬಲಿಗಳನ್ನು ತೋರಿಸಿ ಅಸಂಖ್ಯಾತರಾದ ಮಾಮೂಲು ಮನುಷ್ಯರನ್ನ, ಅಲ್ಪಸಂಖ್ಯಾತರಾದ ಕೆಲವುಂದಿ ಬುದ್ಧಿವಂತರು ಮೋಸಮಾಡುತ್ತಿದ್ದಾರೆ. ಅವರಿಗೆ ದ್ರೋಹ ಮಾಡುತ್ತಿದ್ದಾರೆ. ಅವು ಕಾಣದಂತೆ ನಡುನಡುವೆ ಪ್ರಜಾಸ್ವಾಮ್ಯ ಅಂತಿದ್ದಾರೆ, ಸಮತಾವಾದ ಅಂತಿದ್ದಾರೆ. ಕೆಳವರ್ಗದಿಂದ ಪ್ರಗತಿ ಅಂತಿದ್ದಾರೆ. ಇವೆಲ್ಲ ಘಮಘಮಿಸುವ ಬಲಿಗಳೇ ಅಲ್ಲವ ? ಇವನ್ನು ಪದೇಪದೆ ಊದಿಊದಿ ಬಹು ಸಂಖ್ಯಾತರನ್ನು ಮೋಸ ಮಾಡುತ್ತಿಲ್ಲವ ? ಈ ಮೋಸದ ಬಲೇನಲ್ಲಿ, ದ್ರೋಹದ ರಂಗಲ್ಲಿ ಸಿಕ್ಕಿಕೊಂಡು ಗಿಲಗಿಲ ಅಂತಿರೋರನ್ನ

ಕುರಿತು ನೀವು ವಿಷಾದಗೊಂಡ ದಾಖಲೆ ನನಗೆಲ್ಲೂ ಕಾಣುತ್ತಿಲ್ಲ. ಅನ್ನಕ್ಕಾಗಿ ಕಳ್ಳತನ ಮಾಡ್ತಾ ಇರೋದು, ಮೈಮಾರಿಕೊಳ್ತಾ ಇರೋರು, ಭಿಕ್ಷೆಬೇಡ್ತಾ ಇರೋರು, ಕೊಲೆ ಮಾಡ್ತಾ ಇರೋರು, ಹಾಗೆ ಮಾಡಿದರೂ ಹೊಟ್ಟೆ ತುಂಬದೆ ಹಸಿದು ಹಸಿದು ಸಾಯ್ತಾ ಇರೋರು, ಆತ್ಮಹತ್ಯೆ ಮಾಡಿಕೊಳ್ತಾ ಇರೋರು ನೀವು ಎತ್ತ ಕಡೆ ನೋಡಿದರೂ ಕಾಣಿಸುತ್ತಾರೆ. ಅವರ ಮೇಲೆ ನೀವು ಕರುಣೆ ತೋರಿಸಿದೀರಾ ? ಅವರನ್ನ ಆ ಬೋನಿನಿಂದ ತಪ್ಪಿಸಲು ಏನಾದರೂ ಪ್ರಯತ್ನ ಮಾಡಿದ್ದೀರಾ ?"

ಅದರ ಧೋರಣೆ ಕಂಡಮೇಲೆ, ದಾರಿಯಲ್ಲಿ ಹೋಗೋ ಹೆಣಾನ ನೆತ್ತಿಗೆ ಏರಿಸಿಕೊಳ್ಳೋದು ಅಂದರೆ ಇದೇ ಏನೋ ಅನ್ನಿಸಿತು.

"ಅಂದರೆ, ನಿನ್ನನ್ನು ಬಿಡಿಸಬೇಕು ಅಂದುಕೊಂಡಿದ್ದೇ ನನ್ನ ದೋಷ ಅಂತೀಯಾ?" ಅಂದೆ - ಬಹಳ ಬೇಸತ್ತು.

"ನೀವು ಇನ್ನೊಂದು ಬಾರಿ ನನ್ನ ಕ್ಷಮಿಸಬೇಕು. 'ನನ್ನ ಬಿಡಿಸೋದು ದೋಷ' ಅಂತ ನಾನು ಹೇಳುತ್ತಿಲ್ಲ. ವಿಧವಿಧವಾದ ಬಲೆಗೆ ಆಸೆಪಟ್ಟು ಅನೇಕ ವಿಧಗಳ ಬೋನುಗಳಲ್ಲಿ ಇರುಕಿಕೊಳ್ಳುತ್ತಿರೊ ಮನುಷ್ಯರನ್ನು ಗಮನಿಸದೆ ಹೋದದ್ದು ತಪ್ಪೂಂತ ಹೇಳುವುದಷ್ಟೆ ನನ್ನ ಉದ್ದೇಶ. ಮತ್ತೆ ನಿಮಗೆ ತಿಳಿದಷ್ಟು ಜನ ಸ್ವಭಾವಗಳು ನನಗೆ ತಿಳಿಯವು. ನನ್ನ ಹುಚ್ಚು ಧೋರಣೆಯಲ್ಲಿ ಹೇಳಿ, ನಿಮಗೆ ಬೇಸರ ವುಂಟುಮಾಡಿರಬಹುದು" ಎಂದು ತಲೆ ಚಚ್ಚಿಕೊಂಡಿತು. "ನಾನೂ ಬೋನಿನಲ್ಲಿ ಸಿಗಾಕಿಕೊಳ್ತೀನಿ ಅನ್ನೋ ಭಯ ನಿಮಗೆ. ಒಂದು ವೇಳೆ ಸಿಗಾಕಿಕೊಂಡಿದ್ದರೆ, ನನ್ನನ್ನು ಬಿಡಿಸಿ, ಒಂದೊಳ್ಳೆ ಕೆಲಸ ಮಾಡಿದೆ ಅನ್ನೋ ತೃಪ್ತಿ ಪಡೆಯೋಣಾಂತ ನೀವು ಆಸೆ ಪಟ್ಟಿರಿ. ನಾನೇನೋ, ಆ ಬೋನಿನಲ್ಲಿ ಸಿಗಾಕಿಕೊಳ್ಳದೆ, ನೇರವಾಗಿ ನಿಮ್ಮ ಹತ್ತಿರಕ್ಕೆ ಬಂದು. ನಿಮಗಾ ತೃಪ್ತಿ ಸಿಗದಂತೆ ಮಾಡಿ, ನಿಮಗೆ ನೋವುಂಟುಮಾಡಿದೆ. ನಿಮ್ಮಂಥ ಒಳ್ಳೇರನ್ನು ಹಾಗೆ ನೋಯಿಸಬಾರದು. ಆದ್ದರಿಂದ ಆ ಬೋನಿನ ಹತ್ತಿರಕ್ಕೆ ಹೋಗೋಣ ನಡೀರಿ. ನಾನು ಅದರೊಳಕ್ಕೆ ಹೋಗ್ತೀನಿ. ಆಮೇಲೆ ನೀವು ನನ್ನನ್ನು ಬಿಡುಗಡೆ ಮಾಡಿ ತೃಪ್ತಿ ಪಡೆಯುವಿರಂತೆ."

ಇಬ್ಬರೂ ಬೋನಿನ ಹತ್ತಿರಕ್ಕೆ ಬಂದೆವು.

ಯಾವ ಅನುಮಾನವೂ ಇಲ್ಲದೆ ಇಲಿ ಬೋನಿನೊಳಕ್ಕೆ ಹೋಯಿತು. ನಾನು ಬೋನಿನ ಬಾಗಿಲನ್ನು ಅತ್ತಇತ್ತ ಅಲುಗಿಸಿ ನೋಡಿದೆ.

"ಇನ್ನು ನನ್ನನ್ನು ಬಿಡುಗಡೆ ಮಾಡಿ, ತೃಪ್ತಿಪಡಿ ಸ್ವಾಮಿ" ಅಂದಿತು ಇಲಿ - ಮಿಂಚು ಕಣ್ಣುಗಳಿಂದ.

ಬೋನಿನ ಬಾಗಿಲು ಸ್ವಲ್ಪವೂ ತೆರೆದುಕೊಳ್ಳದೆಂದು ದೃಢನಂಬಿಕೆ ಉಂಟಾದ ಮೇಲೆ, ಬೋನನ್ನು ಅಲ್ಲಿಯೇ ಬಿಟ್ಟು ಕೋಣೆಯ ಬಾಗಿಲು ಹಾಕುತ್ತಿದ್ದಾಗ –

"ಅದೇನು ?" ಅಂದಿತು ಇಲಿ ಚೀರುತ್ತ.

"ಅದಷ್ಟೆ!" ಅಂದೆ.

ಇಲಿ – ಒಂದು ನಿಮಿಷ – ಒಂದೇ ನಿಮಿಷ ನನ್ನನ್ನು ದುರುಗುಟ್ಟಿ ನೋಡಿತು.

"ನಿಮಗೆ ರುಚಿಸದ ಸತ್ಯಾನ, ಇಷ್ಟಪಡದ ರೀತೀಲಿ ಹೇಳಿದನೆಂದು ನಾನು ತಡವಾಗಿ ಗ್ರಹಿಸಿದೆ, ಈ ತಪ್ಪು ನನ್ನದೆ, ನಾನು ಬೋನಿನೊಳಗೆ ಹೋದ ಮೇಲೆ ನೀವು ಬಿಡುಗಡೆ ಮಾಡುವುದಿಲ್ಲ ಅನ್ನುವ ಅನುಮಾನ ನನಗೆ ಬರಬೇಕಿತ್ತು. ಬರಲಿಲ್ಲ. ಹಾಗೆ ಬರದೆ ಹೋದದ್ದೂ ನನ್ನ ತಪ್ಪೆ. ನಿಮ್ಮ ಮೋಸಕ್ಕೆ, ದ್ರೋಹಕ್ಕೆ ಒಳಗಾಗಿ, ನನ್ನವರೆಲ್ಲರೂ ಒಟ್ಟಾಗಿ ಬೋನಿನಲ್ಲಿ ಸಿಗಾಕಿಕೊಳ್ಳದೆ – ನಾನು ಮಾತ್ರವೆ ಸಿಗಾಕಿಕೊಂಡು, ಉಳಿದೋರನ್ನ ಉಳಿಸುವಂತಾಯಿತು. ಅದೊಂದೆ ನನಗೆ ಇದರಲ್ಲಿ ಸಿಕ್ಕಿದ ಸಂತೃಪ್ತಿ. ಮನುಷ್ಯರಲ್ಲಿ ಎಂತೆಂಥ ವಿಶ್ವಾಸಘಾತಕರೂ, ನಂಬಿಕೆ ದ್ರೋಹಿಗಳೂ, ನಯವಂಚಕರೂ ಇರುತ್ತಾರೆ ಎಂದು ನಮ್ಮವರು ಈಗಲಾದರೂ ಪ್ರತ್ಯಕ್ಷವಾಗಿ ತಿಳಿದುಕೋತಾರೆ. ನನ್ನನ್ನು ನೋಡಿಯಾದರೂ ಅವರು ಪಾಠ ಕಲಿತುಕೋತಾರೆ...."

ನಾನು ಇನ್ನೂ ಅಲ್ಲಿಯೇ ಇದ್ದರೆ, ಅದು ಎಂತೆಂಥ ದುಷ್ಟ ಮಾತುಗಳನ್ನಾಡುತ್ತಿತ್ತೋ ನನಗೆ ಗೊತ್ತಿಲ್ಲ. ತಿಳಕೋಬೇಕೆಂದು ಕೂಡ ನನಗನ್ನಿಸಲಿಲ್ಲ. ಅದಕ್ಕೇ ಬಾಗಿಲು ಹಾಕಿಕೊಂಡು ಹೊರಬಂದೆ.

ಈಗ ಆ ಇಲಿಯ ಮೇಲೆ ನನ್ನಲ್ಲಿ ರವೆಯಷ್ಟೂ ಕರುಣೆ ಇಲ್ಲ.

ಯಾಕಿರುತ್ತೆ ?

ಇದು ಇಲಿ !

ನಾನು ಮಾನವ !!

# ಚಿರತೆ

ಮೂಲ (ಹಿಂದಿ) : ಭೀಷ್ಮ ಸಾಹನಿ
ಅನು : ಡಿ. ಎಸ್. ಶ್ರೀನಾಥ್

ಆ ಸ್ಥಳ ನಗರದಿಂದ ಆರೇಳು ಮೈಲಿ ದೂರದಲ್ಲಿರಬಹುದು. ಅದು ರಸ್ತೆಯಿಂದ ಸ್ವಲ್ಪ ದೂರಕ್ಕೆ ಸರಿದು ನಗರದಿಂದ ಬೆಟ್ಟದೆಡೆಗೆ ಹಾಯ್ದು ಹೋಗಿತ್ತು. ಆ ಸ್ಥಳವನ್ನು ನೆನೆದಾಗ ಮನಸ್ಸಿನಲ್ಲಿ ಆತಂಕ ಆವರಿಸಿಕೊಳ್ಳುತ್ತದೆ. ಅಲ್ಲಿನ ನಿಶ್ಶಬ್ದತೆ, ಮೌನ... ಅದೊಂದು ವಿಚಿತ್ರ ಸ್ಥಳವಾಗಿತ್ತು.

ನಗರದಿಂದ ಬಂದಾಗ ಸ್ವಲ್ಪವೇ ದೂರದಲ್ಲಿ ಬಲಗಡೆಗೆ ಒಂದು ಚಿಕ್ಕ ಹಳ್ಳಿ. ಸಮಾನಾಂತರ ಛಾವಣಿಗಳ ಮಣ್ಣಿನ ಮನೆಗಳು-ಪ್ರೊದೆಯಂತೆ. ಈ ಹಳ್ಳಿಯನ್ನು ದಾಟಿದ ಮೇಲೆ, ಸ್ವಲ್ಪ ಮುಂದಕ್ಕೆ, ಕಾಲುದಾರಿಯೊಂದು ಬಲಗಡೆಗೆ ಹಾಯ್ದು ಹೋಗಿತ್ತು. ಈ ಹಾದಿ ನೇರವಾಗಿ ಆ ಸ್ಥಳಕ್ಕೆ ಕರೆದೊಯ್ಯುತ್ತಿತ್ತು. ಬೆಟ್ಟಗಳಿಂದ ಹರಿಯುವ ಝರಿಗಳು, ಹಳ್ಳದಿಣ್ಣೆಗಳ ನೆಲದಲ್ಲಿ ಹರಿಯುತ್ತಾ, ಅಲ್ಲಿಯ ಕಪ್ಪು-ಕಪ್ಪು ಎತ್ತರದ ಬಂಡೆಗಳ ಮಧ್ಯೆ ಕಳೆದುಹೋಗಿದ್ದವು : ಅಲ್ಲದೆ ತಗ್ಗಿನಲ್ಲೇ ತಮ್ಮ ಹಾದಿಗಳನ್ನು ಮಾಡಿಕೊಳ್ಳುತ್ತಾ, ಸ್ವಲ್ಪ ದೂರದಲ್ಲಿ ಒಂದು ಚಿಕ್ಕ ಕೆರೆಯನ್ನು ನಿರ್ಮಿಸಿಕೊಂಡಿದ್ದವು. ಕಾಲುದಾರಿ, ಎರಡು ಎತ್ತರದ ಬಂಡೆಗಳ ಮಧ್ಯೆಯಿಂದ ಹಾಯ್ದು ಕೆರೆಯನ್ನು ಮುಟ್ಟಿತ್ತು. ಇಲ್ಲೇ ಪ್ರಪ್ರಥಮವಾಗಿ ದಟ್ಟ ನಿಶ್ಶಬ್ದತೆಯ ಭಾಸವಾಗುತ್ತಿತ್ತು. ಎತ್ತರೆತ್ತರದ ಮರಗಿಡಗಳು ಮತ್ತು ಬೆಟ್ಟಗಳಿಂದಾವರಿಸಿದ ಈ ಕೆರೆಯನ್ನು ನೋಡಿ ಮನಸ್ಸು ಆಶ್ಚರ್ಯಗೊಳ್ಳುವುದರೊಂದಿಗೆ, ಆ ಕೆರೆಯಲ್ಲಿ ಧುಮುಕಲೂ ಮನಸ್ಸಾಗುತ್ತಿತ್ತು. ಅದು ಅಂಥಾ ಜಾದೂ ಸ್ಥಳವಾಗಿತ್ತು. ನಸುಕಿನಲ್ಲಿ ಮುಳುಗಿದ ಶಾಂತತೆ, ಸ್ಥಿರ ಜಲ-ರಾಶಿ ತುಂಬಾ ಅಲೌಕಿಕವಾಗಿ ತೋರುತ್ತಿತ್ತು. ಕೆಲವು ಜಾಗಗಳನ್ನು ಕಂಡೊಡನೆಯೇ ನಾವು ದೇಶ ಮತ್ತು ಕಾಲದಿಂದ ಕಳಚಿಕೊಂಡು, ಎಲ್ಲಿಗೋ ತಲುಪಿಬಿಟ್ಟಿದ್ದೇವೆಂದು ಅನ್ನಿಸಿಬಿಡುತ್ತದೆ. ಈ ಸ್ಥಳವೂ ಹಾಗಿತ್ತು. ಆಕರ್ಷಕವಾಗಿಯೂ ಇತ್ತು, ಭೀಷಣವಾಗಿಯೂ ಇತ್ತು.

ಆದರೆ, ಒಂದು ವೇಳೆ ಆ ಸ್ಥಳ ವಿಶೇಷತೆಯ ಬಗ್ಗೆ ಯೋಚಿಸದೆ, ಆ ಪೂರ್ಣ ನೋಟದೆಡೆಗೆ ದೃಷ್ಟಿ ಹರಿಸಿದರೆ, ಅಂಥಾ ಸುಂದರ ದೃಶ್ಯ ತುಂಬಾ ವಿರಳ, ಪೃಷ್ಠ ಭೂಮಿಯಲ್ಲಿ ನಿಂತ, ಕಾಚಿನ ಬಣ್ಣದ ಎತ್ತರದ ಬೆಟ್ಟಗಳು ಒಮ್ಮೆ ಆಕಾಶದ ಬಣ್ಣ ವನ್ನು ಹೊದ್ದುಕೋಂಡರೆ, ಮತ್ತೊಮ್ಮೆ ಕಂದು ಬಣ್ಣವನ್ನು ಹೊದ್ದುಕೊಳ್ಳುತ್ತಿದ್ದವು. ಬೆಟ್ಟಗಳ ತಗ್ಗು ಭೂಮಿಯಲ್ಲಿ ಹಸಿರು ಪೊದೆಗಳು, ದಟ್ಟ ಮರಗಿಡಗಳು. ಕೆಳಗಿಳಿದು ಬಂದರೆ ಎಲ್ಲೆಲ್ಲೂ ಝರಿಗಳು–ಬೆಟ್ಟಗಳ ಗರ್ಭದಿಂದ ಹೊರಬಂಧ ಶೀತಲ ಸ್ವಚ್ಛ ಝರಿಗಳು ! ಪರ್ವತಗಳ ಅಂಚಿನಲ್ಲಿ ಹಣ್ಣುಗಳ ತೋಟ. ತೋಟದಲ್ಲಿ ಚಿಲಿಪಿಲಿ ಗುಟ್ಟುವ ಹಕ್ಕಿಗಳ ಅನವರತ ಕಲರವ. ಮೇಲೆ ಸ್ವಚ್ಛ, ವಿಸ್ತಾರದ ನೀಲಾಕಾಶ !

ಆದರೆ ಈ ಸ್ಥಳ ಆ ದೃಶ್ಯಾವಳಿಯ ಅಂಗವಾಗಿದ್ದು, ಅದರಿಂದ ಭಿನ್ನವೂ ಆಗಿತ್ತು.

ಕೆರೆ ಚಿಕ್ಕದಾಗಿದ್ದು, ಅದರ ಮಧ್ಯದಲ್ಲಿ ಬಂಡೆಯೊಂದು ತಲೆಯೆತ್ತಿ ನಿಂತಿತ್ತು. ನೀರಿನ ಬಣ್ಣ ಹಸಿರಾಗಿದ್ದು, ಕೆರೆಯ ಆಚೆಯ ಭಾಗ ಎತ್ತರದ ಬಂಡೆಗಳು ಮತ್ತು ಮರಗಳಿಂದಾವೃತ್ತವಾಗಿತ್ತು. ಹೀಗಾಗಿ ಅಲ್ಲಿ ಹಗಲೂ, ನಸುಕು ಕವಿದಿರುವಂತೆ ತೋರುತ್ತಿತ್ತು. ನೀರಿನ ಮೇಲ್ಮೈಯಲ್ಲಿ ಹುಲ್ಲು–ಗರಿಗಳು ಅಸ್ತವ್ಯಸ್ತವಾಗಿದ್ದು, ಕೆರೆಯ ತಳದಿಂದಲೇ ಬೆಳೆದು ಮೇಲಕ್ಕೆ ಬಂದು ಬಿಟ್ಟಿದ್ದವು. ಮೇಲ್ಮೈಯಲ್ಲಿ ಮಂದ ಅಲೆಗಳು ಮೂಡುತ್ತಿತ್ತು. ಚಿಟ್ಟೆಯೊಂದು ನೀರಿನ ಮೇಲ್ಮೈಯಲ್ಲಿ ಕೂತರೂ ಇಡೀ ಕೆರೆಯಲ್ಲಿ ಸುಳಿಯಾಕಾರದ ಗಾತ್ರ ವಿಶಾಲಗೊಳ್ಳುತ್ತಾ ಲೀನವಾಗಿಬಿಡುತ್ತಿತ್ತು.

ಕೆರೆಯ ಮಧ್ಯದಲ್ಲಿ ತಲೆಯೆತ್ತಿ ನಿಂತ ಬಂಡೆ ತುಂಬಾ ಅಸಂಬದ್ಧವಾಗಿ ಕಾಣು ತ್ತಿತ್ತು. ಮರಗಳಿಂದಾವೃತಗೊಂಡ ಕೆರೆಯ ಹಿಂಭಾಗ ಆಕರ್ಷಕವಾಗಿದ್ದಷ್ಟೇ ರಹಸ್ಯ ಮಯವಾಗಿಯೂ ಮತ್ತು ಅಲೌಕಿಕವಾಗಿಯೂ ತೋರುತ್ತಿತ್ತು. ಪೌರಾಣಿಕ ಕಥೆಗಳ ಪಾತ್ರಧಾರಿಗಳು ಇಂಥಾ ಸ್ಥಳಗಳಲ್ಲೇ ವಿಹರಿಸುತ್ತಿರಬೇಕು. ಅವರು, ಇದೀಗ ತಾನೇ ನಿಮ್ಮ ಹೆಜ್ಜೆಗಳ ಸದ್ದಿಗೆ ಅಲ್ಲಿಂದ ಕಾಲುತೆಗೆದಿರಬೇಕೆಂದು ಅನ್ನಿಸುತ್ತಿತ್ತು. ನೀರಿನ ಕತ್ತಲು–ಮೇಲ್ಮೈಯಲ್ಲಿ ಕಾಡು ಹೂಗಳು–ಎಲೆಗಳು ತೇಲುತ್ತಿದ್ದವು. ಚಿಕ್ಕ–ಚಿಕ್ಕ ಸುಳಿಗಳುಂಟಾಗುತ್ತಿತ್ತು. ಶೀತಲ ಜಲರಾಶಿ, ಅಗಣಿತ ವನಸ್ಪತಿಗಳ ಕಂಪಿನಿಂದ ಕಂಗೊಳಿಸುತ್ತಿತ್ತು.

ಇಡೀ ವಾತಾವರಣ ನಿಶ್ಶಬ್ದತೆಯ ಮಡಿಲಿನಲ್ಲಿ ಬಿದ್ದಿತ್ತು. ಇಲ್ಲಿಗೆ ಬಂದ ಮೇಲೆ, ನಗರಕ್ಕೆ ಹೋಗುವ ರಸ್ತೆ ಎಷ್ಟು ದೂರದಲ್ಲಿದೆ, ಅಕ್ಕ-ಪಕ್ಕದ ಹೊಲಗಳು ಎಲ್ಲಿವೆ, ಇದೆಯೋ ಇಲ್ಲವೋ ಎಂಬುದೂ ತಿಳಿಯುತ್ತಿರಲಿಲ್ಲ, ಹೀಗಾಗಿಯೇ ಇದು ಇಷ್ಟು ಸುಂದರ ಸ್ಥಳವಾಗಿದ್ದರೂ ನಗರದ ಜನ ಇಲ್ಲಿಗೆ ಬರುವುದು ವಿರಳವಾಗಿತ್ತು. ಸಾಮಾನ್ಯವಾಗಿ ಯಾತ್ರಿಕರು ಝರಿಗಳಲ್ಲಿ ಮಿಂದು, ಬೆಟ್ಟಗಳ ನೆರಳಲ್ಲಿ ವಿಶ್ರಾಂತಿ ಪಡೆದು ಅಥವಾ ಬೆಟ್ಟದ ಕಾಲುದಾರಿಗಳನ್ನು ಹತ್ತುತ್ತಾ, ಹಾಗೆಯೇ ಮರಳಿ ಹೋಗಿ ಬಿಡುತ್ತಿದ್ದರು.

ಆ ದಿನಗಳಲ್ಲಿ ನಾನು, ಒಬ್ಬ ಅಥವಾ ಇಬ್ಬರು ಮಿತ್ರರೊಂದಿಗೆ ನಮ್ಮ ನಗರದ ಸಮೀಪ ಹೊಸ ಹೊಸ ಪ್ರೇಕ್ಷಣೀಯ ಸ್ಥಳಗಳನ್ನು ಹುಡುಕುತ್ತಾ ಅಲೆಯುತ್ತಿದ್ದೆ. ಕೆರೆ-ಗಿರೆ ಕಂಡರೆ ಅಲ್ಲಿಗೆ ಮಿತ್ರರನ್ನು ಕರೆದೊಯ್ಯುತ್ತಿದ್ದೆ. ಹಳ್ಳಿಯನ್ನು ಮುಟ್ಟುವ ಹಳ್ಳ-ದಿಣ್ಣೆಗಳ ರಸ್ತೆಗಳ ಮೇಲೆ ಮಿತ್ರರನ್ನು ಸೈಕಲ್‌ಗಳ ಮೂಲಕವೋ, ನಡೆದೋ ಕರೆದೊಯ್ಯುತ್ತಿದ್ದೆ. ಕೆಲವು ದಿನಗಳ ಹಿಂದೆಯಷ್ಟೇ ನಾನು ಈ ಕೆರೆಯನ್ನು ಹುಡುಕಿದ್ದೆ. ಕೆರೆ ನೋಡಿ ಮಂತ್ರ ಮುಗ್ಧನಾಗಿದ್ದೆ.

ನಗರದಿಂದ ಅಂದು ನಾವು ಕಾಲ್ನಡಿಗೆಯಲ್ಲೇ ಹೊರಟಿದ್ದೆವು. ನಾನಿದ್ದೆ, ನನ್ನ ತಾಯಿಯ ತಂಗಿಯ ಮಗ ವಿನೋದ ಇದ್ದ, ನನ್ನ ಮಿತ್ರ ಲಂಬೂ ರಾಮನಾಥನಿದ್ದ ಮತ್ತು ಪ್ರೊಫೆಸರ್ ಸಾಹೇಬರಿದ್ದರು. ಕಾಲ್ನಡಿಗೆಯಲ್ಲಿ ತಿರುಗಾಡುವುದು ನಮ್ಮ 'ಹಾಬಿ'ಯಾಗಿತ್ತು. ಇಂಥದ್ದರಲ್ಲೆಲ್ಲಾ ಪ್ರೊಫೆಸರ್ ಸಾಹೇಬರು ಮುಂದಿರುತ್ತಿದ್ದರು. ನಾವೆಲ್ಲಾ ಅವರ ವಾನರ ಸೇನೆಯಂತೆ ಅವರನ್ನು ಹಿಂಬಾಲಿಸುತ್ತಿದ್ದೆವು. ಆದರೆ, ಅಂದು ನಾನು ಇವರನ್ನೆಲ್ಲಾ ಈ ಸ್ಥಳಕ್ಕೆ ಕರೆತಂದಿದ್ದೆ. ವಿನೋದ, ಪರೀಕ್ಷೆ ಮುಗಿಸಿಕೊಂಡು ಮನೆಗೆ ಬಂದು ಕೆಲವೇ ದಿನಗಳಾಗಿತ್ತು. ಇನ್ನೆರಡು ದಿನಗಳ ನಂತರ ಅವನು ಮತ್ತೆ ವಿಶ್ವವಿದ್ಯಾಲಯಕ್ಕೆ ಹೊರಟು ಹೋಗಬೇಕಿತ್ತು. ನಾನು ಅವನಿಗೆ ಮತ್ತು ಉಳಿದ ಮಿತ್ರರಿಗೆ ನನ್ನ ಹೊಸ ಪ್ರೇಕ್ಷಣೀಯ ಸ್ಥಳವನ್ನು ತೋರಿಸಲು ಬಯಸುತ್ತಿದ್ದೆ.

ರಸ್ತೆಯ ಕೊನೆಗೆ ನಾವು ಬಂದಿದ್ದೆವು. ಇನ್ನು ಕೆರೆಯ ಬಳಿ ಹೋಗಲು ಒಂದೆರಡು ಫರ್ಲಾಂಗ್ ದೂರವಷ್ಟೇ ಕ್ರಮಿಸಬೇಕಿತ್ತು. ಆಗಲೇ ವಿನೋದ ದಣಿದ. ರಸ್ತೆಯ ಅಂಚಿನಲ್ಲಿದ್ದ ಕಲ್ಲಿನ ಮೇಲೆ ಕೂತ, "ಸಾಕಪ್ಪ, ಇನ್ನು ನನ್ನಿಂದ ನಡೆಯಲು ಸಾಧ್ಯವಿಲ್ಲ. ನಡಿ, ಮನೆಗೆ ಹೋಗೋಣ. ಬಿಸಿಲೂ ಹೆಚ್ಚಾಗ್ತಿದೆ".

ವಿನೋದನಿಗೆ 'ಅಲೆಯುವ' ಅಭ್ಯಾಸವಿರಲಿಲ್ಲ. ಕಾಲ್ನಡಿಗೆಯಲ್ಲಿ ಹೋಗುವ ಆಸೆಯೂ ಅಷ್ಟಿರಲಿಲ್ಲ. ಗಾಳಿಯೊಂದಿಗೆ ಹೂಗಳ ಕಂಪು ಪಸರಿಸಿ ಬರುತ್ತಿದ್ದಾಗ್ಯೂ ಬಿಸಿಲಿನ ಝಳ ಹೆಚ್ಚುತ್ತಿತ್ತು.

ಆಗ ಪ್ರೊಫೆಸರ್ ಸಾಹೇಬರು ರಸ್ತೆಯ ಮಧ್ಯೆ ಸ್ವೇಚ್ಛೆಯಿಂದ ಓಲಾಡಿಕೊಂಡು ಹೋಗುತ್ತಿದ್ದರು. ಅವರ ಮುಖದಲ್ಲಿ ಸಂತೋಷ ನರ್ತಿಸುತ್ತಿತ್ತು. ವಯಸ್ಸಿನಲ್ಲಿ ದೊಡ್ಡವರಾಗಿದ್ದರೂ ತುಂಬಾ ಉತ್ಸಾಹಿಗಳಾಗಿದ್ದ ಅವರು ಇನ್ನೂ ಮೈಲಿಗಟ್ಟಲೆ ನಡೆಯಲು ಸಿದ್ಧರಿದ್ದರು.

"ಕೆರೆ ಮನೆ ಹಾಳಾಯ್ತು. ವಿನೋದ ಹೇಳೋದು ಸರಿ, ನಡಿ ವಾಪಸ್ ಹೋಗೋಣ. ಇನ್ನೊಂದು ದಿನ ಬಂದರಾಯ್ತು" ಲಂಬೂ ರಾಮನಾಥನೂ ವಿನೋದನನ್ನು ಸಮರ್ಥಿಸಿದ.

"ಆದರೆ ಆಗ ವಿನೋದ ಇಲ್ಲಿರಲಾರ....ಇನ್ನೇನು ಎರಡು ಫರ್ಲಾಂಗ್, ಅಷ್ಟೆ. ಒಂದ್ಸಲ ಕೆರೆ ನೋಡಿದರೆ ಆಯಾಸವೆಲ್ಲಾ ಮರ್ತು ಹೋಗುತ್ತೆ" ಎಂದೆ.

"ವಿನೋದ್ ,ಏನ್ ಹೇಳ್ತೀಯಾ ? ಮುಂದಕ್ಕೆ ಹೋಗೋಣ್ವೋ ಅಥವಾ ಮನೆಗೆ ಹೋಗೋಣ್ವೋ ?".

"ನಾನಿಲ್ಲಿ ಕೂರ್ತೀನಿ. ನೀವೆಲ್ಲಾ ಹೋಗಿಬನ್ನಿ. ಕೆರೆಯನ್ನು ಮುಟ್ಟಿ ಬನ್ನಿ" ವಿನೋದ ಭಾರವಾದ ಕಣ್ಣುಗಳನ್ನು ನೇವರಿಸಿಕೊಂಡ.

"ಸರಿ, ವಾಪಸ್ ಹೋಗೋಣ' ಪ್ರೊಫೆಸರ್ ಸಾಹೇಬರು ನಿರ್ಣಾಯಕ ಧ್ವನಿಯಲ್ಲಿ ಹೇಳಿದರು.

ಈ ಮಾತಿನಿಂದ ಲಂಬೂ ಶಾಮನಾಥನಿಗೆ ಮತ್ತು ವಿನೋದನಿಗೆ ಹೋದ ಜೀವ ಬಂದಂತಾಯಿತು. ಆದರೆ ನಾನು ರೇಗಿದೆ.

"ಇನ್ನೆಷ್ಟು ಮಹಾ ದೂರವಿದೆ ? ನಮ್ಮ ಜೊತೆ ಪಿಕ್‌ನಿಕ್‌ಗೆ ಬರ್ತಿರೋದು ವಿನೋದ ಇದೇ ಮೊದಲು. ಇದನ್ನೂ ಅರ್ಧಕ್ಕೆ ನಿಲ್ಸಿ ನಗರಕ್ಕೆ ಹೋಗೋದಾ ?"

ಆದರೆ ನನ್ನ ಮಾತನ್ನು ಯಾರು ಕೇಳಲಿಲ್ಲ. ನಾವು ಮರಳಿ ಹೋಗಲಾರಂಭಿಸಿದೆವು. ನಾವು ಮೇಲಿನಿಂದ ಜಾರುತ್ತಾ ಶೀಘ್ರವೇ ಕೆಳಭಾಗಕ್ಕೆ ಬಂದೆವು.

"ಸರಿ, ಪಿಕ್‌ನಿಕ್ ಆಯ್ತಲ್ಲ. ಕೆರೆಯಲ್ಲಿ ಸ್ನಾನ ಮಾಡಿ ಬಂದೆ ಅಂತ ಮನೇಲಿ ಹೇಳಿ ಬಿಡು" ಆಗಲೇ ಲಂಬೂ ಶಾಮನಾಥ ವಿನೋದನಿಗೆ ತಮಾಷೆ ಮಾಡಿದ.

ಲಂಬೂ ಶಾಮನಾಥ ಸದಾ ಚುಚ್ಚುವಂತಹ, ಬೇಸರವಾಗುವಂತಹ ಗೇಲಿಯನ್ನು ಮಾಡುತ್ತಿದ್ದ. ಕಡೆಗೆ ಬಾತುಕೋಳಿಯಂತೆ 'ಕೀ-ಕೀ' ಎಂದು ನಗುತ್ತಿದ್ದ. ಒಮ್ಮೊಮ್ಮೆ ತನ್ನ ಅಸಂಬದ್ಧ ನಗುವಿಗೆ ತಾನೇ ಚಪ್ಪಾಳೆ ತಟ್ಟಿ ಕೇಕೆ ಹಾಕುತ್ತಿದ್ದ.

ಲಂಬೂ ಶಾಮನಾಥನ ಮಾತುಗಳು ಚುಚ್ಚಿದವೋ ಅಥವಾ ಈ ಮಾತುಗಳಲ್ಲಿ ಅವನಿಗೆ ಆಹ್ವಾನವಿತ್ತೋ ಅಥವಾ ಇಷ್ಟು ದೂರ ಬಂದು ಧೂಳು ಕುಡಿದು ಮನೆಗೆ ಮರಳಿ ಹೋಗುತ್ತಿದ್ದೇವಲ್ಲ ಎಂಬ ಅರಿವಾಯಿತೋ, ಅಂತೂ ಆ ಕೂಡಲೇ ವಿನೋದ ಎದ್ದು ನಿಂತು ಹೇಳಿದ, "ಇಲ್ಲ, ವಾಪಸ್ ಹೋಗೋದು ಬೇಡ. ಕೆರೆ ನೋಡ್ಕೊಂಡೇ ಹೋಗೋಣ !"

ಎಲ್ಲರಿಗೂ ಆಶ್ಚರ್ಯವಾಯಿತು.

"ಮತ್ತೆ ಬೆಟ್ಟ ಹತ್ತಿಸ್ತೀಯಾ ?" ಲಂಬೂ ಶಾಮನಾಥನ ಕಣ್ಣಿಗೆ ಕತ್ತಲು ಕವಿದಂತಾಯಿತು.

"ಈಗ ಮತ್ತೆ ಹೋಗೋದರಲ್ಲಿ ಅರ್ಥವಿಲ್ಲ. ಈಗ ಮನೆಗೇ ಹೋಗೋಣ. ಕೆರೆವರೆಗೆ ಹೋಗೋದಾದ್ರೆ ತಿನ್ನೋದಕ್ಕೂ ಏನಾದರೂ ಒಯ್ಯಬೇಕಿತ್ತು. ಸ್ವಲ್ಪ ಹೊತ್ತು ಅಲ್ಲಿ ವಿಶ್ರಾಂತಿ ಪಡೆಯಬಹುದಿತ್ತು. ಬರೇ, ಕೆರೆ ನೋಡೋದಕ್ಕೆ ಮಾತ್ರ ಬಂದಿರಲಿಲ್ಲವಲ್ಲ ? ಹೋಗ್ಲಿ, ಇನ್ನೊಂದು ಸಲ ಎಲ್ಲಾ ಸಿದ್ಧತೆಯೊಂದಿಗೆ ಬರೋಣ" ಪ್ರೊಫೆಸರ್ ಸಾಹೇಬರು ಎಲ್ಲರಿಗೂ ತಿಳುವಳಿಕೆ ಹೇಳಿದರು.

"ಆದ್ರೆ ಆಗ ಇಲ್ಲಿ ವಿನೋದ ಇರಲ್ವಲ್ಲಾ. ಅವನು ವಿಶ್ವವಿದ್ಯಾನಿಲಯದಲ್ಲಿ ಫಾರ್ಮುಲಾ ಗಟ್ಟುಮಾಡ್ತಿರ್ತಾ ಕೂತಿರ್ತಾನೋ ಏನೋ. ಕೆರೆ ಹತ್ರ ಸ್ವಲ್ಪ ಕೂತು ವಾಪಸ್ ಬಂದು ಬಿಡೋಣ. ಹೊತ್ತಾದರೆ ಟಾಂಗಾ-ಗೀಂಗಾ ಮಾಡಿಕೊಂಡು ಬಂದರಾಯ್ತು" ನಾನು ಹುರಿದುಂಬಿಸಿದೆ.

ವಿನೋದನೂ ಹಟ ಹಿಡಿದ. ತನ್ನಿಂದಾಗಿಯೇ ಎಲ್ಲರೂ ವಾಪಸ್ ಬರೋ ಹಾಗೆ ಆಯ್ತು ಅಥವಾ ಅವನು ಬಹುಶಃ ನನ್ನನ್ನು ನಿರಾಸೆಗೊಳಿಸಲು ಇಷ್ಟಪಡುತ್ತಿರಲಿಲ್ಲವೇನೋ ಎಂಬ ಭಾವನೆ ಅವನು ತಳೆದಂತಿತ್ತು.

"ಸ್ನೇಹಿತರು ಪಿಕ್‌ನಿಕ್ ಮಾಡಿಸಲೇ ಇಲ್ಲ ಅಂತ ಅಂದುಕೊಂಡರೆ ?" ಲಂಬೂ ಶಾಮನಾಥನೂ ಉತ್ತೇಜಿಸಿದ. ನಾವು ಮತ್ತೆ ಬೆಟ್ಟವನ್ನು ಹತ್ತಲಾರಂಭಿಸಿದೆವು. ಸುಮಾರು ಮುಕ್ಕಾಲು ಗಂಟೆಯ ನಂತರ ನಾವೆಲ್ಲಾ ಕೆರೆಯನ್ನು ಸಮೀಪಿಸಿದ್ದೆವು.

ಅಂದು ವಿನೋದನ ಹೆಣವನ್ನು ನೀರಿನಲ್ಲಿ ಹುಡುಕಲು ತುಂಬಾ ವೇಳೆ ಹಿಡಿದಿತ್ತು.

ಅಂದು, ನಮ್ಮ ಅದೃಷ್ಟವೇ ಕೆರೆ ನೋಡಲು ಮತ್ತೆ ಪ್ರೇರೇಪಿಸಿರಬೇಕೆಂದು ಅನ್ನಿಸುತ್ತದೆ. ಅದೃಷ್ಟವೇ ಘಟನೆಗಳನ್ನೆಲ್ಲಾ ಹೆಣೆದಿತ್ತು. ಎಷ್ಟೋ ವರ್ಷಗಳ ನಂತರವೂ ಯೋಚಿಸಿದಾಗ ಒಂದೂ ಕಡೆ ಅದೃಷ್ಟದ ಭೂಮಿಕೆ ಮಂದವಾಗಿ ಕಂಡರೆ, ಇನ್ನೊಂದೆಡೆ ಅದರ ಸ್ಪಷ್ಟತೆ, ಭಯಂಕರತೆಯನ್ನು ಕಂಡು ನಾನು ತತ್ತರಿಸುತ್ತೇನೆ. ನಾವು ಮನೆಗೆ ಮರಳಿ ಹೋಗಲು ಕೆಳಗಿಳಿದು ಬಂದಿದ್ದರೂ, ಮತ್ತೇಕೆ ನಾವು ಕರೆಯ ಕಡೆಗೆ ಮುಖ ಮಾಡಿದ್ದೆವು ? ವಿನೋದನೇ ಮನೆಗೆ ಮರಳಿ ಹೋಗುವ ಸಲಹೆಯನ್ನು ಕೊಟ್ಟಿದ್ದ, ಮತ್ತೇಕೆ ಅವನೇ ಕೆರೆಯನ್ನು ನೋಡಿಕೊಂಡೇ ಹೋಗೋಣ ಎಂದು ಹಟ ಹಿಡಿದಿದ್ದ ? ಅದೃಷ್ಟ ಅವನನ್ನು ಕೆರೆಯೆಡೆಗೆ ಹೊಡೆದುಕೊಂಡು ಹೋಯಿತೇ ? ನಾನೂ ಯಾಕೆ ಒತ್ತಾಯ ಮಾಡಿದ್ದೆ ? ವಿನೋದನ ಸಾವು ನನ್ನ ಕೈಯಾರೆ ಬರೆಯಲ್ಪಟ್ಟಿತ್ತೆ ? ನಾವೆಲ್ಲಾ ಕೆರೆಯೆಡೆಗೆ ಚುಂಬಕದಂತೆ ಆಕರ್ಷಿಸಲ್ಪಟ್ಟಿದ್ದೆವು. ಅದೃಷ್ಟದ ಚೆಲ್ಲಾಟ ಪ್ರಾರಂಭವಾಗಿತ್ತು. ವಿರಕ್ತ ಯುವಕನೊಬ್ಬನನ್ನು ಅದೃಷ್ಟ ಹೊಡೆದುಕೊಂಡು ಹೋಗುತ್ತಿದ್ದರಿಂದಾಗಿ ವಾತಾವರಣದಲ್ಲೂ ಭಯಾನಕತೆ ಮೂಡಿತ್ತೇನೋ.... ಆದರೆ ನಾವು ಯೌವನದ ಸಹಜ ಉತ್ಸುಕತೆಯಿಂದ ಹಾಗೂ ರಜದ ಆನಂದವನ್ನು ಸವಿಯುವ ಉತ್ಸಾಹದಲ್ಲಿ ಯಾವುದನ್ನೂ ಗಮನಕ್ಕೆ ತಂದುಕೊಂಡಿರಲಿಲ್ಲ. ನಾವೇ ತರ್ಕಿಸಿ, ತೀರ್ಮಾನ ತೆಗೆದುಕೊಂಡು ಮತ್ತೆ ಆ ತೀರ್ಮಾನವನ್ನೇ ಬದಲಾಯಿಸುತ್ತಿರುವುದಂತೂ ವಿಡಂಬನೆಯೇ ಆಗಿತ್ತು. ನನಗೆ ಅದೃಷ್ಟದ ಅನಿವಾರ್ಯತೆಯ ಬಗ್ಗೆ ನಂಬಿಕೆಯುಂಟಾಗುತ್ತಿದ್ದದ್ದು ಈ ಘಟನೆಯ ಅತ್ಯಂತ ಭಯಾನಕ ಪಾರ್ಶ್ವವಾಗಿತ್ತು.

ನಮ್ಮಲ್ಲಿ ಯಾರಿಗೂ ಈಜು ಬರದಿದ್ದದ್ದು ಮತ್ತು ಕೆರೆಯಲ್ಲಿ ನೀರು ಎಷ್ಟು ಆಳವಿದೆ ಎಂಬುದರ ಅರಿವಿಲ್ಲದಿದ್ದಾಗ್ಯೂ ನಾವು ಕೆರೆಯನ್ನು ಸಮೀಪಿಸಿದಾಗ ಕೆರೆಯಲ್ಲಿ ಸ್ನಾನ ಮಾಡುವ ಮತ್ತು ಕೆರೆಯಲ್ಲಿ ಧುಮುಕುವ ನಿರ್ಣಯ ತೆಗೆದುಕೊಂಡಿದ್ದೆವು. ಹಾಂ, ಪ್ರೊಫೆಸರ್ ಸಾಹೇಬರು 'ದಡದಲ್ಲೇ ಎರಡು ಮುಳುಗು ಹಾಕಿ, ನಿಮ್ಮ ಶರೀರವನ್ನು ತೊಯ್ಸಿಕೊಳ್ಳಿ' ಎಂಬ ಮಾತನ್ನಂತೂ ಹೇಳಿದ್ದರು. ನಾವು ಇದಷ್ಟೇ ಮಾಡುತ್ತಿದ್ದೆವು. ವಿನೋದನಂತೂ ನೀರಿಗಿಳಿಯಲೂ ಬಯಸುತ್ತಿರಲಿಲ್ಲ. ಅದೆಷ್ಟೋ ಹೊತ್ತು ಅವನು ದಡದಲ್ಲೇ ಕೂತಿದ್ದು ನಾವು ದಡದಲ್ಲಿ ಮುಳುಗು ಹಾಕುವುದನ್ನು ನೋಡುತ್ತಾ ನಗುತ್ತಿದ್ದ.

ಪ್ರೊಫೆಸರ್ ಸಾಹೇಬರೇ ಮೊಟ್ಟಮೊದಲು ನೀರಿನಿಂದ ಹೊರಬಂದಿದ್ದರು. ನಾನಾಗ ನೀರಿನಲ್ಲಿದ್ದೆ. ಅವರ ಗುಂಗುರು ತಲೆಗೂದಲು ಹಣೆಗೆ ಒತ್ತಿಕೊಂಡಿದ್ದು, ಖಾಕಿ ನಿಕ್ಕರ್ ಅವರ ತೊಡೆಗಳಿಗೆ ಅಂಟಿಕೊಂಡಿತ್ತು. ಆದರೆ ಅವರು ಇಷ್ಟು ಬೇಗ ನೀರಿನಿಂದ ಹೊರ ಬಂದಿದ್ದು ನನಗೆ, ಅವರು ಅಧೈರ್ಯರು ಎಂದು ಕಂಡಿತ್ತು. ಅವರು ದಡಕ್ಕೆ ಬಂದು ಅಲ್ಲಿದ್ದ ಕಲ್ಲಿನ ಮೇಲೆ ಕೂತು ಬೆಳಗಿನ ಬಿಸಿಲಿನಲ್ಲಿ ತಮ್ಮ ಶರೀರ ಹಾಗೂ ತೊಟ್ಟಿದ್ದ ನಿಕ್ಕರನ್ನು ಒಣಗಿಸಿಕೊಳ್ಳಲಾರಂಭಿಸಿದ್ದರು.

ಕೆರೆಯಲ್ಲಿ ಸ್ನಾನ ಮಾಡುತ್ತಾ ಸ್ವಲ್ಪ ಆಳಕ್ಕೆ ಹೋದರೆ, ಹೆದರದೆ, ಕಾಲುಗಳನ್ನು ಜೋರಾಗಿ ನೀರಿನ ತಳಕ್ಕೆ ಬಡಿದರೆ ಶರೀರ ತನ್ನಷ್ಟಕ್ಕೇ ಮೇಲೆ ಬರುತ್ತದೆಯೆಂದು ಯಾರೋ ನನಗೆ ಹೇಳಿದ್ದರು. ನಾನು ಒಂದೆರಡು ಬಾರಿ ಕಾಲಿನಿಂದ ನೀರಿನ ತಳಕ್ಕೆ ಬಡಿದು ಮೇಲೂ ಬಂದಿದ್ದೆ, ನನ್ನ ಉತ್ಸಾಹವೂ ಹೆಚ್ಚಿತ್ತು.

ಆಗ, ಲಂಬೂ ಶಾಮನಾಥನ ಬೆನ್ನು ನನ್ನೆಡೆಗಿತ್ತು. ಅವನು ಆಳವಿಲ್ಲದ ಜಾಗ ದಲ್ಲಿ ನಿಂತು ಪ್ರೊಫೆಸರ್ ಸಾಹೇಬರೊಂದಿಗೆ ಮಾತನಾಡುತ್ತಿದ್ದ. ಪದೇ ಪದೇ 'ಕೀ-ಕೀ' ಎಂದು ಏನೋ ಹೇಳುತ್ತಿದ್ದ. ಅವನು ನನ್ನೆಡೆಗೆ ನೋಡಿ ನನ್ನ ದುಃಸ್ಸಾಹಸ ವನ್ನು ಪ್ರಶಂಸಿಸಲಿ ಎಂದು ನಾನು ಬಯಸುತ್ತಿದ್ದೆ. ನಮ್ಮ ಗುಂಪಿನಲ್ಲಿ ಅವನ ಬಾಯಿಂದ ಮಾತ್ರ ನಾನು ಪ್ರಶಂಸೆಯ ಮಾತುಗಳನ್ನು ಕೇಳಲು ಬಯಸುತ್ತಿದ್ದೆ. ಆದರೆ, ಅವನು ಒಂದೇ ಸಮನೆ ಪ್ರೊಫೆಸರ್ ಸಾಹೇಬರೊಂದಿಗೆ ಹರಟುತ್ತಲೇ ಇದ್ದ.

ಆಗಲೇ ನಾನು ತಳಕ್ಕೆ ಕಾಲು ಬಡಿಯಲು ಯತ್ನಿಸಿದೆ. ಆದರೆ ನನ್ನ ಕಾಲು ಗಳು ತಳವನ್ನು ಮುಟ್ಟುತ್ತಲೇ ಇರಲಿಲ್ಲ. ಉಸಿರು ಬಿಗಿಹಿಡಿದು ಪ್ರಯತ್ನಿಸಿದರೂ ಸಾಧ್ಯವಾಗಲಿಲ್ಲ. ನಾನಾಗ ಹೆದರಿ, ಚಡಪಡಿಸಿ ಕೈ-ಕಾಲು ಬಡಿಯಲಾರಂಭಿಸಿದ್ದೆ. ನಾನು ಸೋತಿದ್ದೆ. ನೀರು ನನ್ನ ಹೊಟ್ಟೆ ಸೇರಲು ಪ್ರಾರಂಭಿಸಿತ್ತು.

ನಾನು ಮೇಲಕ್ಕೆ ಬಂದಿದ್ದರೂ ದಡದೆಡೆಗೆ ಹೋಗಲು ಸಾಧ್ಯವಾಗುತ್ತಿರಲಿಲ್ಲ. ಪ್ರತಿಯಾಗಿ, ನಾನು ಮತ್ತೂ ಹಿಂದಕ್ಕೆ, ಆಳ ನೀರಿನಲ್ಲಿ ಜಾರುತ್ತಿರುವೆನೆಂದು ಅನ್ನಿಸು

ತ್ತಿತ್ತು. ನಾನು ಕೆರೆಯ ಮಧ್ಯದಲ್ಲಿದ್ದ ಬಂಡೆಯ ಬಳಿಗೆ ಹೋಗಿಬಿಟ್ಟಿದ್ದೇನೆಂಬ ಅನುಮಾನ ಉಂಟಾಯಿತು. ನನ್ನ ಧೈರ್ಯ ಉಡುಗುತ್ತಿತ್ತು. ನಾನು ಉದ್ವಿಗ್ನಗೊಳ್ಳುತ್ತಿದ್ದೆ. ನನ್ನ ಮಿತ್ರರ ಮುಖಗಳು ನನ್ನೆದುರು ಮಸುಕಾಗಲಾರಂಭಿಸಿತ್ತು. ಪ್ರೊಫೆಸರ್ ಸಾಹೇಬರು ಎದ್ದು ನಿಂತರು. ಲಂಬೂ ಶಾಮನಾಥ ನೀರಿನಲ್ಲಿ ನಿಂತೇ ನನ್ನಡೆಗೆ ಹೊರಳಿದ್ದಾನೆಂದು ಅನ್ನಿಸಿತು. ಪ್ರೊಫೆಸರ್ ಸಾಹೇಬರು ದಡಕ್ಕೆ ಬಂದು ಕೈ ಬೀಸಿ ಬೀಸಿ ನನಗೇನೋ ಹೇಳುತ್ತಿದ್ದರು. ಆಗಲೇ, ವಿನೋದನ ಮುಖವೂ ನನ್ನ ಕಣ್ಣೆದುರಿಗೆ ಮೂಡಿತ್ತು. ಅವನು ನೀರಿನಲ್ಲಿ ನಿಂತು ತನ್ನ ನಿಕ್ಕರ್‌ನ ಬೆಲ್ಟ್ ಬಿಚ್ಚುತ್ತಿದ್ದ. ಒಂದು ಬಾರಿ, ನಾನು ಕೆಲವು ಕ್ಷಣ ಮೇಲೆ ಬಂದಾಗ ಬೆಲ್ಟಿನಿಂದ ನನ್ನೆಡೆಗೆ ಸಂಜ್ಞೆ ಮಾಡಿದ. ಅವನ ಕಪ್ಪು ಬೆಲ್ಟ್ ಹಾವಿನಂತೆ ಕಂಡು ಮತ್ತೆ ನೀರಿನಲ್ಲಿ ಮುಳುಗಿ ಬಿಡುತ್ತಿತ್ತು. ದಡದಲ್ಲಿದ್ದ ಪ್ರೊಫೆಸರ್ ಸಾಹೇಬರು ಮತ್ತು ಲಂಬೂ ಶಾಮನಾಥನ ಆಕೃತಿಗಳು ಮಸುಕಾಗಿ ಕಾಣಿಸುತ್ತಿತ್ತು. ನಾನು ಮೇಲುಸಿರು ಬಿಡುತ್ತಿದ್ದೆ. ಪದೇ-ಪದೇ ಚಡಪಡಿಸಿ ಮೇಲೆ ಬರಲು ಯತ್ನಿಸುತ್ತಿದ್ದೆ. ನನ್ನ ಶರೀರ ಶಿಥಿಲಗೊಳ್ಳಲಾರಂಭಿಸಿತ್ತು. ಆದರೆ, ನಾನೀಗಲೂ ಕೈ-ಕಾಲು ಬಡಿಯುತ್ತಿದ್ದೆ. ವಿನೋದ, ಖಂಡಿತಾ ನನ್ನ ಬಳಿ ಬಂದಿದ್ದನೇನೋ ; ಯಾಕೆಂದರೆ, ನಾನು ಪ್ರಜ್ಞೆ ಕಳೆದುಕೊಳ್ಳುವುದಕ್ಕೂ ಮೊದಲೇ, ಅವನ ಬೆಲ್ಟ್‌ನ ತುದಿಯನ್ನು ನಾನು ಹಿಡಿದುಕೊಂಡು ಸೆಣಸಾಡುತ್ತಿದ್ದೇನೆಂದು ನನಗನ್ನಿಸಿತ್ತು.

ನನಗೆ ಪ್ರಜ್ಞೆ ಬಂದಾಗ ತಲೆ ನೋಯುತ್ತಿತ್ತು. ಕಣ್ಣುಗಳನ್ನು ಬಿಸಿಲು ಕುಕ್ಕುತ್ತಿತ್ತು. ಆಗಲೇ ಸಮೀಪದಲ್ಲಿ ಚೀರಾಟ ಕೇಳಿಸಿತು. ಕೆಲವರು ಕೂಗಾಡುತ್ತಿದ್ದರು. ಲಂಬೂ ಶಾಮನಾಥನ ಧ್ವನಿಯನ್ನು ನಾನು ಮೊದಲು ಗುರುತಿಸಿದ್ದೆ.

“ಹಿಡೀರಿ. ಹಿಡೀರಿ. ಅವ್ನ ಮುಳುಗ್ತಿದ್ದಾನೆ. ಅವನನ್ನು ಪಾರು ಮಾಡಿ !” ಆಗಲೂ ನನಗೊಂದೂ ಅರ್ಥವಾಗಲಿಲ್ಲ. ಯಾರು ಮುಳುಗುತ್ತಿದ್ದಾರೆ ? ನಾನು ದಡದ ಮೇಲೆ ಬಿದ್ದಿರುವೆನಲ್ಲ. ವ್ಯಾಕುಲನಾಗಿ ತಲೆ ಎತ್ತಿ ನೋಡಿದ್ದೆ. ಎರಡು ಬಂಡೆಗಳ ನಡುವಿನ ಉಬ್ಬು-ತಗ್ಗುಗಳ ಕಾಲುದಾರಿಯಲ್ಲಿ ಲಂಬೂ ಶಾಮನಾಥ ಏಳುತ್ತಾ-ಬೀಳುತ್ತಾ ಓಡುತ್ತಿರುವುದನು ನೋಡಿದ್ದೆ. ತಲೆಯೆತ್ತಿ ಅಕ್ಕ-ಪಕ್ಕ ನೋಡುವ ಶಕ್ತಿಯೂ ನನ್ನಲ್ಲಿರಲಿಲ್ಲ.

ವಿನೋದನನ್ನು ನೀರಿನಿಂದ ಹೊರತೆಗೆಯುತ್ತಿದ್ದಾಗ ನನಗೆ ಪ್ರಜ್ಞೆ ಬಂದಿತ್ತು. ಇಬ್ಬರು ಕಪ್ಪು ಶರೀರದ ಯುವಕರು ಸರದಿಯಂತೆ ಬಂಡೆಯ ಬಳಿಯಿದ್ದ ನೀರಿನಲ್ಲಿ ಮುಳುಗು ಹಾಕುತ್ತಿದ್ದರು. ನನ್ನ ಬಳಿ ಓರ್ವ ವೃದ್ಧ ಕೂತಿದ್ದ. ಬಹುಶಃ ಅವನು ಆ ಯುವಕರೊಂದಿಗೆ ಬಂದಿದ್ದ. “ಆ ದೊಡ್ಡ ಕಲ್ಲಿನ ಕೆಳಗೆ ಚಿರತೆಯಿದೆ. ಅದು ಜನರನ್ನು ನೀರಿನೊಳಗಿನಿಂದಲೇ ಎಳೆದುಕೊಳ್ಳುತ್ತದೆ. ಅಲ್ಲೇ ಕೆಳಗೆ ಅದರ ಗುಹೆಯೂ ಇದೆ. ಚಿರತೆ ನಿನ್ನ ಸ್ನೇಹಿತನನ್ನು ಎಳೆದುಕೊಂಡಿದೆ. ವರ್ಷದಲ್ಲಿ ಎರಡು-ಮೂರು-ಜನರನ್ನು ಎಳೆದುಕೊಳ್ಳುತ್ತೆ” ವೃದ್ಧ ನನ್ನೆಡೆಗೆ ನೋಡಿದ.

ಅದೆಷ್ಟೋ ಹೊತ್ತಿನ ನಂತರ ಓರ್ವ ನೀರಿನಿಂದ ಹೊರಬರುತ್ತಿರುವುದು

ಕಂಡಿತು. ಅವನು ವಿನೋದನ ತಲೆಕೂದಲುಗಳನ್ನು ಹಿಡಿದೆಳೆಯುತ್ತಾ ಹೊರ ಬರುತ್ತಿದ್ದ. ನಾವು ನೆಗೆದು ಕೆರೆಯ ದಡಕ್ಕೆ ಬಂದಿದ್ದೆವು. ವಿನೋದನ ಶರೀರ ಉಬ್ಬಿ ನೀಲಿ ಬಣ್ಣಕ್ಕೆ ತಿರುಗಿತ್ತು. ಶರೀರದ ಮೇಲೆ ಅಲ್ಲಲ್ಲಿ ಪರಚಿದ ಗುರುತುಗಳಿತ್ತು. ಅವನ ಮೂಗಿನಿಂದ ರಕ್ತ ಒಸರುತ್ತಿತ್ತು. ನನ್ನ ಕಣ್ಣುಗಳು ಅವನ ಮುಖವನ್ನೇ ಎವೆಯಿಕ್ಕದೆ ನೋಡುತ್ತಿದ್ದವು.

ನಾವು ಹೇಗೆ ನಗರವನ್ನು ಸೇರಿದೆವೋ ನನಗಂತೂ ನೆನಪಿಲ್ಲ. ಅಸಂಬದ್ಧ ಚಿತ್ರಗಳು ನನ್ನೆದುರು ಮೂಡುತ್ತವೆ. ವಿನೋದನನ್ನು ಹಾಕಲಾಗಿದ್ದ ಮಂಚವನ್ನು ಇಬ್ಬರು ಯುವಕರು ಹೊತ್ತಿದ್ದರು. ಅವರ ಹಿಂದೆ ನಾವು ಮೂವರು ಹಾಗೂ ವೃದ್ಧ ರೈತ ಹೋಗುತ್ತಿದ್ದೆವು. ಪ್ರೊಫೆಸರ್ ಸಾಹೇಬರು ತಮ್ಮೆರಡೂ ಕೈಗಳನ್ನು ಹಿಂದಕ್ಕೆ ಕಟ್ಟಿ, ತಲೆ ತಗ್ಗಿಸಿಕೊಂಡು ನನ್ನ ಮುಂದೆ ಉದಾಸೀನತೆಯಿಂದ ಹೆಜ್ಜೆಗಳನ್ನು ಹಾಕುತ್ತಿದ್ದರು....ರಸ್ತೆಯಂಚಿನಲ್ಲಿ ಎರಡು ಟಾಂಗಾ ನಿಂತಿದ್ದವು. ಅವುಗಳ ಬಳಿ ನನ್ನ ತಂದೆ ಮತ್ತು ವಿನೋದನ ತಂದೆ ಎದುರು-ಬದುರು ತಲೆಚಚ್ಚಿಕೊಳ್ಳುತ್ತಾ ನಿಂತಿದ್ದರು. ದೃಶ್ಯ ತುಂಬಾ ಮಾರ್ಮಿಕವಾಗಿತ್ತು. ನನ್ನ ತಂದೆಯ ಪೇಟ ಕಳಚಿಕೊಂಡು ಕತ್ತಿನಲ್ಲಿ ಬಿದ್ದಿತ್ತು. ಅಷ್ಟು ಹಿರಿಯರು ಹೀಗೆ ರೋದಿಸುವುದನ್ನು ನಾನೆಂದೂ ನೋಡಿರಲಿಲ್ಲ.... ನನ್ನ ಮನೆಯ ಮಂಚಕ್ಕೆ ಒರಗಿಕೊಂಡು ಪದೇ-ಪದೇ ರೋದಿಸುತ್ತಾ ನೆರೆದಿದ್ದ ಜನರಿಗೆ ಘಟನೆಯನ್ನು ವಿವರಿಸುತ್ತಿದ್ದೆ. ಅಮ್ಮ ನನ್ನ ಬಾಯ ಮೇಲೆ ಕೈಯನ್ನಿಟ್ಟು ಮಾತನಾಡಬೇಡವೆಂದು ಹೇಳುತ್ತಿದ್ದಳು. ವಿನೋದ ಎಲ್ಲಿದ್ದಾನೆ, ಅವನು ಬದುಕಿದ್ದಾನೋ ಇಲ್ಲವೋ ಎಂಬುದೂ ನನಗಾಗ ತಿಳಿದಿರಲಿಲ್ಲ....

ವಿನೋದನ ತಂದೆ ಹತ್ತೇ ದಿನಕ್ಕೆ ವೃದ್ಧರಾಗಿಬಿಟ್ಟಿದ್ದರು. ವಿಚಿತ್ರ ಸೆಳೆತ ಅವರ ಮುಖದಲ್ಲಿ ಮನೆಮಾಡಿಕೊಂಡು ಬಿಟ್ಟಿತ್ತು. ಕಣ್ಣುಗಳು ದೂರದಲ್ಲಿ ಏನೋ ದೃಷ್ಟಿಸುವಂತಿತ್ತು. ಅವರು ದರ್ಪದ ವ್ಯಕ್ತಿಗಳಾಗಿದ್ದರು. ಆದರೆ ಈಗ ಅದೆಲ್ಲೋ ನೋಡುತ್ತಿರುವಂತೆ ಕಾಣಿಸುತ್ತಿತ್ತು. ಒಮ್ಮೊಮ್ಮೆ ನಾನು ಅವರೆದುರು ಹೋಗಬೇಕಾಗಿ ಬಂದಾಗ ಅವರ ಕಣ್ಣುಗಳು ನನ್ನ ಮುಖದ ಮೇಲೆ ಸ್ಥಿರವಾಗಿಬಿಡುತ್ತಿದ್ದವು. ಆದರೆ ಕೂಡಲೇ ಮುಖ ತಿರುಗಿಸಿಕೊಂಡು ಬಿಡುತ್ತಿದ್ದರು. ಆಗ ಅವರ ಮನಸ್ಸಿನ ಭಾವನೆ ಸ್ಪಷ್ಟಗೊಳ್ಳುತ್ತಿತ್ತು. ವೇದನೆ ಮತ್ತು ಕ್ಷೋಭೆಯಿಂದಾಗಿ ಅವರ ಬಾಯಿಂದ ಮಾತೇ ಹೊರಡುತ್ತಿರಲಿಲ್ಲ. ಕೇವಲ ಮುಖವನ್ನಷ್ಟೇ ಬೇರೆಡೆಗೆ ಮಾಡಿಕೊಂಡು ಬಿಡುತ್ತಿದ್ದರು. ವಿನೋದನ ಫಲಿತಾಂಶ ಬಂದಾಗ—ಈ ಘಟನೆ ನಡೆದ ಕೆಲವು ದಿನಗಳಲ್ಲೇ–ಅವರು ಬಿಕ್ಕಳಿಸಿ-ಬಿಕ್ಕಳಿಸಿ ರೋದಿಸಿದ್ದರು. "ನನ್ನ ಮಗನೊಂದಿಗೇ ನೀನು ಹಗೆತನ ಸಾಧಿಸಬೇಕಿತ್ತೆ ? ಯಾವ ಜನ್ಮದ ವೈರ ತೀರಿಸಲು ಅವನನ್ನು ಕೆರೆಗೆ ಕರೆದು

ಕೊಂಡು ಹೋಗಿದ್ದೆ ?" ನೋವ ಧ್ವನಿಯಿಂದ ಅವರು ನನ್ನನ್ನೇ ನೋಡಿದ್ದರು. ನಂತರ ಅವರು ಮೌನ ತಾಳಿದರು.

ಅವರ ವ್ಯಾಕುಲತೆಯನ್ನು ಕಂಡು, ನಾನು ಮುಳುಗುವುದನ್ನು ತಪ್ಪಿಸಿಕೊಳ್ಳಲೋಸುಗ ನೀರಿನಲ್ಲಿ ಚಡಪಡಿಸಿದಂತೆ. ಪ್ರತಿಯೊಬ್ಬನೂ ತನ್ನ ಅದೃಷ್ಟದೊಂದಿಗೆ ಸೆಣಸಾಡುತ್ತಿದ್ದಾನೆ ಎಂದು ಅನ್ನಿಸುತ್ತದೆ. ಆದರೆ. ಅದೃಷ್ಟದೊಂದಿಗೆ ಸೆಣಸಾಡಲೂ ತನ್ನದೇ ಆದ ವಿಧಾನಗಳಿರುತ್ತವೆ. ಅದನ್ನು ಒಪ್ಪಿಕೊಳ್ಳುವ ಅಥವಾ ತಿರಸ್ಕರಿಸುವ ಅಥವಾ ಅದರೆದುರು ನಮ್ರರಾಗುವುದಕ್ಕೂ ತನ್ನದೇ ಆದ ವಿಧಾನಗಳಿರುತ್ತವೆ. ಬಹುಶಃ ನಾವು ಯಾರನ್ನೂ, ಅವನ ಮೇಲೆ ಬೀಳುವ ಅದೃಷ್ಟದ ಹೊಡೆತಗಳಿಂದ ಅಳೆಯಂದೆ, ಅದೃಷ್ಟದ ಬಗ್ಗೆ ಅವನ ನಡತೆಯಿಂದಲೇ ನಾವು ಅವನನ್ನು 'ಅವನು ಅದೃಷ್ಟವನ್ನು ಯಾವ ರೂಪದಲ್ಲಿ ನೋಡಿದ, ಅದರ ಬಗ್ಗೆ ಯಾವ ವಿಧಾನವನ್ನು ಅನುಸರಿಸಿದ' ಎಂಬುದನ್ನು ಅಳೆಯುತ್ತೇವೆ.

ವಿನೋದನ ತಾಯಿ ಮೊದಲೇ ಶಾಂತ ಸ್ವಭಾವದವರಾಗಿದ್ದರು. ಆಘಾತದ ನಂತರ ಮತ್ತೂ ಮೌನ ತಾಳಿಬಿಟ್ಟಿದ್ದರು. ಒಮ್ಮೊಮ್ಮೆ ಅವರ ಕಣ್ಣುಗಳು ನನ್ನನ್ನೇ ಎವೆಯಿಕ್ಕದೆ ಗಮನಿಸುತ್ತಿದ್ದವು—ಪ್ರಾಣಿಯೊಂದು ತನ್ನ ಗುಹೆಯಲ್ಲಿ ಕೂತು ತನ್ನ ಶತ್ರುವನ್ನು ನೋಡುವಂತೆ. ನಾನು ಬದುಕಿದ್ದೆ ಅವರ ಪ್ರಾಯಕ್ಕೆ ಬಂದ ಮಗ ಸತ್ತು ಹೋಗಿದ್ದ. ಅವರ ಚಿಕ್ಕ-ಚಿಕ್ಕ ಕಣ್ಣುಗಳ ನೋಟಕ್ಕೆ ನಾನು ಒಳಗೊಳಗೇ ಮುದುರಿಕೊಂಡುಬಿಡುತ್ತಿದ್ದೆ. ನನ್ನನ್ನುಳಿಸುವ ಪ್ರಯತ್ನದಲ್ಲಿ ವಿನೋದನೇ ಆಳದ ನೀರಿಗೆ ಹೋಗಿಬಿಟ್ಟ ಅಥವಾ ನಾನೇ ಅವನ ಸಾವಿಗೆ ಕಾರಣಕರ್ತನಾದೆ ಎಂಬುದು ಅವರಿಗೆ ತಿಳಿದರೆ, ಅವರು ಯಾವ ದೃಷ್ಟಿಯಿಂದ ನನ್ನನ್ನು ನೋಡಬಹುದು ? ಅವರಿಗೆ ಹುಚ್ಚು ಹಿಡಿಯಬಹುದೇ ? ಅವರ ಬಾಯಿಂದ ಶಾಪಗಳು ಬರಬಹುದೇ ? ಎಂಥಾ ರಂಪಾಟ ಮಾಡಬಹುದು ?....ಒಮ್ಮೊಮ್ಮೆ ಅವರು ಮೌನಿಯಾಗಿ ಅಲ್ಲಿಂದೆದ್ದು ಮನೆಯ ಒಳಕೋಣೆಗೆ ಹೋಗಿ ಒಳಗಿನಿಂದ ಚಿಲಕ ಹಾಕಿಕೊಂಡುಬಿಡುತ್ತಿದ್ದರು. ನಾನು ಗರಬಡಿದವನಂತೆ ಕೂತುಬಿಡುತ್ತಿದ್ದೆ. ಈಗಲೂ ಅವರ ಮನಸ್ಸಿನಲ್ಲಿ ಅದೆಂಥಾ ಬಿರುಗಾಳಿ ಏಳುತ್ತಿದೆಯೋ ಏನೋ.

ನನ್ನ ಮನೆಯವರು ಮತ್ತು ಉಳಿದ ಮಿತ್ರರೆಲ್ಲಾ, 'ವಿನೋದನ ಸಾವಿನ ರಹಸ್ಯವನ್ನು ಯಾರಿಗೂ ಎಂದೂ ಹೇಳಬಾರದು. ಅವರ ತಂದೆ ತಾಯಿಗಂತೂ ಹೇಳಲೇಬಾರದು, ಇದರಿಂದ ಅವರ ದುಃಖ ಸ್ವಲ್ಪವಾದರೂ ಕಡಿಮೆಯಾಗಬಹುದು' ಎಂದು ಪ್ರತಿಜ್ಞೆ ಕೈಗೊಂಡಿದ್ದೆವು.

ದಿನಗಳು ಕಳೆಯಲಾರಂಭಿಸಿತು. ಕ್ರಮೇಣ ನಾವು ಸಹಜ ಸ್ಥಿತಿಗೆ ಬರಲಾರಂಭಿ

ಸಿದೆವು. ಯಾವ ಅಪರಾಧ-ಭಾವನೆಯಿಂದ ನಾನು ಬಂಧಿಸಲ್ಪಟ್ಟಿದ್ದೆನೋ, ಅದೂ ಕ್ರಮೇಣ ಸಡಿಲವಾಗಲಾರಂಭಿಸಿತು. ಬದುಕಿನ ವ್ಯಾಪಾರದಲ್ಲಿ ನಾವೆಲ್ಲಾ ಮತ್ತೆ ತೊಡಗಿಸಿಕೊಂಡೆವು. ವಿನೋದನ ನೆನಪಾದಾಗಲೆಲ್ಲಾ ಮನಸ್ಸಿಗೆ ತುಂಬಾ ಆಘಾತ ವಾಗುತ್ತಿತ್ತು. ಆದರೆ ಶೀಘ್ರವೇ ಮನಸ್ಸು ಯಥಾಸ್ಥಿತಿಗೆ ಬರುತ್ತಿತ್ತು. ಬದುಕುವ ಆಸೆ ಎಲ್ಲವನ್ನೂ ದೂರ ಮಾಡಿಬಿಡುತ್ತದೆ.

ಚಿಕ್ಕಮ್ಮನ ವ್ಯವಹಾರ ನನ್ನೊಂದಿಗೆ ಈ ಹಿಂದಿನಂತೆಯೇ ಇತ್ತು. ಹಾಗೇ, ಈಗಲೂ ಮೌನಿಯಾಗಿ, ನಿರಾಸೆಯಿಂದ ನನ್ನನ್ನು ನೋಡುತ್ತಿದ್ದರು. ಒಮ್ಮೊಮ್ಮೆ ಅವರ ಮೌನ ಮುರಿದುಕೊಳ್ಳಲಾರಂಭಿಸಿತು. ನನ್ನ ಚಲನವಲನಗಳ ಬಗ್ಗೆಯೂ ಮನೆಯವರ ಕ್ಷೇಮ-ಸಮಾಚಾರದ ಬಗ್ಗೆಯೂ ವಿಚಾರಿಸಲಾರಂಭಿಸಿದರು. ಒಮ್ಮೊಮ್ಮೆ ವಿನೋದನ ಬಗ್ಗೆಯೂ ಪ್ರಸ್ತಾಪವೆತ್ತಿಬಿಡುತ್ತಿದ್ದರು. "ಈಗ ವಿನೋದ ಇದ್ದಿದ್ದರೆ ಇಪ್ಪತ್ತಮೂರು ವರ್ಷದವನಾಗಿರುತ್ತಿದ್ದ." ಅಥವಾ "ಮಗು, ಅವತ್ತು ವಿನೋದ ನನ್ನು ನೀರಿನಿಂದ ಉಳಿಸಲು ಅಕ್ಕಪಕ್ಕದಲ್ಲಿ ಯಾರೂ ಇರಲಿಲ್ವಾ ?" ಇಂಥಾ ಪ್ರಶ್ನೆ ಗಳಿಂದ ಚಿಕ್ಕಮ್ಮ ತನ್ನೊಂದಿಗೆ ಇನ್ನೂ ಸೆಣಸಾಡುತ್ತಿದ್ದರು. ಅವರ ಒಳಗಿನ ಗಾಯ ಇನ್ನೂ ಮಾಗಿರಲಿಲ್ಲ.

ಆದರೆ ನಾನೇಕೆ ಪದೇ-ಪದೇ ಚಿಕ್ಕಮ್ಮನ ಮನೆಗೆ ಹೋಗುತ್ತಿದ್ದೆ ? ಚಿಕ್ಕಮ್ಮ ನನ್ನ ನೆರಳಿನಿಂದಲೂ ದೂರವಿರಲು ಬಯಸುತ್ತಿರಬೇಕು. ಅವರೆಡೆಗೆ, ನನ್ನ ಅಪರಾಧ ಭಾವನೆಯು ಎಳೆದುಕೊಂಡು ಹೋಗುತ್ತಿತ್ತೆ ? ಅಥವಾ ವಿನೋದನ ಸಾವಿನ ರಹಸ್ಯ ಅವರಿಗೆ ತಿಳಿದಿಲ್ಲ ಎಂಬುದನ್ನು ಮನದಟ್ಟುಮಾಡಿಕೊಳ್ಳಲೋಸುಗ ನಾನು ಅವರ ಬಳಿ ಹೋಗುತ್ತಿದ್ದೆನೇ ?

ಕಡೆಗೆ, ನಾನು ಚಿಕ್ಕಮ್ಮನ ಮನೆಗೆ ಹೋಗಲೇಬಾರದೆಂದು ನಿರ್ಧರಿಸಿದೆ. ಆದದ್ದು ಆಯಿತು. ಇನ್ನು ಎಷ್ಟು ದಿನ ಆ ದುರ್ಘಟನೆ ಬಗ್ಗೆ ತಲೆಕೆಡಿಸಿಕೊಳ್ಳುವುದು ? ನಾನು, ಅವರನ್ನು ಭೇಟಿಯಾಗುವದನ್ನೇ ನಿಲ್ಲಿಸಿದೆ. ಇದರಿಂದ ಅವರಿಗೆ ಅದೆಷ್ಟು ನೆಮ್ಮದಿ ಸಿಕ್ಕಿತೋ ಇಲ್ಲವೋ, ತಿಳಿಯದು. ಆದರೆ ನನ್ನ ಮನಸ್ಸಿನ ಬಿಗಿತ ಸಡಿಲ ಗೊಳ್ಳಲಾರಂಭಿಸಿತು.

ಮೇ ತಿಂಗಳು. ನಾನು ತೀವ್ರ ಜ್ವರದಿಂದ ನರಳುತ್ತಿದ್ದೆ. ಈ ರೀತಿ ಜ್ವರ ಬರುತ್ತಿರುವುದು ಮೂರನೆಯ ಸಲವಾದ್ದರಿಂದ, ಜ್ವರ ನನ್ನೆಲ್ಲಾ ಶಕ್ತಿಯನ್ನೂ ಹಿಂಡಿ ಬಿಟ್ಟಿತ್ತು. ಆಗ ಇಂಥಾ ಜ್ವರಕ್ಕೆ ಸರಿಯಾದ ಚಿಕಿತ್ಸೆ ಇರಲಿಲ್ಲ. ಓರ್ವ ಆಯುರ್ವೇದ ಪಂಡಿತರು 'ಮೃತ್ಯುಂಜಯ' ಗುಳಿಗೆಗಳನ್ನು ಕೊಟ್ಟಿದ್ದರು. ನಾನು ಮಂಚಕ್ಕೆ ಹತ್ತಿ ಕೊಂಡುಬಿಟ್ಟಿದ್ದೆ. ನನಗೇ ನನ್ನ ಆರೋಗ್ಯದ ಬಗ್ಗೆ ಹೆಚ್ಚು ತಿಳಿದಿರಲಿಲ್ಲ, ಆದರೆ ನನ್ನ ಶುಶ್ರೂಷೆ ಮಾಡುತ್ತಿದ್ದ ನಮ್ಮ ಮನೆಯವರ ಮುಖಗಳಲ್ಲಿ ಚಿಂತೆಯ ರೇಖೆ ಗಳು ನಿತ್ಯ ಆಳವಾಗುತ್ತಿದ್ದವು. ಅವರು ನನಗೆ ಧೈರ್ಯ ಹೇಳಿದಷ್ಟೂ ನನ್ನ ಸಂಶಯ

ಹೆಚ್ಚುತ್ತಿತ್ತು. ನನ್ನ ಹಳದಿಯಾಗುತ್ತಿರುವ ಕೈಗಳು, ಅಸ್ಥಿಪಂಜರದಂಥಾ ಮುಖ, ನಡುಗುವ ಕಾಲುಗಳು ನನ್ನ ವಾಸ್ತವಿಕ ಪರಿಸ್ಥಿತಿಯನ್ನು ಹೆಚ್ಚು ಸ್ಪಷ್ಟಗೊಳಿಸುತ್ತಿದ್ದವು.

ಸಾವು ಸಮೀಪಿಸುತ್ತಿರುವ ವ್ಯಕ್ತಿ ಯಾಕೆ ಭಾವುಕನಾಗುತ್ತಾನೋ ? ನಾನೂ ಭಾವುಕನಾಗುತ್ತಿದ್ದೆ. ಮಲಗಿರುವಾಗ, ನನ್ನ ಕಣ್ಣುಗಳ ಅಂಚಿನಿಂದ ಕಣ್ಣೀರು ತೊಟ್ಟಿಕ್ಕುತ್ತಿತ್ತು. ನನ್ನ ಶುಶ್ರೂಷೆ ಮಾಡುತ್ತಿದ್ದ ನನ್ನ ಮನೆಯವರೆಲ್ಲಾ ನನಗೆ ಅತ್ಯಂತ ಪ್ರಿಯರಾಗಿ ಕಾಣಲಾರಂಭಿಸಿದ್ದರು. ಅವರಿಂದೆಲ್ಲಾ ನಾನು ಅಗಲುತ್ತಿದ್ದೆ.

ಆಗಲೇ, ಚಿಕ್ಕಮ್ಮ ನಮ್ಮ ಮನೆಗೆ ಬರಲಾರಂಭಿಸಿದ್ದನ್ನು ಗಮನಿಸಿದೆ. ಅವರು ಬಂದು, ಒಂದು ಮೂಲೆಯಲ್ಲಿ ಮುದುಡಿ ಕೂರುತ್ತಿದ್ದರು. ಅವರೇಕೆ ಬರಲಾರಂಭಿಸಿದ್ದರು ? ಯಾವ ಭಾವನೆ ಅವರನ್ನು ಎಳೆದು ತರುತ್ತಿತ್ತು ? ಅದೆಷ್ಟೋ ಬಾರಿ ಮನುಷ್ಯನಿಗೆ ತನ್ನ ವ್ಯವಹಾರದ ಪ್ರೇರಕ ಕಾರಣಗಳು ಅಪರಿಚಿತವಾಗಿರುತ್ತವೆ.ಅವರಿಗೆ ನನ್ನ ಆರೋಗ್ಯದ ಬಗ್ಗೆ ಚಿಂತೆಯಿತ್ತೆ ? ಔಪಚಾರಿಕತೆಗಾಗಿ ಬರುತ್ತಿದ್ದಾರೆಯೇ ? ಮಗ ವಿನೋದ ಸತ್ತ ಸಾವನ್ನು ನನ್ನಲ್ಲಿ ಕಾಣಲು ಬರುತ್ತಿದ್ದಾರೆಯೇ ?

ನನ್ನ ಪರಿಸ್ಥಿತಿಯೂ ವಿಚಿತ್ರವಾಗಿತ್ತು. ಜೀವಮಾನವಿಡಿಯ ಪಶ್ಚಾತ್ತಾಪ ನೆರಳಿನಂತೆ ನನ್ನ ಮನಸ್ಸನ್ನು ಘೇರಾಯಿಸುತ್ತಿತ್ತು. ನಾನು ಇದರಿಂದ ಬಿಡುಗಡೆ ಹೊಂದಲು ಬಯಸುತ್ತಿದ್ದೆ. ಮನಸ್ಸನ್ನು ಹಗುರಗೊಳಿಸಿಕೊಳ್ಳಲು ಬಯಸುತ್ತಿದ್ದೆ. ಚಿಕ್ಕಮ್ಮ ಮೂಲೆಯಲ್ಲಿ ಕೂತಾಗ ವಿನೋದನ ಸಾವಿನ ವಿಷಯವನ್ನು ಹೇಳಲು ಮನಸ್ಸು ಚಡಪಡಿಸುತ್ತಿತ್ತು. ಅಂದು, ವಿನೋದ ನನ್ನನ್ನು ಉಳಿಸಲೋಸುಗ ಜೀವ ತೆತ್ತ : ನಾನೇ ಅವನನ್ನು ಆಳದ ನೀರಿಗೆ ಎಳೆದುಕೊಂಡಿದ್ದೆ ಎಂದು ಹೇಳಿಬಿಡಲೇ ! ನಾನೆಲ್ಲವನ್ನು ಹೇಳಿಬಿಡಬೇಕು. ನಾನು, ನನ್ನ ಕರ್ಮಕ್ಕೆ ಫಲವನ್ನು ಈಗ ಅನುಭವಿಸುತ್ತಿದ್ದೇನಲ್ಲ, ಹೇಳಿಯೇ ಹೋಗುವೆ.

ವೈದ್ಯರು ಪಥ್ಯ ಸಿದ್ಧ ಮಾಡಲು ಹೇಳಿದ್ದರು. ಚಿಕ್ಕಮ್ಮ ಅಡುಗೆ ಮನೆಯಲ್ಲಿ ಅದರ ಸಿದ್ಧತೆ ಮಾಡಿಕೊಂಡು ಸ್ವಲ್ಪ ಹೊತ್ತಿಗೆ ಬಂದರು. ಅವರು ತಮ್ಮ ಸೀರೆಯ ಸೆರಗಿನಲ್ಲಿ ಪಾತ್ರೆ ಹಿಡಿದುಕೊಂಡಿದ್ದರು. ಅದನ್ನು ಟೇಬಲ್ ಮೇಲಿಟ್ಟು ಮತ್ತೆ ಮೂಲೆಗೆ ಹೋಗಿ ಕೂತರು.

ನಾನು ವ್ಯಗ್ರನಾದೆ. ನಾನೀಗ ಹೇಳಲೇಬೇಕು. ಈ ರಹಸ್ಯ ನನ್ನೆದೆಯಲ್ಲಿ ಹಾವಿನಂತೆ ಹೆಡೆಯಾಡುತ್ತಿತ್ತು.

“ಚಿಕ್ಕಮ್ಮ, ನಾನೊಂದು ವಿಷಯ ನಿಮಗೆ ಹೇಳಬೇಕು” ಅವರು ಹೆದರಿ ಎದ್ದು

ನನ್ನ ಬಳಿ ಬಂದರು. ನಾನೂ ಹೆದರಿದೆ, ಚಿಕ್ಕಮ್ಮ ಯಾವ ಪ್ರತಿಕ್ರಿಯೆಯನ್ನು ವ್ಯಕ್ತ ಪಡಿಸಬಹುದು ?

"ಏನು" ಅವರು ನನ್ನನ್ನೇ ಗಮನಿಸಿದರು.

"ನಾನು ನಿಮಗೆ ಹೇಳಿರಲಿಲ್ಲ, ವಿನೋದ ನನ್ನ ಕಾರಣವೇ ಸತ್ತ" ನಾನು ಹೇಳುತ್ತಲೇ ಇದ್ದೆ, "ಅವನು ನನ್ನನ್ನುಳಿಸಲು ತನ್ನ ಬೆಲ್ಟನ್ನು ನನ್ನೆಡೆಗೆ ಎಸೆದಿದ್ದ. ನಾನೇ ಅವನನ್ನು ಆಳವಾದ ನೀರಿಗೆ ಎಳೆದುಕೊಂಡಿದ್ದೆ...." ಹೀಗೆ ಹೇಳುವಾಗ ನನ್ನ ಕಂಠ ಒತ್ತಿ ಬಂತು. ನಾನು ಜೋರಾಗಿ ಉಸಿರಾಡಲಾರಂಭಿಸಿದೆ.

ಚಿಕ್ಕಮ್ಮ ಸ್ವಲ್ಪ ಹೊತ್ತು ನಾನು ಹೇಳಿದ ಮಾತುಗಳನ್ನು ಕೇಳುತ್ತಿದ್ದು ಕಡೆಗೆ ಮುಂದೆ ಬಂದು ನನ್ನ ತುಟಿಗಳ ಮೇಲೆ ಬೆರಳುಗಳನ್ನಿಟ್ಟರು. ಅವರ ಬೆರಳುಗಳು ಕಂಪಿಸುತ್ತಿದ್ದವು.

"ಸಾಕು-ಸಾಕು, ಮಾತಾಡಬೇಡ. ಇದೇನು ಹೇಳ್ತಿದ್ದೀಯಾ ?"

ಆ ದುರ್ಘಟನೆ ಸಂಭವಿಸಿದ ನಂತರ ನನ್ನ ತಾಯಿಯೂ ವಿನೋದನ ಸಾವಿನ ರಹಸ್ಯವನ್ನು ನಾನು ಯಾರಿಗೂ ಹೇಳಬಾರದೆಂದು ಹೀಗೇ ನನ್ನ ತುಟಿಗಳ ಮೇಲೆ ತನ್ನ ಬೆರಳನ್ನಿಡುತ್ತಿದ್ದಳು.

"ಸುಮ್ನೆ ಮಲಕ್ಕೊ. ನಾನು ಔಷಧಿಯನ್ನು ಚಮಚದಿಂದ ನಿನ್ನ ಬಾಯಿಗೆ ಹಾಕ್ತೀನಿ".

ನಾನು ಸರಿಯಾಗಿ ವಿಷಯ ಹೇಳಲಿಲ್ಲ ಅಥವಾ ಚಿಕ್ಕಮ್ಮ ನನ್ನ ಮಾತನ್ನು ಸರಿಯಾಗಿ ಕೇಳಿಸಿಕೊಳ್ಳಲಿಲ್ಲವೇನೋ....ನಾನು ಮತ್ತೆ ಹೇಳಲು ಪ್ರಯತ್ನಿಸಿದೆ; ಚಿಕ್ಕಮ್ಮ ತಮ್ಮ ಕಂಪಿಸುವ ಬೆರಳುಗಳಿಂದ ಮತ್ತೆ ನನ್ನ ತುಟಿಗಳನ್ನು ಮುಚ್ಚಿದರು.

"ನನಗೆಲ್ಲಾ ಗೊತ್ತಿದೆ. ನೀನೇನು ಹೇಳೋದು ? ನನಗೆಲ್ಲಾ ಗೊತ್ತಿದೆ. ಅವತ್ತೇ ತಿಳಿಯಿತು. ಸುಮ್ನೆ ಮಲಕ್ಕೋ".

ಚಿಕ್ಕಮ್ಮ ನನ್ನ ತಲೆದಿಂಬಿನ ಬಳಿ ಕೂತು ನನ್ನ ತಲೆಯನ್ನು ನೇವರಿಸುತ್ತಾ ಹೇಳಿದರು. "ನೀನು ಗುಣಮುಖನಾಗಬೇಕು. ಚೆನ್ನಾಗಿ ಬಾಳಬೇಕು. ಹೋದವನಂತೂ ಹೋದ. ಉಳಿದವರನ್ನಂತೂ ದೇವರು ಚೆನ್ನಾಗಿಟ್ಟಿರಲಿ." ಚಿಕ್ಕಮ್ಮ ಬಾಗಿ ನನ್ನ ಹಣೆಗೆ ಮುತ್ತಿಕ್ಕಿದರು. "ನೀನು, ಖಂಡಿತಾ ಗುಣವಾಗ್ತೀಯಾ. ನಾನು ಒಂದು ಲಕ್ಷ ಗಾಯತ್ರಿ ಮಂತ್ರವನ್ನು ಪಠನ ಮಾಡ್ತೀನಿ ಅಂತ ಹೇಳಿಕೊಂಡಿದ್ದೇನೆ. ದಿನಾ ಮಾಡ್ತೀನಿ. ದೇವರು ನಮ್ಮ ಪ್ರಾರ್ಥನೆಯನ್ನು ಕೇಳ್ತಾನೆ. ನೀನು ಶೀಘ್ರ ಗುಣ ಹೊಂದುವೆ."

ವಿನೋದನ ತಾಯಿಯ ಕಣ್ಣುಗಳಿಂದ ಬಿಸಿ-ಬಿಸಿ ಕಣ್ಣೀರ ಹನಿಗಳು ನನ್ನ ಹಣೆಯ ಮೇಲೆ ಬಿದ್ದವು.

# ದಾಖಲೆ

# ಲಾಂಗ್‌ಸ್ಟನ್ ಹ್ಯೂಸ್‌ನ ಎರಡು ಕವಿತೆಗಳು (1902-1967)

ಅನು : ಪಿ. ಶ್ರೀನಿವಾಸರಾವ್

## ನಾನೂ

ನಾನೂ ಹಾಡುತ್ತೇನೆ ಅಮೇರಿಕಾ.

ಅದರ ಕಪ್ಪು ಸೇರಿದ ಸೋದರ ನಾನು
ಪರಿಚಿತರು ಬಂದಾಗ,
ತಿನ್ನಲು ಕಳಿಸುತ್ತಾರೆ ಅಡಿಗೆ ಮನೆಗೆ ನನ್ನನ್ನು.
ಆದರೆ,
ನಾನು ನಗುತ್ತೇನೆ,
ಚೆನ್ನಾಗಿ ತಿನ್ನುತ್ತೇನೆ,
ಬಲಿತು ಬಲಿಷ್ಠನಾಗುತ್ತೇನೆ.

ನಾಳೆ,
ಪರಿಚಿತರು ಬಂದಾಗ,
ಊಟದ ಮೇಜಿನ ಬಳಿ
ಇರುತ್ತೇನೆ ನಾನು.
ಯಾರಿಗೂ,
"ಹೋಗು, ತಿನ್ನು ಅಡಿಗೆ ಮನೆಯಲ್ಲಿ"
ಎನ್ನುವ ಧೈರ್ಯವಿರುವುದಿಲ್ಲ,
ಆಗ.

ಅಲ್ಲದೆ,
ಅವರು, ನಾನು ಎಷ್ಟು ಸುಂದರನೆಂದು ನೋಡಿ,
ನಾಚಿಕೆಪಟ್ಟುಕೊಳ್ಳುತ್ತಾರೆ.

ನಾನೂ ಅಮೇರಿಕಾ.

## ನದಿಗಳ ಬಗ್ಗೆ ನೀಗ್ರೋ ಮಾತನಾಡುತ್ತಾನೆ

ನಾನು ನದಿಗಳನ್ನು ಬಲ್ಲೆ :
ಬಲ್ಲೆ ಈ ಪೃಥ್ವಿಯಷ್ಟೇ ಪ್ರಾಚೀನ ನದಿಗಳನ್ನು,
ಮನುಷ್ಯನಾಳದಲ್ಲಿ ರಕ್ತ ಹರಿಯುವ ಮೊದಲು
ಹರಿಯುತ್ತಿದ್ದ ನದಿಗಳನ್ನು.

ನದಿಗಳ ಹಾಗೆ. ನನ್ನ ಅಂತರಾತ್ಮದ ಆಳ ಬೆಳೆದುಬಿಟ್ಟಿದೆ.

ಬೆಳಗುಗಳು ಇನ್ನೂ ಸಣ್ಣವಿದ್ದಾಗ, ಸ್ನಾನ ಮಾಡಿದ್ದೆ ನಾನು
ಯೂಫ್ರಟೀಸ್ ನದಿಯಲ್ಲಿ ;
ಕಟ್ಟಿದ್ದೆ ನನ್ನ ಜೋಪಡಿ, ಕಾಂಗೋ ನದಿಯ ದಡದಲ್ಲಿ.
ಕಾಂಗೋ ಮಲಗಿಸಿದ್ದಳು ನನ್ನ ಲಾಲಿ ಹಾಡಿ.
ನೈಲ್ ನದಿಯನ್ನು ವೀಕ್ಷಿಸಿ, ಅದರ ದಂಡೆಯ ಮೇಲೆ
ಪಿರಮಿಡ್ಡುಗಳನ್ನು ನಿರ್ಮಿಸಿದ್ದೆ.
ಏಬ್ ಲಿಂಕನ್ ನ್ಯೂ ಆರ್ಲೀನ್ಸ್‌ಗೆ ಹೋದಾಗ
ಕೇಳಿದ್ದೆ ಮಿಸಿಸಿಪ್ಪಿ ನದಿಯ ಗೀತೆ.
ಅದರ ಮಣ್ಣು ಕದಡಿದ ಎದೆ,
ಸೂರ್ಯ ಮುಳುಗುವ ಸಮಯ
ಸಂಪೂರ್ಣ ಹೊನ್ನಾಗುವುದನ್ನೂ
ಕಂಡಿದ್ದೇನೆ ನಾನು.

ನಾನು ನದಿಗಳನ್ನು ಬಲ್ಲೆ.
ಬಲ್ಲೆ ಪುರಾತನ ಕಾರ್ಗತ್ತಲ ನದಿಗಳನ್ನು.
ಇಂದು, ನದಿಗಳ ಹಾಗೆಯೇ ಅಂತರಾತ್ಮದ ಆಳ
ಬೆಳೆ ಬೆಳೆದು ನಿಂತುಬಿಟ್ಟಿದೆ.

# ಮಿತ್ಯನಾರಾಯಣ ಕತೆ

ಮೂಲ (ತುಳು) : ಡಾ॥ ಎನ್. ಎ. ಶೀನಪ್ಪ ಹೆಗ್ಗಡೆ
ಅನು : ಅ. ಬಾಲಕೃಷ್ಣ ಶೆಟ್ಟಿ ಪೊಳಲಿ

[ದಿ॥ ಎನ್. ಎ. ಶೀನಪ್ಪ ಹೆಗ್ಗಡೆ ಅವರು (1890–1966) ಆಧುನಿಕ ತುಳು ಸಾಹಿತ್ಯದ ಗದ್ಯಶೈಲಿಯ ನಿರ್ಮಾಪಕರೆಂಬ ಗೌರವಕ್ಕೆ ಪಾತ್ರರಾದವರು. 1915ರಷ್ಟು ಹಿಂದೆಯೇ ದಕ್ಷಿಣ ಕನ್ನಡ ಜಿಲ್ಲೆಯ ಚರಿತ್ರೆ ಮತ್ತು ಭೂತಾಳಪಾಂಡ್ಯನ ಅಳಿಯ ಕಟ್ಟು ಎಂಬ ಪುಸ್ತಕವನ್ನು ಕನ್ನಡದಲ್ಲಿ ರಚಿಸಿದರು. ಶ್ರೀನಿವಾಸಲಿಪಿ ಎಂಬ ಅಂಕ ಲಿಪಿಯ ನಿರ್ಮಾಪಕರು. ಸ್ವಾತಂತ್ರ್ಯ ಚಳವಳಿಯಲ್ಲಿ ಕಾರಾಗೃಹವಾಸ ಅನುಭವಿಸಿದ್ದರು. ಕನ್ನಡ ಮತ್ತು ತುಳು ಭಾಷೆಗಳಲ್ಲಿ ಹಲವು ಕೃತಿಗಳನ್ನು ರಚಿಸಿದವರು. ತುಳು ಚಳವಳಿಯಲ್ಲಿ ಸಕ್ರಿಯವಾಗಿ ಪಾಲ್ಗೊಂಡು ಪನಿಯಾಡಿಯವರು ತುಳುವ ಮಹಾಸಭೆಗೆ ರಾಜಿಯಿತ್ತಮೇಲೆ ಅದರ ಕಾರ್ಯದರ್ಶಿಯಾಗಿ 1948ರವರೆಗೆ ನಡೆಸಿಕೊಂಡು ಬಂದವರು.

ತುಳು ಸಂಸ್ಕೃತಿ, ನಡವಳಿಕೆ, ಆಚಾರ ವಿಚಾರ, ತುಳು ಭಾಷಾ ಪ್ರಭೇದಗಳು, ನುಡಿಗಟ್ಟುಗಳನ್ನು ಒಳಗೊಂಡ ಅಪೂರ್ವ ಕೃತಿ ಮಿತ್ಯನಾರಾಯಣ ಕತೆ. ಅದರ ಮೊದಲನೆಯ ಅಧ್ಯಾಯದ ಸರಳ ಕನ್ನಡ ಭಾಷಾಂತರವಿದು.]

## ಮೊದಲನೆಯ ತಿಂಗಳ ಕತೆ

ಇರುಳಿನ ಕತ್ತಲೆಯು ಕಳೆಯುತ್ತ ಬರುತ್ತಿದೆ. ಮುಂಜಾವದ ಕೋಳಿಗಳು ದೊಡ್ಡ ದನಿಯೆತ್ತಿ 'ಲಕ್ಕ್‌ಲೆ ಉಲ್ಲಾಯ ಲಕ್ಕ್‌ಲೆ' (ಏಳಿ ಧನಿಗಳೇ ಏಳಿ) ಎಂಬಂತೆ ಕೊಕ್ಕೋಕೋ-ಕೋ ಎಂದು ನಾಲ್ಕೂ ದಿಕ್ಕುಗಳಲ್ಲಿ ಕೆಲೆದು ಸಾರುತ್ತಿದ್ದುವು. ಆ ಸ್ವರವು ದೊಡ್ಡ ದೊಡ್ಡ ಗುತ್ತಿನ ಗುರಿಕಾರರನ್ನು ಎಬ್ಬಿಸಿತು. ಆಗ ಚಲಿಪಿಲಿ ಹಕ್ಕಿಗಳು ಅವುಗಳ ಭಾಷೆಯಲ್ಲಿ ಸಣ್ಣ ಸಣ್ಣ ಮಕ್ಕಳನ್ನು ಎಬ್ಬಿಸತೊಡಗಿದವು. 'ಅಕ್ಕಾ ಅಕ್ಕಾ ಲಕ್ಲೆಕ್ಕಾ (ಏಳಿ ಅಕ್ಕಾ) ಎಂದು ಕಾಗೆಗಳು ಹೆಂಗಸರನ್ನು ಕರೆ ಕರೆದು ಎಬ್ಬಿಸಿದುವು. ಯಜಮಾನರು ಎದ್ದು ವೀಳ್ಯದ ಚೀಲ ಬಿಡಿಸಿ ಎಲೆ ಅಡಿಕೆ

ತಿಂದರು. ಮೂಲದ ಹರಿಜನರನ್ನು ಕರೆದರು. ಈ ಸ್ವರವು ಮನೆಯಲ್ಲಿದ್ದ ತರುಣರನ್ನೂ ಎಬ್ಬಿಸಿತು. ಅವರು ಎದ್ದು ತಮ್ಮ ಕೆಲಸಕ್ಕೆ ಹೊರಟರು. ಒಕ್ಕಲಿನವರು ದನಿಗಳು ಕರೆದರು, ಕೆಲಸಕ್ಕೆ ಹೋಗಬೇಕೆಂದು ಬೇಗಬೇಗನೆ ಎದ್ದರು. ಚಾಪೆ ಮಡಚಿಟ್ಟು, ಎಸರಿಡಲು ಬೆಂಕಿ ನಂದಿ ಹೋದ ಮನೆಯವರು ನೆರೆಮನೆಯಿಂದ ಬೆಂಕಿ ತಂದರು. ಅಡುಗೆಯವರು ಎದ್ದು ಗಂಜಿಗೆ ನೀರಿಟ್ಟು ಬೆಂಕಿ ಮಾಡಿ ಪಾತ್ರೆಪರಡಿಗಳನ್ನು ತೊಳೆಯಲಿಕ್ಕಾಗಿ ಬಾವಿಕಟ್ಟೆಗೆ ಹೋದರು.

ಹೆಣ್ಣುಮಕ್ಕಳು ಎದ್ದು ತಲೆಬಿಚ್ಚಿ ಪ್ರಾಸಿಕಟ್ಟಿ, ಹಿಡಿಸೂಡಿಯಿಂದ ಕಸ ಗುಡಿಸಿದರು. ಸಣ್ಣಮಕ್ಕಳು ಎಚ್ಚರಿಕೆಯಾದ ಮೇಲೂ ಈ ಚಾಪೆಯಿಂದ ಆ ಚಾಪೆಗೆ ಹೊರಳುತ್ತಿದ್ದರು. ಅವರನ್ನು ಎಬ್ಬಿಸಿ ಚಾಪೆಗಳನ್ನು ಮಡಚಿಟ್ಟು ಕಸ ಗುಡಿಸಿದರು. ಮಕ್ಕಳು ಎದ್ದು ಕೆಲವು ಚಳಿಕಾಯಿಸಲೆಂದು ಹಟ್ಟಿಯಕೊಟ್ಟ್ಯಕ್ಕೆ ಓಡಿದುವು. ಹಾತೆ ಹಿಡಿಯಲು ತೋಡಿನ ಒಳಗೆ ಕೆಲವು ಓಡಿದುವು. ಹೆಣ್ಣುಮಕ್ಕಳು ಹೂಹೆಕ್ಕಲು, ಕೊಯ್ಯಲು ಹೋದುವು. ಸ್ವಲ್ಪ ದೊಡ್ಡಮಕ್ಕಳು ಸಣ್ಣಮಕ್ಕಳನ್ನು ಆಡಿಸುತ್ತಿದ್ದುವು.

ಆ ಹೊತ್ತಿಗೆ ದೇವಸ್ಥಾನದಿಂದ ಡೋಲುಗಂಟೆ ಕೇಳಿಸಿತು. ಆಗ ಮಕ್ಕಳು ಕೈಕಾಲು ಹಲ್ಲುಮೋರೆಗಳನ್ನು ತೊಳೆದುಕೊಂಡು ಐಗಳಮಠದ ಬಾಯಿಪಾಠ ಹೇಳತೊಡಗಿದರು. ಹುಡುಗಿಯರು ಮುಖತೊಳೆದು ಹೊಸ್ತಿಲಲ್ಲಿ ಸೇಡಿಮಣ್ಣಿನಲ್ಲಿ ರಂಗೋಲಿ ಬರೆದು ದೀಪ ಇಟ್ಟು ಹೂಹಾಕಿ ಕೈಮುಗಿದರು. ತಲೆಬಾಚಿ ಹಣೆಗೆ ಕುಂಕುಮ, ಕಣ್ಣಿಗೆ ಕಾಡಿಗೆ ಇಟ್ಟುಕೊಂಡರು. ಕೆಲಸದಾಳುಗಳು ಗಂಜಿಯನ್ನೋ, ತಂಗಳನ್ನೋ ಉಂಡು ಅವರವರ ಕೆಲಸಕ್ಕೆ ಹೋದರು. ಹರಿಜನರು ಕೋಣಗಳಿಗೆ ಅಕ್ಕಚ್ಚು ಕೊಟ್ಟು ಬೈಹುಲ್ಲು ಹಾಕಿ ನೊಗನೇಗಿಲುಗಳನ್ನು ಹಿಡಿದುಕೊಂಡು ಕೋಣಗಳನ್ನು ಬಿಟ್ಟು ಉಳಲಿಕ್ಕೆ ಹೋದರು.

ಒಂದು ಗದ್ದೆಯಲ್ಲಿ ನೇಜಿಕೀಳಲು ನಟ್ಟಿಯ ಆಳುಗಳು ಇಳಿದರು. ಕೆಲವರು ಗೊಬ್ಬರ ಹೊರುತ್ತಾರೆ. ಸ್ವಲ್ಪ ಜನ ಗದ್ದೆಯ ಬದಿ ಕಡಿದು ಹುಣಿಯ ಬದಿ ಮಣ್ಣು ಮೆತ್ತಿ ಅಲ್ಲಲ್ಲಿ ಅಗಲ ಸಪೂರ ಇರುವವುಗಳನ್ನು ಸಮಗೊಳಿಸುತ್ತಾರೆ. ಗುತ್ತಿನ ಯಜಮಾನರು ಕಂಬಳಿ ಹೊದ್ದುಕೊಂಡು ಉಳುವ ಗದ್ದೆಗಳ ನೀರನ್ನು ಹದಗೊಳಿಸಿ, ಉಳುವವರೊಡನೆ "ಕೋಣಗಳನ್ನು ಕೊನೆಯವರೆಗೆ ಕೊಂಡುಹೋಗಿ. ಅಡ್ಡ ತಿರುಗಿಸಬೇಡಿ. ಸಪೂರ ಸಾಲುಮಾಡಿ, ಸಾಲು ಬಿಡಬೇಡಿ" ಎಂದು ದೊಡ್ಡ ಸ್ವರದಲ್ಲಿ ಹೇಳುತ್ತ ಗದ್ದೆಯ ಹುಣಿಯಲ್ಲಿ ವೀಳ್ಯ ತಿನ್ನಲು ಕುಳಿತಿದ್ದಾರೆ. ಮೇಲೆ, ಕೆಳಗೆ ಎಲ್ಲ ಬಯಲು ಗದ್ದೆಗಳಲ್ಲೂ ಕೋಣಕಟ್ಟಿ ಉಳುತ್ತಾರೆ. ಆದರೆ ಗುತ್ತಿನ ಗದ್ದೆಯಲ್ಲಿ ಕೋಣಗಳ ಸಾಲಿನ ಮೊದಲಲ್ಲಿ ಗಾಡಿಗೆ ಕಟ್ಟುವ ಕರ್ಬಾಸ್ ಹೋರಿಗಳು, ಅವುಗಳ ಹಿಂದೆ ಕಂಬಳದ ಓಟದ ಕೋಣಗಳು ಮತ್ತು ಹದಿನಾರು ಜತೆ ಎತ್ತು ಕೋಣಗಳು. ಒಂದು ಸುತ್ತು ಬರುವಾಗಲೇ ಒಮ್ಮೆ ಇಡೀ ಗದ್ದೆ ಹುಡಿಯಾಗುತ್ತಿತ್ತು. ಒಂದು ಕಡೆ ಕಿತ್ತ ನೇಜಿ

ಗಳನ್ನು ಬುಟ್ಟಿಯಲ್ಲಿ ತುಂಬಿಸಿ ಉತ್ತು ಆದ ಗದ್ದೆಗಳಲ್ಲಿ ಹರಡಿಹಾಕುತ್ತಾರೆ. ಉಳುವಾಗ ಕೋಣಗಳು ಚುರುಕಾಗಿ ನಡೆಯಲೆಂದು ಹಿಡಿಯಲ್ಲಿರುವ ಬೆತ್ತವನ್ನು ಅವುಗಳ ಬೆನ್ನಿಗೆ ಮೆಲ್ಲ ಮುಟ್ಟಿಸಿ ಓ ಹಾಕುವ ಆ ಚೆಲುವು ಕೇಳಿದವರಿಗೇ ಗೊತ್ತು. ನೆಡುವ ಗದ್ದೆಯಲ್ಲಿ ನಲುವತ್ತು ಐವತ್ತು ಹೆಂಗಸರು ನೇಜಿ ನೆಡುವಾಗ 'ಓ ಬೇಲೆ ಓ ಬೇಲೋ ಬೇಲೆ ಪಯ್ಯೋ' ಎಂಬ ಕಬಿತಗಳ ರಾಗ ಕೇಳಿದವರು ಅಲ್ಲೇ ನಿಂತು ಕೇಳುತ್ತಿದ್ದಾರೆ. ಅದರ ಅಂದಚಂದ ಬರೆದು ತೀರದು; ಕಿವಿಯಲ್ಲೇ ಕೇಳಬೇಕು.

ಅಡಿಗೆಯ ಹೆಂಗಸರು ಎದ್ದು ಕಸಗುಡಿಸಿ ಸೆಗಣಿನೀರು ಚಿಮುಕಿಸಿ ಹಟ್ಟಿಗೆ ಹೋದರು. ದನಕರುಗಳಿಗೆ ಬಾಯಾರಿಕೆಗೆ ಅಕ್ಕಚ್ಚು ಇಟ್ಟರು. ತಿನ್ನಲು ಹಿಂಡಿ ಹಾಕಿದರು. ಮೈತಿಕ್ಕಿ ಎಣ್ಣೆಪಸೆ ಪೂಸಿದರು. ಕಾಲು ತೊಳೆದು ತಲೆಗೆ ಕುಂಕುಮ ಇಟ್ಟು ಕೈಮುಗಿದರು. ಆಗ ಮಕ್ಕಳು ಓಲೆಕಂಟಾವು(ಲೇಖನಿ) ಹಿಡಿದು ಐಗಳ ಮಠಕ್ಕೆ ಹೊರಟರು. ಇನ್ನೊಬ್ಬಳು ಚೆಂಬಿನ ಬಟ್ಟಲಿಗೆ ಬೂದಿ ಹಾಕಿ ತೊಳೆದು, ಮೊಸರು ಕಡೆದು ಬೆಣ್ಣೆ ತೆಗೆದು ಮಕ್ಕಳಿಗೆ ಗಂಜಿ ಹಾಕಿಕೊಟ್ಟಳು. ಇಷ್ಟಾಗುವಾಗ ಎಲ್ಲ ಹೆಂಗಸರು ಅವರವರ ಕೆಲಸ ಮಾಡುತ್ತ ಒಬ್ಬಾಕೆ ತಿಮರೆ, ಒಬ್ಬಳು ಬಸಳೆ, ಒಬ್ಬಳು ಹಿತ್ತಲಿನಿಂದ ಹರಿವೆ, ಅಲಸಂಡೆ, ಬೆಂಡೆ, ಹೀರೆ, ಬದನೆ ಇತ್ಯಾದಿ ಕಾಯಿಪಲ್ಯಗಳನ್ನು ಕೊಯ್ದುಕೊಂಡು ಬಂದು ಎಲ್ಲರೂ ಹಲ್ಲುಜ್ಜಿ ಮುಖತೊಳೆಯಲು ಬಾವಿಯ ಹತ್ತಿರ ಹೋದರು. ಸುತ್ತಮುತ್ತ ಇರುವ ಕಲ್ಲುಗಳಲ್ಲಿ ಕುಳಿತುಕೊಂಡು ಮಾತನಾಡತೊಡಗಿದರು.

ಪೂವಕ್ಕೆ : ಹೌದೇ ಕೊಂತಕ್ಕಾ, ಇವೊತ್ತು ಶನಿವಾರವಲ್ಲವೇ ? ದೊಡ್ಡಣ್ಣನಿಗೆ ಶನಿವಾರ ಉಂಟು. ಪಲ್ಯ ಏನು ಮಾಡುವುದು ?

ಅಂತಕ್ಕೆ : ಶನಿವಾದ ದೊಡ್ಡಣ್ಣ ಒಬ್ಬರಿಗೇ ಅಲ್ಲವಷ್ಟೇ ? ಕೊಂಜಣ್ಣನಿಗೆ, ಕೊಂತಣ್ಣನಿಗೆ, ಗೋಂಪಣ್ಣನಿಗೆ, ಬೀಮಪ್ಪನಿಗೆ, ಬೊಂಕಪ್ಪನಿಗೆ, ಕ್ಯೊತಣ್ಣನಿಗೆ, ಲಿಂಗುವಿಗೆ ಎಂದು ಎಲ್ಲರಿಗೂ ಇದೆಯಲ್ಲವೇ !

ಪೂವಕ್ಕೆ : ಅದಿರಲಿ. ಅಣ್ಣನಿಗೆ ಆದಂತೆ ಅವರಿಗೂ ಆಗುತ್ತದೆ! ಆದರೆ ಇಬ್ಬರು ನೆಂಟರೂ ಇದ್ದಾರಲ್ಲಾ !

ರಾಮಕ್ಕೆ : ಹೌದಾ ಪರಾಡಿಯಮ್ಮ ! ನೆಂಟರು ಎಲ್ಲಿಯವರು ?

ಪೂವಕ್ಕೆ : ಪಾದೆಯ ಭಾವನ ಹೆಸರಿನವರು ಇದ್ದಾರಲ್ಲ, ಅವರ ಮಗಳ ಗಂಡ.

ರಾಮಕ್ಕೆ : ಯಾರದ್ದು ? ಬೊಮ್ಮಲೆಯ ಗಂಡನಾ ?

ಪೂವಕ್ಕೆ : ಅಲ್ಲ ಬೀಮಕ್ಕಾ, ಬೊಂಞಕ್ಕೆಯ ಗಂಡ.

ರಾಮಕ್ಕೆ : ಸಣ್ಣಮಗಳು ಕುಂಞಕ್ಕೆಯ ಗಂಡನೇ ?

ಪೂವಕ್ಕೆ : ಹೌದುಹೌದು. ಮೇಲೋಗರಕ್ಕೆ ಏನಿದೆ ಹೇಳಿ.

ಅಬ್ಬಕ್ಕೆ : ಪದಾರ್ಥಕ್ಕೆ ಏನು ? ಸೌತೆಗೆ ಹಲಸಿನ ಬೀಜ ಮತ್ತು ದೊಡ್ಡ ಹೆಸರು ಹಾಕಿ ಕೊದ್ದೆಲು ಮಾಡುವ. ಸೌತೆಯುಪ್ಪಿ ಮತ್ತು ಅಲಸಂಡೆ,

ಬೆಂಡೆ, ಹೀರೆ ಪಲ್ಯ ಮಾಡುವ. ಚಪ್ಪರದ ಬೀಳು ಮತ್ತು ಗದನೆ ಗಶಿ ಮಾಡುವ. ಗದ್ದೆಯ ಹುಣಿಯ ಪಸ್ಸಿಂಗ್ರಿ ಕಡೆದರೆ ಮತ್ತೇನು ಬೇಕು ?

ಮಂಜಕ್ಕ : ಹಾಗಲಕಾಯಿ ಮತ್ತು ಕಾಡ ಹೀರೆ ಉಂಟಲ್ಲಾ ?

ಪೂವಕ್ಕ : ಹಾಗಲ ಇದ್ದರೆ ಹೇಗೂ ಉಣಬಹುದಂತೆ. ಕಾಡಹೀರೆ ಮತ್ತು ಅಡ್ಕಬಾಳೆ ಸಂಜೆಗಿರಲಿ. ಈಗ ಹಪ್ಪಳ, ಸಂಡಿಗೆ, ಉಪ್ಪಿನಕಾಯಿ, ಮೊಸರು ಉಂಟು. ಅಷ್ಟು ಸಾಕು.

ತುಂಗು : ಅದಾಯಿತು. ಏನೇ ಬೊಂಕಮ. ರಾತ್ರೆಯ ಉಪಾಹಾರಕ್ಕೆ ಏನು ಮಾಡುವ ?

ಎಂಕಮ : ರಾತ್ರೆಯ ಉಪಾಹಾರಕ್ಕೆ ಏನು ? ಬೆಳ್ತಿಗೆ ಅಕ್ಕಿಯ ಮಣ್ಣಿ ಬೆಲ್ಲ ಕಾಯಿ ಹಾಕಿ ಮಾಡುವ, ಆಯಿತೇ !

ತುಂಗು : ಇವಳಿಗೊಂದು ಮಣ್ಣಿ. 'ಅಡಲು ತಿಳಿಯದವಳಿಗೆ ನಿನ್ನಿ, ಅಡಲು ತಿಳಿಯದವಳಿಗೆ ಮಣ್ಣಿ'. ಯಾಕೆ ಮಣ್ಣಿ ?

ಎಂಕಮ : ಆಗಲಪ್ಪಾ, ನಿಮಗೆ ಕಂಡಂತೆ ಮಾಡಿರಿ. ನನಗೆ ಪಾಪದವಳಿಗೆ ಯಾಕೆ ನಿಮ್ಮ ಸುದ್ದಿ?

ಕುಂಞಕ್ಕ : ಇವಳ 'ನೇನೆ' ಕೇಳಿದರೆ ನನಗೆ ಆಗುವುದಿಲ್ಲ. ನೆಂಟರಿರುವಾಗ ಮಣ್ಣಿ ಯಾಕೆಂದು ಕೇಳಿದರೆ ಕೋಪ. ನೀರು ದೋಸೆ ಮತ್ತು ಕಾಯಿ ಹಾಲು ಮಾಡುವ. ಅಕ್ಕಿಯ 'ಅಡ್ಯೆ' ಮಾಡದೆಯೂ ತುಂಬ ದಿನವಾಯಿತು.

ಪೂವಕ್ಕ : ನಿಮಗೆ ಹೇಳಿದರೆ ಕೋಪ ಬರುತ್ತದೆ. ನೀರುದೋಸೆ ಮಾಡು ವಾಗಲೇ ಮಕ್ಕಳು ತಿಂದು ಮುಗಿಸುತ್ತಾರೆ. ಆ ರಗಳೆ ಬೇಡ. ತೊಂದೊರ್ದಡ್ಯೆ ಮಾಡುವ. ಆದೀತಲ್ಲವೆ ?

ಪರ್ಮೇಸ್ರಿ : ತೊಂದೊರ್ದಡ್ಯೆ (ಇಡ್ಲಿಯ ಕಡುಬು ಇತ್ಯಾದಿ) ಮಾಡಲಿಕ್ಕೆ ಉದ್ದು ಮುಗಿದಿದೆ. ಸೇವಿಗೆ ಮಾಡುವ.

ಅಬ್ಬಕ್ಕ : ಕರಕರಿಯ ಸೇವಿಗೆಗಿಂತ ಪುಂಡಿ ಒಳ್ಳೆಯದಂತೆ.

ಕುಂಞಕ್ಕ : ಇವಳ ಒಂದು ಕೋಲ ನೋಡಬಾರದೆ? ನೆಂಟರಿರುವಾಗ ಪುಂಡಿ ಮಾಡುವುದೇ ? ಸೇವಿಗೆ ಮಾಡುವ. ಕೋಟಿ ಕೊಟ್ಟ ಹೂ ಬಾಳೆ ಹಣ್ಣು ಇದೆ. ಅದರ ಕುಲ (ಬಾಳೆಹಣ್ಣು ಹಾಕಿ ಮಾಡಿದ ಕಾಯಿ ಹಾಲು) ಮಾಡಿರಿ.

ಅಂತಕ್ಕ : ಹೌದೇ ಬಯ್ಲಿನ ಅತ್ತೇ. ಕಿಞ್ಞಣ್ಣನ ಸುಬ್ಬಿ (ದನ) ಮೊನ್ನೆಯಿಂದ ಕರೆಯಲಿಕ್ಕೇ ಬಿಡುವುದಿಲ್ಲ. ಕರು ಮೊಲೆಗೆ ಬಾಯಿ ಹಾಕಲಿಕ್ಕೂ ಬಿಡುವುದಿಲ್ಲ. ಅದು ಏನು ?

ಪೂವಕ್ಕೆ : ಅದು ಬಬ್ಬರ್ಯನಿಗೆ ಇಡದೆ! ಮತ್ತೇನು? ಸೋಣದಲ್ಲಿ ಇಟ್ಟದ್ದು. ಆಮೇಲೆ ಇಡಲೇ ಇಲ್ಲ. ನಾಳೆ ಕೊಯ್ಯಾರ ಒಳ್ಳೆಯದು.

ಪರ್ಮೇಸ್ರಿ : ಆದಿತ್ಯವಾರ ಮಾಮಾಜಿ ಇಲ್ಲ. ಪೇಟೆಗೆ ಹೋಗುತ್ತಾರಂತೆ. ಮಂಗಳವಾರ ಆಗಬಹುದು.

ಅಬ್ಬಕ್ಕೆ : ದೊಡ್ಡಣ್ಣ ಪೇಟೆಗೆ ಹೋಗುವುದಾದರೆ ನನಗೊಂದು ದಡ್ಪು ತರಲು ಹೇಳಬೇಕು.

ಪೂವಕ್ಕೆ : ದಡ್ಪು ಯಾಕೆ. ರಾತ್ರೆ ಬದಲಿಸಲು ಕಿರ್ಕಿ (ತುಂಡು ಸೀರೆ) ಒಳ್ಳೆಯದು.

ಕುಂಞಕ್ಕೆ : ಹೌದಾ! ದೊಡ್ಡಣ್ಣ ಪೇಟೆಗೆ ಹೋಗುವುದಾದರೆ ದಡ್ಪು, ಕಿರ್ಕಿಯೆಲ್ಲ ಅಲ್ಲ. ಉಪ್ಪು, ಮೆಣಸು, ಸಾಂಬಾರ ಜೀನಸು ಎಲ್ಲ ಮುಗಿದಿದೆಯೋ ನೋಡಿ ನೆಸಪು ಮಾಡಿ ಹೇಳಿ. ಮತ್ತೆ ಒಂದೊಂದೇ ಇಲ್ಲ ಎಂದರೆ ಅವರಿಗೆ ಸಿಟ್ಟು ಬರುತ್ತದೆ.

ಎಂಕಮ : ಅದು ಹೌದು. ಬೆಲ್ಲವೂ ಮುಗಿದಿದೆ. ಎಲ್ಲವನ್ನೂ ನೆನಪಿನಲ್ಲಿ ಹೇಳಬೇಕು.

(ಇಷ್ಟು ಹೊತ್ತಿಗೆ ಬಯ್ಲಿನ ತಾಯಿಯನ್ನು ಮಕ್ಕಳು ಕೂಗಿದರು. ಎಲ್ಲರೂ ಮುಖತೊಳೆದು ತುಳಸಿಗೆ ನೀರು ಹೊಯ್ದು ಬಸ್ಮ ಪೂಸಿಕೊಂಡು ಗಂಜಿ ಉಣಲು ಕೂತರು. ಆಗ ದನಕಾಯುವ ಮಕ್ಕಳು ದನಕರುಗಳನ್ನು ಬಿಟ್ಟು ಸೆಗಣಿಯ ಬುಟ್ಟಿಯನ್ನು ತಲೆಯಲ್ಲಿ ಹೊತ್ತುಕೊಂಡು, ಸೆಗಣಿ ತೆಗೆಯುವ ಸಟ್ಟುಗವನ್ನು ಕೈಯಲ್ಲಿ ಹಿಡಿದುಕೊಂಡು 'ಉರಲ್' ಹಾಕಿಕೊಂಡು ದನಕರುಗಳನ್ನು ಬೆದರಿಸಿ ಗುಡ್ಡೆಯತ್ತ ಹೋದರು. ಹದಿಹರೆಯದ ಹುಡುಗಿಯರು ಮುಖತೊಳೆದು ತಲೆಬಾಚಿ ಕಟ್ಟಿ, ಕಣ್ಣಿಗೆ ಕಾಡಿಗೆ, ತಲೆಗೆ ಹೂ, ಹಣೆಗೆ ಕುಂಕುಮ ಇಟ್ಟುಕೊಂಡರು. ಕನ್ನಡಿಯಲ್ಲಿ ತಮ್ಮ ಚೆಲುವು ನೋಡಿಕೊಂಡು ತಲೆಗೂದಲನ್ನು ಸ್ವಲ್ಪ ಸಡಿಲಗೊಳಿಸಿದರು. ತುಳಸಿಗೆ ನೀರು ಹೊಯ್ದು ನಾಗಬ್ರಹ್ಮರಿಗೆ ಕೈಮುಗಿದು ಪ್ರಸಾದ ಹಾಕಿಕೊಂಡು ಗಂಜಿ ಊಟ ಮುಗಿಸಿ ಚೆನ್ನೆಯಾಡಲು ಕುಳಿತರು.)

ಅಡುಗೆಯವರು ಹರಿಜನರಿಗೆ ಬೆಳಗ್ಗಿನ ತೆಳಿಗಂಜಿ ಹೊಯ್ಯಲಿಕ್ಕಾಗಿ ಹಲಸಿನ ಕಾಯಿಯ ರೆಚ್ಚೆ, ಗೂಂಜಿ, ನೀರುಪ್ಪಡ್‌ನ (ಉಪ್ಪುನೀರಲ್ಲಿ ಹಾಕಿದ) ಮಾವಿನ ಕಾಯಿ, ಹೆಬ್ಬಲಸು ಅಥವಾ ಕೇಸೆಯನ್ನು ತೆಗೆದು ಉಪ್ಪು ಮೆಣಸಿನೊಂದಿಗೆ ಬೆರೆಸಿದರು. ಅದಕ್ಕೆ ಗಂಜಿ ತೆಳಿಯನ್ನು ಹಾಕಿ ಕೋರಾಯಿ (ದೊಡ್ಡ ಮಣ್ಣಿನ ಪಾತ್ರೆ)ಯಲ್ಲಿ ಹದ ಮಾಡಿ ಇಟ್ಟರು. ಇನ್ನೊಂದು ಕುದುಂಪೆ (ಮಣ್ಣಿನ ಪಾತ್ರೆ)ಯಲ್ಲಿ ಗಂಜಿ ತೋಡಿ ತೆಗೆದಿಟ್ಟರು. ಉಳಿದುದನ್ನು ತೆಳಿ ಹೋಗಲು ಕವಚಿಟ್ಟು ಅನ್ನಮಾಡಿದರು.

ಯುವಕರು ಒಬ್ಬೊಬ್ಬರೇ ಬಂದು ಗಂಜಿ ಉಂಡು ಮತ್ತೆ ಕೆಲಸಕ್ಕೆ ಹೋದರು.

ಇಷ್ಟು ಹೊತ್ತಿಗೆ ಶನಿವಾರದ ಪಂಚಾಂಗ ಭಟ್ಟರು ನಾಗನಿಗೆ ಹಾಲು ಹೊಯ್ದು, ಅಶ್ವತ್ಥ ಮರಕ್ಕೆ ಪೂಜೆಮಾಡಿ ಪ್ರಸಾದ ಹಿಡಿದುಕೊಂಡು ಚಾವಡಿಗೆ ಬಂದರು. ಆಗ ಯಜಮಾನರು ತಲೆಮೇಲ್ ಇಡೀ ಎಣ್ಣೆ ಪೂಸಿಕೊಂಡು ವೀಳ್ಯ ತಿನ್ನುತ್ತಿದ್ದರು. ಭಟ್ಟರಿಗೆ ಕೈಮುಗಿದು 'ಹೌದಾ ಭಟ್ರೇ, ಅಮಾವಾಸ್ಯೆ ಯಾವಾಗ? ಸಂಕ್ರಮಣ ಯಾವ ವಾರ? ಈಹೊತ್ತಿಗೆ ಈ ತಿಂಗಳಿನಲ್ಲಿ ಎಷ್ಟು ಹೋಯಿತು?' ಎಂದು ಕೇಳಿದರು. ಭಟ್ಟರು ಪಂಚಾಂಗ ಬಿಡಿಸಿ "ಗುರುವಾರ ರಾತ್ರೆ ಅಮಾವಾಸ್ಯೆ ಇದೆ. ಶುಕ್ರವಾರ ಬೆಳಗಿನವರೆಗೆ ಗಳಿಗೆವರೆಗೂ ಇದೆ. ಬರುವ ಸೋಮವಾರವಲ್ಲ, ಮೇಲಿನ ಸೋಮವಾರ ಸಂಕ್ರಮಣ. ಇವೊತ್ತಿಗೆ ಇಪ್ಪತ್ತೊಂದು ಹೋಯಿತು. ಗುತ್ತಿನವರೇ! ನಾನೊಂದು ದೊಡ್ಡ ತೊಂದರೆಯಲ್ಲಿ ಸಿಕ್ಕಿಬಿದ್ದಿದ್ದೇನೆ. ನಾಡದು ಸೋಮವಾರ ನನ್ನ ತಂದೆಯವರ ಕಾರ್ಯ (ಪುಣ್ಯದಿನ). ಪದಾರ್ಥಕ್ಕೆ ಏನೂ ಇಲ್ಲ. ಎಲ್ಲಿ ಹೋದರೂ ಈ ಸಮಯದಲ್ಲಿ ಏನೂ ಸಿಗುವುದಿಲ್ಲ. ನನಗೊಂದು ಹಳೆಯ ಬೂದಿಕುಂಬಳಕಾಯಿ ಇದ್ದರೆ ಸಹಾಯ ಮಾಡಬೇಕು." "ಅಷ್ಟೇ ಅಲ್ಲವೇ? ನೋಡುವ. ನಿಮಗೆ ಎರಡು ಹೊರೆ ಕಾಯಿಪಲ್ಯ ಕಳುಹಿಸಿ ಕೊಡುವ. ಅದಕ್ಕೆ ಚಿಂತೆ ಬೇಡ. ಬೇರೆ ಎಲ್ಲ ವ್ಯವಸ್ಥೆ ಮಾಡಿಕೊಳ್ಳಿ" ಎಂದು ಹೇಳಿ ವೀಳ್ಯದ ಹರಿವಾಣವನ್ನು ಭಟ್ಟರ ಮುಂದಿಟ್ಟರು.

ಆಗ ಒಬ್ಬನು ಒಂದು ಗಂಟು, ಒಂದು ಪೆಟ್ಟಿಗೆಯನ್ನು ಹೊರಿಸಿಕೊಂಡು ಬಂದವನು ಗುರಿಕಾರರಿಗೂ (ಗುತ್ತಿನ ಯಜಮಾನ) ಭಟ್ಟರಿಗೂ ಸೊಲ್ಮೆ (ನಮಸ್ಕಾರ) ಮಾಡಿದನು.

ಗುತ್ತಿನವರು : ಅಲ್ಲಿ ಯಾರು? ಇವರಿಗೆ ಎರಡು ಕಾಲ್ಮಣೆ ತಂದು ಕೊಡಿ. ನಿಮಗೆ ಎಲ್ಲಿ?

ಆಚಾರಿ : ನನಗೆ ತೆಂಕಲಾಗೆ, ಮಾಯಿಪಾಡಿಯಲ್ಲಿ ಸ್ವಾಮೀ.

ಗುತ್ತಿನವರು : ನೀವು ಎಂಥವರು?

ಆಚಾರಿ : ನಾನು ಆಚಾರಿ ಅಯ್ಯಾ.

ಗುತ್ತಿನವರು : ಯಾವ ಆಚಾರಿ, ಮರದ್ದೇ, ಕಬ್ಬಿಣದ್ದೇ, ಬಂಗಾರದ್ದೇ ಏನು ಕೆಲಸ?

ಆಚಾರಿ : ನನ್ನ ಹಿರಿಯರು ಮರದ ಕೆಲಸದವರು. ನನಗೂ ಮರದ ಸೂಕ್ಷ್ಮ ಕೆಲಸ ಗೊತ್ತಿದೆ. ಆದರೆ ನಾನು ಚಿನ್ನದ ಕೆಲಸ ಕಲಿತಿದ್ದೇನೆ.

ಗುತ್ತಿನವರು : ಇದೆಲ್ಲ ಗಂಟುಮೂಟೆ ಏನು?

ಆಚಾರಿ : ಇದೆಲ್ಲ ನನ್ನ ಕೆಲಸದ ಸಾಮಾನು ಅಯ್ಯ. ಎಲ್ಲಿಯಾದರೂ ನಿಮ್ಮಂಥ ಶ್ರೀಮಂತರಲ್ಲಿ ಏನಾದರೂ ಕೆಲಸ ಸಿಕ್ಕಿದರೆ ಮಾಡಿಕೊಂಡು ಹೊಟ್ಟೆ ತುಂಬಿಸಲೆಂದು ಹೊರಟದ್ದು ಅಯ್ಯ.

ಗುತ್ತಿನವರು : ಅದೇನು? ನಿನ್ನ ಊರಿನಲ್ಲಿ ನಿನಗೆ ಕೆಲಸವಿಲ್ಲವೇ? ನಿನ್ನ ಮನೆಯಲ್ಲಿ ಬೇರೆ ಯಾರುಂಟು?

ಆಚಾರಿ : ನಾವು ಒಬ್ಬ ತಂದೆಗೆ ಮೂವರು ಮಕ್ಕಳು. ನನ್ನ ಅಣ್ಣಂದಿರಿಗೆ ಮದುವೆ ಆಗಿದೆ. ಅವರು ಹೆಂಡಂದಿರ ಮಾತು ಕೇಳಿ, ಬೈದು ನನ್ನನ್ನು ಹೊರಹಾಕಿದರು. ಆ ಕೋಪದಲ್ಲಿ, ಮನೆ ಬದುಕುಗಳ ನ್ನೆಲ್ಲ ಬಿಟ್ಟು ಎಲ್ಲಿಯಾದರೂ ನಿಮ್ಮಂಥ ದೊಡ್ಡವರ ಚಾಕರಿ ಮಾಡಿ ಹೊಟ್ಟೆ ಹೊರೆಯುತ್ತೇನೆಂದು ಗ್ರಹಿಸಿ ಹೊರಟು ಬಂದೆ ಸ್ವಾಮೀ.

ಗುತ್ತಿನವರು : ನಿನಗೆ ಮನೆ ಕೊಟ್ಟರೆ ಈ ಊರಿನಲ್ಲಿ ಉಳಿಯುವೆಯಾ ?

ಆಚಾರಿ : ಧನಿಗಳು ಹೇಳಿದರೆ ಉಳಿಯದೆ ಏನು ? ಇರುವೆ ಅಯ್ಯಾ !

ಗುತ್ತಿನವರು : ಭಟ್ಟರೇ. ನಿಮ್ಮ ಮನೆಯ ಹತ್ತಿರ ಒಕ್ಕಲಿಲ್ಲದ ಒಂದು ಮನೆ ಇತ್ತಲ್ಲವೇ ? ಅದನ್ನು ಸರಿಮಾಡಿ ಇವನಿಗೆ ಕೊಡಿರಿ. ನೀನು ಕುಳಿತುಕೊಳ್ಳುವುದಾದರೆ ಭಟ್ಟರ ಒಟ್ಟಿಗೆ ಹೋಗು. ಅವರು ನಿನಗೆ ಮನೆ ಕೊಡುತ್ತಾರೆ.

ಆಚಾರಿ : ಮನೆಯನ್ನೇ ಕೊಟ್ಟರೆ ಸಾಲದಯ್ಯಾ ! ಏನಾದರೂ ಕೆಲಸ ಕೊಡಬೇಕು.

ಗುತ್ತಿನವರು : ಕೆಲಸಕ್ಕೆ ಏನೂ ಕಡಿಮೆಯಾಗದು. ಎಲ್ಲರನ್ನೂ ಒಳ್ಳೇದು ಮಾಡಿಕೊಳ್ಳಬೇಕು. ಈಗ ಭಟ್ಟರೊಡನೆ ಹೋಗು. ನನಗೆ ನಿಲ್ಲಲಿಕ್ಕೆ ಸಮಯವಿಲ್ಲ. ಹತ್ತೈವತ್ತು ಆಳುಗಳು ನೇಜಿ ಕೀಳುತ್ತಾರೆ. ಐದು ಮುಡಿ ಗದ್ದೆ ಇವೊತ್ತು ನೆಡಲಿಕ್ಕೆ. ಎರಡು ಮೂರು ದಿನಗಳಲ್ಲಿ ನಾನು ಬರುತ್ತೇನೆ. ಒಳಗೆ ಯಾರೇ ! ಕುಂಞಕ್ಕೆ ! ಇಗೋ ಭಟ್ರಿಗೆ ಅಕ್ಕಿ ಕಾಯಿ ಕೊಡು. ಮತ್ತೆ ಈ ಆಚಾರಿಗೂ ಊಟದ ಪಡಿ ಕೊಡು. ತೆಗೆದುಕೊಂಡು ಹೋಗಿ ಭಟ್ರೇ.

(ಇಷ್ಟು ಹೇಳಿ ಅವರು ಗದ್ದೆಯತ್ತ ಹೊರಟರು.)

ಭಟ್ಟರು : ಗುತ್ತಿನವರೇ, ನಾನು ಹೇಳಿದುದನ್ನು ಮರೆಯಬಾರದು. ಬೇರೆ ಏನೂ ಇಲ್ಲ.

ಗುತ್ತಿನವರು : ಆಯಿತಾಯಿತು. ಸಂಜೆಗೆ ಕಳುಹಿಸಿಕೊಡುತ್ತೇನೆ. ತ್ಯಾಂಪಣ್ಣಾ. ಇಗೋ. ಭಟ್ಟರಲ್ಲಿ ನಾಡದು ಕಾರ್ಯವಂತೆ. ಸಂಜೆ ಎರಡು ಹೊರೆ ಮಾಡಿ ತೋಮನೊಡನೆ ಕಳುಹಿಸಿಕೊಡು. ಮರೆಯಬಾರದು ಮತ್ತೆ ?


ಎಂದು ಹೇಳಿ ಗದ್ದೆಯ ಕಡೆ ಹೋದರು. ಹೋದಕೂಡಲೇ ಕೋಣಗಳನ್ನು ನೊಗದಿಂದ ಬಿಡಿಸಿ ಕೋಣ ತೊಳೆಸಿ ಎಣ್ಣೆಪೂಸಿ ಹಟ್ಟಿಯಲ್ಲಿ ಕಟ್ಟಿಸಿ ಹುರುಳಿ ಕೊಡಿಸಿ ದರು. ಹಾಗೆಯೇ ಬಂದು ಬಿಸಿನೀರು ಹೊಯ್ದುಕೊಂಡು ನಾರಾಯಣ ಸ್ತೋತ್ರ

ಮಾಡುತ್ತ ಚಾವಡಿಗೆ ಬಂದರು. ಭಕ್ತಿಗೆ ಭುಗ್ತಿ (ವಿಭೂತಿ). ಅಂದಕ್ಕೆ ಗಂಧ, ಚಂದಕ್ಕೆ ಚಂದನ ಪೂಸಿ ನಾಗಬ್ರಹ್ಮರನ್ನು, ಸ್ಥಳದ ಸತ್ಯಗಳನ್ನು ಧ್ಯಾನಿಸಿದರು. ತುಳಸಿಗೆ ನೀರು ಹೊಯ್ದರು. ಅನಂತರ ಮನೆಯ ಜವಣ್ಯ (ಯುವಕ)ರನ್ನು ಕೂಡಿಕೊಂಡು ಊಟಕ್ಕೆ ಹೋದರು.

ಶನಿವಾರದ ಊಟ ತೀರಿಸಿ ವೀಳ್ಯ ಮೆದ್ದು ಅಂಕದ ಹುಂಜಗಳಿಗೆ ಬತ್ತದ ಕಾಳು, ನೀರು ಇಡಿಸಿ, ಹಟ್ಟಿಗೆ ಹೋಗಿ ಕೋಣಗಳಿಗೆ ತಿನಸು ಹಾಕಿಸಿ ಆಳುಗಳಿಗೆ ಚಿಲ್ಲರೆ ಕೆಲಸ ಹೇಳಿದರು. ಅನಂತರ ಮಂಚದಲ್ಲಿ ಹಾಸಿಗೆ ಬಿಡಿಸಿ ಮಧ್ಯಾಹ್ನದ ದೊಂಬು (ಬಿಸಿಲು) ನಿದ್ದೆ ಮಾಡಲು ಕಣ್ಣು ಮುಚ್ಚಿದರು.

ಮನೆಯ ಜವಣರು, ಹೆಂಗಸರು ಮಕ್ಕಳೆಲ್ಲ ಒಳಗೆ ಕೂಟಕೂಡಿ ಬಂದ ಆಚಾರಿಯ ವಿಚಾರ ಮಾತನಾಡತೊಡಗಿದರು.

ಆ ಆಚಾರಿ ಬಹಳ ಕುಶಾಲಿನವ.ಪದ, ಅರ್ಥ,ಮದ್ದಳೆಯ ಹುಚ್ಚ. ಭಟ್ಟರಿಗೂ ಇವನೆಂದರೆ ತುಂಬ ಖುಶಿ. ಯಾವಾಗ ನೋಡಿದರೂ ಭಟ್ಟರು ಅವರ ಮನೆಯಲ್ಲೇ ಇರುವುದು ಕಡಮೆ. ಆಚಾರಿಯನ್ನು ಹೊಗಳಿದಷ್ಟೂ ಭಟ್ಟರಿಗೆ ಸಾಕೆನಿಸುವುದಿಲ್ಲ. ಆಚಾರಿಗೂ ಭಟ್ಟರನ್ನು ಎಷ್ಟು ಹೊಗಳಿದರೂ ಕಡಮೆಯೇ. ಹೀಗೆ ಇಬ್ಬರೂ ಭಾರೀ ಎರಕದಲ್ಲಿ ಇದ್ದು ಹಾಗೂ ತಮಾಷೆ ಮಾತನಾಡಿಕೊಂಡು, ತಾಳ ಮದ್ದಳೆ ಮಾಡಿಕೊಂಡು ಬಂದವರಿಗೆ ಮೋಡಿ ಮಾಡಿಕೊಂಡು ಸಂತೋಷದಲ್ಲಿ (ಅಣ್ಣತಮ್ಮಂದಿರಂತೆ) ಇದ್ದರು.


ಶ್ರೀರಸ್ತು.

ವಿಶ್ವಗುಣಾದರ್ಶಂ ಸವ್ಯಾಖ್ಯಾನಂ.

ಮೂ। ಶ್ಲೋ। ಶ್ರೀ ರಾಜೀವಾಕ್ಷ ವಕ್ಷಸ್ಸ್ಥಲನಿಲಯರಮಾಹ
ಸ್ತವಾಸ್ತವ್ಯ ಲೋಲಲ್ಲೀಲಾಬ್ಜಾನ್ನಿಷ್ಪ ತಂತೀ * ಮಧುರಮಧು
ಝುರೀ ನಾಭಿಪದ್ಮೆ ಮುರಾರೇ। ಅಸ್ತೋಕಂ ಲೋಕಮಾತ್ರಾ
ದ್ವಿಯುಗಮುಖ ಕಿಶೋರಾಸನೇ ದೃಶ್ಯಮಾನಾ ಕಂಜಭ್ರಾಂತೇನ
ದಿವ್ಯಂ ಪಯ ಇತಿ ವಿಬುಧೈಶ್ಶಂಕ್ಯಮಾನಾ ಪುನಾತು ॥ ೧ ॥

ಶ್ಲೋ ॥ ಶ್ರೀಕೃಷ್ಣಂ ಸಚ್ಚಿದಾನಂದರೂಪಂ ಧ್ಯಾಯನ್ ಸದಾ ಮುದೇ।
ಕುರ್ವೇ ವಿಶ್ವಗುಣಾದರ್ಶವ್ಯಾಖ್ಯಾಂ ಸಂಸ್ಕೃತಕೋವಿದಾ ॥

# ನೂರು ವರ್ಷಗಳ ಹಿಂದಿನ ಒಂದು ಕನ್ನಡ ಅನುವಾದ ಕೃತಿ

**ಶ್ರೀರಾಮ ಭಟ್ಟ**

ಸರಿಯಾಗಿ ನೂರಾಮೂರು ವರ್ಷಗಳ ಹಿಂದೆ ಮುಂಬಯಿಯಲ್ಲಿ ಪ್ರಕಟವಾದ ಪುಸ್ತಕವೊಂದು ನಗರದ ಗೋಖಲೆ ಸಾರ್ವಜನಿಕ ಸಂಸ್ಥೆಯ ಲೈಬ್ರರಿಯಲ್ಲಿ ಇದೆ. ಇದು ಲಂಡನ್ ಮಿಶನ್ನಿನ ರಿಚರ್ಡ್ ಎ. ಹಿಕ್ಲಿಂಗ್ ಅವರಿಂದ ಅಣುಪ್ರಸ್ಥಪುರಿಯ (ಚಿಕ್ಕಬಳ್ಳಾಪುರ) ಶ್ರೀನಿವಾಸ ತಾತಾಚಾರ್ಯರ್ ಅವರ ಕೈಸೇರಿ, ಅಲ್ಲಿಂದ 12ನೇ ಡಿಸೆಂಬರ್ 1959ರಂದು ಗೋಖಲೆ ಸಾರ್ವಜನಿಕ ಸಂಸ್ಥೆಯ ವಾಚನಾಲಯಕ್ಕೆ ಬಂದು ಸುರಕ್ಷಿತವಾಗಿದೆ. ಮುಟ್ಟಿದರೆ ಮುರಿಯುವ ಮಣ್ಣಿನ ಬಣ್ಣದ ಈ ಸಂಸ್ಕೃತ ಚಂಪೂಕಾವ್ಯದ ಹೆಸರು 'ವಿಶ್ವಗುಣಾದರ್ಶಃ'. ಕನ್ನಡ ನಾಡಿಗೆ ಸಂಬಂಧಿಸಿದ, ಕ್ರಿ.ಶ.

17ನೆಯ ಶತಮಾನದಲ್ಲಿದ್ದನೆಂದು ಹೇಳಲಾದ ವೇಂಕಟಾಧ್ವರಿ ಈ ಗ್ರಂಥದ ಕರ್ತೃ. ಕನ್ನಡ ಗದ್ಯಾನುವಾದ ಸಹಿತವಾಗಿ ಪ್ರಕಟವಾಗಿರುವುದು ಈ ಗ್ರಂಥದ ವಿಶೇಷತೆ. "ವಿಶ್ವಗುಣಾದರ್ಶಃ – ಮಹಾಕವಿ ಶ್ರೀ ವೇಂಕಟಾಧ್ವರಿ ಪ್ರಣೀತಃ – ಭಾವದರ್ಪಣಾಖ್ಯಯಾ ವ್ಯಾಖ್ಯಯಾ ಸನಾಥೀಕೃತಃ–ಕರ್ಣಾಟಕಾಖ್ಯ ಭಾಷಾನುವಾದ ಸಮೇತಶ್ಚ–ಸಚ ಮುಂಬಯ್ಯಾಂ ಕರ್ಣಾಟಕಾಖ್ಯ ಮುದ್ರಾಲಯೇ ಅಂಕಯಿತ್ವಾ ಪ್ರಾಕಾಶ್ಯಂ ನೀತಃ-ಶಕಾಬ್ದಾ 1809–ಮೌಲ್ಯಮ್ ರೂ. 2½" ಎಂಬೀ ವಿವರಗಳು ಮೊದಲ ಪುಟದಲ್ಲಿ ದಾಖಲಾಗಿವೆ. ಶತಮಾನದ ಹಿಂದಿನ ಗದ್ಯಾನುವಾದದ ಮಾದರಿಯನ್ನು ನೋಡುವ ಕುತೂಹಲವೇ ಈ ಲೇಖನಕ್ಕೆ ಪ್ರೇರಣೆ. ಅದಕ್ಕೆ ಮೊದಲು ಕವಿ-ಕಾವ್ಯದ ಬಗ್ಗೆ ಒಂದೆರಡು ಮಾತು ಅಪ್ರಸ್ತುತವಾಗಲಾರದು.

ಗ್ರಂಥದ ಆರಂಭದಲ್ಲಿ ಕವಿ ತನ್ನ ಪರಿಚಯವನ್ನು ಹೀಗೆ ಹೇಳಿಕೊಂಡಿದ್ದಾನೆ– "ತಾತಾರ್ಯ ಎಂಬವರು ಕಾಂಚಿ ಎಂಬ ನಾಡಿಗೆ ಭೂಷಣರಾಗಿಯೂ, ಯಾಗ ಮಾಡಿದವರುಗಳಾಗಿಯೂ, ಕರ್ಣಾಟ ಒಡೆಯ ಕೃಷ್ಣರಾಯರ ಗುರುಗಳಾಗಿಯೂ ನಾಲ್ಕೂ ದಿಕ್ಕುಗಳಲ್ಲಿ ಕೀರ್ತಿಯಿಂದ ಒಪ್ಪಿದವರು. ಅವರ ಸೋದರಳಿಯರೆಂದು ಲೋಕದಲ್ಲಿ ಹೆಸರುಪಟ್ಟ, ಅನೇಕ ಯಜ್ಞಗಳನ್ನು ಮಾಡಿದ, ವಿದ್ವಾಂಸರಲ್ಲಿ ಶ್ರೇಷ್ಠರಾದ ಅಪ್ಪಯ ಗುರುಗಳ ಮಕ್ಕಳು ಶ್ರೀ ರಘುನಾಥ ದೀಕ್ಷಿತ ಎಂಬವರು ಕವಿಗಳಾಗಿಯೂ ಗುಣಗಳಿಂದ ಭರಿತರಾಗಿಯೂ ಪ್ರಸಿದ್ಧರು. ಆ ರಘುನಾಥ ದೀಕ್ಷಿತರ ಮಗನಾದ ಮತ್ತು ನ್ಯಾಯ ವೇದಾಂತ ವ್ಯಾಕರಣ ಶಾಸ್ತ್ರಗಳನ್ನು ಕಲಿತವನಾದ ವೇಂಕಟಾಧ್ವರೀ ಎಂಬವನು ಪ್ರಪಂಚದ ಗುಣಗಳನ್ನು ಸ್ಪಷ್ಟವಾಗಿ ತೋರಿಸುವ ಕನ್ನಡಿಯಂತೆ (ಈ ಕಾವ್ಯವನ್ನು) ಮಾಡುತ್ತಾನೆ." (ಶ್ಲೋಕ 2. 3–ಮೂಲದ ಗದ್ಯಾನುವಾದ)

ಮೂಲದಲ್ಲಿ 'ಕರ್ಣಾಟ ಭೂಭೃದ್ಗುರೋಃ' ಎಂದಷ್ಟೇ ಹೇಳಿದೆಯೇ ವಿನಾ ರಾಜನ ಹೆಸರನ್ನು ಹೇಳಿಲ್ಲ. ಮಧುರ ಸುಬ್ಬಾಶಾಸ್ತ್ರಿ ಎಂಬ ವ್ಯಾಖ್ಯಾನಕಾರನು 'ಕರ್ಣಾಟ ಭೂಭೃತಃ–ಕೃಷ್ಣರಾಯಸ್ಯ' ಎಂಬ ಅಂಶವನ್ನು ಕಾಣಿಸಿದ್ದಾನೆ. ವೇಂಕಟಾಧ್ವರಿಯ ತಾಯಿ ಸೀತಾಂಬಾ (ಸೀತಾಂಬಾ ಗರ್ಭಸಂಭವಸ್ಯ). ಈತನ ವಾಸ್ತವ್ಯ ಕಂಚಿ ನಗರದಲ್ಲಿ. (ಶ್ರೀಮತ್ಕಾಂಚೀ ನಗರವಾಸ್ತವ್ಯಸ್ಯ). ರಾಮಾನುಜ ಮತಾನುಯಾಯಿ.

ವಸ್ತುನಾವೀನ್ಯ ವಿಶ್ವಗುಣಾದರ್ಶ ಚಂಪೂಕಾವ್ಯದ ವೈಶಿಷ್ಟ್ಯ. ಇದು ದೇವ-ದಾನವರ ಕತೆಯಲ್ಲ; ಇಲ್ಲಿ ನಾಯಕ-ಪ್ರತಿನಾಯಕರಿಲ್ಲ. "ಕೃಶಾನು ಮತ್ತು ವಿಶ್ವಾವಸು ಎಂಬ ಹೆಸರುಗಳುಳ್ಳ ಇಬ್ಬರು ಗಂಧರ್ವರು ಒಂದೇ ತರದ ಉಡಿಗೆ ತೊಡಿಗೆ ತೊಟ್ಟುಕೊಂಡಂಥವರಾಗಿ ಒಂದಾನೊಂದು ಸಮಯದಲ್ಲಿ ಸಮಸ್ತ ಸ್ಥಿರ ಚರರೂಪವಾದ ಜಗತ್ತನ್ನು ನೋಡುವ ಇಚ್ಛೆಯಿಂದ ವಿಮಾನ (ಆಕಾಶ ಮಾರ್ಗದಿಂದ ಹೋಗುವ ವಾಹನ)ವನ್ನೇರಿ ಅಂತರಿಕ್ಷದಲ್ಲಿ ತಿರುಗಾಡುವಂಥವರಾದರು. ಅವರೊಳಗೆ ಕೃಶಾನು ಎಂಬವನು ಬಹಳ ಮತ್ಸರಿಯಾದುದರಿಂದ ಲೋಕದಲ್ಲಿರುವ ಊನ

ಗಳನ್ನು ಅಂದರೆ ಕೊರತೆಗಳನ್ನು ಮಾತ್ರ ನೋಡುವಂಥವನಾದನು. ವಿಶ್ವಾವಸುವು ಲೋಕದ ಒಳ್ಳೇ ಗುಣಗಳನ್ನೇ ಆರಿಸಿಕೊಳ್ಳುವುದರಲ್ಲಿ ಜಿಜ್ಞಾಸಾ ಅಂದರೆ ಕುತೂಹಲ ಉಳ್ಳವನಾದನು." (ಶ್ಲೋಕ 5, 6–ಮೂಲದ ಗದ್ಯಾನುವಾದ). ಲೋಕದ ಗುಣ-ದೋಷಗಳ ವಿಶ್ಲೇಷಣಾತ್ಮಕ ವಿಮರ್ಶೆಯೇ ಈ ಕಾವ್ಯದ ವಸ್ತು. ತನ್ನ ಸಮಕಾಲೀನ ಜಗತ್ತನ್ನು ತಾನು ನೇರವಾಗಿ ನೋಡದೆ ಗಂಧರ್ವರ–ಬೇರೆ ಲೋಕದವರ ಮೂಲಕ ನೋಡುವ ಹೊಸ ತಂತ್ರವನ್ನು ಇಲ್ಲಿ ಕಾಣಬಹುದು. 'ತಾನು' ಇಲ್ಲಿ ನಿರಸ್ತ. ಇದಕ್ಕೆ ಕಾಳಿದಾಸನಿಂದ ಮತ್ತು ಬಾಣನಿಂದ ಸ್ಫೂರ್ತಿ ದೊರಕಿರಬಹುದು. ('ಮೇಘದೂತ' ದಲ್ಲಿ ಮೋಡ ಹಾರುವ ಮೋಡದ ಕಣ್ಣಿಗೆ ಕಾಣುವ ನೆಲವನ್ನು ವರ್ಣಿಸುವವನು ಯಕ್ಷ. 'ಕಾದಂಬರೀ'ಯ ವಿಂಧ್ಯಾಟವಿ ವರ್ಣನೆಯಲ್ಲಿ 'ಅಸ್ತಿ ಪೂರ್ವಾಪರ ಜಲನಿಧಿವೇಲಾವ ಲಗ್ನಾ ಮಧ್ಯ ದೇಶಾಲಂಕಾರ ಭೂತಾ ಮೇಖಲೇವ ಭುವಃ—ಪೂರ್ವ ಮತ್ತು ಪಶ್ಚಿಮ ಸಮುದ್ರಗಳ ದಂಡೆಯವರೆಗೆ ಪಸರಿಸಿದ ವಿಂಧ್ಯಾಟವಿ ಭೂತಾಯಿಯ ಸೊಂಟದ ಪಟ್ಟಿಯಂತೆ ಕಾಣುತ್ತದೆ—ಎಂಬ ವರ್ಣನೆ, ಮೂರನೆಯ ಕಣ್ಣೊಂದು ಮೇಲ ದೂರ ದಲ್ಲಿ ನಿಂತು ಗ್ರೀನ್‌ಬೆಲ್ಟ್‌ನ ಸೌಂದರ್ಯವನ್ನಾಸ್ವಾದಿಸುವ ಚಿತ್ರಣವನ್ನು ಕೊಡುತ್ತದೆ. ಇಂಥ ಅನೇಕ ಉದಾಹರಣೆಗಳನ್ನು ಕಾದಂಬರೀಯಲ್ಲಿ ಕಾಣಬಹುದು.) ವರ್ಣನೆಯ ಓಘದಲ್ಲೂ ಕಾಳಿದಾಸ ಮತ್ತು ಬಾಣರ ಅನುಕರಣೆ ಕಂಡುಬರುತ್ತದೆ. (ಅನುಬಂಧ ದಡಿಯಲ್ಲಿರುವ ಮಾದರಿಗಳನ್ನು ಗಮನಿಸಿ.) ಆದರೆ ಆ ಮಹಾಕವಿಗಳ ವೈವಿಧ್ಯ, ವಿಸ್ತಾರ, ಪ್ರೌಢಿಮೆಗಳನ್ನು ಇಲ್ಲಿ ಕಾಣಲಾಗದು. ಹಾಸ್ಯ ಬೆರೆತ ವಿಡಂಬನೆ ಇಲ್ಲಿ ಸ್ಥಾಯಿ. ವಿಶಿಷ್ಟ ವಸ್ತು ಮತ್ತು ವಿಭಿನ್ನ ತಂತ್ರದಿಂದ ಇದು ಸಂಸ್ಕೃತ ಚಂಪೂಕಾವ್ಯ ಗಳಲ್ಲಿ ಅನನ್ಯ ಕೃತಿ ಎನಿಸಿದೆ. "ಸಂಸ್ಕೃತ ಭಾಷೆಯು ವಿಡಂಬನೆಗೆ ಎಂತಹ ಸಮರ್ಥ ಸಾಧನವಾಗಬಹುದೆಂಬುದನ್ನು ವೇಂಕಟಾಧ್ವರಿಯಂತೆ ತೋರಿಸಿದ ಕವಿ ಇನ್ನೊಬ್ಬ ನಿಲ್ಲ." (ಡಾ॥ ಕೆ. ಕೃಷ್ಣಮೂರ್ತಿ–ಸಂಸ್ಕೃತ ಕಾವ್ಯ–ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ–ಪುಟ 428).

ಈ ಚಂಪೂಕಾವ್ಯದಲ್ಲಿ ಉತ್ತರದ ಬದರಿಕಾಶ್ರಮದಿಂದ ಹಿಡಿದು ದಕ್ಷಿಣದ ರಾಮಸೇತುವಿನವರೆಗಿನ ಭೂಭಾಗವನ್ನು ವರ್ಣಿಸಲಾಗಿದ್ದರೂ, ಮುಖ್ಯವಾಗಿ ದಕ್ಷಿಣ ದೇಶದ ಆಂಧ್ರ, ಕರ್ನಾಟಕ, ಕಂಚಿ, ತುಂಡೀರಮಂಡಲ ಮುಂತಾದ ಪ್ರಾಂತಗಳ ವಿವರ ವಾದ ವರ್ಣನೆ ಬರುತ್ತದೆ. ಮೇಲುಕೋಟೆ, ತಿರುಪತಿ, ಕಂಚಿ, ಮಧುರೆ, ತಂಜಾವೂರು, ಶ್ರೀರಂಗ, ಕುಂಭಕೋಣ ಮುಂತಾದ ತೀರ್ಥಕ್ಷೇತ್ರಗಳ ಸವಿಸ್ತಾರ ವರ್ಣನೆಯಿದೆ. ಗಂಗಾ, ಕಾಳಿಂದೀ, ಪಿನಾಕಿನೀ, ಗರುಡನದೀ, ತಾಮ್ರಪರ್ಣೀ, ವೇಗವತೀ ಮುಂತಾದ ನದಿಗಳ ಮತ್ತು ಸಮುದ್ರದ ವರ್ಣನೆಗಳಿಗಿಂತ ಕಾವೇರೀ ವರ್ಣನೆ ವಿಸ್ತೃತವಾಗಿದೆ. ಕರ್ನಾಟಕದಲ್ಲಿ ಅಲ್ಲಲ್ಲಿ ವಾಸವಾಗಿದ್ದ ಲಿಂಗಾಯತರ, ಸ್ಮಾರ್ತರ, ಮೇಲುಕೋಟೆಯ ಶ್ರೀವೈಷ್ಣವರ ಮತ್ತು ಸುವುನೂರಿನ (ಉಡುಪಿ?) ಮಾಧ್ವರ ಹಾಗೆಯೇ ವೈದಿಕ,

ಜ್ಯೋತಿಷಿಕ, ವೈದ್ಯ, ತಾರ್ಕಿಕ, ವೈಯಾಕರಣ, ಮೀಮಾಂಸಕ, ವೇದಾಂತಿ ಮತ್ತು ಕವಿಗಳ ವರ್ಣನೆಗಳು ಇಲ್ಲಿ ಕಂಡುಬರುತ್ತವೆ. ಅಂದಿನ ಸಾಮಾಜಿಕ ರೀತಿನೀತಿಗಳ, ಧಾರ್ಮಿಕ ಡಂಭಾಚಾರಗಳ, ಪರಸ್ಪರ ದ್ವೇಷಾಸೂಯೆಗಳ, ಮತಧರ್ಮಗಳ ಮೇಲಾಟದ, ಪ್ರಾದೇಶಿಕ ಕಚ್ಚಾಟಗಳ ವಾಸ್ತವ ಚಿತ್ರಣ ಅತ್ಯಂತ ಹರಿತವಾದ ಮಾತುಗಳಲ್ಲಿ ವ್ಯಕ್ತವಾಗಿದೆ. ಚೋಳದೇಶದವರ ಮದುವೆ ಸಮಯದ ವಿಚಿತ್ರ ಆಚಾರ ಮತ್ತು ಅವರ ಬಡತನದ ಕಠೋರ ದಂಡಿಮೆಯ ಜೀವನ ವಿವರಗಳೂ ಸ್ಪಷ್ಟಶಬ್ದಗಳಲ್ಲಿ ದಾಖಿಲಾಗಿವೆ. ಪಂಡಾರ, ವಿಷ್ಣುದಾಸ, ಸುಡುಗಾಡಸಿದ್ಧ, ಗೋಸಾವಿಗಳ ಉಲ್ಲೇಖ ವಿವೆ. ಆ ಕಾಲದ ಸಾಂಸ್ಕೃತಿಕ ಸ್ಥಿತ್ಯಂತರದ-ಇವರ ಪರಿಣಾಮವಾದ ರಾಜಕೀಯ, ಸಾಮಾಜಿಕ ಮತ್ತು ಧಾರ್ಮಿಕ ಸಂಘರ್ಷಗಳ ಉಲ್ಲೇಖವಿದೆ. ಉದಾಹರಣೆಗೆ ಮರಾಠಿಗರು ಮತ್ತು ಮುಸಲ್ಮಾನರ ಹೋರಾಟ, ಬಿಳಿಯ ಹೂಣರ (ಆಂಗ್ಲರು ?) ಕುಯುಕ್ತಿ ಮತ್ತು ಆಕ್ರಮಣ ಸ್ವಭಾವದ ಚಿತ್ರಣ, ಬ್ರಾಹ್ಮಣರು 'ಜೀವಿಕೆ'ಗಾಗಿ ಶಾನುಭೋಗ, ಕರಣಿಕರಾಗತೊಡಗಿದ್ದು, ವೇದ ಕಲಿಯುವ ಪ್ರಾಯದಲ್ಲಿ ಮುಸಲಮಾನಿ ಭಾಷೆ ಕಲಿಯಬೇಕಾಗಿ ಬಂದದ್ದು, ಉಪನಯನ, ವಿವಾಹ ಸಂಸ್ಕಾರಗಳು ತಮಾಶೆಯ ಹಬ್ಬವಾದದ್ದು ಇತ್ಯಾದಿ.

ಇದು ಚಂಪೂಕಾವ್ಯವಾದರೂ ಪದ್ಯಕ್ಕೆ ಇಲ್ಲಿ ಪ್ರಾಶಸ್ತ್ಯ. ಗದ್ಯವೇನಿದ್ದರೂ ನೆಪಮಾತ್ರಕ್ಕೆ. ಕಾವೇರಿ ವರ್ಣನೆಯಲ್ಲಿ ಮಾತ್ರ ಒಂದು ವಿಸ್ತೃತ ಗದ್ಯವನ್ನು ಕಾಣಬಹುದು. ಇಲ್ಲಿನ ಪದ್ಯಗಳು ಗದ್ಯದ ಗುಣವುಳ್ಳವು. ಅಥವಾ ಗದ್ಯದಲ್ಲೇ ಹೇಳಬಹುದಾದ್ದನ್ನು ಪದ್ಯರೂಪದಲ್ಲಿ ಹೇಳಲಾಗಿದೆಯೆಂದರೆ ಹೆಚ್ಚು ಸಮರ್ಪಕವಾದೀತು. ಕಾವ್ಯದ ರೂಪಕ ಭಾಷೆಯಾಗಲೀ, ರಸವೃತ್ತಿಯಾಗಲೀ ಇಲ್ಲಿ ಇಲ್ಲ. ವಾಸ್ತವದ ವರ್ಣನೆ ಇದೆ; ಕಾವ್ಯಾತ್ಮಕತೆ ಇಲ್ಲ. ವರದಿಯ ಓಟ ಉದ್ದಕ್ಕೂ ಕಾಣುತ್ತದೆ. ಆದರೆ ಸಂಗತಿಯನ್ನು ಭಾವನೆಯ ಜೊತೆ ಮೇಳೈಸುವ ಸೃಜನಶೀಲತೆ ಇರುವುದರಿಂದ ವರದಿಗಿಂತ ಮೇಲು. ಪ್ರಾಸಾನುಪ್ರಾಸಗಳ ವಿಲಾಸ, ಅಲ್ಲಲ್ಲಿ ಶ್ಲೇಷ ಪ್ರದರ್ಶನ—ಇವುಗಳಿಂದ ಕವಿ ತನಗೆ ಕಾವ್ಯ, ಶಾಸ್ತ್ರಗಳೆರಡರಲ್ಲೂ ಅಧ್ಯಯನ ಇತ್ತೆಂಬುದನ್ನು ತೋರಿಸಿದ್ದಾನೆ. ಸಂಸ್ಕೃತದ ಎಲ್ಲ ಪ್ರಸಿದ್ಧ ಛಂದಸ್ಸುಗಳನ್ನೂ ಬಳಸುವುದರ ಮೂಲಕ ತನ್ನ ಉತ್ತಮ ಪದ್ಯರಚನಾ ಸಾಮರ್ಥ್ಯವನ್ನು ಮೆರೆಸಿದ್ದಾನೆ.

ಕನ್ನಡ ಅನುವಾದ ಗದ್ಯರೂಪದ ಸರಳ ಭಾಷಾಂತರ. ಈ ಕಾವ್ಯದ ಅನುವಾದಕ್ಕೆ ಗದ್ಯವೇ ಸೂಕ್ತ ಎಂಬ ಅಭಿಪ್ರಾಯ ಅನುವಾದಕನಿಗಿದ್ದಿರಬಹುದು. ಗದ್ಯಾನುವಾದದ ಜೊತೆ ತಾತ್ಪರ್ಯವನ್ನೂ ಆವಶ್ಯಕವಾದಲ್ಲಿ ಸೇರಿಸಿರುವುದು, ಶ್ಲೇಷಾರ್ಥವನ್ನು ಮೂಲ ಪದದ ವಿಗ್ರಹ ಮತ್ತು ವಿಶ್ಲೇಷಣೆಯೊಂದಿಗೆ ವಿವರಿಸಿರುವುದು ನನ್ನ ಈ ಊಹೆಗೆ ಸಮರ್ಥನೆಯನ್ನೊದಗಿಸುತ್ತದೆ. ಆಡುಭಾಷೆಯಲ್ಲಿ ಪ್ರಚಲಿತವಾಗಿದ್ದ ಪದಗಳನ್ನು ಧಾರಾಳವಾಗಿ ಬಳಸಿದ್ದರಿಂದ-ವಿಶೇಷವಾಗಿ ಸಾಮಾಜಿಕ ವಿವರಗಳನ್ನೊಳ

ಗೊಂಡ ಶ್ಲೋಕಗಳನ್ನು ಭಾಷಾಂತರಿಸುವಾಗ ರೂಢಿಯಲ್ಲಿರುವ ಕನ್ನಡ ಪದಗಳನ್ನೇ ಬಳಸಿದ್ದರಿಂದ ಭಾಷೆಗೆ ವೈಯಕ್ತಿಕ ಸ್ಪರ್ಶ ಒದಗಿಸಿದೆ. ಭಾಷೆಯು ಓಟವೂ ಆಧುನಿಕ ಕನ್ನಡಕ್ಕೆ ಅತ್ಯಂತ ಹತ್ತಿರವಾಗಿದೆ; ಹಳಗನ್ನಡಕ್ಕಲ್ಲ. ಹೊಸಗನ್ನಡ ಗದ್ಯದ ಆರಂಭದ ಸ್ವರೂಪವನ್ನು ನಾವಿಲ್ಲಿ ನೋಡಬಹುದು. ಮುದ್ರಣದೋಷಗಳಿಲ್ಲದ, ಸ್ಪಷ್ಟವಾದ ಅಕ್ಷರ ವಿನ್ಯಾಸವುಳ್ಳ, ಸುಂದರ, ಆಕರ್ಷಕ ಮುದ್ರಣ ಇಂದಿನವರಿಗೂ ಆದರ್ಶವಾಗು ವಂತಿದೆ. ಮೂಲದ ಪದ್ಯ, ಗದ್ಯಗಳನ್ನು ದೊಡ್ಡ ಅಕ್ಷರಗಳಲ್ಲೂ, ಸಂಸ್ಕೃತ ವ್ಯಾಖ್ಯಾನ ವನ್ನು ಸಣ್ಣ ಅಕ್ಷರಗಳಲ್ಲೂ, ಕನ್ನಡ ಅನುವಾದವನ್ನು ಮಧ್ಯಮ ಗಾತ್ರದ ಅಕ್ಷರ ಗಳಲ್ಲೂ ಮುದ್ರಿಸಲಾಗಿದೆ. ಹಾಳೆ ತರೆ-ತರೆಯಾಗಿದ್ದರೂ ಖಡಕ್ಕಾಗಿದೆ. ಶ್ಲೋಕ ಸಂಖ್ಯೆಗಳನ್ನೂ, ಪುಟ ಸಂಖ್ಯೆಗಳನ್ನೂ ಕನ್ನಡ ಅಂಕಿಗಳಿಂದಲೇ ಮುದ್ರಿಸಲಾಗಿದೆ. ಒಟ್ಟಿನಲ್ಲಿ ಮುದ್ರಣವೂ ಒಂದು ಕಲೆ ಎಂದು ತೋರಿಸಿದಂತಿದೆ.

ಆದರೆ ಈ ಗ್ರಂಥದ ಅನುವಾದಕ ಯಾರೆಂಬುದು ಗ್ರಂಥದಲ್ಲೆಲ್ಲೂ ಸ್ಪಷ್ಟ ವಾಗಿಲ್ಲ. ಮೊದಲ ಪುಟದಲ್ಲಿ ಅನುವಾದಕನ ಹೆಸರಿಲ್ಲದ್ದನ್ನು ಆಗಲೇ ಕಂಡಿದ್ದೇವೆ. ಅನುವಾದದ ಕೊನೆಯಲ್ಲೂ "ಶ್ರೀಮದ್ವೇಂಕಟಾಧ್ವರಿ ಕೃತ ವಿಶ್ವಗುಣಾದರ್ಶ ಚಂಪೂ ಕಾವ್ಯದ ಕನ್ನಡ ಭಾಷಾಂತರ ಸಮಾಪ್ತಿ" ಎಂದಿದೆಯೇ ವಿನಾ ಅನುವಾದಕನ ಹೆಸರು ಕಂಡುಬರುವುದಿಲ್ಲ. ಹೊಸಗನ್ನಡ ಸಾಹಿತ್ಯ ಚರಿತ್ರೆಗಳಲ್ಲಿ ಗೊರೂರು ನರಸಿಂಹಾ ಚಾರ್ಯರು ಮತ್ತು ಶಾಮರಾವ ವಿಠ್ಠಲ ಕಾಯ್ಕಿಣಿ ಎಂಬವರು ವಿಶ್ವಗುಣಾದರ್ಶವನ್ನು ಅನುವಾದಿಸಿದ್ದಾರೆಂದು ಹೇಳಲಾಗಿದೆ. ಗೊರೂರ ನರಸಿಂಹಾಚಾರ್ಯರ ಅನುವಾದ 'ಕನ್ನಡ ವಿಶ್ವಗುಣಾದರ್ಶ'ವೆಂದು ಕವಿಚರಿತೆಕಾರರು ಹೇಳಿದ್ದಾರೆ. (ಕ.ಕ.ಚ.– ಪು: 223 ಕ.ಸಾ.ಪ. 1974). ಆದರೆ ಪ್ರಕೃತ ಗ್ರಂಥದಲ್ಲಿ 'ಕನ್ನಡ' ಪದವಿಲ್ಲದ್ದರಿಂದ ಇದು ಗೊರೂರು ನರಸಿಂಹಾಚಾರ್ಯರ ಅನುವಾದವಲ್ಲವೆಂದು ಭಾವಿಸಬೇಕಾಗಿದೆ. ಅಲ್ಲದೆ ಕವಿಚರಿತೆಕಾರರು ಈ ಗ್ರಂಥದ ಪ್ರಕಟಣೆಯ ವರ್ಷವನ್ನು ಮತ್ತು ನರಸಿಂಹಾ ಚಾರ್ಯರ ಕಾಲವನ್ನು ನಿರ್ದಿಷ್ಟವಾಗಿ ಉಲ್ಲೇಖಿಸದಿರುವುದನ್ನು ಇಲ್ಲಿ ಗಮನಿಸಬಹು ದಾಗಿದೆ. ಹೊಸಗನ್ನಡದ ಅರುಣೋದಯ (ಡಾ॥ ಶ್ರೀನಿವಾಸ ಹಾವನೂರ)ದಲ್ಲಿ ಶಾಮರಾವ ವಿಠ್ಠಲ ಕೈಕಿಣಿಯ ಬಗ್ಗೆ ಬರೆಯುತ್ತ "ಅವನ ಇನ್ನೊಂದು ಮಹತ್ವದ ಕೃತಿ ಎಂದರೆ 'ವಿಶ್ವಗುಣಾದರ್ಶ'ದ ಅನುವಾದ" ಎಂದಷ್ಟೇ ಹೇಳಲಾಗಿದೆ. (ಪು. 292). ವಿವರಗಳೇನೂ ಲಭ್ಯವಿಲ್ಲ. 'ಹೊಸಗನ್ನಡ ಸಾಹಿತ್ಯದ ಉದಯಕಾಲ' (ಡಾ॥ ರಾ. ಯ. ಧಾರವಾಡಕರ)ದಲ್ಲಿ ಈ ವಿವರ ಲಭ್ಯವಿದೆ. "ಶ್ರೀಯುತರು (ಶಾಮರಾವ ಕಾಯಕಿಣಿ) 'ವಿಧವಾ ಪುನರ್ವಿವಾಹ', 'ಸಮುದ್ರ ಪರ್ಯಟನ' ಮೊದ ಲಾದವುಗಳ ಬಗೆಗೆ ಬರೆದುದಲ್ಲದೆ, ವೆಂಕಟಾಧ್ವರಿಯು ಸಂಸ್ಕೃತದಲ್ಲಿ ಬರೆದ 'ವಿಶ್ವಗುಣಾದರ್ಶ'ವನ್ನು ಕನ್ನಡದಲ್ಲಿ ಭಾಷಾಂತರಿಸಿದ್ದಾರೆ. ಈ ಭಾಷಾಂತರ ನಮಗೆ ನೋಡಲು ದೊರೆಯಲಿಲ್ಲ. ವಿಶ್ವಗುಣಾದರ್ಶವನ್ನು 'ಭಾವದರ್ಪಣ' ಎಂಬ ಟೀಕೆ

ಯಿಂದ ಕೂಡಿಕೊಂಡ ಕನ್ನಡಾನುವಾದವನ್ನು ಸುಬ್ಬಾಶಾಸ್ತ್ರಿ ಎಂಬುವರು ಸನ್ 1888ರಲ್ಲಿ ಮುಂಬಯಿಯ ಕರ್ನಾಟಕ ಛಾಪಖಾನೆಯಲ್ಲಿ ಮುದ್ರಿಸಿ ಪ್ರಕಟಿಸಿದರು. ಪುಟಸಂಖ್ಯೆ 371. ಕಾವ್ಯದ ಕೊನೆಗೆ 'ಇತಿ ಶ್ರೀಮತ್ಕೌಶಿಕಕುಲ ಪಯಃ ಪಾರಾವಾರ ಚಂದ್ರೇಣ ಮೀನಾಕ್ಷೀ ಜಾನೇರ್ಯಗಣ್ಣೇಶ್ವರ ವಿದ್ವಚ್ಚೂಡಾಮಣೇರಾತ್ಮಜೇನ— ಸಚ್ಚಿದಾನಂದ ಪರಬ್ರಹ್ಮಸ್ವರೂಪ ಶ್ರೀಕೃಷ್ಣಪಾದಕಮಲ ಧ್ಯಾನಾಮೃತಪಾನ ಪ್ರಮುದಿತ ಹೃದಯೇನ ಮಧುರ ಸುಬ್ಬಾಶಾಸ್ತ್ರಿಣಾ-ಸಂಗ್ರಹತಃ ಕೃತಂ ಭಾವ ದರ್ಪಣಂ'-ಎಂದು ಬರುತ್ತದೆ." (ಪ್ರ. 561). ಆದರೆ ಇಲ್ಲೂ ಕೂಡ ಸುಬ್ಬಾಶಾಸ್ತ್ರಿ ತಾನೇ ರಚಿಸಿದ ಕನ್ನಡಾನುವಾದವನ್ನು ಸಂಸ್ಕೃತ ವ್ಯಾಖ್ಯಾನದೊಂದಿಗೆ ಪ್ರಕಟಿಸಿದರೆ? ಅಥವಾ ರಾಮರಾವ ಕಾಯ್ಕಿಣಿಯ ಅನುವಾದವನ್ನು ತನ್ನ ಸಂಸ್ಕೃತ ವ್ಯಾಖ್ಯಾನದೊಂದಿಗೆ ಪ್ರಕಟಿಸಿದರೆ? ಹಾಗಿದ್ದಲ್ಲಿ ರಾಮರಾವ ಕಾಯ್ಕಿಣಿಯ ಹೆಸರನ್ನು ಏಕೆ ಕಾಣಿಸಿಲ್ಲ? ಎಂಬೀ ಪ್ರಶ್ನೆಗಳು ಏಳುತ್ತವೆ. ಸಂಶಯ ಸಂಶಯವಾಗೇ ಉಳಿಯುತ್ತದೆ. ಈ ಗ್ರಂಥ ಡಾ॥ ರಾ. ಯ. ಧಾರವಾಡಕರರಿಗೆ ನೋಡಲು ದೊರೆಯಲಿಲ್ಲವೆಂಬುದನ್ನು ಗಮನಿಸಬಹುದಾಗಿದೆ.

ನನಗೆ ತೋರುವಂತೆ ಇದು ಹೊಸಗನ್ನಡದ ಅತ್ಯಂತ ಪ್ರಾಚೀನ ಗದ್ಯಾನುವಾದ. ಈ ಬಗ್ಗೆ ವಿದ್ವಾಂಸರು ಗಮನ ಹರಿಸಬಹುದು. ಕನ್ನಡ ಭಾಷೆಯ ಜೀವಂತಿಕೆಯನ್ನು ಅಧ್ಯಯನ ಮಾಡುವಾಗ ಈ ಅನುವಾದವೂ ಒಂದು ಹಂತದ ಸಹಾಯಕ ಸಾಮಗ್ರಿಯಾಗಬಲ್ಲದೆಂಬುದನ್ನೂ ಗಮನದಲ್ಲಿಟ್ಟುಕೊಂಡು ವಿಶ್ವಗುಣಾದರ್ಶದ ಕೆಲವು ಭಾಗಗಳನ್ನು ಮೂಲದೊಂದಿಗೆ ಅನುಬಂಧದಲ್ಲಿ ಕೊಡಲಾಗಿದೆ.

## ಅನುಬಂಧ

### ಕರ್ನಾಟಕ ವರ್ಣನೆ

ಇದಕ್ಕೆ ಮೊದಲು ನಮ್ಮ ಶ್ರವಣೇಂದ್ರಿಯವನ್ನು ಅಲಂಕರಿಸಿದಂಥ (ಅಂದರೆ ನಾವು ಕೇಳಿದ) ಕನ್ನಡ ದೇಶವು ಇದೇ ಈಗ ನಮ್ಮ ಕಣ್ಣುಗಳಿಗೆ ಸೊಬಗು ಉಂಟುಪಡಿಸುತ್ತದೆ.

ನಿಜವಾಗಿಯೂ ಈ ದೇಶದ ಸೊಂಪು ಎಷ್ಟು ನೋಡಿದರೂ ಸಾಲದು.

ಈ ಕರ್ಣಾಟ ನಾಡಿನಲ್ಲಿ ಪ್ರತಿ ಪಟ್ಟಣದಲ್ಲಿಯೂ ತೋಟಗಳವೆ. ಪ್ರತಿ ತೋಟದಲ್ಲಿ ಪಾಗಲಿಕ್ಕೆ ಸಿದ್ಧವಾದ ಗೊನೆಗಳನ್ನು ತಾಳ್ದ ಅಡಿಕೆ ಮರಗಳವೆ. ಪ್ರತ್ಯೇಕ ಅಡಿಕೆ ಮರದಲ್ಲಿ ಕೊನೆಯಲ್ಲಿದ್ದ ಹೂಗಳವೆ. ಹೂವಿನಿಂದ ಮಕರಂದವು ಹರಿಯುತ್ತದೆ.

ಮೂಲ : ಕರ್ಣಾಟದೇಶೋ ಯಃ ಪೂರ್ವಂ ಕರ್ಣದೇಶಮಭೂಷಯತ್ ।
ಸ ಏಷ ಸಾಂಪ್ರತಂ ಪಶ್ಯ ಚಕ್ಷುಷೋರ್ಭೂಷಣಾಯತೇ ॥ 223 ॥

ಲೋಚನಾಸೇಚನಕಂ ಕಿಲ ದೇಶಸ್ಯಾಸ್ಯ ರಾಮಣೀಯಕಂ ॥ 224 ॥

ಪ್ರತಿ ನಗರವಿಹಾರಾರಾಮಾಃ ಪ್ರತ್ಯಾರಾಮಂ ಪಚೇಳಿಮಾಃ
ಕ್ರಮುಕಾಃ ।
ಪ್ರಸವಾಃ ಪ್ರತಿಕ್ರಮುಕಂ ಅಪ್ಯುತ್ಸರ್ಪತಿ ಮಧುತತಿಃ
ಪ್ರತಿಪ್ರಸವಮ್ ॥ 225 ॥

**ಕಾಂಚಿ ವರ್ಣನೆ**

ಇದೇ ಕಾಂಚೀ ಪಟ್ಟಣವು ಅವರ್ಣನೀಯವಾಗಿ ಹಸ್ತಿಗಿರಿ ಎಂಬ ಬೆಟ್ಟಕ್ಕೆ ಸೊಂಟದ ಪಟ್ಟಿಯಂತಿರುವದು. (ಅಂದರೆ ಆ ಬೆಟ್ಟದ ಸುತ್ತಲಿರುವದು ಎಂಬ ತಾತ್ಪರ್ಯ). ಈ ಶ್ರೇಷ್ಠವಾದ ಪಟ್ಟಣದಲ್ಲಿ ಸಂಚರಿಸುವಂಥ ಹೆಂಗಸರ ಮುಖಗಳನ್ನು ಪುನಃ ಪುನಹಾ ನೋಡಿ ಪದಹಿನಿಂದ ಹೋಳೆಯುವ ರೂಪ ಉಳ್ಳಂಥ ಚಂದ್ರನನ್ನು, ಕನ್ನಡಿಯನ್ನು ಮತ್ತು ತಾವರೆಯನ್ನು ಕೂಡ ರಸಾಭಿಜ್ಞರಾದವರ್‍ಯಾರು ಜರಿಯಲಿಕ್ಕಿಲ್ಲ? ಎಲ್ಲರು ಜರಿಯುವರೆಂಬ ತಾತ್ಪರ್ಯವು.

ಸುಮನೋಜನೆಂದರೆ ಕಾಮನು ನೂತನ ಸತ್ಕಾರ ಪಡಿಯುವ ಸ್ಥಳವಾದಂಥಾ (ಅಥವಾ ಪಂಡಿತರು ಶಾಸ್ತ್ರ ಚರ್ಚೆಮಾಡಿ ವಾದವಿವಾದ ರೂಪ ಲಢಾಯಿ ನಡಿಸುವ ಸ್ಥಳವಾದಂಥಾ) ಚೆಲುವಾದ ಆಕೃತಿಯನ್ನು ಶೋಭಿಸುವಂಥಾ (ಅಥವಾ ಉತ್ತಮ ರೂಪವಂತರುಗಳಿಂದ ಶೋಭಾಯಮಾನವಾದಂಥಾ) ಕ್ರೀಡೆಯ (ಅಥವಾ ದೇವತ್ವ ರೂಪವಾದ) ಉತ್ಕರ್ಷವನ್ನುಂಟುಪಡಿಸುವಂಥಾ ಈ ಕಲ್ಯಾಣಕಾರಕವಾದ ಕಾಂಚೀ ಪಟ್ಟಣವು ಮನಸ್ಸಿಗೆ ಚನ್ನಾಗಿ ಸಂತೋಷಕೊಡುತ್ತದೆ.

ಈ ಕಾಂಚಿ ನಗರದ ತೆಂಕಣ ದಿಕ್ಕಿಗೆ ಪರಮೇಶ್ವರನ ದಯಾರಸದ ಪ್ರವಾಹದ ಪೋಲ್ ಪವಿತ್ರವಾದ ವೇಗವತಿ ಎಂಬ ಹೊಳೆಯು ಹರಿಯುತ್ತದೆ.

ಮೂಲ : ಇಯಂ ಕಾಂಚೀ ಕಾಂಚೀಕರಿಶಿಖರಿಣಃ ಕಾಪಿ ನಗರೀ
ಗರೀಯಸ್ಯಾಂ ಯಸ್ಯಾಂ ವಿಹರಣಜುಷಾಂ ಪಕ್ಷ್ಮಲದೃಶಾಂ ।
ಮುಖಂ ದರ್ಶಂ ದರ್ಶಂ ರಜನಿಕರಮಾದರ್ಶಮಮಲ
ಸ್ವರೂಪಂಕೇ ಪಂಕೇರುಹಮಪಿ ನ ನಿಂದಂತಿ ರಸಿಕಾಃ ॥ 272 ॥

ಸುಮನೋಜಸ ಪಾದರಣಸ್ಥಾನಂ ಸದ್ವಿದ್ಯಶೋಭಿನೀ ಸೇಯಂ ।
ಸುರತಾಭ್ಯುದಯವಿಧಾತ್ರೀ ಶುಭಕಾಂಚೀ ಸಾಧು ರಂಜಯತಿ
ಚೇತಃ ॥ 373 ॥

ನಗರೀಮೇನಾಂ ದಕ್ಷಿಣೇನ ಕರುಣಾರ್ದ್ರಾರೀವಭಗವತೋ ವೇಗವತೀ
ನಾಮ ಪ್ರವಹತಿ ಪಾವನೀ ಶೈವಲಿನೀ ॥ 374 ॥

### ವಿರೋಧಾಭಾಸ

ಕೃಷ್ಣನೆಂಬ ಮೇಘನು ವಿಸ್ತರಿಸಲು ಕಂಸಾಸುರನ ಏಳಿಗೆಯು ಅಳಿದು ಹೋಯಿತು. ಕೇಡುಗಾರನಾದ ಅಘಾಸುರನೆಂಬ ದೈತ್ಯನ ಬಾಳುವೆ ತೀರಿತು. ಹಂಸನೆಂಬ ಅಸುರನು ಕಡಿದುಹೋದನು, ಮತ್ತು ಮಹಿಮೆಯು ಜಯೋತ್ಸವ ವಾಯಿತು.

ಈ ಶ್ಲೋಕಕ್ಕೆ ಇನ್ನೊಂದು ಅರ್ಥವಾಗುತ್ತದೆ. ಏನೆಂದರೆ : ನೀಲವರ್ಣದ ಮೋಡವು ಬೆಳೆಯಲು–ನಿದಾಘ ಅಂದರೆ ಬೇಸಿಗೆಕಾಲ ತಂಪಾಯಿತು. ಹಂಸಪಕ್ಷಿಯು ಕೊಲೆಪಡುವಂಥದ್ದಾಯಿತು. ಕೆಸರು ಹೆಚ್ಚಾಯಿತು. ಕಂ ಅಂದರೆ ಜಲಕ್ಕೆ ಪ್ರಾಪ್ತ ವಾದ ವೃದ್ಧಿಯು ಲೋಪವಾಯಿತು. ಅಂದರೆ ನೀರು ಬತ್ತಿಹೋಯಿತು. (ಇದೊಂದು ವಿಪರೀತಾರ್ಥ ಚಮತ್ಕಾರವು. ಇವಕ್ಕೆ ವಿರೋಧಾಭಾಸ ಎಂಬ ಸಂಜ್ಞೆ ಯುಂಟು.)

ಮೂಲ : ಚಿತ್ರಂ ಚಿತ್ರಂ ಜೃಂಭಿತೇ ಕೃಷ್ಣಮೇಘೇ
ಕಂಸಂ ಪ್ರಾಪ್ತಾ ಪ್ರಾಪ್ತಲೋಪಂ ಸಮೃದ್ಧಿಃ ।
ಆಸೀದ್ಘ್ಯಕ್ತಂ ಹಾ ನಿದಾಘಃ ಪ್ರಶಾಂತಿಃ
ಹಂಸೋಹಿಂಸಾ ಮಾನಸೇ ಕೀರ್ತಿರುತ್ಥಾ ॥ 168 ॥

### ಗುರ್ಜರದೇಶಾಚಾರ

ಇಲ್ಲಿಯೂ ಸ್ತ್ರೀಯರ ರೂಪಲಾವಣ್ಯವು ಜೋಡಿಲ್ಲದ್ದು. ಗುರ್ಜರ (ಗುಜರಾಥಿ) ದೇಶದ ಹೆಣ್ಗಳ ಮೈಯು ಪುಟಕ್ಕೆ ಹಾಕಿದ ಚಿನ್ನದ ಬಣ್ಣದಂತೆ ಬಣ್ಣ ಉಳ್ಳದ್ದು, ತುಟಿಗಳು ಕೆಂಪು ಮತ್ತು ಕೋಮಲವಾದಂಥವುಗಳು, ಕೈಗಳು ಹೊಸ ಚಿಗುರಿನ ರೀತಿಯುಳ್ಳಂಥವುಗಳು, ವಾಕ್ಕು ಅಮೃತದ ಧಾರೆಯೂ, ಮುಖವು ನೈದಿಲೆಗೆ ಸಮಾನ ವಾದದ್ದು. ಕಣ್ಣುಗಳು ಕಮಲದ ಎಸಳುಗಳ ಸುಂದರತ್ವ ಜ್ಞಾಪಕಕ್ಕೆ ತರುವಂಥವುಗಳು. ಈ ಪ್ರಕಾರವಾಗಿ ಗುರ್ಜರ ಹೆಣ್ಗಳ ಯಾವ ಅಂಗ ತರುಣರಿಗೆ ಮರುಳು ಮಾಡುವಂಥಾ

ದ್ದಲ್ಲ? ಪ್ರತ್ಯೇಕ ಅಂಗವು ನೋಡಿದವರಿಗೆ ಸಂತೋಷ ಹುಟ್ಟಿಸುವಂಥಾದ್ದು ಎಂಬ ತಾತ್ಪರ್ಯ.

ಈ ಗಂರ್ಜರ ದೇಶದ ಪುರುಷರು ನಾಣಿಂದ ಯುಕ್ತವಾದ ಕಾಮಾವಸ್ಥೆಗೆ ಮುಟ್ಟಿದಂಥ ಅಂದರೆ ಉದಯದ್ಯವ್ವನೆಯರಾದಂಥ, ಮಿಂಚಿನಂತೆ ಕಾಂತಿಯುಳ್ಳಂಥ, ತೆಳ್ಳನೆ ಮೈಯುಳ್ಳಂಥ ಹೆಂಡತಿಗಳನ್ನು ವಿಲಾಸ ಆಟ ಆಡಲಿಕ್ಕೆ ಯೋಗ್ಯವಾದ ಕಾಲದಲ್ಲಿ ಮನೆಯಲ್ಲೇ ಬಿಟ್ಟು ಬಿಟ್ಟು, ಬಹಳ ಬೆಲೆಯುಳ್ಳ ರತ್ನ ರಾಶಿಗಳ ಕ್ರಯ ವಿಕ್ರಯದಿಂದ ಹಣಗಳಿಸುವುದರಲ್ಲಿ ಹಗಲಿರುಳು ಮನಸ್ಸು ಇಟ್ಟಂಥವರುಗಳಾಗಿ ಬಹಳ ದೂರದೇಶಗಳಲ್ಲಿ ತಿರುಗಾಡುತ್ತಿರುತ್ತಾರೆ.

ಮೂಲ : ಅತ್ರ ವಧೂನಾಮಪ್ಯನ್ಯಾದೃಶಂ ಸೌಂದರ್ಯಂ ।
ತಪ್ತಸ್ವರ್ಣಸವರ್ಣಮಂಗಕಮಿದಂ ತಾಮ್ರೋ ಮೃದುಶ್ಚಾಧರಃ
ಪಾಣೀ ಪ್ರಾಪ್ತ ನವಪ್ರವಾಳ ಸರಿಣೀ ವಾಣೀ ಸುಧಾಧೋರಣೀ ।
ವಕ್ತ್ರಂ ವಾರಿಜಮಿತ್ರಮುತ್ಪಲದಳ ಶ್ರೀ ಸೂಚನೇ ಲೋಚನೇ
ಕೇ ವಾ ಗುರ್ಜರ ಸುಭ್ರುವಾಮವಯವಾ ಯೂನಾಂ ನ
ಮೋಹಾವಹಾಃ ॥

ವ್ರೀಡಾಮಾರವ್ಯತಿಕರವ ತೀರ್ವಿದ್ಯುದಾಭಾಃ ಕೃಶಾಂಗೀಃ
ಕ್ರೀಡಾಯೋಗ್ಯೇಪ್ಯಹಹ ಸಮಯೇ ಗೇಹ ಏವ ತ್ಯಜಂತಃ ।
ನಿತ್ಯಾಸಕ್ತಾ ನಿರುಪಮ ಮಣಿಶ್ರೇಣಿ ವಾಣಿಜ್ಯ ಲಾಭೇ
ಬಂಭ್ರಮ್ಯಂತೇ ಬಹುದಿನ ಪರಿಪ್ರಾಪ್ಯ ದೇಶಾಂತರೇಷು
॥ 150, 151 ॥

## ವಿಷ್ಣುದಾಸರು

ಕೃಶಾನು–ಬೇರೆ ಬೇರೆ ಜ್ಯಾತಿ ಕುಲದಲ್ಲಿ ಹುಟ್ಟಿದವರಾದಾಗ್ಯೂ ಇವರು ಕಲಿಯುಗದ ಉತ್ಕರ್ಷದ ಕಾರಣದಿಂದ ಒಂದಾಗಿ ಬ್ರಾಹ್ಮಣ, ಕ್ಷತ್ರಿಯ ಮುಂತಾದ ಜ್ಯಾತಿ ಧರ್ಮಗಳನ್ನೂ ಬ್ರಹ್ಮಚರ್ಯಾದಿ ಆಶ್ರಮ ಧರ್ಮಗಳನ್ನೂ ನೀಗಿ, ತಾವು ವೈರಾಗಿಗಳು ಬಹುಕಾಲದಿಂದ ಪ್ರಪಂಚದಲ್ಲಿ ವಿರಕ್ತಿಯುಳ್ಳವರೆಂದು ತೋರಿಸಿಕೊಂಡು, ಶುದ್ಧವಾದ ವೈದೀಕರುಗಳಿಗೆ ನಮಸ್ಕಾರ ಮಾಡುವುದನ್ನು ಬಿಟ್ಟುಕೊಟ್ಟು ದರಿದ್ರರಾಗಿ ಪರರಿಗೆ ಮೋಸಗೊಳಿಸುವುದರಲ್ಲಿ ಕುಶಲರಾಗಿ ಹೊಟ್ಟೆ ತುಂಬಿಕೊಳ್ಳುವುದಕ್ಕೋಸ್ಕರ ಆ ಕಡೆ ಈ ಕಡೆ ಭಿಕ್ಷೆ ಬೇಡುವುದಕ್ಕೆ ತಿರುಗಾಡುತ್ತಾರೆ.

ವಿಶ್ವಾವಸು—ಎಲಾ ಮಿತ್ರನೇ! ವೈರಾಗ್ಯಶೀಲರಾದ ವಿಷ್ಣುದಾಸರನ್ನು ನಿಂದಿಸಲಿಕ್ಕೆ ಸೊಂಟಗಟ್ಟುತ್ತೀಯಾ? ಶ್ರೀವಿಷ್ಣುವಿನಲ್ಲಿ ಸ್ಥಿರವಾದ ಶ್ರದ್ಧೆ ಇದ್ದರೆ ನಿನ್ನಿಂದ ಈಗ ಪ್ರಕಟಿಸಲ್ಪಟ್ಟಂಥ ಕೊರತೆಗಳಿಂದೇನು ಭಯವಿಲ್ಲವು. ಪ್ರಕಾಶಮಾನವಾಗಿ ಉರಿಯುವ ದೀಪ ದೊರಕಿದರೆ ಕತ್ತಲೆಯ ಭೀತಿ ಇಲ್ಲವು.

ಮೂಲ : ನಾನಾ ಜಾತಿಭವಾ ಇಮೇ ಕಲಿಬಲಾದೇಕೀಭವಂತೋ ನರಾಃ
ವೈರಾಗ್ಯಾಭಿನಯಂ ಚಿರಾದ್ವಿದಧತೋ ವರ್ಣಾಶ್ರಮ ತ್ಯಾಗಿನಃ ।
ನಿರ್ಧೂತಾನಘ ವೈದಿಕಪ್ರಣಯಿನಾ ನಿಷ್ಕಿಂಚನಾವಂಚನಾ
ದಕ್ಷಾ ದಿಕ್ಷು ವಿದಿಕ್ಷು ಕುಕ್ಷಿಭೃತಯೇ ಭಿಕ್ಷಾಟನಂ ಕುರ್ವತೇ ॥ 194 ॥

ಕಥಮರೇ ಪರೇರ್ಭಕ್ತೇಷು ವಿರಕ್ತೇಷ್ವಪ್ಯಮೀಷುಸನ್ನಹ್ಯಸಿ ।
ದೋಷೇಭ್ಯೋ ನೈವ ಭೇತವ್ಯಂ ದೃಢಾಚೇದ್ಭಕ್ತಿರಚ್ಯುತೇ ।
ತಿಮಿರೇಭ್ಯೋ ನಹಿ ಭಯಂ ದೀಪಶ್ಚೇಲ್ಲಭ್ಯತೇ ಮಹಾನ್ ॥ 197 ॥

**ಕಾವೇರಿ ವರ್ಣನೆ :**

ಪೀತಾಂಬರ ಅಲಂಕೃತಾ ಅಂದರೆ ಪಟ್ಟೆ ಸೀರೆಯಿಂದ (ಅಥವಾ ವಿಷ್ಣುವಿನಿಂದ) ಅಲಂಕರಿಸಲ್ಪಟ್ಟ, ನಡುಭಾಗ ಉಳ್ಳವಳಾದ, ಕೆಂಪು ತಾವರೆಗಳನ್ನು ಮುಡಿದ ಹೆರಳು (ಅಥವಾ ಕೆಳವು) ಉಳ್ಳಂಥಾವಳಾದ ನಗುಮೊಗ ಉಳ್ಳಂಥಾವಳಾದ (ಅಥವಾ ತೆಳುವಾದವಳಾದ) ಸಹ್ಯ ಪರ್ವತದ ಕುಮಾರ್ತಿಯು ತವರ ಮನೆಯಿಂದ ಗಂಡನಾದ ಸಮುದ್ರನ ಬಳಿಗೆ ಸಾಗಿ ಹೋಗುತ್ತಾಳೆ.

ಈ ನದಿಯ ಎರಡು ಕಡೆಯಲ್ಲಿ ಇರುವ ಎತ್ತರವಾದ ಮತ್ತು ಉನ್ನತವಾಗಿ ಎಸೆಯುವ ಹೂಗೊಂಚಲುಗಳಿಂದ್ಯುಕ್ತವಾದ ತುದಿಗಳುಳ್ಳಂಥ ಮರಗಳು ಉಟ್ಟ ಪೇಟ್ರುಗಳನ್ನು ತಲೆಗೆ ಸುತ್ತಿಕೊಂಡು ಪೋಕನಾಟಕಕ್ಕೆ ಸಿದ್ಧರಾದ ಪಾಡಿಕಾರರಂತೆ ತೋರುತ್ತವೆ.

ಕಾವೇರಿಯ ತೀರದಲ್ಲಿ ಹುಟ್ಟುವ ಮರಗಳು, ಆಕಾಶವನ್ನು ನೆಕ್ಕುವ ಎತ್ತರ ಮತ್ತು ತೋರವಾದ ತೆಂಗುಗಳನ್ನು ಸೂರ್ಯಮಂಡಲವನ್ನೇರಿ ಬರುವ ಒಡೆಯನಿಗೆ ಭಕ್ತಿಯಿಂದ ಕಾಣಿಕೆಯಾಗಿ ಅರ್ಪಿಸುವುದಕ್ಕೆ ಹೊತ್ತುಕೊಂಡಿದ್ದಾವೆ. ಈ ಆಶ್ಚರ್ಯ ನೋಡು. (ವಿಶ್ವಾವಸು)

ನನ್ನ ಬುದ್ಧಿಗೆ ತೋರುತ್ತದೇನೆಂದರೆ : (ಕೃಶಾನು)

ಉದ್ದವಾದ ಪಟ್ಟೆಗಳಿಂದ ಓಲ್ಯಾಡುವ, ದೊಡ್ಡ ದೊಡ್ಡ ಕಾಯಿಗಳುಳ್ಳ, ಘಾಳಿಗೆ ಹಾರಿದ, ಧೂಳಿಗಟ್ಟಿದ, ಅತಿ ಎತ್ತರವಾದ ತೆಂಗಿನ ಮರಗಳು ನಮ್ಮ ಎದುರಿನಲ್ಲೆಸೆಯುತ್ತವಷ್ಟೆ. ಅವುಗಳು ಉದ್ದವಾದ ಮತ್ತು ಹೊಳೆಯುವ ಜಡೆಯುಳ್ಳಂಥಾ,

ನೇದುವ ಪಾತ್ರೆಯನ್ನು ಕೈಯಲ್ಲಿ ಹಿಡಿದು ಒಯ್ಯುವಂಥ, ಬಟ್ಟೆಹೀನರಾದಂಥ, ವೇದಕ್ಕೆ ಎದುರಾಡಿ ನಡೆಯುವಂಥ ಗೋಸಾವಿಗಳಂತೆ ಕಂಗೊಳಿಸುತ್ತಿವೆ.

ಮೂಲ : ಪೀತಾಂಬರಾಲಂಕೃತ ಮಧ್ಯಭಾಗಾ ಕಲ್ಹಾರಮಾಲಾ ಕಮನೀಯವೇಣೀ ।
ಸಹ್ಯಾದ್ರಿಕನ್ಯಾ ಜನಕಸ್ಯಗೇಹಾತ್ ಪತ್ಯುಸ್ಸಮೀಪಂ ವ್ರಜತಿ ಪ್ರಸನ್ನಾ ॥ 568 ॥

ಉದ್ಗಚ್ಛದುಚ್ಚತಮಗುಚ್ಛಲಸಚ್ಛಿರಸ್ಕಾಸ್ತೀರದ್ವಯೇಪಿ ತರವಃ ಪ್ರತಿಭಾಂತ್ಯಮುಷ್ಯಾಃ ।
ಏನಾಂತರೀತುಮಿಹಯತ್ನಜುಷಸ್ವಶೀರ್ಷಬದ್ಧಾಪಣಾತ ವಸನಾಃ ಪಥಿಕಾ ಇವಾಮೀ ॥ 569 ॥

ಅಭ್ರಂಲಿಹಾನಹಹ ಪಶ್ಯ ಮರುದ್ವೃಧಾಯಾಃ*
ರೋಧೋರುಹಃ ಪೃಥುಫಲಾನಿಹ ನಾರಿಕೇಲಾನ್ ।
ಆಗಚ್ಛತೇ ಸವಿತೃಮಂಡಲಮಾಶ್ರಿತಾಯ
ನಾಥಾಯ ಭಕ್ತಿತ ಇವಾತ್ತನವೋಪಹಾರಾನ್ ॥ 639 ॥
ಲೋಲದ್ದೀರ್ಘದಲಾಬೃಹತ್ತರಫಲಾವಾತೋಲ್ಲಲದ್ಧೂಳಿಭಿಃ

---

* ಋಗ್ವೇದದಲ್ಲಿ ಈ ಪದದ ಉಲ್ಲೇಖವಿದೆ. ಅಲ್ಲಿ ಹೆಸರಿಸಿರುವ ಏಳು ನದಿಗಳಲ್ಲಿ ಒಂದು ಮರುದ್ವೃಧಾ. ಅದನ್ನು ಇಲ್ಲಿ ಕಾವೇರಿ ನದಿಗೆ ಪರ್ಯಾಯ ವಾಚಕವಾಗಿ (ಮೊದಲ ಬಾರಿಗೆ ?) ಬಳಸಿರುವುದನ್ನು ಕಾಣಬಹುದು. ಸಾಯಣ ಭಾಷ್ಯವಾಗಲೀ, ನಿರುಕ್ತವಾಗಲೀ ಕಾವೇರಿಯನ್ನು ಉಲ್ಲೇಖಿಸಿಲ್ಲ. ಆದರೂ ಮರುದ್ವೃಧೆ, ಅಸಿಕ್ನೀ ಎಂಬ ಉಪನದಿಯೊಡನೊಡ ಗೂಡಿದ್ದೆಂದು ಹೇಳಿದ್ದರಿಂದ ಅದು ಕಾವೇರಿಯೇ ಎಂಬ ತೀರ್ಮಾನಕ್ಕೆ ಕವಿ ಬಂದಿರಬಹುದು. ಅಸಿಕ್ನೀ ಎಂದರೆ ಕಪ್ಪುಛಾಯೆಯುಳ್ಳದ್ದು (ಕಪಿಲೆ ?) ಮತ್ತು ಮರುದ್ವೃಧಾ ಎಂದರೆ ಉಪ ನದಿಗಳಿಂದಲೂ, ಬೀಸುವ ಗಾಳಿಯಿಂದಲೂ ವೃದ್ಧಿ ಹೊಂದಿ ಉಕ್ಕಿ ಹರಿಯುವ ನದಿ ಎಂದು ನಿರುಕ್ತ ಹೇಳಿದೆ.

ಇಮಂ ಮೇ ಗಂಗೇ ಯಮುನೇ ಸರಸ್ವತಿ ಶುತುದ್ರಿ ಸ್ತೋಮಂ ಸಚತಾ ಪರುಷ್ಣ್ಯಾ ।
ಅಸಿಕ್ನ್ಯಾ ಮರುದ್ವೃಧೇ ವಿತಸ್ತಯಾರ್ಜೀಕೀಯೇ ಶೃಣುಹ್ಯಾ ಸುಷೋಮಯಾ ॥
(ಋಗ್ವೇದ ಮಂಡಲ–10, ಸೂಕ್ತ–75, ಮಂತ್ರ–5)

ಎಲೈ ಗಂಗೆ, ಯಮುನೆ, ಸರಸ್ವತಿ, ಶತುದ್ರಿ, ಪರುಷ್ಣಿ, ಅಸಿಕ್ನಿಯೊಡಗೂಡಿದ ಮರುದ್ವೃಧೇ, ವಿತಸ್ತೆ ಮತ್ತು ಸುಷೋಮೆಗಳೊಡಗೂಡಿದ ಆರ್ಜೀಕಾ ನದಿಗಳೇ, ನನ್ನಿಂದ ಪಠಿತವಾದ ಈ ಸ್ತೋತ್ರವನ್ನು ಕೇಳಿ ಮತ್ತು ಸ್ವೀಕರಿಸಿ.

ಧನ್ಯಾಃ ಪ್ರಾಂಶುತಮಾಃ ಸ್ಫುರಂತಿ ಪುರತೋ ಯೇ
ನಾರಿಕೇಲದ್ರುಮಾಃ ।
ಧೂಮಾಸ್ವಾದನ ಪಾತ್ರಭಾಜಿನ ಇಮೇ ದ್ರಾಘಿಷ್ಠ ಚಂಚಜ್ಜಟಾಃ
ಭಸ್ಮೋದ್ಧೂಳಿತ ಮೂರ್ತಯೋ ವಿವಸನಾಃ ಪಾಷಂಡಭೇದಾ
ಇವ ॥ 640 ॥

ಪಾಪದಿಂದ ಗೋಳಾಡುವ ಮನುಷ್ಯಸಮುದಾಯದ ಪಾಪಗಳನ್ನೆಲ್ಲ ತೊಳೆಯುವದರಲ್ಲಿ ದೃಢ ಸಂಕಲ್ಪವನ್ನು ತಾಳ್ದವಳಾದಂಥವಳಾಗಿಯೂ, ದಂಡೆಗಳಲ್ಲಿ ಅಪವಾಗಿ ಬೆಳೆಯುವ ಗೋಳಿ, ಧವ, ಎಳ್ಳು, ನೆಲ್ಲಿ. ಮಲ್ಲಿಗೆ, ಚಂದನ, ಮಂದಾರ, ಮಾವು. ನಾಗಸಂಪಿಗೆ, ಬೋರೆ, ಕಡವಾಲ, ನಿಂಬೆ, ನೀರಲು, ತುಂಬ ಎಲೆ ಮತ್ತು ಹೂಗಳುಳ್ಳ ಮುತ್ತಾಲ, ಬೆಳವಲ, ಲೋದಿ, ಆಲಂಬಿ, ಪಾಟಲ ಮತ್ತು ಅಡಿಕೆ ಸಸಿಗಳೇ ಮೊದಲಾದ ಹೆಗ್ಗಿಡಗಳ ಹೂಗೊಂಚಲುಗಳ ಗುಂಪುಗಳ ಮೇಲೇರಿ, ಹೂರಸವನ್ನು ಕುಡಿದು ಬಳಲಿಕೆ ತೀರಿಸಿಕೊಳ್ಳುವ ಇಚ್ಛೆಯಿಂದ ಸುತ್ತಲು ಹಾರ್ಯಾಡುವಂಥ ಮತ್ತು ಹೆಚ್ಚಿದ ಪ್ರೀತಿಯ ವಿಲಾಸಗಳಿಗೆ ನೆಲೆಯಾದಂಥ ದುಂಬಿಗಳ ಕವಿಯೋಣದರಿಂದ ಯಮುನಾ ನದಿಯ ತೋರ್ಕೆಯನ್ನಡೆದವಳಾದಂಥಾವಳಾಗಿಯೂ. ರಾತ್ರಿಯಲ್ಲಿ ತುಂಬ ಸುಶಿಲವನ್ನೆಸಗಿ ಬಳಲಿದ ಅರಸುಗಳ ಅಂತಃಪುರದ ಹೆಣ್ಗಳು ಜಳಕ ಮಾಡುವ ವೇಳೆಯಲ್ಲಿ ತೇಲಾಡುವ ಸರಗಳಲ್ಲಿ ಪೋಣಿಸಲ್ಪಟ್ಟ ಮುತ್ತಿನ ಮಣಿಗಳ ಪದಪಿನಿಂದ ಉಂಟಾದ ಬಿಳ್ಪಿನಿಂದ, ವಿಷ್ಣುವಿನ ಅಡಿದಾವರೆಯಲ್ಲಿ ಹುಟ್ಟಿದ ಗಂಗೆಯ ಜಂಭಕ್ಕೆ ಹಾಸ್ಯ ಮಾಡುವಂಥವಳಾಗಿಯೂ, ನಿರಂತರವಾಗಿ ತನ್ನೊಳಗಿರುವ ಪುರಾಣ ಪುರುಷನಾದ ಶ್ರೀರಂಗದೇವರ ಹಾಸಿಗೆಯಾದ ಸರ್ಪನ ಹೆಡೆಯೊಳಗೆ ಸಾಲಾಗಿರುವ ರತ್ನಗಳ ಕಾಂತಿಯಿಂದ ಕೆಂಬಣ್ಣವನ್ನಡೆದು ಸರಸ್ವತೀ ನದಿಯ ಹೋಲಿಕೆಯಾಗಿರುವಂಥವಳಾಗಿಯೂ, ಉಭಯ ದಂಡೆಗಳಲ್ಲಿ ನಿಯಮಾನುಸಾರವಾಗಿ ಸ್ನಾನಸಂಧ್ಯಾ ಮೊದಲಾದ ಕಾರ್ಯಗಳನ್ನು ನಡಿಸುವುದರಲ್ಲಿ ದೃಢನಿಷ್ಠಾವಂತರಾಗಿ ಕುಳಿತುಕೊಂಡಿರುವ ಪವಿತ್ರರಾದ ಬ್ರಾಹ್ಮಣರ ನಿಷ್ಪಾಪವಾದ ಬ್ರಹ್ಮಯಜ್ಞಗಳ ವೇಳೆಯಲ್ಲಿ ಪುನಃಪುನಹಾ ಪಠಿಸಲ್ಪಡುವ ಮಂತ್ರೋಚ್ಚಾರಣದಿಂದ, ಯಾವಾಗಲೂ ತಾವರೆಗಳ ಮಧ್ಯದಲ್ಲಿಯೇ ಕುಳಿತುಕೊಂಡಿದ್ದು ಶ್ರೀರಂಗಸ್ವಾಮಿಯ ನಾಭಿಕಮಲದಲ್ಲೊಪ್ಪುವ ಬ್ರಹ್ಮದೇವರ ಸಂಪೂರ್ಣ ವೇದಪಠನದಲ್ಲಿ ಚಪಲವಾದ ವಾಕ್ಕುವನ್ನು ಬಯಲುಪಡಿಸುವಂಥವರಾದ, ಸೊಕ್ಕೇರಿದ ಅಂಚೆಗಳು ತಮ್ಮ ಹೆಣ್ಗಳನ್ನು ಬಿಗಿದಪ್ಪಿ ಮುದ್ದಾಡಿ ಜರುಗಿಸುವ ಕಾಮಯುದ್ಧದ ಕುದಿಕೆಯಿಂದುಂಟಾದ ತಲ್ಲಣಿಕೆಯ ದೆಸೆಯಿಂದ ಉದುರಿ ಬೀಳುವ ಸುಂದರ ಕಮಲಗಳ ಧೂಳಿಯಿಂದ ಹೊಸತಾದ ಪನ್ನೀರೇರದ ಮೈಯುಳ್ಳವಳ್ಳಂತೆ ತೋರುವಂಥವಳಾಗಿಯೂ, ವಿಲಾಸವಂತರಾಗಿ ಕೊರಳು ಮಟ್ಟಿಗೆ ನೀರಲಿಳಿದ ಚಲ್ವೆಯರ ಮೊಗ

ಗಳನ್ನು ನೋಡಿ ಚಂದ್ರನು ಈ ನದಿಯ ನೀರಿನ ಮೇಲೆ ಆಕಾಶಮಾರ್ಗವಾಗಿ ಬಂದಿಳಿದು, ಶ್ರೀರಂಗ ದೇವಸ್ಥಾನದ ಸಮೀಪ ಮುಟ್ಟಲು, ತನ್ನ ಹೆಸರಿಗೆ ಸರಿಯಾದ ಹೆಸರು ಅಂದರೆ "ವಿಧು" ಎಂಬ ಹೆಸರುಳ್ಳ ಈ ಶ್ರೀರಂಗನು ಅನೇಕ ಅವತಾರಗಳನ್ನು ತಕ್ಕೊಂಡಿದ್ದಾನೆ, ನಾನು ಕೂಡ ಹಾಗೆ ಯಾಕೆ ಮಾಡಬಾರದೆಂಬ ಹುರುಡಿನಿಂದ ಅನೇಕ ರೂಪಗಳನ್ನು ಧರಿಸಿ ಒಪ್ಪುತ್ತಾನೆ ಎಂತ ಮರುಳುಗೊಂಡ ಚಕ್ರವಾಕ ಪಕ್ಷಿಗಳ ಜೊತೆಗಳು ತೀವಿದೊಲವಿಂದ ಪರಸ್ಪರ ಬಿಗಿದಪ್ಪಿಕೊಳ್ಳುತ್ತಿರುವಾಗ್ಯೆ ಪ್ರೀತಿಯನ್ನು ಕುಂದಿ ಚಂದ್ರಭ್ರಾಂತಿಯು ನೀಗುತಿರಲು, ಊನವಿಲ್ಲದ ಆರ್ತಿಯಿಂದ ಕಣ್ಸೆಪ್ಪೆ ಬಡಿಯದೆ ದಿಟ್ಟಿಸಿ ನೋಡುವ ತರುಣ ಜನರುಗಳಿಂದೊಪ್ಪುವ ದಂಡೆಗಳುಳ್ಳಂಥಾವಳಾಗಿಯೂ, ಸಾರಸ್ವತಂ ಅಂದರೆ ಸಮುದ್ರ ಸಂಬಂಧದ (ಅಥವಾ ವಿದ್ಯೆಯ ಸಂಬಂಧ) ಕಡೆಗೆ ಮುಖಮಾಡಿದವಳಾಗಿ ಕವೇರಾತ್ಮಜಾ ಎಂಬ ಹೆಸರನ್ನು ಧಿಟಪಡಿಸುವಂಥವಳಾಗಿಯೂ ಶಾಂತನವಾಸ್ಪದತಯಾ ಅಂದರೆ ಯೋಗಿಗಳಿಂದ ಸ್ತುತಿಗೆ ಅರ್ಹಳಾದದರಿಂದ (ಅಥವಾ ಗಾಂಗೇಯನೆಂದರೆ ಭೀಷ್ಮನ ಆಶ್ರಯವಾದದರಿಂದ) ಗಾಂಗೇಯ ತರಂಗಿಣಿ-ಸುವರ್ಣಮಯವಾದ ಅಥವಾ ಭೀಷ್ಮನಿಗೆ ಸಂಬಂಧ ಉಳ್ಳ ನದಿ ಎಂಬ ಹೆಸರನ್ನು ಯಥಾರ್ಥಪಡಿಸುವಂಥಾವಳಾಗಿಯೂ, ತನ್ನ ನೀರಲ್ಲಿ ಜಳಕ ಮಾಡಿದವರ ಮತ್ತು ತನ್ನ ಬಳಿಯಲ್ಲಿ ಮಣಿದವರ ಪಾಪಗಳನ್ನು ನಶಿಸುವಂಥಾವಳಾಗಿಯೂ, ಹಾದಿಕಾರರ ಬಳಲಿಕೆಯನ್ನು ಹೋಗಪಡಿಸುವಂಥಾವಳಾಗಿಯೂ, ಈ ಕಾವೇರಿ ನದಿಯು ಕಣ್ಣಿಗೆ ತುಂಬ ಆನಂದವನ್ನೀಯುತ್ತಾಳೆ.

ಮೂಲ : ವಿಪಾಕಿಲ ದೋಷಾಕುಲ ಮನುಜಕುಲ ಸಕಲ ಕಲುಷಶೋಷಣ ಬದ್ಧಕಂಕಣಾ, ನಿಜತಟ ನಿಬಿಡತಮ ಬಕುಲ ಧವಲ ಕುಲತಿಲಕಾಮಲಕಾ ವಿರಲ ಸರಲ ಕುಂದ ಚಂದನ ಮಂದಾರ ಸಹಕಾರ ಕೇಸರ ಸರಸ ಬದರ ಕದಂಬಕದಂಬಕ ಗಂಭೀರ ಜಂಬೀರ ಜಂಬೂ ಸಂಪೂರ್ಣ ಪರ್ಣಕುಸುಮ ಪಲಾಶ ಸಮೃದ್ಧ ಕಪಿತ್ಥ ಲೋಧ್ರ ನೀರಂಧ್ರ ಶಿಲೀಂಧ್ರ ಪಾಟಲ ಪಟಲ ಚಟುಲ ಕ್ರಮುಕ ಪ್ರಮುಖ ವಿಶಂಕಟವಿಟಪಿ ಮಂಜರೀ ಪುಂಜ ಸಂಜರೀ ಜೃಂಭದುರತರ ಶ್ರಮ ಶಮಕರ ಮಕರಂದ ರಸ ಸುಗ್ರಸನ ತಾತ್ಪರ್ಯ ಪರ್ಯಟದದಭ್ರ ವಿಭ್ರಮಾಲಂಬರೋಲಂಬನಿಕುರಂಬ ಕರಂಭಿತತಯಾ ಕಲಿಂದನಂದಿನೀ ಪ್ರತಿಚ್ಛಂದತಾ ಮನುವಿಂದತೀ, ನಿಶಾಕಲಿತ ವಿಶಾಲ ಸುರತ ದಶಾನುಭವ ಶ್ರಮಶಾಲಿ ಕ್ಷಿತೀಶ ನಿಶಾಂತ ಕೃಶಾಂಗೀಜನ ಮಜ್ಜನ ವೇಳಾಡೋಲಾಯಿತ ಪೃಥುಲ ಹಾರ ಪ್ರತ್ಯುಪ್ತ ಮುಕ್ತಾಫಲ ರುಚಿನಿಚಯ ಪರಿಚಯ ರಚಿತಯಾ ಶುಚಿತಯಾ ಪೀತಾಂಬರ ಪದಾಂಬುರುಹ ಸಂಭವ ಸರಿದಂಬುಡಂಬರಂ ವಿಡಂಬಯಂತೀ, ಸಂತತಮಂತರ್ಗತ ಚಿರಂತನ ಪುರುಷ ತಲ್ಪೀಭವದನಂತ ಫಣಾಮಣಿಶ್ರೇಣಿ ಶೋಣೀಭೂತತಯಾ ಸರಸ್ವತೀಮನುಕುರ್ವತೀ, ಪಾರ್ಶ್ವದ್ವಯ್ಯಾ ಮಪಿ ನೈಯಮಿಕ ಕರ್ಮಾನುಷ್ಠಾನ ಶ್ರದ್ಧಾಬದ್ಧಾಸನ ಶುದ್ಧಾವನೀಸುರಾರಬ್ಧಾನವದ್ಯ ಬ್ರಹ್ಮಯಜ್ಞ

ಸಮಯಸಮಧಿಗತ ಮಂತ್ರ ಬ್ರಾಹ್ಮಣಾಮ್ರೇಡನ ಪೂರ್ವಕಮಜಸ್ರಂ ಸಹಸ್ರಪತ್ರ ಮಧ್ಯಮಧ್ಯಾಸೀನಾನಾಂ ಶ್ರೀರಂಗರಾಜನಾಭಿ ಸರೋಜ ವಿರಾಜಮಾನ ನಿಖಿಲನಿಗಮ ಪಠನ ಮುಖರ ಚತುರ್ಮುಖ ವೈಖರೀಂ ವ್ಯಾಚಕ್ಷಮಾಣಾನಾಂ ಮದಕಲಮರಾಲ ಯೂನಾಂ ಪರಟಾ ಪರಿರಂಭ ಚುಂಬನ ಮುಖರಾನಂಗಸಂಗರ ಪ್ರಕ್ಷೋಭವಿಸೃತ್ವರೈಃ ಅಭಿರಾಮತಾಮರಸ ಪರಾಗೈಃ ಅಭಿನವ ಚಂದನ ರಸ ಮಸೃಣ ಶರೀರೇವ. ಸಲೀಲಮಾ ಕಂಠಮಗ್ನ ಮೂರ್ತೀನಾಂ ಸುಗಾತ್ರೀಣಾಂ ವದನೈರಬಹುಶಃ ಪರುಷಿ ದೈಪಾಯ ಸಾಧ್ವಸಮಾಗತಸ್ಪಂದ್ರಮಾಸ್ಸನ್ನಿಹಿತ ಶ್ರೀರಂಗಧಾಮ ಸ್ಥ ಸಮಾನ ನಾಮಾ ವಿಧಾರ್ಪಿರಚಿತಾನೇಕಾವತಾರ ಇತೀರ್ಷ್ಯಯಾ ಸ್ವಯಮಪಿ ಬಹೂನಿ ರೂಪಾಣಿ ವಿದ ಧಾನೋ ವಿರಾಜತ ಇತಿ ಭ್ರಾಂತಾವಸುರಾಗ ಮಾಂದ್ಯ ಸಂಪಾದಿನಾಯಾಂ ಇತರೇತರ ದೃಢಾಶ್ಲೇಷ ವಿಶೇಷೋನ್ಮಿಷತ್ತೋಷಾಭಿಃ ಕೋಕದಂಪತೀ ಪರಂಪರಾಭಿಃ ನಿರಾ ಕೃತಾಯಾಂ ಅಕುಂಠೋತ್ಕಂಠೇನ ಯುವಲೋಕೇನ ನಿರ್ನಿಮೇಷಮವಲೋಕ ಮಾನೇನ ಅಲಂಕೃತಾ, ಸಾರಸ್ವತಾಭಿಮುಖ್ಯೇನ ಕವೇರಾತ್ಮಜೇತಿ ಪ್ರಸಿದ್ಧಿಂ ಸಾರ್ಥಯಂತೀ ಶಾಂತನವಾಸ್ಪದತಯಾ ಗಾಂಗೇಯ ತರಂಗಿಣೀ ಸಂಜ್ಞಾಂ ಅನ್ವರ್ಥಯಂತೀ ಮಜ್ಜನ ಮುದಿತಪರಾಹಿ ನಮಜ್ಜನಮುದಿತಪರಾ ನಿರಾಕೃತಮಘೀಃ ಶ್ರಾಂತಿಸ್ಸವಂತೀ ಚಕ್ಷುಷೋರ ಮಂದಂ ಕಂದಳಯತ್ಯಾಮೋದಂ ॥

ಚಂಸ್ಥೂ : ಪದ್ಯ ಕಾವ್ಯಗಳು ಲೋಕದಲ್ಲಿ ಬಹಳ ಇವೆ. ಆದಾಗ್ಯೂ ಗದ್ಯ ಕೂಡಿ ಇಲ್ಲದ ಪದ್ಯವು ರಸಿಕರಿಗೆ ಮನೋಹರವಲ್ಲವು. ಪದ್ಯದಿಂದ ಅಗಲಿರುವ ಗದ್ಯವು ಜಾಣರಿಗೆ ಸವಿಯಾಗುವುದಿಲ್ಲವು. ಅವೆರಡರ ಕೂಡಿಕೆಯು ಮಿಗಿಲಾದ ಆನಂದ ಹುಟ್ಟಿಸುತ್ತೆ. ಜೇನುತುಪ್ಪ ಮತ್ತು ದ್ರಾಕ್ಷಾರಸ ಇವೆರಡರ ಯೋಗವು ಯಾರಿಗೆ ಸವಿಕೊಡಲಿಕ್ಕಿಲ್ಲ ? (ಸಕಲರಿಗೂ ಸವಿಕೊಡುವುದು ಎಂಬ ಭಾವವು).

ಮೂಲ : ಪದ್ಯಂ ಯದ್ಯಪಿ ವಿದ್ಯತೇ ಬಹು ಸತಾಂ ಹೃದ್ಯಂ ವಿಗದ್ಯಂ ನ ತತ್
ಗದ್ಯಂ ಚ ಪ್ರತಿಪದ್ಯತೇ ನ ವಿಜಹತ್ಪದ್ಯಂ ಬುಧಾಸ್ವಾದ್ಯತಾಂ !
ಅಥತ್ತೇ ಓತಯೋಃ ಪ್ರಯೋಗ ಉಭಯೋರಾಮೋದ
ಭೂಮೋದಯಂ
ಸಂಗಃ ಕಸ್ಯ ಹಿ ನ ಸ್ವದೇತ ಮನಸೇ ಮಾಧ್ವೀಕಮೃದ್ವೀಕಯೋಃ ॥ 4 ॥

---

ಋಣ

ಗೋಖಲೆ ಸಾರ್ವಜನಿಕ ಸಂಸ್ಥೆಯ ಲೈಬ್ರರಿಯಲ್ಲಿದ್ದ ಈ ಪುಸ್ತಕವನ್ನು ನನಗೆ ಒದಗಿಸಿ ಕೊಟ್ಟವರು ಮಾನ್ಯರಾದ ಡಿ. ಆರ್. ವೆಂಕಟರಮಣನ್. ಸಂಸ್ಥೆಗೂ ಅವರಿಗೂ ಕೃತಜ್ಞ.

# ವೈಚಾರಿಕ

# ಫ್ರಾನ್ಜ್ ಕಾಫ್ಕಾ

ಮೂಲ : ವಿಲ್‌ಡ್ಯುರಾಂಟ್
ಅನು : ಡಾ. ಲಕ್ಷ್ಮೀನಾರಾಯಣ

## 1. ಆತಂಕಗಳ ನೆಲೆ

ಮೊದಲಿಗೆ ಕಾಫ್ಕಾನ ಪ್ರಮುಖ ಬರಹಗಳನ್ನು ಅವುಗಳ ಶೀರ್ಷಿಕೆಯೇ ಸೂಚಿಸುವಂತೆ ಕಥೆಗಳೆಂದೇ ಪರಿಗಣಿಸಿ ಗ್ರಹಿಸೋಣ. ಅನಂತರ ಅವನ ಜೀವನ, ವ್ಯಕ್ತಿತ್ವ, ಅವನ ಖಾಯಿಲೆಗಳು ಹಾಗೂ ಅವನ ಪ್ರೇಮ ಪ್ರಕರಣಗಳನ್ನು ನೋಡೋಣ. ಮೂರನೆಯದಾಗಿ ಅವನ ಜೀವನದ ಬೆಳಕಿನಲ್ಲಿ ಅವನ ಕಥೆಗಳನ್ನು ಅರ್ಥೈಸಲು ಪ್ರಯತ್ನಿಸೋಣ. ಕೊನೆಯದಾಗಿ ಅವನ ಸಾವಿನ ಪ್ರಕರಣವನ್ನು ತೆಗೆದುಕೊಳ್ಳೋಣ. ಸಾವಿನೊಂದಿಗೆ ಈ ಪ್ರಬಂಧವನ್ನು ಮುಕ್ತಾಯಗೊಳಿಸುವುದು ಅಸಂತೋಷಕರ. ಆದರೂ ಸಾವೆಂಬುದು ತೀರ ಅನಿವಾರ್ಯ ತಾನೆ!

ಕಾಫ್ಕಾನ ಕಥೆಗಳನ್ನು ಕಥೆಗಳಾಗಿ ತೀರಾ ಸ್ಪಷ್ಟವಾಗಿ ಗ್ರಹಿಸಬಹುದು. ಅವುಗಳ ವಸ್ತು ಮತ್ತು ಶೈಲಿ ಸರಳ ಹಾಗೂ ಸ್ಪಷ್ಟ. ಒಂದು ಮಗು ಕೂಡಾ ಅವನ್ನು ಅರ್ಥ ಮಾಡಿಕೊಳ್ಳಬಲ್ಲುದು. ಆದರೆ ಮೇಲು ಮೇಲಿನ ಈ ಪಾರದರ್ಶಕ ಹೊದಿಕೆಯೊಳಗೆ ಲೇಖಕ ತನ್ನ ತಾತ್ವಿಕತೆಯನ್ನು ಅಡಗಿಸಿಟ್ಟಿದ್ದಾನೆ. 'ಜಡ್ಜ್‌ಮೆಂಟ್' (1913) ಎಂಬುದು ಹದಿನೆಂಟು ಪುಟಗಳ ಬರಹ. ಇದರಲ್ಲಿ ಜಾರ್ಜ್ ಎನ್ನುವವನು ತಂದೆಯ ಬದಲಿಗೆ ತಾನೇ ಕುಟುಂಬದ ಕಂಪೆನಿಯ ಯಜಮಾನನಾಗಲು ಹವಣಿಸುತ್ತಾನೆ. ಇದಕ್ಕಾಗಿ ತಂದೆಯ ನಿಂದೆಗೆ ಒಳಗಾಗುತ್ತಾನೆ. ಪರಿಣಾಮವಾಗಿ—"ಪ್ರೀತಿಯ ತಂದೆ ತಾಯಿಗಳೇ, ನಾನು ಯಾವತ್ತೂ ನಿಮ್ಮನ್ನು ಪ್ರೀತಿಸಿದ್ದೇನೆ"—ಎಂದು ಜೋರಾಗಿ ಕೂಗುತ್ತಾ ನೀರಿನಲ್ಲಿ ಮುಳುಗಿ ಆತ್ಮಹತ್ಯೆಮಾಡಿಕೊಳ್ಳುತ್ತಾನೆ. 'ದಿ ಪೀನಲ್ ಕಾಲೊನಿ' ಎಂಬುದು 1914ರಲ್ಲಿ ಬರೆದದ್ದು. 1920ರಲ್ಲಿ ಪ್ರಕಟವಾಯಿತು. ಅದು ಎಡ್ಗರ್ ಅಲೆನ್ ಪೋನ 'ದಿ ಪಿಟ್ ಅಂಡ್ ದಿ ಪೆಂಡ್ಯುಲಮ್' ಅನ್ನು ನೆನಪಿಗೆ ತರುವಂಥ ಭಯಾನಕ ಕಥೆ. ಮತಿವಿಕಲನಾದ ಸೇನಾಧಿಕಾರಿಯೊಬ್ಬ ಹೆಮ್ಮೆಯಿಂದ,

ಅತ್ಯಂತ ಎಚ್ಚರಿಕೆಯಿಂದ ಜಟಿಲಯಂತ್ರವೊಂದನ್ನು ನಿರ್ಮಿಸುತ್ತಾನೆ. ಚಲಿಸುವ ಬ್ಲೇಡೊಂದು ಯಂತ್ರಕ್ಕೆ ಕಟ್ಟಿದ ಅಪರಾಧಿಯ ದೇಹದಿಂದ ಅವನ ಅಪರಾಧದ ಗುರುತ್ವಕ್ಕೆ ತಕ್ಕಂತೆ ಅತ್ಯಂತ ದೊಡ್ಡ ದೊಡ್ಡ ತುಂಡುಗಳನ್ನು ಕತ್ತರಿಸುತ್ತಾ ಹೋಗುತ್ತದೆ. ಈ ಯಂತ್ರದ ಕಾರ್ಯಾಚರಣೆಯೇ ಅದೆಷ್ಟು ಕುತ್ಸಿತ ಆಸಕ್ತಿಯನ್ನು ಕೆರಳಿಸುವುದಾಗಿತ್ತೆಂದರೆ, ಅದನ್ನು ಹತ್ತಿರದಿಂದ ನೋಡಲು ಅವಕಾಶ ನೀಡಬೇಕೆಂದು ಬಂದ ಮನವಿಗಳೆಲ್ಲವನ್ನೂ ಮಾನ್ಯ ಮಾಡುವುದು ಸಾಧ್ಯವೇ ಇರಲಿಲ್ಲ. ಸೇನಾಧಿಕಾರಿ ತನ್ನ ವಿವೇಕವನ್ನು ಬಳಸಿ, ಮಕ್ಕಳಿಗೆ ಇದನ್ನು ಹತ್ತಿರದಿಂದ ನೋಡಲು ಆದ್ಯತೆಯಿರಬೇಕೆಂದು ವಿಧಿಸಿದ.

'ರೂಪಾಂತರ' (1915) [Metamorphosis] – ಎಂಬ 72 ಪುಟಗಳ ಈ ಪುಸ್ತಕ, 'ಗ್ರೆಗರ್ ಸ್ಯಾಂಸ' ಎಂಬ ಪ್ರವಾಸೀ ವ್ಯಾಪಾರಿಯೊಬ್ಬ ರಾತ್ರೋರಾತ್ರಿ ದೈತ್ಯಾಕಾರದ ಹುಳುವಾಗಿ ರೂಪಾಂತರಗೊಂಡುಬಿಟ್ಟ ರುದ್ರ ಭೀಕರ ಕತೆ. ಗ್ರೆಗರ್ ಒಬ್ಬ ಕಷ್ಟಪಟ್ಟು ಕೆಲಸ ಮಾಡುವ ಕೆಲಸಗಾರ. ತನ್ನ ತಂದೆ ತಾಯಿಗಳ ಮತ್ತು ಸೋದರಿಯ ಮುಖ್ಯ ಆಧಾರ. ಆದರೆ ಒಳಗೊಳಗೇ, ತನ್ನ ತಂದೆಯ ಸ್ಥಾನದಲ್ಲಿ ತಾನೇ ಮನೆಯ ಯಜಮಾನನಾಗಬೇಕೆಂದು ಹಾಗೂ ಅಧಿಕಾರ ಚಲಾಯಿಸುವವನಾಗಬೇಕೆಂದು ಆಸೆ ಪಟ್ಟಿದ್ದ. ಹುಳುವಾಗಿದ್ದರೂ ಮಾನವ ಮನಸ್ಸನ್ನು, ಭಾವನೆಗಳನ್ನು ಹಾಗೂ ನೆನಪುಗಳನ್ನು ಉಳಿಸಿಕೊಂಡದ್ದರಿಂದ ಅವನೆಲ್ಲ ವೇದನೆಗಳು ದ್ವಿಗುಣಗೊಳ್ಳುತ್ತವೆ. ತನ್ನ ಗಡುಸಾದ, ಒರಟಾದ ಬೆನ್ನನ್ನು ಆಧಾರ ಮಾಡಿಕೊಂಡು ಮಲಗಿ, ಅಪಸ್ಮಾರಕ್ಕೆ ತುತ್ತಾದವನಂತೆ ತನ್ನ ಅನೇಕ ಕಾಲುಗಳನ್ನಾಡಿಸುತ್ತ, ತನ್ನ ಕಳೆದ ಬದುಕಿನ ಬೇಸರಿಕೆಯನ್ನು ಒಂದೊಂದಾಗಿ ನೆನಪಿಸಿಕೊಳ್ಳುತ್ತಾನೆ. ಹಾಗೂ ಈಗಿನ ದುರದೃಷ್ಟಕರ ಸ್ಥಿತಿಯನ್ನು ಕುರಿತು ಚಿಂತಾಕುಲನಾಗುತ್ತಾನೆ. ಈ ಹುಳು ತಮ್ಮ ಮಗನಂತೆ ಮಾತನಾಡುವುದನ್ನು ಕಂಡು ಅವನ ತಂದೆ ತಾಯಿಗಳು ದಿಗಿಲು ಬೀಳುತ್ತಾರೆ. ಅಸಹ್ಯಗೊಂಡು ಭಯವಿಹ್ವಲರಾಗಿ ಅವರು ಅವನನ್ನು ಅವನ ಕೊಠಡಿಯಲ್ಲಿ ಕೂಡಿ ಬೀಗ ಹಾಕುತ್ತಾರೆ. ಅವನ ಕಡೆ ಅವರು ತಿರುಗಿಯೂ ನೋಡುವುದಿಲ್ಲ. ಅವನ ಸೋದರಿ ಗ್ರೀಟಾ ಅವನಿಗಾಗಿ ಮರುಗುತ್ತಾಳೆ. ದಿನವೂ ಆಹಾರ ತಂದು ಕೊಟ್ಟು ಅವನ ಕಸರೆಯನ್ನೆಲ್ಲಾ ತೆಗೆದು ಅಚ್ಚುಕಟ್ಟು ಮಾಡುತ್ತಾಳೆ, ಹಾಗೂ ರೂಪಾಂತರಗೊಂಡ ತನ್ನ ಸೋದರ, ಎಂದಿನ ವಾಡಿಕೆಯಂತೆ, ಕುರ್ಚಿಯ ಮೇಲೆ ಹತ್ತಿ ಅತ್ತಿತ್ತ ಸುಳಿದಾಡುವ ಜನರನ್ನು ನೋಡಲು ಅನುಕೂಲವಾಗಲೆಂದು ಕುರ್ಚಿಯನ್ನು ಕಿಟಕಿಯತ್ತ ಸರಿಸುತ್ತಾಳೆ. ಆದರೆ ಅವನ ರೂಪವನ್ನು ಕಣ್ಣಾರೆ ನೋಡುವುದಾಗಲಿ, ಅವನ ವಾಸನೆಯನ್ನು ಸಹಿಸುವುದಾಗಲಿ ಅವಳಿಂದ ಸಾಧ್ಯವಾಗುತ್ತಿರಲಿಲ್ಲ. ಅವನು ಇದನ್ನು ಕಂಡು, ಅವಳು ಬಂದಾಗ ಸೋಫಾ ಕೆಳಕ್ಕೆ ಸರಿದು ಹೋಗಿ ಬಿಡುತ್ತಿದ್ದ. ಸಂಸಾರ ನಿರ್ವಹಣೆಯ ಸಲುವಾಗಿ ತಾಯಿ ಕೆಲವು ಮಂದಿಗೆ, ಹಣ ತೆಗೆದುಕೊಂಡು ಊಟ ಹಾಕುವ ದಂಧೆ ಹಿಡಿಯುತ್ತಾಳೆ. ಈಗಾಗಲೇ ನಿವೃತ್ತನಾಗಿದ್ದ ಅಪ್ಪ ಮನಸ್ಸಿ

ಲ್ಲದ ಹಣ್ಣಿನಿಂದ ಮತ್ತೆ ಕೆಲಸಕ್ಕೆ ಹೋಗತೊಡಗುತ್ತಾನೆ. ಗ್ರೀಟಾಳೂ ಸಹ ಒಂದು ಕೆಲಸಕ್ಕೆ ಸೇರಿಕೊಳ್ಳುತ್ತಾಳೆ. ಮನೆಗೆ ಹಿಂತಿರುಗುವ ಹೊತ್ತಿಗೆ ದಿನವೂ ಅವಳು ಅದೆಷ್ಟು ಆಯಾಸಗೊಂಡಿರುತ್ತಿದ್ದಳೆಂದರೆ, ಗ್ರೆಗರನಿಗೆ ಆಹಾರ ನೀಡುವುದರಲ್ಲಾಗಲಿ, ಅವನ ಕೊಠಡಿಯನ್ನು ಚೊಕ್ಕಟ ಮಾಡುವುದರಲ್ಲಾಗಲಿ ತೀರಾ ಅಲಕ್ಷ್ಯತೋರತೊಡಗುತ್ತಾಳೆ. ಅವನು ತೀರಾ ದುರ್ಬಲನಾಗುತ್ತಾನೆ. ತೆಳ್ಳಗೂ ಆಗುತ್ತಾನೆ. ಒಂದು ದಿನ ಯಾರದೋ ಅಲಕ್ಷ್ಯದಿಂದ ಬಾಗಿಲು ತೆರೆದಿರುತ್ತದೆ. ಅವನು ಹೊರಕ್ಕೆ ಚಲಿಸುತ್ತಾನೆ. ಅಲ್ಲಿ ಊಟಕ್ಕಿದ್ದವರು ಭಯ ಚಕಿತರಾಗುತ್ತಾರೆ. ಅವರೆಲ್ಲ ಮನೆ ಬಿಡುತ್ತಾರೆ. ತಂದೆ ಕೆಲವು ಸೇಬಿನ ಹಣ್ಣುಗಳನ್ನು ಅವನತ್ತ ಎಸೆಯುತ್ತಾನೆ. ಒಂದು ಸೇಬು ಗ್ರೆಗರನಿಗೆ ತಗುಲಿ ಅವನು ಹೆಳವನಾಗುತ್ತಾನೆ. ಅದಕ್ಕಿಂತಲೂ ಹೆಚ್ಚಿನ ವೇದನೆ ಅವನಿಗಾಗುವುದು ಅವನ ಸೋದರಿ—"ನಾವು ಅವನಿಂದ ಕಳಚಿಕೊಳ್ಳಬೇಕು" ಎಂದು ಹೇಳುತ್ತಿದ್ದುದನ್ನು ಕೇಳಿ. ಅವನಿಗೆ ಬದುಕಿರಬೇಕೆಂಬ ಆಸೆಯೇ ಹೊರಟು ಹೋಗುತ್ತದೆ. ನೀರು ಅನ್ನಾಹಾರಗಳೆಲ್ಲವನ್ನೂ ತ್ಯಜಿಸುತ್ತಾನೆ. ತೀರಾ ತೆಳು ಮತ್ತು ದುರ್ಬಲನಾಗುತ್ತಾನೆ. "ಬಹು ಬೇಗ, ತನಗೆ ಒಂದು ಕಾಲನ್ನೂ ಆಡಿಸಲು ಸಾಧ್ಯವಾಗುತ್ತಿಲ್ಲವೆಂಬುದನ್ನು ಕಂಡುಕೊಳ್ಳುತ್ತಾನೆ... ಅವನ ತಲೆ ತನಗೆ ತಾನೇ ನೆಲದ ಮೇಲೆ ಕುಸಿದು ಅವನ ಮೂಗಿನಿಂದ ಕೊನೆಯ ಉಸಿರು ಹೊರ ಹೊಮ್ಮಿತು." ಅವನು ಸಾಯುತ್ತಾನೆ ಕೆಲಸದವಳು ಅವನ ಶರೀರವನ್ನು ಕಸದ ತೊಟ್ಟಿಗೆ ಎಸೆಯುತ್ತಾಳೆ. 'ನಮಸ್ಕಾರ ದೇವರೇ' ಎಂದು ಅಪ್ಪ ಉದ್ಗರಿಸುತ್ತಾನೆ.

'ದಿ ಟ್ರಯಲ್' (ವಿಚಾರಣೆ) ಜೋಸೆಫ್. ಕೆ. ಎಂಬ ಬ್ಯಾಂಕ್ ಉದ್ಯೋಗಿಯೊಬ್ಬನ ಕತೆ. ಅವನ ಮೇಲಿನ ಆಪಾದನೆ ಏನೆಂಬುದನ್ನು ತಿಳಿಸದೆ ಇದ್ದಕ್ಕಿದ್ದಂತೆ ವಿಚಾರಣಾ ಸಮಿತಿಯೊಂದರ ಮುಂದೆ ಹಾಜರಾಗಬೇಕೆಂದು ಅವನಿಗೆ ತಿಳಿಸಲಾಗುತ್ತದೆ. ತಾನು ಮಾಡಿರುವ ಅಪರಾಧ ಏನೆಂದು ಅವನು ಕೇಳುತ್ತಾನೆ. ಅದೇನೆಂದು ಅವನಿಗೆ ತಿಳಿಸುವುದಿಲ್ಲ. ಆದರೆ ತನ್ನ ಮೇಲಿನ ಈ ಮೊಕದ್ದಮೆಯನ್ನು ಕೊನೆಗೊಳಿಸುವ ಮತ್ತು ದಂಡ ಸಲ್ಲಿಸುವ ಅತ್ಯುತ್ತಮ ಮಾರ್ಗೋಪಾಯವಾಗಿ ಅಪರಾಧವನ್ನು ಒಪ್ಪಿಕೊಂಡು ಬಿಡಬೇಕೆಂದು ಅವನಿಗೆ ಸಲಹೆ ನೀಡಲಾಗುತ್ತದೆ. ತನ್ನ ಮನೆಗೆ ಹಿಂತಿರುಗಲು ಅವಕಾಶ ಕೊಡಲಾಗುತ್ತದೆ. ಬಹು ಬೇಗನೆ ಮತ್ತೆ ಅವನನ್ನು ಕರೆಸಲಾಗುತ್ತದೆ. ತಾನು ಹಿಂದೆ ಕೇಳಿದ್ದಂತೆಯೇ ಏಕೆ ಕರೆಸಿದ್ದೆಂದು ಕೇಳುತ್ತಾನೆ. ಹಿಂದಿನಂತೆಯೇ ಉತ್ತರ ಮತ್ತು ಹಿಂದಿನಂತೆಯೇ ಸಲಹೆ ನೀಡಲಾಗುತ್ತದೆ. ಅವನ ಪರಿಚಯದವರು, ಸ್ನೇಹಿತರು, ಎಲ್ಲರೂ ಅವನನ್ನು ಅನುಮಾನದ ಕಣ್ಣುಗಳಿಂದ ನೋಡುತ್ತಾರೆ. ಅಷ್ಟೇ ಅಲ್ಲ, ತಮ್ಮ ಮನಸ್ಸಿನಲ್ಲಿ ಅವನು ಅಪರಾಧಿ ಎಂದು ತೀರ್ಮಾನಿಸಿ ಬಿಡುತ್ತಾರೆ. ತಾನು ಮಾಡಿದ ಅಪರಾಧದ ಸ್ವರೂಪ ಏನೆಂಬುದು ತನಗೇ ಸ್ಪಷ್ಟವಾಗಿ ತಿಳಿದಿಲ್ಲದಿದ್ದರೂ ಸ್ವತಃ ಅವನಿಗೇ ತಾನು ತಪ್ಪಿತಸ್ಥನೇ ಎಂಬ ಅಪರಾಧಿ ಪ್ರಜ್ಞೆ ಬಂದು ಬಿಡುತ್ತದೆ. ಪುನಃ ಕೋರ್ಟ್‌ಗೆ ಕರೆಸಿ, ಅವನ ಅಪರಾಧವೇನೆಂದು ಹೇಳದೆಯೇ ಅವನನ್ನು ಅಪರಾಧಿ

ಎಂದು ಘೋಷಿಸಲಾಗುತ್ತದೆ. ಅಧಿಕಾರಿಗಳು ಆವನನ್ನು ಇರಿದು ಕೊಂದು ಬಿಡುತ್ತಾರೆ. ಇದು ಸ್ಟಾಲಿನ್ನನ ನೇತೃತ್ವದಲ್ಲಿ ನಡೆದ 'ಪರ್ಜ್' (Phrge) ವಿಚಾರಣೆಯೊಂದರ ವರದಿಯ ರೀತಿಯಲ್ಲಿದೆ. ಆದರೆ ಇದನ್ನು ಬರೆದದ್ದು ರಷ್ಯಾದ ಕ್ರಾಂತಿಗೆ ಮೂರು ವರ್ಷಗಳ ಮುನ್ನವೇ 1914ರಲ್ಲಿ. ಇದು ಪ್ರಕಟವಾದದ್ದು ಮಾತ್ರ 1925 ರಲ್ಲಿ ಸ್ಟಾಲಿನ್ ಅಧಿಕಾರಕ್ಕೆ ಬಂದ ಒಂದೇ ವರ್ಷದ ನಂತರ.

ದುರ್ಗ (Castle) (1921–22ರಲ್ಲಿ ಬರೆದು 1930ರಲ್ಲಿ ಪ್ರಕಟವಾದದ್ದು) ಕೆ. ಅನ್ನುವವನ ಕಥೆ. ಅವನನ್ನು ಪರ್ವತ ಪ್ರದೇಶವೊಂದರ ಬಳಿಯಲ್ಲಿದ್ದ ದುರ್ಗವೊಂದರಲ್ಲಿ ವಾಸಿಸುತ್ತಿದ್ದ ಅನಾಮಿಕ ಶ್ರೀಮಂತನೊಬ್ಬನ ಆಸ್ತಿಯ ಸರ್ವೆ ನಡೆಸಲು ಕಳಿಸಲಾಗುತ್ತದೆ. ಆ ದುರ್ಗ ಆ ಹಳ್ಳಿಯಲ್ಲೇ ಕಣ್ಣಿಗೆ ಕಟ್ಟುವಂಥದಾಗಿತ್ತು ಮತ್ತು ಅದರ ಅಧಿಕಾರ ಇಡೀ ಹಳ್ಳಿಯ ಮೇಲೆ ಇತ್ತು. ಕೆ. ಆ ಶ್ರೀಮಂತನನ್ನು ಭೇಟಿಯಾಗಿ ತನ್ನ ಪರಿಚಯ ಪತ್ರಗಳನ್ನು ಸಲ್ಲಿಸ ಬಯಸುತ್ತಾನೆ. ಆದರೆ ಸ್ಪಷ್ಟವಾದ ಕಾರಣಗಳನ್ನೇನೂ ತಿಳಿಸದೆ, ಅವನಿಗೆ ಪ್ರವೇಶವನ್ನು ನಿರಾಕರಿಸಲಾಗುತ್ತದೆ. ಅಲ್ಲಿಯ ಹಳ್ಳಿಗರೊಂದಿಗೆ ಸ್ನೇಹ ಮಾಡಿಕೊಳ್ಳಲು ಪ್ರಯತ್ನಿಸುತ್ತಾನೆ. ಆದರೆ ಅವರು ಅವನನ್ನು ಪರಕೀಯನೆಂದು ಪರಿಗಣಿಸಿ ಅವನ ಬಗ್ಗೆ ಅಪನಂಬಿಕೆ ತಾಳುತ್ತಾರೆ. ಹಾಗೂ ಅಲ್ಲಿನ ಅವನ ಬದುಕು ಅಹಿತಕರವಾಗುವಂತೆ ಮಾಡುತ್ತಾರೆ. ಕಥೆಯ ಕೊನೆ ಕೊನೆಗೆ ಅವನು ದುರ್ಗಕ್ಕೆ ಪ್ರವೇಶ ದೊರಕಿಸಲು ಮತ್ತು ಆ ಶ್ರೀಮಂತನೊಂದಿಗೆ ಸಂಪರ್ಕ ಸಾಧಿಸಲು ಸತತವಾಗಿ ಪ್ರಯತ್ನಿಸುತ್ತಾ ಹೋಗುತ್ತಾನೆ. ಆದರೆ ಕೊನೆಗೂ ಯಶಸ್ವಿಯಾಗುವುದಿಲ್ಲ. ಇಷ್ಟೇ ಕತೆ.

ಈ ಎಲ್ಲ ಕೃತಿಗಳ ಅತ್ಯಂತ ವಿಶಿಷ್ಟ ಗುಣವೆಂದರೆ, ಸ್ಪಷ್ಟವಾದ, ನಿಖರವಾದ. ವಿಷಯಾನುಗುಣವಾದ ಶೈಲಿ. ವಿಲಕ್ಷಣ ಕಲ್ಪನೆಗಳಿಗೂ ವಾಸ್ತವದ ಆಭಾಸವನ್ನು ತಂದು ಕೊಡುವ ಅತ್ಯಂತ ಸೂಕ್ಷ್ಮ ವಿವರಗಳಿಂದ ಕೂಡಿರುವ, ಅಸಂಭಾವ್ಯವೆನ್ನಬಹುದಾದ ಘಟನೆಗಳು ಚಿತ್ರಿತವಾಗಿರುವ ಶೈಲಿ ಅದು. ಒಮ್ಮೆ ಕಾಫ್ಕಾ ವಿಲಿನಾ ಜೆಸೆನ್‌ಸ್ಕಾಳಿಗೆ ಹೇಳಿದ–"ಹಾಸಿಗೆಯಲ್ಲಿ ಮಲಗಿದ್ದಾಗ ಯಾರಿಗಾದರೂ ನಿದ್ರೆಯ ಬದಲು ಅತ್ಯುತ್ತಮ ಆಲೋಚನೆಗಳು ಹೊಳೆಯುತ್ತವೆ"-ಎಂದು. ಆದರೆ ಅವನ ಅನೇಕ ಕಾದಂಬರಿಗಳು ತೆರೆದ ಕಣ್ಣುಗಳಿಂದ ನೋಡಿದ ಭಯಂಕರ ಸ್ವಪ್ನಗಳಂತಿರುತ್ತವೆ. ತನ್ನ ದಿನಚರಿಯಲ್ಲಿ ಹೀಗೆ ಬರೆದಿದ್ದಾನೆ–"ಸ್ವಪ್ನಸದೃಶವೆಂಬಂಥ ನನ್ನ ಅಂತರಂಗದ ಬದುಕಿನ ಚಿತ್ರಣವನ್ನು ಚಿತ್ರಿಸುವಂಥ ನನ್ನ ಪ್ರತಿಭೆ ಉಳಿದೆಲ್ಲ ವಿಷಯಗಳನ್ನೂ ಹಿನ್ನೆಲೆಗೆ ಸರಿಸಿಬಿಟ್ಟಿದೆ." ಜೋನಾಥನ್ ಸ್ವಿಫ್ಟ್‌ನ ನಂತರ ಇನ್ನಾವುದೇ ಐರೋಪ್ಯ ಬರಹಗಾರ ಅವಾಸ್ತವವನ್ನು ಹೀಗೆ ಅತಿವಾಸ್ತವವೆಂಬಂತೆ ವರ್ಣಿಸುವುದರಲ್ಲಿ ಕಾಫ್ಕಾನಷ್ಟು ಸಿದ್ಧಿಯನ್ನು ಪಡೆದಿಲ್ಲ. ಕಾಲ್ಪನಿಕ ಸಂಗತಿಗಳೂ ಹಿಂದೆಂದೂ ಇಷ್ಟರ ಮಟ್ಟಿಗೆ ವಾಸ್ತವದ ಭ್ರಮೆ ಹುಟ್ಟಿಸುವಂಥ ರೀತಿಯಲ್ಲಿ ನಿರೂಪಿತವಾಗಿರಲಿಲ್ಲ.

ಕೆಲವೊಮ್ಮೆ ಓದುತ್ತ ಹೋದಂತೆ, ಲೇಖಕ ಹೆಚ್ಚು ಕಡಿಮೆ ಮತಿವಿಕಲನಾಗುತ್ತಿದ್ದಾನೇನೋ ಎಂದು ಆತಂಕಗೊಳ್ಳುವಂತಾಗುತ್ತದೆ. ಇಷ್ಟಾದರೂ ಹುಚ್ಚರಿಗೆ ಸಾಧ್ಯವೇ ಇಲ್ಲದಂಥ, ಪ್ರಶಾಂತ, ಆತ್ಮಸಂಯಮದಿಂದ ಬರೆಯುತ್ತಾ ಹೋಗುತ್ತಾನೆ. ಈ ವಿಷಯದಲ್ಲಿ ಕಾಫ್ಕಾ ಫ್ರೆಂಚ್ ಕಾದಂಬರಿಕಾರ ಪ್ರೌಸ್ಟ್‌ನ ತದ್ವಿರುದ್ಧ. ಕಾಫ್ಕಾ ಯಾವ ಭಾವನೆಗಳನ್ನೂ ಅಭಿವ್ಯಕ್ತಿಸುವುದಿಲ್ಲ. ಯಾವುದೇ ಟೀಕೆ ಟಿಪ್ಪಣಿಗಳಿಲ್ಲದೆ, ತಾನು ಕಂಡ ಅಥವಾ ಕನಸಿದ ಘಟನೆಗಳನ್ನು ನಿರೂಪಿಸುತ್ತಾ ಹೋಗುತ್ತಾನೆ. ಆ ಪ್ರಶಾಂತ ಬರವಣಿಗೆಯಲ್ಲಿ ಕ್ರೂರವೇ ಎನ್ನಬಹುದಾದ ಅಣಕವಿದೆಯೇನೋ ಎನಿಸುತ್ತದೆ. ಆ ಬರವಣಿಗೆ, ರೌದ್ರವೆಂಬುದು ಮಾನವ ಬದುಕಿನ ಸಾಮಾನ್ಯ ಲಕ್ಷಣವೆಂಬಂತೆ ಪ್ರಸ್ತುತ ಪಡಿಸುತ್ತದೆ. ಬಹುಶಃ ಈ ಕತೆಗಳೆಲ್ಲವೂ ಆತ್ಮವಿರೇಚನಗಳು : ಬರವಣಿಗೆಯ ಮೂಲಕ ತನ್ನನ್ನು ತಾನು ಬಯಲು ಮಾಡಿಕೊಳ್ಳುವ ಕ್ರಿಯೆ. ಆದ್ದರಿಂದಲೇ ಅವು ಅಷ್ಟೊಂದು ನಿರಾಸೆಗೊಳಿಸುವಷ್ಟು ಅಪೂರ್ಣತೆಯಿಂದ ಕೂಡಿರುವುದು. ಪ್ರಕಾಶಕರು ಎಷ್ಟೇ ಒತ್ತಾಯ ಮಾಡಿದಾಗ್ಯೂ, ತನ್ನ ಮೂರು ಕಾದಂಬರಿಗಳಲ್ಲಿ ಯಾವುದೊಂದನ್ನೂ ಪೂರ್ಣಗೊಳಿಸಲಿಲ್ಲ. ಒಮ್ಮೆ ತನಗೆ ಕತೆ ಬರೆಯುವುದರಲ್ಲಿ ಯಾವ ಆಸಕ್ತಿಯೂ ಇಲ್ಲವೆಂದು ಹೇಳಿ ಕೈತೊಳೆದುಕೊಂಡು ಬಿಟ್ಟಿದ್ದ. ಜೊತೆಗೆ ಅವನ ಬದುಕೂ ಬಹುಪಾಲು ಹಾಗೇ ಇತ್ತು : ಎಲ್ಲವೂ ಅಪೂರ್ಣವಾಗಿಯೇ, ಜೀವಿತವೊಂದನ್ನು ಬಿಟ್ಟು.

## 2. ಕಾಫ್ಕಾನ ಜೀವನ ಗಾಥೆ

ಈ ಕಥೆಗಳು ಅವು ಹೇಳಿದ್ದಕ್ಕಿಂತಲೂ ಇನ್ನೂ ಹೆಚ್ಚಿನ ಅರ್ಥವನ್ನು ಒಳಗೊಂಡಿದ್ದವೆಂಬುದಂತೂ ತೀರ ಸ್ಪಷ್ಟ. ಅದು ಹೇಗೆಂದರೆ, ಲೇಖಕ ಈ ಕಥೆಗಳನ್ನು ನಮ್ಮ ಮುಂದಿಟ್ಟು—ನೀವು ನನ್ನ ಈ ಕೃತಿಗಳನ್ನು ಅರ್ಥಮಾಡಿಕೊಳ್ಳಬೇಕೆಂದಿದ್ದರೆ, ನೀವು ನನ್ನನ್ನು ಅರ್ಥಮಾಡಿಕೊಳ್ಳಬೇಕಾಗುತ್ತದೆ : ನೀವು ನನ್ನ ಜೀವನದೊಳಕ್ಕೆ, ವ್ಯಕ್ತಿತ್ವದೊಳಕ್ಕೆ, ನನ್ನ ವೇದನೆಗಳು ಮತ್ತು ಕನಸುಗಳ ಆಳಕ್ಕೆ ಪ್ರವೇಶಿಸಬೇಕಾಗುತ್ತದೆ—ಎಂದು ಪರತ್ರಿನ ಪಂಥಾಹ್ವಾನ ನೀಡುತ್ತಿರುವಂತಿದೆ. ಹಾಗಾಗಿ ನಾವು ಅವನಿಗೇ ಮೊರೆ ಹೋಗಬೇಕು.

ಕಾಫ್ಕಾ ಸಂಪರ್ಕಿಸಲು ದುಷ್ಕರನಾದ, ಹೆಚ್ಚು ಮಾತಿಲ್ಲದ, ಏಕಾಂತದಲ್ಲಿ ಬಂಧಿಯೋ ಎಂಬಂತೆ ಸದಾ ತನ್ನ ಅಂತರಂಗದ ಬದುಕಿನಲ್ಲಿಯೇ ಮುಳುಗಿ ಹೋದ, ವ್ಯಕ್ತಿಯಂತೆ ಕಂಡುಬರುತ್ತಾನೆ. ಇಂಥ ಶ್ರೀಮದ್ ಗಾಂಭೀರ್ಯದ ವ್ಯಕ್ತಿಯೂ ತನ್ನ ಮುವ್ವತ್ತೆರಡು ವರ್ಷಗಳ ಆಯುರ್ಮಾನವನ್ನು ಪ್ರಾಗ್‌ನ ಯಹೂದಿ ಕುಟುಂಬವೊಂದರಲ್ಲಿ ತಂದೆ, ತಾಯಿ ಮತ್ತು ಸೋದರಿಯರೊಂದಿಗೆ ಕಳೆದ (1883–1915). ಹಿಬ್ರೂ ಭಾಷೆಯಲ್ಲಿ ಅವನ ಹೆಸರು ಅಮ್‌ಶ್ಚಲ್ ಎಂದು. ಅವನ ವಂಶದಲ್ಲಿ ಅನೇಕ ಧಾರ್ಮಿಕ ಪಂಡಿತರು ಆಗಿಹೋಗಿದ್ದರು. ಕೆಲವರಂತೂ ವಿಲಕ್ಷಣ ಕನಸುಗಾರರು.

ಅವನ ತಂದೆ ಒಬ್ಬ ಸಗಟು ಬಟ್ಟೆ ವ್ಯಾಪಾರಿ. ನಗರದ ಚೌಕದಲ್ಲೊಂದು ಬಟ್ಟೆಯ ಮಳಿಗೆಯೂ, ಒಂದು ಅಂಗಡಿಯೂ ಇದ್ದುವು. ಆತ ಎತ್ತರದ ನಿಲುವಿನ ದೃಢ ಕಾಯದ ನಿಷ್ಠುರ ವ್ಯವಹಾರಸ್ಥ. ಪುಕ್ಕಲು ಸ್ವಭಾವದ, ಸದಾ ಚಿಂತನಶೀಲನಾದ ತನ್ನ ಮಗನನ್ನು ಹೆದರಿಸಿ ದೂರ ಅಟ್ಟುವುದಕ್ಕೆ ಹೇಳಿ ಮಾಡಿಸಿದಂಥ ಅಪ್ಪ. ಕಾಫ್ಕಾ ತುಂಬ ದುರ್ಬಲನೂ, ಸೂಕ್ಷ್ಮ ಸ್ವಭಾವದವನೂ ಆದ ಹುಡುಗ. ತನ್ನ ವಯಸ್ಸಿಗೆ ಮೀರಿದ ಪ್ರೌಢನೂ, ಸ್ವಚ್ಛಂದ ಸ್ವಭಾವದವನೂ ಆಗಿದ್ದ. ದೇವಾಲಯಕ್ಕೆ ಹೋಗು ವುದನ್ನೂ, ಶಾಲೆಗೆ ಹೋಗುವುದನ್ನೂ ಬೇಸರ ತರಿಸುತ್ತದೆಂದೂ, ಅದೊಂದು ಶಿಕ್ಷೆ ಎಂದೂ ಬಿಟ್ಟುಬಿಟ್ಟ. ಶಾಲೆಯಲ್ಲಿ ಕಲಿಕೆಯ ಮಾಧ್ಯಮ ಜರ್ಮನ್ ಭಾಷೆ ಆಗಿತ್ತು; ಜೆಕ್ ಅಲ್ಲ. ಕಾರಣ, ಪ್ರಾಗ್ ಬೊಹಿಮಿಯನ್ ಸಾಮ್ರಾಜ್ಯದ ರಾಜಧಾನಿಯಾಗಿತ್ತು. ಬೊಹಿಮಿಯಾ 1918ರ ವರೆವಿಗೂ ಆಸ್ಟ್ರೋ ಹಂಗೇರಿಯನ್ ಚಕ್ರಾಧಿಪತ್ಯದ ಭಾಗ ವಾಗಿತ್ತು. ಆದ್ದರಿಂದ ಕಾಫ್ಕಾ ತನ್ನೆಲ್ಲ ಕೃತಿಗಳನ್ನೂ ಜರ್ಮನ್ ಭಾಷೆಯಲ್ಲಿ ಬರೆದ.

ಮುಂದೆ ಕಾಫ್ಕಾ—"ನನಗೆ ಅವರು ಬಹು ದೊಡ್ಡ ಹಾನಿಯುಂಟುಮಾಡಿದ್ದಾರೆ. ನನ್ನನ್ನು ನಾನು ಈಗಿರುವುದಕ್ಕಿಂತ ಬೇರೆ ರೀತಿಯ ವ್ಯಕ್ತಿಯನ್ನಾಗಿ ಮಾಡಬೇಕೆಂದು ಪ್ರಯತ್ನಪಟ್ಟರು"–ಎಂದು ತನ್ನ ಅಧ್ಯಾಪಕರನ್ನು, ತಂದೆ ತಾಯಿಗಳನ್ನು ದೂರಿದ್ದಾನೆ. 1919ರಲ್ಲಿ ಅವನು "ನನ್ನ ತಂದೆಗೊಂದು ಪತ್ರ" ಬರೆದ. ಆದರೆ ಅದನ್ನು ತಂದೆಗೆ ಕಳಿಸದೆ ಮ್ಯಾಕ್ಸ್‌ಬ್ರಾಡ್‌ಗೆ ಕಳಿಸಿದ. ಅದರಲ್ಲಿ ಹುಡುಗನ ಅಭಿಲಾಷೆಯನ್ನು ಭಗ್ನ ಗೊಳಿಸಲು ಯತ್ನಿಸಿದನೆಂದು ತಂದೆಯ ಮೇಲೆ ಆರೋಪ ಮಾಡಿದ್ದಾನೆ. –"ನಿಮ್ಮೆದುರಿ ನಲ್ಲಿ ನನಗೆ ತೊದಲು ಬಂದು ಬಿಡುತ್ತಿತ್ತು. ನಿಮ್ಮೆದುರಿನಲ್ಲಿ ನನಗೆ ಯೋಚಿಸುವು ದಾಗಲಿ, ಮಾತಾಡುವುದಾಗಲಿ ಸಾಧ್ಯವಾಗುತ್ತಿರಲಿಲ್ಲ"– ಎಂದು ದೂರಿದ್ದಾನೆ. ತಂದೆ ಯನ್ನು ಕಂಡರೆ ಅವನಿಗೆ ಆಗದೆ ಇದ್ದುದು ಈಡಿಪಸ್ ಕಾಂಪ್ಲೆಕ್ಸ್‌ನಿಂದಾಗೇನೂ ಅಲ್ಲ. ಕಾರಣ ಅವನಿಗೆ ತಾಯಿಯನ್ನು ಕಂಡರೂ ಆಗುತ್ತಿರಲಿಲ್ಲ. ಅಪ್ಪನಿಗೂ ಮಗನಿಗೂ ವಿವಾದ ಉಂಟಾದಾಗ, ಆಕೆ ತನ್ನ ಗಂಡನ ಪರ ವಹಿಸುತ್ತಿದ್ದುದೇ ಅದಕ್ಕೆ ಕಾರಣ. ಅಂಗಡಿಯನ್ನು ನೋಡಿಕೊಳ್ಳಲು ಹೋಗಬೇಕೆಂದೂ, ತಂದೆ ಅಂಗಡಿ ವ್ಯವಹಾರ ಬಿಟ್ಟುಕೊಟ್ಟನಂತರ, ಈ ಮಗ ಅವನ ವ್ಯವಹಾರವನ್ನು ವಹಿಸಿಕೊಳ್ಳಬೇಕೆಂಬುದೂ ಮನೆಯವರ ಇಚ್ಛೆಯಾಗಿತ್ತು. ಆದರೆ ಅವನು ಇದನ್ನು ತಿರಸ್ಕರಿಸಿದ. ಇದು ಅವನಿಗೆ ಕೆಲಸ ಮಾಡಲು ಇಷ್ಟವಿಲ್ಲದೆ ಇರುವುದು ಎಂದು ಅವರು ಆರೋಪಿಸಿದರು.

ಮನಸ್ಸಿಲ್ಲದ ಮನಸ್ಸಿನಿಂದ ಅವನು ಕಾನೂನನ್ನು ಅಭ್ಯಾಸ ಮಾಡಿದ. 1906 ರಲ್ಲಿ ಕಾನೂನಿನಲ್ಲಿ ಪದವಿ ಪಡೆದ. ಎರಡು ವರ್ಷಗಳ ಅನಿಶ್ಚಯತೆಯ ನಂತರ, ಕಾರ್ಮಿಕರ ಅಪಘಾತ ವಿಮಾ ಸಂಸ್ಥೆಯಲ್ಲಿ ಗುಮಾಸ್ತನಾಗಿ ಕೆಲಸಕ್ಕೆ ಸೇರಿದ. ಅಲ್ಲಿ ತನ್ನ ಕರ್ತವ್ಯಗಳನ್ನು ಚೆನ್ನಾಗಿಯೇ ನಿರ್ವಹಿಸಿದ. ಅವನ ಮೇಲಧಿಕಾರಿಗಳು ಇವನನ್ನು ಮೆಚ್ಚಿಕೊಂಡರು ಮತ್ತು ಮೇಲಿಂದ ಮೇಲೆ ಗೈರುಹಾಜರಾಗಲು ಅವಕಾಶ ಕೊಟ್ಟರು. ಕಛೇರಿಯಲ್ಲಿ ದಿನಪೂ ಎರಡು ಗಂಟೆಯವರೆಗೆ ಮಾತ್ರ ಕೆಲಸ ಮಾಡುತ್ತಿದ್ದ. ಅನಂತರ

ತನಗೆ ಪ್ರಿಯವಾದ ಕೆಲಸಗಳಾದ ಓದುವುದು ಬರೆಯುವುದು ಇವುಗಳಲ್ಲಿ ತೊಡಗಲು ಸಮಯವು ದೊರೆಯುತ್ತಿತ್ತು. ಅವನ ತಂದೆ ತಾಯಿಗಳು ಈ ರೀತಿ "ಕೆಲಸವಿಲ್ಲದೆ" ಕುಳಿತಿರುವುದಕ್ಕೆ ಆಕ್ಷೇಪಿಸಿದರು. ಪ್ರತಿದಿನವೂ ಸ್ವಲ್ಪ ಹೊತ್ತು ಅಂಗಡಿ ವ್ಯವಹಾರವನ್ನು ನೋಡಿಕೊಳ್ಳಬೇಕೆಂದು ಒತ್ತಾಯಿಸಿದರು. 1912ರಲ್ಲಿ ಅವರ ತಂದೆ ಕಾಯಿಲೆ ಬಿದ್ದಾಗ, ಕಾಫ್ಕಾ ಮಧ್ಯಾಹ್ನದ ಹೊತ್ತು ಸಹಾಯಕ ಸೂಪರಿಂಟೆಂಡೆಂಟ್ ಆಗಿ ಕೆಲಸ ಮಾಡಲು ಒಪ್ಪಿದ. ಆದರೆ ಅಲ್ಲಿ ಅವನಿಗೆ ಸಂತೋಷವಿರುತ್ತಿರಲಿಲ್ಲ. ಕಾರಣ ಅವನಿಗೆ ವ್ಯಾಪಾರದಲ್ಲಿ ಆಸಕ್ತಿಯಾಗಲಿ, ಅದನ್ನು ನೋಡಿಕೊಳ್ಳುವುದರಲ್ಲಿ ಅಂಥ ದಕ್ಷತೆಯಾಗಲಿ ಇರಲಿಲ್ಲ. ಯಂತ್ರಗಳನ್ನು ನಡೆಸುತ್ತಿದ್ದ, ಕೊಳಕು ಬಟ್ಟೆಯ, ಬೆವರುಗಟ್ಟಿದ, ಒಪ್ಪಗೆಟ್ಟ, ಅಲ್ಪವೇತನ ಪಡೆಯುತ್ತಿದ್ದ ಮಹಿಳೆಯರ ದುಸ್ಥಿತಿಯನ್ನು ನೋಡುವುದು ಅವನಿಂದಾಗುತ್ತಿರಲಿಲ್ಲ. ಲೇಖಕನಾಗಬೇಕೆಂಬ ಅವನ ಮಹತ್ವಾಕಾಂಕ್ಷೆ ಈ ಇಬ್ಬಗೆಯ ಕೆಲಸಗಳಿಂದಾಗಿ ಮುಳುಗಿಯೇ ಹೋಗಿಬಿಟ್ಟಿತೇನೋ ಎನ್ನುವಂತಾಯಿತು. 1915 ರಲ್ಲಿ ಅವನು ತಂದೆತಾಯಿಗಳ ವಿರುದ್ಧ ತಿರುಗಿಬಿದ್ದ. ಅಂಗಡಿಯನ್ನೂ, ಮನೆಯನ್ನೂ ಬಿಟ್ಟು ಹೊರಟ. ಒಂದು ಕೊಠಡಿಯನ್ನು ಬಾಡಿಗೆಗೆ ಹಿಡಿದ. ನಗರದ ಗುಜುಗುಜು ಇದ್ದಿತಾದರೂ ಈ ಕೊಠಡಿಯಲ್ಲಿ ತಾನು ಬಹಳ ವರ್ಷಗಳಿಂದ ಬಯಸಿದ್ದ ಏಕಾಂತತೆಯನ್ನು ಅನುಭವಿಸಲು ಸಾಧ್ಯವಾಯಿತು. ಇಲ್ಲಿ ಬೆಳಗಿನ ಕೆಲಸದ ನಂತರ, ಬರವಣಿಗೆಯ ಕೆಲಸ ಮಾಡಬಹುದಿತ್ತು.

ಬರವಣಿಗೆಯನ್ನು ಅವನು ಜೀವನೋಪಾಯದ ಸಾಧನವೆಂದು ಭಾವಿಸಲಿಲ್ಲ. ಬದಲಿಗೆ ಅದೊಂದು ವಿಧವಾದ 'ಪ್ರಾರ್ಥನೆ' ಎಂದು ಕರೆದ. ಕಾರಣ ಅದು ತನ್ನ ದಿನ ನಿತ್ಯದ ವಿಷಣ್ಣ, ಅಧೀರ ಮನಸ್ಥಿತಿಯ ನಡುವೆ ಅಮೂಲ್ಯವಾದ ಉತ್ಕರ್ಷದ ಕ್ಷಣ ಗಳನ್ನು ತಂದುಕೊಡುತ್ತಿತ್ತು. ಅವನು ಬರೆಯುತ್ತಾನೆ – "ನನ್ನೊಳಗೆ ಆಗಾಗ್ಗೆ ಅನುಭವಕ್ಕೆ ಬರುವ, ಆನಂದದ ಭಾವನೆ, ನನ್ನಲ್ಲಿ ಸಾಮರ್ಥ್ಯಗಳು ಇರುವುದನ್ನು ನನಗೆ ಮನದಟ್ಟು ಮಾಡಿಕೊಡುತ್ತದೆ. ಈ ಸಾಮರ್ಥ್ಯಗಳಾವುವೂ ನನ್ನಲ್ಲಿ ಇಲ್ಲವೆಂದು ಬೇರೆ ಯಾವುದೇ ಕ್ಷಣದಲ್ಲಾದರೂ ನನಗೆ ನಾನೇ ಖಾತರಿ ಮಾಡಿಕೊಳ್ಳಬಲ್ಲೆ". ಕೆಲವೊಮ್ಮೆ ಸ್ಫೂರ್ತಿಯ ಓಘಕ್ಕೆ ವಶನಾಗಿ ಮಧ್ಯರಾತ್ರಿಯ ನಂತರವೂ ಬಹಳ ಸಮಯದ ವರೆಗೆ ಬರೆಯುತ್ತಿದ್ದ. ಅವನೇ ಹೇಳುವಂತೆ – "ತೀರ್ಪು (Judgement) ಕೃತಿಯನ್ನು ನಾನು 1912ರ ಸೆಪ್ಟೆಂಬರ್ 22ರ ರಾತ್ರಿ ಹತ್ತು ಗಂಟೆಯಿಂದ ಮಾರನೆ ದಿನ, ಅಂದರೆ 23ರ ಬೆಳಗಿನ ಆರು ಗಂಟೆಯ ತನಕ ಒಂದೇ ಸಿಟ್ಟಿಗೆ ಕುಳಿತು ಬರೆದು ಮುಗಿಸಿದೆ. ಕುಳಿತು ಕುಳಿತು ಕಾಲುಗಳು ಎಷ್ಟು ಮರಗಟ್ಟಿ ಹೋಗಿದ್ದುವೆಂದರೆ, ಕುಳಿತ ಜಾಗದಿಂದ ಕಾಲುಗಳನ್ನು ಕೀಳುವುದೇ ಕಷ್ಟವಾಯಿತು. ಅದೊಂದು ಭಯಂಕರ ಆಯಾಸದ ಹಾಗೂ ಅಷ್ಟೇ ಸಂತೋಷದ ಅನುಭವ." ಕಛೇರಿಯ ಕೆಲಸಕ್ಕಿಂತ ಹೆಚ್ಚಾಗಿ ಬರವಣಿಗೆ ಅವನನ್ನು ತೀರಾ ಸಾಕಂಗೊಳಿಸಿತು.

ಅವನು ತೀರಾ ಒಂಟಿಜೀವಿಯಲ್ಲ. ಮುಂದೆ ಅವನಷ್ಟೇ ಖ್ಯಾತಿವಂತರಾದ ಅನೇಕ ಪರಿಚಿತರು ಅವನಿಗಿದ್ದರು. ಮಾರ್ಟಿನ್ ಬಬರ್, ರೈನರ್ ಮರಿಯಾರಿಲ್ಕ್, ಫ್ರಾನ್ಜ್ ವರ್ಫೆಲ್. ಹ್ಯೂಗೋವಾನ್ ಹಾಫ್‌ಮನ್‌ಸ್ಥಲ್ ಮುಂತಾದವರು. 1902ರಷ್ಟು ಮೊದಲಿಗೆ ಅವನು ಕವಿ ಮತ್ತು ಕಾದಂಬರಿಕಾರ ಮ್ಯಾಕ್ಸ್ ಬ್ರಾಡ್‌ನೊಂದಿಗೆ ಆಜೀವ ಸ್ನೇಹ ಬೆಳೆಸಿದ. ಇವರಲ್ಲಿ ಒಬ್ಬಿಬ್ಬರು ಪ್ರೋತ್ಸಾಹಶೀಲ ವ್ಯಕ್ತಿಗಳು ಕಾಫ್ಕಾನನ್ನು ಅವನ ಕಛೇರಿಯಲ್ಲೇ ಭೇಟಿ ಮಾಡಿದರು. ಬಹುಮಟ್ಟಿಗೆ ನೀರವ ವ್ಯಕ್ತಿ, ಆಲೋಚನೆಗಳಲ್ಲೇ ಮುಳುಗಿರುವವನು, ಎಂದೆಲ್ಲ ಅವರು ಅವನನ್ನು ಬಣ್ಣಿಸಿದರು. ಕ್ರೀಡೆಗಳಲ್ಲಿ, ಸಾಮಾಜಿಕ ಚಳವಳಿಗಳಲ್ಲಿ, ಯಿದ್ದಿಶ್ ರಂಗಭೂಮಿಯಲ್ಲಿ, ಕೊನೆಗೆ ಜಿಯೊನಿಸ್ಟ್ ಚಳವಳಿ ಮುಂತಾದುವುಗಳಲ್ಲಿ ಆಸಕ್ತಿವಹಿಸುವಂತೆ ಆಗ್ರಹಪಡಿಸಿದರು. ಕಾಫ್ಕಾ ಸಾಮಾನ್ಯವಾಗಿ ಮ್ಯಾಕ್ಸ್‌ಬ್ರಾಡ್‌ನೊಂದಿಗೆ ಅನೇಕ ವಿದೇಶ ಪ್ರವಾಸಗಳನ್ನು ಕೈಕೊಂಡ. ಗೆಳೆತನ ಸಾಧಿಸುವುದರಲ್ಲಿ ಅವನಿಗೆ ಅಂಥ ನೈಪುಣ್ಯವಿರಲಿಲ್ಲ ಅಥವಾ ಹೇಳಬೇಕೆಂದರೆ ಗೆಳೆತನಕ್ಕೆ ಎಡೆಕೊಡಲಾರದಷ್ಟರ ಮಟ್ಟಿಗೆ ಪ್ರತಿಭಾವಂತನಾಗಿದ್ದ. “ದಿನನಿತ್ಯದ ಜೀವನಕ್ಕೆ ಅಡ್ಡಿಬರದ ಸ್ನೇಹವನ್ನು ಊಹಿಸಿಕೊಳ್ಳುವುದೂ ಕಷ್ಟ.” 1911 ಡಿಸೆಂಬರ್ 18 ರಂದು ತನ್ನ ದಿನಚರಿಯಲ್ಲಿ ಹೀಗೆ ಬರೆದ – “ನಾನು ವರ್ಫೆಲ್‌ನನ್ನು ದ್ವೇಷಿಸುತ್ತೇನೆ.... ಅವನಾದರೋ ಆರೋಗ್ಯವಂತ, ಶ್ರೀಮಂತ ಯುವಕ. ಆದರೆ ನಾನು ಅದಾವುದೂ ಅಲ್ಲ. ಜೊತೆಗೆ ಅವನಿಗೆ ಸಂಗೀತದ ಅಭಿರುಚಿಯು ವರವಿದೆ. ನಾನಾದರೋ ಸಂಗೀತದಿಂದ ಸಂಪೂರ್ಣ ವಿಮುಖ.” ಅವನ ಪ್ರೀತಿಯ ಮ್ಯಾಕ್ಸ್ ಕೂಡಾ ಕೆಲವೊಮ್ಮೆ ಅವನಿಂದ ದೂರಾದ. 1913ರ ನವೆಂಬರ್ 24ರಂದು ತನ್ನ ದಿನಚರಿಯಲ್ಲಿ ಹೀಗೆ ಬರೆದ – “ಮ್ಯಾಕ್ಸ್ ದಿನೇ ದಿನೇ ಅಪರಿಚಿತನಾಗುತ್ತಿದ್ದಾನೆ. ನನಗೆ ಕೆಲವೊಮ್ಮೆ ಅವನು ಯಾರೋ ಒಬ್ಬನೆನಿಸಿದ್ದ. ಈಗ ನಾನು ಅವನಿಗೆ ಯಾರೋ ಒಬ್ಬನಾಗುತ್ತಿದ್ದೇನೆ.”

ಬ್ರಾಡ್ ಅವನೊಂದಿಗೆ ತಾಳ್ಮೆಯಿಂದಿರುತ್ತಿದ್ದ. ಕಾಫ್ಕಾ ಅತ್ಯಂತ ಮೃದು ಸ್ವಭಾವದವ ಮತ್ತು ತಾಳ್ಮೆಯ ವ್ಯಕ್ತಿ ಎಂದು ಅವನು ವರ್ಣಿಸಿದ್ದಾನೆ. ಕಾಫ್ಕಾ ಸಿಟ್ಟಾಗುತ್ತಿದ್ದುದೇ ಅಪರೂಪವಂತೆ. ಅವನು ಕಪ್ಪುಕೂದಲಿನ, ತಿದ್ದಿದಂಥ ಮುಖಾಕೃತಿಯ ಹಾಗೂ ಆಸಕ್ತಿಪೂರ್ಣ ಹಾಗೂ ತೀಕ್ಷ್ಣ ಕಣ್ಣುಗಳ ವ್ಯಕ್ತಿಯೆಂಬುದನ್ನೂ ಬ್ರಾಡ್ ದಾಖಲಿಸಿದ್ದಾನೆ. ಕಾಫ್ಕಾನ ಯುವಶಿಷ್ಯ ‘ಗುಸ್ತಾವ್ ಜನೌಕ್’ ಎಂಬಾತ, ಕಾಫ್ಕಾನ ಧ್ವನಿ ಅತ್ಯಂತ ಆಶ್ಚರ್ಯಕರವೆಂಬಷ್ಟು ಮಧುರವಾಗಿತ್ತೆಂದು ತಿಳಿಸುತ್ತಾನೆ. ಅವನ ಮುಖಭಾವ, ನೋಟ ಎಲ್ಲವೂ ಅವನ ಒಳ್ಳೆಯತನ ಮತ್ತು ಅರಿವಿನ ಪ್ರಶಾಂತಿಯನ್ನು ಬಿಂಬಿಸುತ್ತಿದ್ದುವೆಂದೂ ತಿಳಿಸುತ್ತಾನೆ. ಸಂದರ್ಭ ಬಂದಾಗಲೆಲ್ಲ, ಕಾಫ್ಕಾ ಸಸ್ಯಾಹಾರವನ್ನೇ ತೆಗೆದುಕೊಳ್ಳುತ್ತಿದ್ದ ಮತ್ತು ಮಾದಕದ್ರವ್ಯಗಳ ಸೇವನೆಯನ್ನು ತಪ್ಪಿಸುತ್ತಿದ್ದ. ಹೊಸಗಾಳಿಗೆ ಹಾಗೂ ಪ್ರಕೃತಿಯ ಸಾನಿಧ್ಯಕ್ಕೆ ತಹತಹಿಸುತ್ತಿದ್ದ.

ಅವನೊಬ್ಬ ಒಳ್ಳೆ ಕುದುರೆ ಸವಾರನಾಗಿದ್ದ! ಒಳ್ಳೆ ಈಜುಗಾರ ಮತ್ತು ಚೆನ್ನಾಗಿ ದೋಣಿ ನಡೆಸುವವನೂ ಆಗಿದ್ದ ಎಂದು ಬ್ರಾಡ್ ಬರೆಯುತ್ತಾನೆ. ಆದರೆ ಅವನ ಹೃದಯ, ಹೊಟ್ಟೆ ಮತ್ತು ಶ್ವಾಸಕೋಶಗಳು ದುರ್ಬಲವಾಗಿದ್ದವು. 1917ರಲ್ಲಿ ಅವನಿಗೆ ಕ್ಷಯ ಕಾಣಿಸಿಕೊಂಡಿತು.

ಅವನ ಕಾಯಿಲೆಗಳು, ತಂದೆ ತಾಯಿ ಮತ್ತು ಸೋದರಿಯರಿಂದ ದೂರಾದದ್ದು, ಕಾರ್ಮಿಕರ ಅಪಘಾತ ವಿಮಾ ಸಂಸ್ಥೆಯಲ್ಲಿ ದಿನನಿತ್ಯವೂ ಎದುರಿಸಬೇಕಾಗಿ ಬರುತ್ತಿದ್ದ ತೊಂದರೆಗಳು, ಇವೆಲ್ಲವೂ; ಅವನು ಪ್ರಪಂಚದ ಮತ್ತು ತನ್ನ ಲೋಪದೋಷ ಗಳನ್ನು ಕುರಿತು ಸದಾ ಏಕಾಂಗಿಯಾಗಿ ಚಿಂತಿಸುವ ವ್ಯಕ್ತಿಯಾಗಿ ಮಾರ್ಪಡಲು ಕಾರಣ ವಾದುವು. ತಂದೆಯ ವಿಷಯಕ್ಕೆ ಸಂಬಂಧಿಸಿದಂತೆ, ಅವನು ಒಂದು ತೆರನ ಅಪರಾಧೀ ಪ್ರಜ್ಞೆ ಬೆಳೆಸಿಕೊಂಡ. ತನ್ನ ಚಿತ್ತಚಾಂಚಲ್ಯ ಮತ್ತು ದೌರ್ಬಲ್ಯವನ್ನು ಕುರಿತು ಅಪ್ಪನಿಗೆ - ತಿರಸ್ಕಾರವಿರುವುದರಲ್ಲಿ ತುಂಬ ಸತ್ಯವಿದೆ ಅನ್ನಿಸಿತು. ಜನೌಕ್‌ನಿಗೆ ಅವನು ಹೇಳಿದ – "ನಾನೊಂದು ಅಸಾಧ್ಯ ಪಕ್ಷಿ. ನಾನೊಂದು ಡೊಂಬ ಕಾಗೆ.... ನಾನೊಬ್ಬ ಕಳ್ಳ". ಜನೌಕ್ – "ನೀನು ಒಬ್ಬಂಟಿಯೇ" ಎಂದು ಕೇಳಿದಾಗ – "ಹೌದು ಫ್ರಾನ್ಜ್ ಕಾಫ್ಕಾನಷ್ಟೇ ಒಬ್ಬಂಟಿ" ಎಂದು ಹೇಳಿದ. ತನ್ನ ದಿನಚರಿಯಲ್ಲಿ ಆಗಾಗ್ಗೆ ತನಗೆ ತಾನೆ ಹೀಗೆ ಸಮಾಧಾನ ಹೇಳಿಕೊಂಡಿದ್ದಾನೆ – "ನಿರಾಶನಾಗಬೇಡ.... ಎಲ್ಲವೂ ಇನ್ನೇನು ಮುಗಿದೇ ಹೋಯಿತು ಎನ್ನುವಾಗ ಹೊಸಶಕ್ತಿಗಳು ಧಾವಿಸಿ ಬರುತ್ತವೆ. ಸರಿಯಾಗಿ ಹೇಳಬೇಕೆಂದರೆ ಅದರ ಅರ್ಥ ನೀನು ಜೀವಂತವಾಗಿದ್ದೀಯೆ. ಆದರೆ ಅದೇ ದಿನ ಅವನಿಗೇ ವಿಶಿಷ್ಟವಾದ ಈ ಮಾತುಗಳೂ ದಿನಚರಿಯಲ್ಲಿ ದಾಖಲಾಗಿವೆ. "ನಾನೊಂದು ನಿಕೃಷ್ಟ ಜಂತು ... ದುರ್ಬಲ, ಸ್ವಯಂನಾಶಕ, ನೆಲವನ್ನು ತಿವಿಯುತ್ತಿರುವ ನರಕದ ಜ್ವಾಲೆಯ ಕುಡಿಯೇ ನಾನು; ಬೇರೇನೂ ಅಲ್ಲ. ನಾನು ಅತ್ತಿಂದಿತ್ತ ಒಂದೇ ಸಮನೆ ಹೊಯ್ದಾಡುತ್ತಿರುವವನು. ಪರ್ವತ ಶಿಖರದ ತುದಿಗೆ ಒಂದೇ ಏಟಿಗೆ ಹಾರುತ್ತೇನೆ. ಮರುಕ್ಷಣವೇ ಕೆಳಗೆ ಬೀಳುತ್ತೇನೆ.... ಅಯ್ಯೋ! ಅದು ಸಾವಲ್ಲ! ಸಾವಿನ ನಿರಂತರ ವೇದನೆ." ತಾನೇ ಸ್ವಯಿಚ್ಛೆಯಿಂದ ಮನೋವೈದ್ಯರ ಬಳಿ ಮನೋವಿಶ್ಲೇಷಣೆಗೆ ಒಳಗಾದ. ಆದರೆ ಅದರಿಂದ ಹೇಳಿಕೊಳ್ಳುವಂಥ ಪ್ರಯೋಜನವೇನೂ ಆಗಲಿಲ್ಲ. ಸ್ಟ್ರಿಂಡ್‌ಬರ್ಗ್, ದಾಸ್ತೊವೆಸ್ಕಿ ಮತ್ತು ಪಾಸ್ಕಲ್ಲರ ಬಹುಳಷ್ಟು ಬರಹಗಳನ್ನು ಓದಿದ. ಅದರಿಂದ ತನಗೆ ಈಗಾಗಲೇ ಕವಿದಿದ್ದ ನಿರಾಶೆಯನ್ನು ಇನ್ನಷ್ಟು ಹೆಚ್ಚಿಸಿಕೊಂಡ.

ಹೆಣ್ಣನ್ನು ಕಂಡರೆ ಹೆದರಿಕೆ. ಆದರೆ ಹೆಣ್ಣು ಬೇಕೆಂದು ಬಯಸಿದ. "ನಾನು ಬಹುಮಟ್ಟಿಗೆ ಕುಳ್ಳಾಗಿ ಮತ್ತು ಸ್ಥೂಲಕಾಯನಾಗಿದ್ದರೂ ಅನೇಕರಿಗೆ ಹಿಡಿಸುತ್ತೇನೆ; ಹುಡುಗಿಯರಿಗೂ ಸಹ" ಎಂದು ತನಗೆ ತಾನೆ ಭರವಸೆ ತಾಳಿದ.... ಇತ್ತೀಚೆಗೆ ತಾನೇ ಒಬ್ಬಳು – "ಓಹ್! ಒಮ್ಮೆ ನಾನು ನಿನ್ನನ್ನು ಚಿತ್ರದಲ್ಲಿ ನೋಡಿದ್ದೇ ಆದರೆ, ಆಗ ನೀನು ನಿಜಕ್ಕೂ ತುಂಬಾ ಮುದ್ದಾಗಿ ಹಾಗೂ ಚುಂಬಿಸಬೇಕು ಎನಿಸುವಂತೆ ಕಾಣಲೇ

ಬೇಕು !" ಎಂದು ಚತುರತೆಯಿಂದ ಹೇಳಿದಳು. "ನಾನು ಬೇಕಂತಲೇ ಸೂಳೆಯರು ವಾಸ ಮಾಡುವ ಕೇರಿಗಳಲ್ಲಿ ಸುತ್ತಾಡುತ್ತೇನೆ.... ಅವರಲ್ಲಿ ಒಬ್ಬಳು ಬಹುಶಃ ನಾನಾರೆಂಬುದನ್ನು ಬಲ್ಲಳು. ಅವಳನ್ನು ಈ ದಿನ ಮಧ್ಯಾಹ್ನ ಭೇಟಿಯಾಗಿದ್ದೆ.... ನಾವು ಒಬ್ಬರನ್ನೊಬ್ಬರು ತೀಕ್ಷ್ಣವಾಗಿ ನೋಡಿದೆವು... ಆಮೇಲೆ ಅಲ್ಲಿಂದ ನಾನು ಓಡಿ ಬಂದುಬಿಟ್ಟೆ." ತಾನು ಸ್ತ್ರೀಯರೊಂದಿಗೆ ಇರಬಲ್ಲೆನೆಂಬ ಬಗ್ಗೆ ಅವನಿಗೇ ವಿಶ್ವಾಸವಿರಲಿಲ್ಲ, ಅವರೊಂದಿಗೆ ನಿಭಾಯಿಸುವುದಕ್ಕಿಂತ ಅವರನ್ನು ಕುರಿತು ಕಲ್ಪಿಸಿಕೊಳ್ಳುವುದು ತುಂಬ ಸುಲಭವಾಗಿತ್ತು.

"ಹೆಂಗಸರೆಂದರೆ ಎಲ್ಲ ಕಡೆಯಿಂದಲೂ ಎರಗಿ ಗಂಡಸರನ್ನು ಕೇವಲ ಸೀಮಿತದ ಬಂಧನಕ್ಕೊಳಪಡಿಸಲು ಕಾದಿರುವ ಬಲೆಗಳಿದ್ದಂತೆ." ಅವನ ಒಡಾಯಿಯ ಮಾತುಗಳನ್ನು ಸಂಕ್ಷಿಪ್ತಗೊಳಿಸಿ ಹೇಳುವುದಾದರೆ, - "ಸ್ವಯಿಚ್ಛೆಯಿಂದ ಅವರ ಬಲೆಗೆ ಬೀಳುವ ಮನುಷ್ಯನಿಗೆ ಅವರಿಂದ ಯಾವ ಅಪಾಯವೂ ಇಲ್ಲ." ಹೆಣ್ಣೊಬ್ಬಳ ಕಾಳಜಿಯುಕ್ತ ಸ್ನೇಹಕ್ಕೆ ಅವನು ಹಾತೊರೆದ. "ಅವಿವಾಹಿತನಾಗಿರುವುದೆಂದರೆ ಅತಿ ಭಯಂಕರವೆನಿಸುತ್ತದೆ.....ಹೆಂಡತಿಯ ಜೊತೆಯಲ್ಲಿ ಮಹಡಿ ಹತ್ತಲು ಸಾಧ್ಯವಾಗದೆ, ಕಾಯಿಲೆ ಮಲಗಿ ಕೇವಲ ಕಿಟಕಿಯ ಮೂಲಕ ಹೊರಗಿನ ಲೋಕದ ದರ್ಶನ ಮಾಡಿದೆನೆಂಬ ಸಮಾಧಾನ ತಾಳುವುದೆಂದರೆ, ಅತಿ ಭಯಂಕರವೆನಿಸುತ್ತದೆ." ತನ್ನ ತಂದೆಗೆ ಬರೆದ ಪತ್ರದಲ್ಲಿ ತನ್ನ ಅಂತರಂಗದ ಆಶೆಯನ್ನು ಹೇಳಿಕೊಂಡ – "ಮದುವೆಯಾಗುವುದು, ಸಂಸಾರ ನಡೆಸುವುದು, ಹುಟ್ಟಿದ ಮಕ್ಕಳನ್ನೆಲ್ಲಾ ಮಡಿಲಿಗೆ ಹಾಕಿಕೊಳ್ಳುವುದು, ಈ ಅನಿಶ್ಚಿತ ಜಗತ್ತಿನಲ್ಲಿ ಅವನ್ನು ಸಾಕಿಬೆಳೆಸುವುದು, ಅವರು ತಮ್ಮ ಕಾಲ ಮೇಲೆ ತಾವು ನಿಲ್ಲುವಂತಾಗುವವರೆಗೂ ಮುನ್ನಡೆಸುವುದು – ನನ್ನ ಅಭಿಪ್ರಾಯದಲ್ಲಿ ಇದಿಷ್ಟೇ ಮನುಷ್ಯ ಹೆಚ್ಚೆಂದರೆ ಸಾಧಿಸಬಹುದಾದ್ದು."

1912ರಲ್ಲಿ ಫೆಲಿಸ್‌ಳೊಂದಿಗಿನ ಅವನ ಐದು ವರ್ಷಗಳ ಪ್ರಣಯಪಲಾಯನಗಳ ಪ್ರಕರಣ ಶುರುವಾಯಿತು. ಆಕೆ ಬರ್ಲಿನ್‌ನಲ್ಲಿರುತ್ತಿದ್ದಳು. ಆದರೆ ಕಾಫ್ಕಾ ಅವಳನ್ನು ಭೇಟಿಯಾದದ್ದು ಮ್ಯಾಕ್ಸ್‌ಬ್ರಾಡ್‌ನ ಮನೆಯಲ್ಲಿ ; ಅದೂ ಆಕೆ ಪ್ರಾಗ್‌ಗೆ ಭೇಟಿ ನೀಡಿದ್ದಾಗ. ಕಾಫ್ಕಾ ಅವಳ ರೂಪಿಗೆ ಮರುಳಾದುದದ್ದಕ್ಕಿಂತ ಹೆಚ್ಚಾಗಿ ಅವಳ ಅಪ್ಪಟ ಹೆಣ್ತನ, ಅವಳ ಪ್ರೈ ಮತ್ತು ಮನಸ್ಸಿನ ಮೃದುತನದ ರೀತಿಗಳಿಂದ ಆಕರ್ಷಿತನಾದದ್ದೇ ಹೆಚ್ಚು. ಒಳ್ಳೆ ಹೆಂಡತಿಯಾಗಬಹುದಾಗಿದ್ದ, ಒಳ್ಳೆ ತಾಯಿಯಾಗಬಹುದಾಗಿದ್ದ, ಸರಿಯಾದ ಅರ್ಥದಲ್ಲಿ ಕಾಫ್ಕಾನಿಗೆ ಒಂದು ನೆಲೆಯನ್ನು ನೀಡಬಹುದಾಗಿದ್ದ, ಪುರುಷತ್ವ ನೀಡಬಹುದಾಗಿದ್ದ ಹುಡುಗಿ ಅವಳು. ಅವನು ಬರ್ಲಿನ್‌ಗೆ ಹಿಂತಿರುಗಿದ ಮೇಲೆ, ದೀರ್ಘ ಪತ್ರವ್ಯವಹಾರ ಆರಂಭಿಸಿದ. ಫೆಲಿಸ್‌ಳೊಂದಿಗಿನ ಈ ಪ್ರಣಯ ವ್ಯವಹಾರ ನಡೆದಿದ್ದಷ್ಟು ಕಾಲ, ಅವನ ಸೃಜನಶೀಲ ಪ್ರತಿಭೆ ಮತ್ತು ಸಾಹಿತ್ಯಶಕ್ತಿ ಉತ್ತುಂಗ ಶಿಖರವನ್ನು ಮುಟ್ಟಿದುವು. ಆಗಲೂ ಅವನ ಪ್ರತಿಭೆ

ಸಾಮಾನ್ಯ ಸ್ಥಿತಿಗಿಂತ ಭಿನ್ನವಾಗಿತ್ತು. ಅವನ ಭಯ ಅವನ ಸಂಕಲ್ಪಶಕ್ತಿಯನ್ನು ಮುರುಟಿಸಿಬಿಟ್ಟಿತು. 1913ರ ಜುಲೈ 20ರಂದು ಅವನು ದಿನಚರಿಯಲ್ಲಿ ಮದುವೆಯ ಪರ ಮತ್ತು ವಿರೋಧವಾಗಿ ವಾದಗಳ ಸಾರಾಂಶವನ್ನು ದಾಖಲಿಸಿದ. ತನ್ನ ಖಾಸಗಿ ಬದುಕನ್ನು ಬಿಟ್ಟುಕೊಡಲು ಹಿಂದೆಗೆದ. "ಬಹಳಷ್ಟು ಮಟ್ಟಿಗೆ ನಾನು ಏಕಾಂಗಿಯಾಗಿಯೇ ಇರಬೇಕು, ನನ್ನ ಸಾಧನೆ ಏನಿದ್ದರೂ ಅದೆಲ್ಲವೂ ನನ್ನ ಏಕಾಂಗಿತನದ ಫಲವೇ ಆಗಿದೆ.... ನಾನು ಮದುವೆಯಾಗದೆ ಏಕಾಂಗಿಯೇ ಆಗಿದ್ದರೆ, ಪ್ರಾಯಶಃ ಒಂದಲ್ಲ ಒಂದು ದಿನ ನನ್ನ ಕೆಲಸವನ್ನು ಬಿಟ್ಟುಬಿಡಬಹುದು. ಮದುವೆಯಾಗಿಬಿಟ್ಟರೆ ಅದೆಂದಿಗೂ ಸಾಧ್ಯವಾಗುವುದಿಲ್ಲ."

ಅವನ ತಾಯಿ ಮದುವೆಯಾಗೆಂದು ಒತ್ತಾಯಿಸಿದಳು. "ನಾನು ಹೇಳಿದೆ - ನೀನು ನನ್ನನ್ನು ಅರ್ಥಮಾಡಿಕೊಂಡಿಲ್ಲ." ಆಕೆ ಹೇಳಿದಳು – "ಹಾಗಾದರೆ ಯಾರೂ ನಿನ್ನನ್ನು ಅರ್ಥಮಾಡಿಕೊಳ್ಳಲಾರರು. ಬಹುಶಃ ನಾನೂ ನಿನಗೆ ಅಪರಿಚಿತಳೇ ಇರಬೇಕು. ನಿಮ್ಮ ತಂದೆಯೂ ಅಂತೆಯೇ ನಿನ್ನ ಪಾಲಿಗೆ ಅಪರಿಚಿತರೇ ಇರಬೇಕು." "ಖಂಡಿತವಾಗಿಯೂ ನೀವೆಲ್ಲಾ ನನ್ನ ಪಾಲಿಗೆ ಅಪರಿಚಿತರೇ. ನನಗೂ ನಿಮಗೂ ಇರುವ ಸಂಬಂಧದ ಎಳೆ, ರಕ್ತಸಂಬಂಧ ಮಾತ್ರ". ಕಾಫ್ಕಾ ಅಂತರ್ಮುಖಿಯಾಗುತ್ತಾ ಹೋದ. ಅವನು ಹೇಳಿದ - "ಎಲ್ಲವರಿಂದಲೂ ಪೂರ್ತಿ ನನ್ನನ್ನು ಕಡಿದುಕೊಂಡುಬಿಡುತ್ತೇನೆ. ಎಷ್ಟರ ಮಟ್ಟಿಗೆ ಎಂದರೆ ಎಲ್ಲರ ಸಂಬಂಧದ ಸ್ಮೃತಿಯೂ ಕಳೆದುಹೋಗುವಷ್ಟು. ಎಲ್ಲರೊಂದಿಗೂ ನಾನು ವೈರತ್ವ ಸಾಧಿಸುತ್ತಾ ಹೋಗುವೆ. ಯಾರೊಂದಿಗೂ ಮಾತನಾಡುವುದಿಲ್ಲ." 1913, ಆಗಸ್ಟ್ 17ರಂದು ಫೆಲಿಸ್‌ಳೊಂದಿಗೆ ಮದುವೆಯ ಪ್ರಸ್ತಾಪ ಇಟ್ಟ. ಒಂದು ತಿಂಗಳ ನಂತರ, ಮ್ಯಾಕ್ಸ್‌ಬ್ರಾಡ್‌ಗೆ ಪೂರ್ಣ ನಂಬುಗೆಯಿಂದ ಹೇಳಿದ – "ಮಧುಚಂದ್ರದ ಯೋಚನೆಯೇ ನನ್ನನ್ನು ಭಯಭೀತನನ್ನಾಗಿಸುತ್ತದೆ." ಆದಾಗ್ಯೂ ಅವನು ಬರ್ಲಿನ್‌ಗೆ ಹೋದ. ಮದುವೆಯ ನಿಶ್ಚಿತಾರ್ಥ ಅಧಿಕೃತವಾಗಿ ಆಗಲೆಂದು ಹೇಳಿದ. "ಅಪರಾಧಿಯ ರೀತಿಯಲ್ಲಿ ಸಿಕ್ಕಿಕೊಂಡುಬಿಟ್ಟಿದ್ದೆ" ಎಂದು ಹೇಳುತ್ತಾನೆ. ಪ್ರಾಗ್‌ನಿಂದ 1913, ಸೆಪ್ಟೆಂಬರ್ 21ರಂದು ಫೆಲಿಸ್‌ಳ ತಂದೆಗೆ ಬರೆದ ಪತ್ರದಲ್ಲಿ ಹೀಗೆ ಹೇಳಿದ - "ಮದುವೆಗೆ ಸಮ್ಮತಿಸುವುದೆಂದರೆ, ನನ್ನ ಸರ್ವನಾಶವಾದಂತೆಯೇ. ನಾನು ಒಂದೇ ಸಮನೆ ತೀರಾ ದಿಕ್ಕೆಟ್ಟಂಥವನಾಗಿದ್ದೇನೆ. ಸಾಹಿತ್ಯೇತರವಾದುದ್ದೆಲ್ಲವೂ ನನಗೆ ತಲೆಬೇನೆ ತರುವಂಥದು. ನಾನು ಅದನ್ನು ದ್ವೇಷಿಸುತ್ತೇನೆ. ಸಂಸಾರವಂದಿಗನಾಗಿ ಬದುಕಲು ಅಗತ್ಯವಾದ ಯಾವ ಯೋಗ್ಯತೆಯೂ ನನಗಿಲ್ಲ."

ಇಷ್ಟಾದರೂ ಹೆಣ್ಣನ್ನು ಕುರಿತಾದ ಬಯಕೆ, ಫೆಲಿಸ್‌ಳನ್ನು ಕುರಿತಾದ ಅಪೇಕ್ಷೆ ಇದ್ದೇ ಇತ್ತು. ವಸಂತದ ಹಿತಕರ ಸನ್ನಿವೇಶದಲ್ಲಿ ಮತ್ತೆ ಪುಟಿಯಿತು. ಕಾಫ್ಕಾ ನಿಶ್ಚಿತಾರ್ಥವನ್ನು ಮತ್ತೆ ಗೊತ್ತುಪಡಿಸಿದ. ಬರ್ಲಿನ್‌ಗೆ ಹೋಗಿ ನೆಲಸುವ ಮತ್ತು

ಬರವಣಿಗೆಯು ಬಲದಿಂದ ತನ್ನ ಯಶಸ್ವೀ ವೈವಾಹಿಕ ಜೀವನವನ್ನು ನಡೆಸುವ ಕನಸು ಕಂಡ. ಕಾಫ್ಕಾನ ತಂದೆತಾಯಿಗಳಿಗೆ ಅವನ ವಿಷಯಕ್ಕೆ ಇನ್ನೂ ಕಿಂಚಿತ್ ವಾತ್ಸಲ್ಯವಿದ್ದಿರಬೇಕು. ಕಾರಣ ಅವರು ಫೆಲಿಸ್ ಮತ್ತು ಕಾಫ್ಕಾ ಇರಲು, ಪ್ರಾಗ್‌ನಲ್ಲಿ ಸುಂದರವಾದೊಂದು ಮನೆಯನ್ನು ಗೊತ್ತುಪಡಿಸಿದರು. ಈ ಹೊಸ ನಿಶ್ಚಿತಾರ್ಥದ ಸಂದರ್ಭದಲ್ಲಿ ಫೆಲಿಸ್ ಕಾಫ್ಕಾನೊಂದಿಗೆ ಒಂದು ದಿನ ಕಳೆಯುವ ಸಲುವಾಗಿ ಅವನೊಂದಿಗೆ ಬೇರೆ ಬೇರೆ ಸ್ಥಳಗಳಿಗೆ ಸುದೀರ್ಘ ರೈಲುಪ್ರಯಾಣ ಕೈಕೊಂಡಳು. ಬೋಡೆನ್‌ಬಾಕ್‌ನಲ್ಲಿ ಅವನೊಂದಿಗೆ ಏಕಾಂತದಲ್ಲಿ ಎರಡು ಗಂಟೆ ಕಳೆದ ನಂತರ ಆಕೆಯ ಉದ್ಗಾರ – "ಓಹ್! ನಾವೆಷ್ಟು ಚೆನ್ನಾಗಿ ನಡೆದುಕೊಂಡಿದ್ದೇವೆ!" ನಿಶ್ಚಿತಾರ್ಥ ಮತ್ತೊಮ್ಮೆ ಮುರಿದುಬಿತ್ತು. ಇನ್ನೊಮ್ಮೆ ನಿಶ್ಚಿತಾರ್ಥ ಏರ್ಪಟ್ಟಿತು. 1917ರಲ್ಲಿ ಒಂದು ಮನೆಯನ್ನು ಗೊತ್ತುಪಡಿಸಿ, ಕೆಲವು ಪೀಠೋಪಕರಣಗಳನ್ನು ಕೊಂಡು ತಂದ. ಆದರೆ ಆಗಸ್ಟ್‌ನಲ್ಲಿ ಕೆಮ್ಮಿದಾಗ ರಕ್ತ ಬರಲು ಶುರುವಾಯಿತು. ಬ್ರಾಡ್ ಹೇಳುವಂತೆ - "ತಾನು ಯೋಜಿಸಿದ್ದ ಮದುವೆಯಿಂದ ತಪ್ಪಿಸಿಕೊಳ್ಳುವ ಉಪಾಯವೆಂಬಂತೆ" ತನಗೆ ಕ್ಷಯರೋಗ ತಗುಲಿದೆಯೆಂದು ಸಾರಿದ. ಅದೇ ವರ್ಷದ ಡಿಸೆಂಬರ್‌ನಲ್ಲಿ ಜುರೈನಲ್ಲಿಯ ಸ್ಯಾನಿಟೋರಿಯಂ ಸೇರಿದ. ಪ್ರಾಗ್‌ಗೆ ಹಿಂದಿರುಗಿದ ಮೇಲೆ, ಫೆಲಿಸ್‌ಗೆ ತಾನು ಅವಳನ್ನು ಮದುವೆಯಾಗುವ ಸ್ಥಿತಿಯಲ್ಲಿಲ್ಲವೆಂದು ಹೇಳಿದ. ಆಕೆ ಬೇರೊಬ್ಬ ಸಂಗಾತಿಯನ್ನು ಹುಡುಕಿಕೊಂಡಳು. 1919ರಲ್ಲಿ ಕಾಫ್ಕಾ ಪ್ರಾಗ್‌ನ ಹುಡುಗಿಯೊಬ್ಬಳನ್ನು ಪ್ರೇಮಿಸಿದ. ಆಕೆಯ ಹೆಸರೇನೆಂಬುದು ಸ್ಪಷ್ಟವಿಲ್ಲ. 'J.W.' ಎಂದಷ್ಟೇ ಗೊತ್ತು. ಎರಡು ಬಾರಿ ಅವಳೊಂದಿಗೆ ನಿಶ್ಚಿತಾರ್ಥ ಏರ್ಪಟ್ಟಿತು. ಅವಳೆಲ್ಲ ವಾದಗಳನ್ನು, ಅವಳ ಬಂಧುಗಳೆಲ್ಲರ ಬೆದರಿಕೆಗಳನ್ನು ಕಡೆಗಣಿಸಿ ಎರಡೂ ಸಲ ಕಾಫ್ಕಾ ನಿಶ್ಚಿತಾರ್ಥದಿಂದ ಹಿಂದೆ ಸರಿದ. ಈ ನಿಶ್ಚಿತಾರ್ಥ ಪ್ರಸಂಗ ನಡೆದಿದ್ದಾಗಲೇ ಮಿಲೆನಾಜೆಸೆಂಕಾ ಎಂಬುವಳೊಂದಿಗೆ ಪತ್ರವ್ಯವಹಾರದ ಸಂಬಂಧವನ್ನೂ ಶುರು ಮಾಡಿದ. ಆಕೆ ವಿಯನ್ನಾದಲ್ಲಿದ್ದಳು. ಅವಳದು ಅತೃಪ್ತಿಕರ ವೈವಾಹಿಕ ಜೀವನವಾಗಿತ್ತು. ಆಕೆ ಇಪ್ಪತ್ತನಾಲ್ಕರ ಹರೆಯದ ಜೆಂಟೈಲ್‌ರವಳು. ಕಾಫ್ಕಾ ಮೂವತ್ತೆಂಟರ ಯಹೂದಿ ತರುಣ. ಪ್ರಾಗ್‌ನ ಪತ್ರಿಕೆಯೊಂದರಲ್ಲಿ ಪ್ರಕಟವಾದ ಅವಳ ಲೇಖನಗಳಿಂದಾಗಿ ಅವಳತ್ತ ಆಕರ್ಷಿತನಾಗಿದ್ದ. ಆಕೆ ಇವನ ಕೆಲವು ಕತೆಗಳನ್ನು ಜೆಕ್ ಭಾಷೆಗೆ ಅನುವಾದಿಸಿಕೊಡುವ ಜವಾಬ್ದಾರಿ ವಹಿಸಿಕೊಂಡಳು. 1920ರಲ್ಲಿ ಕಾಫ್ಕಾ ಇಟಲಿಯ ಮೆರಾನೋದಲ್ಲಿ ಅವಳನ್ನು ಭೇಟಿಯಾದ. ಅವನು ತನ್ನ ಏಕಾಂತ ಕೊಠಡಿಗೆ ಹಿಂತಿರುಗಿದಾಗ ಅವಳನ್ನು ಬಿಟ್ಟು ಬೇರೇನನ್ನೂ ಚಿಂತಿಸದಾದ. ಅವಳೆದುರಿಗೆ ತಾನು ಮೊಣಕಾಲೂರಿ ಕುಳಿತಿರುವಂತೆಯೂ, ಅವಳ ಪಾದಗಳನ್ನು ಚುಂಬಿಸುತ್ತಿರುವಂತೆಯೂ ಕಲ್ಪಿಸಿಕೊಂಡ. ಅವಳೆಂದರೆ, ಯಾರೇ ಆಗಲಿ, ಅವಳನ್ನು ತನ್ನ ತೋಳುಗಳಲ್ಲಿಟ್ಟುಕೊಂಡು, ಈ ಜಗತ್ತಿನಿಂದ, ಬೆಂಕಿಯಿಂದ, ದೂರ ದೂರ ಸಾಗಿಸಿಕೊಂಡು ಹೋಗಿ ಬಿಡುತ್ತಾರೆಂದೂ.... ಅಂಥ ಸಂದರ್ಭದಲ್ಲಿ, ಆಕೆ ಸ್ವಯಿಚ್ಛೆಯಿಂದ, ಸಂಪೂರ್ಣ

ನಂಬುಗೆಯಿಂದ. ಇನ್ನಷ್ಟು ಬಲವಾಗಿ ಆ ತೋಳುಗಳನ್ನು ತಬ್ಬಿ ಹಿಡಿಯುವಂಥವನೆಂದು ರೂಪಿಸಿಕೊಂಡ. ಜೂನ್‌ನಲ್ಲಿ ಅವನು ಅನೇಕ ಕಾನೂನುಗಳನ್ನು ಮುರಿದು-ವಿಯನ್ನಾಕ್ಕೆ ಹೋಗಿ, ನಾಲ್ಕು ದಿನ, ಮಿಲೆನಾಳೊಂದಿಗೆ ರಹಸ್ಯ ಪ್ರಣಯದಲ್ಲಿ ಕಳೆದ, ಪ್ರಾಗ್‌ಗೆ ಹಿಂತಿರುಗಿದ ಮೇಲೆ, ಅವಳೊಂದಿಗಿನ ಮಧುರ ಸ್ಮೃತಿಗಳನ್ನು ಕುರಿತು ಬರೆದ – "ನೀನು, ಹಾಳುಹಾಸಿಗೆಯ ಮೇಲೆ ಗಾಢ ನಿದ್ರೆಯಲ್ಲಿ ಒಂದು ಮಹದುದ್ದೇಶಕ್ಕಾಗಿ ಮಲಗಿದ್ದೀಯೆ. ನೀನು ನಿಧಾನವಾಗಿ ಮತ್ತು ಅಪ್ರಜ್ಞಾಪೂರ್ವಕವಾಗಿ ಬಲದಿಂದ ಎಡದತ್ತ ನನ್ನ ಮುಖದ ಕಡೆಗೆ ಹೊರಳುತ್ತಿದ್ದೀಯೆ." ಒಂದು ವಾರದ ಬಳಿಕ ಅವನ ಪ್ರಾಗ್ ಪ್ರೇಯಸಿ ತನ್ನನ್ನು ಮದುವೆಯಾಗುವ ಮನಸ್ಸುಮಾಡಬೇಕೆಂದು ಗೋಗರೆದಳು. ಆದರೆ ಅವಳ ಬೇಡಿಕೆಯನ್ನು ಮುಂದೂಡಿ, ಮಿಲೆನಾಳೊಂದಿಗೆ ಕೆಲವು ಸಮಯ ಕಳೆಯುವ ಸಲುವಾಗಿ ವಿಯನ್ನಾಕ್ಕೆ ಹಿಂತಿರುಗಿದ. "ನಾವಿಬ್ಬರೂ ಒಟ್ಟಿಗೆ ಇದ್ದರೆ, ಜೀವನ ಅದೆಷ್ಟು ಸುರಳೀತವಿದ್ದೀತು" ಎಂದು ಕನಸು ಕಂಡ.

ಆದರೆ ಅವಳು ಅವನ ಈ ಕನಸನ್ನು ಭಗ್ನಗೊಳಿಸಿದಳು – ತನ್ನ ಗಂಡ ತನ್ನನ್ನು ಮಾನಸಿಕವಾಗಿ ಅವಲಂಬಿಸಿರವುದಾಗಿಯೂ, ತಾನು ಅವನನ್ನು ಅದೆಷ್ಟು ಪ್ರೀತಿಸುತ್ತಾಳೆಂದರೆ, ಅವನನ್ನು ಬಿಟ್ಟುಬಿಡುವುದು ಅಸಾಧ್ಯ – ಎಂದು ಹೇಳಿ. ಮಾತಿನ ಮಧ್ಯೆ ಕಾಫ್ಕಾ ತನಗೆ ನಿಷ್ಠೆಯಿಂದಿರುವನೆ ಎಂದು ಅವನನ್ನು ಕೇಳಿದಳು. ಹಣ ಅವರ ಬಣ್ಣಬಣ್ಣದ ಕನಸನ್ನು ಭಗ್ನಗೊಳಿಸಿತು. ಮಿಲೆನಾ ತನ್ನ ಪ್ರಾಗ್‌ನ ಆಸ್ತಿಯ ಸಂಬಂಧದ ಒಂದು ವ್ಯವಹಾರವನ್ನು ಅವನಿಗೆ ವಹಿಸಿಕೊಟ್ಟಿದ್ದಳು. ತನ್ನ ಅಪನಂಬುಗೆಯ ಗೆಳತಿಗೆ ತನ್ನ ಕೈಲಾದಷ್ಟು ಸಹಾಯ ಮಾಡಿದ. ಆದರೆ ಅವಳು ಅವನ ಮೇಲೆ ಕಳುವಿನ ಅಪಾದನೆ ಹೊರಿಸಿದಳು. ಅಷ್ಟೇ ಅಲ್ಲ; ಅವಳು ಅದೆಂಥ ಚಾಟಿಏಟಿನಂಥ ಛೀಮಾರಿ ಪತ್ರಗಳನ್ನು ಬರೆದಳೆಂದರೆ, ಕಾಫ್ಕಾ, ಮಿಲೇನಾ ತನ್ನನ್ನು ಇನ್ನೆಂದೆಂದೂ ಕಾಣದಂತೆ ಮಾಡಬೇಕೆಂದು ಬ್ರಾಡ್‌ನನ್ನು ಬೇಡಿಕೊಂಡ. ಆಕೆ 1944 ರಲ್ಲಿ ಹಿಟ್ಲರನ ಯಾತನಾಶಿಬಿರದಲ್ಲಿ ತೀರಿಕೊಂಡಳು.

## 3. ಕಾಫ್ಕಾನ ಕೃತಿಗಳು : ಒಂದು ಅವಲೋಕನ

ಕಾಫ್ಕಾ ಮಿಲೆನಾಳಿಗೆ ಬರೆದ ಪತ್ರಗಳು ; ಒಬ್ಬ ವಿಕ್ಷಿಪ್ತ ಮನಸ್ಸಿನ, ಭಯಗ್ರಸ್ತನಾದ, ಕೆಲವೊಮ್ಮೆ ಬಾಲಿಶವೆನ್ನುವಂಥ, ಕನಸುಗಾರನಾದ, ಅಲ್ಪವಿಷಯಗಳನ್ನೇ ಅತಿ ದೊಡ್ಡದು ಮಾಡುತ್ತಿರುವ, ವಾದಿಸುತ್ತಿರುವ, ತೆರೆದ ಬಾಹುಗಳಿಂದ, ತೆರೆದ ಹೃದಯದಿಂದ, ವಿಶ್ವವನ್ನು ಸ್ವಾಗತಿಸಲಾರದಷ್ಟು ಅಪನಂಬುಗೆಯ, ಗ್ರಂಥಗಳನ್ನು ಬರೆಯಲೋಸುಗವೇ ಹುಟ್ಟಿದಂಥ, ಬಲವಂತದಿಂದಾಗಿ ಬಟ್ಟೆವ್ಯಾಪಾರ ಮಾಡಬೇಕಾಗಿ ಬಂದ, ವೈರುಧ್ಯಗಳ ನಡುವೆ ಸಿಕ್ಕಿಕೊಂಡು ಇಬ್ಭಾಗವಾಗುತ್ತಿರುವ ವ್ಯಕ್ತಿಯನ್ನು ನಮ್ಮ ಮುಂದಿಡುತ್ತವೆ.

1907ರಷ್ಟು ಹಿಂದೆಯೇ, ಕಾಫ್ಕಾ ಇನ್ನೂ ಯಾವ ಕೃತಿಯನ್ನೂ ಪ್ರಕಟಿಸಿಯೇ ಇರದಿದ್ದಾಗಲೇ, ಮ್ಯಾಕ್ಸ್‌ಬ್ರಾಡ್, ಅವನೊಬ್ಬ ಪ್ರತಿಭಾವಂತ ಲೇಖಕನೆಂದು ಹೊಗಳಿದ. ಅಂತಿಮವಾಗಿ ಅವನನ್ನು ಥಾಮಸ್ ಮ್ಯಾನ್‌ಗೆ ಸಮನೆಂದು ಹೇಳಿದ. ಮ್ಯಾಕ್ಸ್‌ಬ್ರಾಡ್ 1913ರಲ್ಲಿ ಕಾಫ್ಕಾನ 'Contemplations' ಎಂಬ ಕಿರುಹೊತ್ತಿಗೆಯನ್ನು ಲೈಪ್ಸಿಗ್‌ನ ಪ್ರಕಾಶನ ಸಂಸ್ಥೆಯೊಂದು ಪ್ರಕಟಿಸುವಂತೆ ಒತ್ತಾಯ ಮಾಡುವುದರ ಮೂಲಕ ಅವನ ಬರಹ ಬೆಳಕು ಕಾಣಲು ಕಾರಣನಾದ. ಅದು ಮಾನವ ಬದುಕಿನ ಅಸಂಗತಗಳನ್ನು ಮೆರೆಸುವಂಥದಾಗಿತ್ತು. ಅನಂತರ ಅದೇ ವರ್ಷ ಕಾಫ್ಕಾ "The Stoker" ಎಂಬ ಗ್ರಂಥ ಪ್ರಕಟಿಸಿದ. ಅದಕ್ಕೆ ಜರ್ಮನಿಯ ಸಾಹಿತಿ ಥಿಯೋಡೋರ್‌ಫಾಂಟೇನ್ ಹೆಸರಿನಲ್ಲಿ ಸ್ಥಾಪಿಸಿದ್ದ ಬಹುಮಾನ ಲಭಿಸಿತು. ಈ ಕಥೆಯನ್ನು ಅವನು ತನ್ನ ಅಪೂರ್ಣ ಕಾದಂಬರಿ 'ಅಮೆರಿಕಾ'ದ ಮೊದಲ ಅಧ್ಯಾಯವಾಗಿ ಬಳಸಿಕೊಂಡ. ಕಾಫ್ಕಾನೇ ಈ ಕಾದಂಬರಿಯನ್ನು "ಕೇವಲ ಡಿಕೆನ್ಸ್‌ನ ಅನುಕರಣೆ" ಎಂದು ವರ್ಣಿಸಿದ. ಇದು ಯೂರೋಪಿನ ಬಗ್ಗೆ ತೀವ್ರ ಅಸಮಾಧಾನಗೊಂಡು ಅಮೆರಿಕಾಕ್ಕೆ ವಲಸೆ ಹೋದ ಜರ್ಮನ್ ಯುವಕನೊಬ್ಬನ ಕಥೆ. ತನ್ನ ಈ ಪ್ರಯಾಣ ಕಾಲದಲ್ಲಿ ಅನೇಕ ಉದ್ಯೋಗಗಳನ್ನು ಕೈಕೊಂಡ. ಅನೇಕ ಹೆಣ್ಣುಗಳನ್ನು ಮದುವೆಯಾದ. ಕೊನೆಗೆ ಓಕ್ಲೋಹಾಮಾದಲ್ಲಿ ನೆಲಸಿದ. ಬಹುಶಃ ಊಳಿಗಮಾನ್ಯ ರಾಜಪ್ರಭುತ್ವದಿಂದ, ದಬ್ಬಾಳಿಕೆಯ ಅಪ್ಪನಿಂದ, ಸಹಾನುಭೂತಿ ಇಲ್ಲದ ತನ್ನ ಕುಟುಂಬದಿಂದ, ದೂರ ಹೋಗಬೇಕೆಂಬ ಕಾಫ್ಕಾನ ಅಪೇಕ್ಷೆಯ ಮೂರ್ತರೂಪ ಈ ಕೃತಿ. ಅತ್ಯಂತ ವಿಭಿನ್ನ ರೀತಿಯ ಲವಲವಿಕೆಯಿಂದ ಕೂಡಿದ ಕೃತಿ ಇದು ಎಂದು ಹೇಳುತ್ತಾರೆ.

ಕಾಫ್ಕಾನ ಬಹುತೇಕ ಕತೆಗಳು ತೀರಾ ಸರಳ. ಅವುಗಳು ಎಷ್ಟು ಸರಳವೆಂದರೆ, ಅವುಗಳ ಒಳಮರ್ಮವನ್ನು ತಿಳಿಯಲು ಪರಿಶೋಧನೆ ಅಗತ್ಯ. 'ತೀರ್ಪಿನ' (Judgement) ಜಾರ್ಜ್‌ನೊಂದಿಗೆ ತನ್ನನ್ನು ಗುರುತಿಸಿಕೊಳ್ಳುವುದರ, ಮೂಲಕ ಜಾರ್ಜ್‌ನ ಪ್ರೇಯಸಿಯೊಂದಿಗೆ ಫೆಲಿಸ್‌ಳನ್ನು ಗುರುತಿಸುವುದರ ಮೂಲಕ, ಕಾಫ್ಕಾನೇ ಮಾರ್ಗದರ್ಶನ ಮಾಡಿದ್ದಾನೆ. ಸಹಜವಾಗಿಯೇ ಅದರಲ್ಲಿ ಬರುವ ಕೋಪಿಷ್ಠ ತಂದೆ ಕಾಫ್ಕಾನ ತಂದೆಯೇ ಆಗಿದ್ದಾನೆ. ಜಾರ್ಜ್ ವಿವಾಹದ ಬಗ್ಗೆ ಚಿಂತಿತನಾಗಿರುವುದರಿಂದ ಛಿದ್ರ ಛಿದ್ರವಾಗುತ್ತಾ ಹೋಗುತ್ತಾನೆ. ತನ್ನ ತಂದೆಯನ್ನು ಕೊಂದುಬಿಡಬೇಕೆಂಬ ಯೋಚನೆ ಬಂದದ್ದರಿಂದಾಗಿ ತಾನು ಅಪರಾಧಿ ಎಂಬ ಭಾವ ತಾಳುತ್ತಾನೆ. ತಂದೆ ತಾಯಿಗಳ ನಿಂದನೆಯ ಪೀಡೆ ಸಹಿಸಲಾರದೆ, ಆತ್ಮಹತ್ಯೆ ಮಾಡಿಕೊಳ್ಳುತ್ತಾನೆ. ಲೇಖಕನ ತಲೆಯಲ್ಲಿ ಹಲವಾರು ಸಲ ಸುಳಿದು ಹೋಗಿರಬಹುದಾದ ಯೋಚನೆಯನ್ನೇ ಅವನು ಕಾರ್ಯಗತಗೊಳಿಸುತ್ತಾನೆ ಅಷ್ಟೆ. ಈ ಪಾತ್ರ ಸೃಷ್ಟಿಯಲ್ಲಿ ಕಾಫ್ಕಾ ಮಿತ್ರ ಕರಮ ಜೋವ್‌ನನ್ನು ಮನಸ್ಸಿನಲ್ಲಿಟ್ಟುಕೊಂಡಿದ್ದಂತೆ ಕಾಣುತ್ತದೆ. ಕಾಫ್ಕಾ, ಕರಮ ಜೋವ್‌ನ ಭೂತವನ್ನು ಬರವಣಿಗೆಯ ಮೂಲಕ ಹೊರಹಾಕಿದ್ದಾನೆ.

'ನಾಡವೈದ್ಯ' (The Country Doctor), ಮೂಢನಂಬಿಕೆಗಳಿಂದ, ಅಸಹನೆ

ಯಿಂದ ಹಾಗೂ ದ್ವೇಷ ಭಾವನೆಯಿಂದ ಕೂಡಿದ ಹಳ್ಳಿಯ ರೋಗಿಗಳು ತಮ್ಮ ಪ್ರಶ್ನಾ ಮಂತ್ರ ವೈದ್ಯನನ್ನು ಕೆಟ್ಟದಾಗಿ ನಡೆಸಿಕೊಂಡದ್ದನ್ನು ಒಂಬತ್ತು ಪುಟಗಳಲ್ಲಿ ವಿವರಿಸುವ ಕತೆ. ಕಾಫ್ಕಾ ಇವರಲ್ಲಿ ಅಜ್ಞಾನದ ಅಗಾಧತೆಯಿಂದಾಗಿ ನಿರಂತರವಾಗಿ ಅರ್ಥ ಕಳೆದು ಕೊಳ್ಳುತ್ತಿರುವ ಪ್ರಜಾಪ್ರಭುತ್ವವನ್ನು ನಿರಾಕರಿಸುವಂತೆ ಕಾಣುತ್ತದೆ. "The Burrow" ಎಂಬ ಕಥೆಯಲ್ಲಿ ಭಯಗ್ರಸ್ಥ ಪ್ರಾಣಿಯೊಂದು, ಈ ಜಗತ್ತಿನ ಸದ್ದುಗದ್ದಲ ಮತ್ತು ಅಪಾಯಗಳಿಂದ ತಲೆತಪ್ಪಿಸಿಕೊಂಡು, ಅಡಗಿಕೊಳ್ಳಲು ಉದ್ದವಾದ ಮತ್ತು ವಕ್ರವಾದ ಸುರಂಗವೊಂದನ್ನು ಕೊರೆಯುತ್ತಿರುವುದನ್ನು ಚಿತ್ರಿಸಲಾಗಿದೆ. "ನನ್ನ 'ಬರ್ರೋ' ಕಥೆಯ ಅತ್ಯಂತ ಅತ್ಯಂತ ಸುಂದರವಾದ ಅಂಶವೆಂದರೆ ಅದರ ಪ್ರಶಾಂತತೆ". ಕಾಫ್ಕಾ ಮದುವೆಯಿಂದ ಪಲಾಯನ ಮಾಡುತ್ತಿರುವುದನ್ನೂ, ಬೃಹತ್ ನಗರಗಳ ಜನಜಂಗುಳಿ ಯಿಂದ ಹಿಂದೆ ಸರಿಯುತ್ತಿರುವುದನ್ನೂ ನಾವು ಕಾಣಬಹುದು. ಎಪ್ಪತ್ತು ಪುಟಗಳ ವರೆಗೂ ಕಥೆ ಸಾಗಿದ ಮೇಲೆ ಗಕ್ಕನೆ ನಿಂತುಬಿಡುತ್ತದೆ. ಯಾವುದೋ ಬೇರೊಂದು ಲೋಕದ ದೈತ್ಯಾಕಾರದ ಪ್ರಾಣಿಯೊಂದು ಸುರಂಗದ ಮೇಲೆ ಧಾವಿಸಿ ಬಂದು ಸಾವಿನ ಇನ್ನೊಂದೇ ಚಮತ್ಕಾರಿಕ ರೀತಿಯನ್ನು ನಿರೂಪಿಸಿಬಿಟ್ಟಿತೋ ಎಂಬಂತೆ. "ತಂದೆಗೆ ನನ್ನ ಪತ್ರ" (Letter to my Father) ದಲ್ಲಿ ಕಾಫ್ಕಾ, ತನ್ನ ತಂದೆಯು ತನ್ನನ್ನು ಒಂದು "ಕ್ರಿಮಿ" ಎಂದು ಕರೆಯುತ್ತಿದ್ದನೆಂಬುದಾಗಿ ದಾಖಲಿಸುತ್ತಾನೆ. ತನ್ನ ದಿನಚರಿ ಯಲ್ಲಿ—"ಒಂದು ಕ್ರಿಮಿಗಿಂತ ಯಾವುದೇ ರೀತಿಯಲ್ಲಿ ಬೇರೆಯಲ್ಲವಂತೆ ನಾನು ತೆವಳ ಬಲ್ಲೆ ಅಷ್ಟೆ" ಎಂದು ಹಾಗೂ ತನ್ನದೊಂದು "ನಾಯಿಯ ಜೀವನ" ಎಂದು ದೂರಿ ಕೊಂಡಿದ್ದಾನೆ. 'ನಾಯಿಯ ಹುಡುಕಾಟಗಳು' ಕೃತಿಯಲ್ಲಿ (Investigations of a dog) ತನ್ನನ್ನೇ ಒಂದು ನಾಯಿಯ ರೂಪದಲ್ಲಿ ಕಲ್ಪಿಸಿಕೊಳ್ಳಲು ಯತ್ನಿಸಿದ್ದಾನೆ. ಅದೂ ಅಷ್ಟೇನೂ ಸಮಂಜಸವಾಗಿಲ್ಲ.

'ರೂಪಾಂತರ'ದಲ್ಲಿ (The Metamorphosis) ತಾನೇ ಒಂದು ಹುಳುವಾಗಿ ರೂಪಾಂತರಗೊಂಡಿರುವಂತೆ ಅತ್ಯಂತ ಶ್ರಮಸಾಧ್ಯವಾದ ತಾದ್ರೂಪ್ಯ ಚಿತ್ರಣವನ್ನು ನೀಡಿದ್ದಾನೆ. ಆದರೆ ಆ ಹುಳುವಿಗೆ ಮನುಷ್ಯರಂತೆ ಅರಿವು ಮತ್ತು ಸಂವೇದನೆಗಳಿದ್ದುವು. ಈ ಹುಳುವಿಗೆ ಅವನು ಕೊಟ್ಟ ಹೆಸರು 'ಅನ್‌ಗೆಜ್ಯೆಫರ್' ಎಂದು. ಜರ್ಮನ್ ಭಾಷೆ ಯಲ್ಲಿ ಇದರ ಅರ್ಥ "ಗಟ್ಟಿಯಾದ ಬೆನ್ನುಳ್ಳ, ಅನೇಕ ಸಣ್ಣ ಸಣ್ಣ ಕಾಲುಗಳುಳ್ಳ ಅತ್ಯಂತ ದೈತ್ಯಾಕಾರದ ಹುಳು—" ಎಂದು. ಹುಳು ಎಂಬ ಪದವೇ ಅವನ ನೆನಪನ್ನು ಪೂರ್ತಿಸುಟ್ಟು ಬೂದಿ ಮಾಡಿದ್ದಿರಬೇಕೆಂಬುದು ಸ್ಪಷ್ಟವೇ ಇದೆ. ಕುಟುಂಬದವರು ನಡೆಸುತ್ತಿದ್ದ ವ್ಯಾಪಾರದ ವಹಿವಾಟನ್ನು ನಡೆಸಿಕೊಂಡು ಹೋಗಲು ನಿರಾಕರಿಸಿದ ತನ್ನನ್ನು ತಂದೆ ತಿರಸ್ಕರಿಸಿದ್ದು ಸ್ವಲ್ಪಮಟ್ಟಿಗೆ ನ್ಯಾಯವೆಂದೇ ಕಂಡಿರಬೇಕು. ತನ್ನ ಈಗಿನ ವಿಕೃತ ಸ್ಥಿತಿಯಲ್ಲಿ ತಾನು ಕುಟುಂಬಕ್ಕೆ ಯಾವುದೇ ರೀತಿಯಲ್ಲಿ ಬೆಂಬಲವಾಗಿ ನಿಲ್ಲಲು ಸಾಧ್ಯವಾಗದ್ದಕ್ಕೆ ಹಾಗೂ ತನ್ನ ತಂದೆ ಕೆಲಸದಿಂದ ವಿಶ್ರಾಂತಿ ಪಡೆಯಲು ಸಹಾಯಕನಾಗದ್ದಕ್ಕೆ ತುಂಬ ವಿಷಾದಿಸುತ್ತಾನೆ. ಆದರೆ ಅವರ ಅಪ್ಪನ ಬೈಗುಳಾ

ದರೋ ತೀರಾ ಕರ್ಣ ಕಠೋರವಾಗಿದ್ದವು. ಅವನ ಬಂಡೆಯಂತಹ ಬೆನ್ನನ್ನು ಭೇದಿಸಿದ್ದೇ ಕ್ಷಿಪಣಿಗಳಂತಹ ಆ ಬೈಗಳು. ತನ್ನ ತಂಗಿಯ ಕರುಣೆ ಮತ್ತು ಕೋಮಲ ಭಾವನೆಗಳು ಒಮ್ಮೆಗೇ ಧಿಕ್ಕಾರ ಮತ್ತು ತಿರಸ್ಕಾರಗಳಾಗಿ ತಿರೋಹಿತಗೊಂಡಿರುವುದನ್ನು ಅವನು ಸಹಿಸಲಾರ. ಆ ಹುಳು ಸತ್ತಾಗ, ಸಾವಿನ ನೆಮ್ಮದಿ ಮತ್ತು ಸಮಾಧಾನದ ಅಗತ್ಯವಿರುವುದು ಗ್ರೆಗರ್ ಮತ್ತು ಕಾಫ್ಕಾರಿಗೆ. ಬರವಣಿಗೆಯಲ್ಲಿ ತಲ್ಲೀನನಾಗಿದ್ದಾಗ, ಲೇಖಕ ಕೆಲವೊಮ್ಮೆ ಬಿಡುಗಡೆಯ ಪರಮಾನಂದವನ್ನು ಅನುಭವಿಸಿದನೆಂದು ಹೇಳುತ್ತಾರೆ. ಹಾಗಾದರೆ ತನ್ನನ್ನು ಕಾಡುವ ಭೂತವನ್ನು ಬರಹದ ಮೂಲಕ ಹೊರಹಾಕಿದ ಅನುಭವವೋ, ಅಥವಾ ಕುಟುಂಬದವರನ್ನು ಕುರಿತಾದ ಪ್ರತೀಕಾರ ರೂಪದ ದೋಷಾರೋಪದ ಭಾವವೋ ಅಥವಾ ಶಾಶ್ವತ ಕಲೆಯ ಸಿದ್ಧಿಯನ್ನು ಪಡೆದೆನೆಂಬ ಪ್ರಜ್ಞೆಯಿಂದ ಉಂಟಾದ ಸಂತೋಷವೊ ?

'ಪೀನಲ್ ಕಾಲೊನಿ' (Penal Colony) ಯಲ್ಲೂ ಶಿಕ್ಷೆಯನ್ನು ಕುರಿತಾದ ಸೂಕ್ಷ್ಮವೇದಿ ಪರಿಭಾವನೆ ಮುಂದುವರಿದಿದೆ. ಆರೋಪಿ ಅಧಿಕಾರಶಾಹಿಯ ವಿಲಂಬ ನೀತಿಯ ಭಯಂಕರ ಚಕ್ರವ್ಯೂಹದಲ್ಲಿ ಸಿಕ್ಕಿಕೊಳ್ಳುತ್ತಾನೆ. ದೈವೀನ್ಯಾಯ ಮತ್ತು ನೀತಿಯ ಮಹತ್ವಗಳಿಗೆ ಎಡೆಯಿರದ ಜಗತ್ತು ಅದು. ಆರೋಪಿಗೆ ಅವನ ಅಪರಾಧ ಏನೆಂಬುದನ್ನು ತಿಳಿಸಲಾಗುವುದಿಲ್ಲ. ತನ್ನ ಅಪರಾಧದ ಗುರುತ್ವ ಅವನ ಅರಿವಿಗೆ ಬರುವುದು ಅವನಿಗೆ ನೀಡಲಾದ ಶಿಕ್ಷೆಯ ಪ್ರಮಾಣದ ಮೇಲಿನಿಂದ. ಇಲ್ಲಿ ಕಾಫ್ಕಾ ತನಗೇ ಅರಿವಿಲ್ಲದಂತೆ, ನಾಜಿಗಳ ಯಾತನಾಶಿಬಿರದ ಚಿತ್ರವನ್ನು ಕ್ರಾಂತದರ್ಶಿಯಂತೆ ಮುಂಗಾಣಿಸಿದ್ದಾನೆ. ಅಂಥದೇ ಒಂದು ಯಾತನಾಶಿಬಿರದಲ್ಲಿ ಅವನ ಮೂವರು ಸೋದರಿಯರು ಮೃತಿ ಹೊಂದಬೇಕಾಯಿತು.

ಅಪರಾಧದ ಸ್ವರೂಪಕ್ಕೆ ಸಂಬಂಧಿಸಿದಂತೆ ಇದೇ ರೀತಿಯ ಅಸ್ಪಷ್ಟತೆ, ಇದೇ ತೆರನ ಅನಿಶ್ಚಿತ ಅಪರಾಧೀ ಪ್ರಜ್ಞೆ 'The Trial' ಕಾದಂಬರಿಯನ್ನು ಸುತ್ತುವರಿದಿವೆ. ತನ್ನ ಈ ಮಹತ್ ಕೃತಿಯನ್ನು ಬರೆಯಲು ಆರಂಭಿಸಿದ ವರ್ಷ (1914) ತನ್ನ ದಿನಚರಿಯಲ್ಲಿ ಹೀಗೆಂದು ಬರೆದ—"ನಾನು ಎಲ್ಲ ಕಡೆಯಿಂದಲೂ ದಿಗ್ಬಂಧನಕ್ಕೆ ಒಳಗಾಗುತ್ತಿರುವೆನೆಂಬುದರಲ್ಲಿ ಯಾವ ಅನುಮಾನವೂ ಇಲ್ಲ." ಕ್ರಿಶ್ಚಿಯನ್ ಸಮುದಾಯದ ಮಧ್ಯೆ ಯಹೂದಿಯೊಬ್ಬ ಅನುಭವಿಸಬಹುದಾದ ವಿವಿಕ್ತತೆಯನ್ನು ಅನುಭವಿಸಿದ. ಸಮಾಜ ಒಟ್ಟಾರೆಯಾಗಿ ತನ್ನೆಲ್ಲ ಸಿದ್ಧಾಂತಗಳು, ವಿಧಿನಿಷೇಧಗಳು, ಪೂರ್ವಗ್ರಹಗಳು, ನೀತಿ ನಿಯಮಗಳು ಇವುಗಳ ಮೂಲಕವೇ ಅವನನ್ನು ಅಳೆದು ನೋಡಿತು. ಜನಸಮುದಾಯ ತನಗೇನೂ ಸಂಬಂಧವೇ ಇಲ್ಲದ ನಿರ್ದಯಿ ಶತ್ರುವಿನಂತೆ ಅವನನ್ನು ತುಳಿಯಿತು. ಹೀಗಾಗಿ ಅವನ ಪಾಲಿಗೆ ನರಕವೆಂದರೆ—ಸಾರ್ತ್ರೆಯ ಮಾತುಗಳಲ್ಲಿ 'ಇತರೆ ಮನುಷ್ಯರೇ' ಎಂಬಂತಾಯಿತು. 1914ರಲ್ಲಿ ಯುರೋಪಿನ ಆಗಿನ ಕೋಲಾಹಲಗಳಾದ, ಅಧಿಕಾರಿಗಳ ಕ್ರೌರ್ಯ, ಕುರುಡು ವಿಧೇಯತೆ, ಭ್ರಷ್ಟ ಪತ್ರಿಕೋದ್ಯಮ, ಮತ್ತು ಎಲ್ಲವನ್ನೂ ಆವರಿಸಿದ ಆಗಿನ ಸನಿಹದ ಮೊದಲನೇ

ಮಹಾಯುದ್ಧ–ಇವೆಲ್ಲವುಗಳಿಂದ ವಿಮುಖನಾಗಿ ತನ್ನಲ್ಲಿಯೇ ಮುದುಡಿಕೊಂಡ. 'ದಿ ಟ್ರಯಲ್'ನಲ್ಲಿ ಜೋಸೆಫ್. ಕೆ ಎಂಬ ಬ್ಯಾಂಕ್‌ನ ಪ್ರಮುಖ ಅಧಿಕಾರಿಯೊಬ್ಬನಿಗೆ ನಗರದ ಕೊಳಚೆ ಪ್ರದೇಶದ ಬಡಜನರು ನಡೆಸುತ್ತಿದ್ದ ನ್ಯಾಯಾಲಯದ ಮುಂದೆ ಹಾಜರಾಗಬೇಕೆಂದು ಹೇಳಲಾಗುತ್ತದೆ. ಇಲ್ಲಿ ಅವನೊಂದು ವ್ಯಕ್ತಿಯ ಸಂಕೇತ. ಆ ವ್ಯಕ್ತಿ ತವಕಿಯೂ, ತಿರುಗು ಜೀವಿಯೂ ಆದವನು. ಅವನು ಮಾಡಿದ ಇಲ್ಲವೆ ಮಾಡಿದ್ದಾನೆಂದು ಊಹಿಸಲಾದ ಅಪರಾಧಗಳ ಬಗ್ಗೆ ತೀರ್ಪಿನ ಕತ್ತಿಹಿಡಿದ ಶಕ್ತಿಯೊಂದಿದೆ. ಇವನು ಆ ಶಕ್ತಿಯ ಬಲಿಪಶು. ಆ ಶಕ್ತಿಯಾದರೋ ಅಗ್ರಾಹ್ಯವೂ, ಮನವೊಲಿಸಲಾಗದಂಥದೂ ಆಗಿದೆ. ತನ್ನ ರಹಸ್ಯ ಲೈಂಗಿಕ ಕ್ರಿಯೆಗಳ ಬಗ್ಗೆ, ತನ್ನ ತಂದೆ ತಾಯಿಗಳನ್ನು ನಿರಾಶೆಗೊಳಿಸಿದ ಬಗ್ಗೆ, ಮೊದಲು ನಿಶ್ಚಿತಾರ್ಥ ಎಂದು ಹೇಳಿ ಬಿಟ್ಟು, ಅನಂತರ ಅವುಗಳನ್ನು ರದ್ದುಗೊಳಿಸುವುದರ ಮೂಲಕ ತನ್ನ ಪ್ರೇಮಿನಿಯರನ್ನು ಅನಿಶ್ಚಯತೆಯ ವೇದನೆಗೆ ಗುರಿಮಾಡಿದ್ದಕ್ಕೆ, ಜೀವನದ ಸಮಸ್ಯೆ ಮತ್ತು ಹೊಣೆಗಾರಿಕೆಗಳಿಂದ ಪಲಾಯನಮಾಡಿ ವಿವಿಕ್ತವಾಗಿರಬೇಕೆಂದು ಬಯಸಿದ್ದಕ್ಕೆ ಸ್ವತಃ ಕಾಫ್ಕಾನಿಗೆ ತಾನೊಬ್ಬ ತಪ್ಪಿತಸ್ಥನೆಂಬ ಭಾವನೆ ಬಂದುಬಿಟ್ಟಿತ್ತು. ತನ್ನ "ತಂದೆಗೆ ನನ್ನ ಪತ್ರ" (Letter to my father) ದಲ್ಲಿ ('ದಿ ಟ್ರಯಲ್' ಕಾದಂಬರಿ ಬರೆಯಲು ಪ್ರಾರಂಭಿಸಿದ ತರುಣದಲ್ಲೇ 1916ರಲ್ಲಿ ರಚಿತವಾದದ್ದು) ಅವನು ಹೇಳಿದ—"ನನ್ನೆಲ್ಲ ಬರವಣಿಗೆಗಳು ನಿಮ್ಮನ್ನು ಕುರಿತೇ ಇದ್ದುವು. ಅವುಗಳಲ್ಲಿ ನಿಮ್ಮ ಮುಖಕ್ಕೇ ನೇರವಾಗಿ ಹೇಳಲಾಗದ ನನ್ನೆಲ್ಲ ಅಳಲುಗಳನ್ನು ತೋಡಿಕೊಂಡು ಬಿಟ್ಟಿದ್ದೇನೆ." ಯಾವ ರೀತಿಯಿಂದ ನೋಡಿದರೂ ಈ ಕೃತಿ ಕಾಫ್ಕಾನ ಕೃತಿಗಳಲ್ಲೆಲ್ಲಾ ಅತ್ಯಂತ ಶಕ್ತಿಯುತವಾದದ್ದು. ಆಂದ್ರೆಜೀಡ್ ಹೇಳುವಂತೆ—"ಈ ಕೃತಿ ಅಭಿವ್ಯಕ್ತಿಸುವ ವೇದನೆ ಕೆಲವೊಮ್ಮೆ ಸಹಿಸಲಸಾಧ್ಯವಾದ್ದು. ಕಾರಣ 'ಅಯ್ಯೋ! ಹಾಗೆ ಬೇಟೆಗೆ ಗುರಿಯಾದ ಪ್ರಾಣಿ ನಾನೆ?' ಎಂಬ ಮಾತನ್ನು ಯಾರು ತಾನೆ ಮತ್ತೆ ಮತ್ತೆ ಮನಸ್ಸಿನಲ್ಲಿ ಹೇಳಿಕೊಳ್ಳದಿರಲು ಸಾಧ್ಯ? ಅರಿವಿದ್ದೂ ಮಾಡಿದ ಅಪರಾಧವಾದರೂ ಅದೇನೆಂದು ಹೇಳಿಕೊಳ್ಳಲಾಗದ್ದರ ಬಗೆಗಿನ ಚಿಂತಾಕುಲತೆಯೇ, ಕಾಫ್ಕಾ ತಮ್ಮವನೆಂದು ಅಸ್ತಿತ್ವವಾದಿಗಳು ಹೇಳಿಕೊಳ್ಳಲು ಕಾರಣವಾಯಿತು.

'ದುರ್ಗ' (Castle) ಎಂದು ಹೆಸರು ಪಡೆದ ಕಾಫ್ಕಾನ ಕೊನೆಯ ಕಾಲ್ಪನಿಕ ಕೃತಿಯಾದರೂ ಏನು? ಜಮೀನುದಾರನ ಜಮೀನನ್ನು 'ಸರ್ವೆ' ಮಾಡಲು ಬಂದ ವ್ಯಕ್ತಿಯಾದರು ಯಾರು? 'ಟ್ರಯಲ್' ಕಾದಂಬರಿಯಲ್ಲಿ ಬರುವ ಜೋಸೆಫ್. ಕೆ. ಇಲ್ಲಿ ಕೇವಲ 'ಕೆ' ಆಗಿದ್ದಾನೆ. ಇಲ್ಲಿ ಬರುವ 'ಕೆ.' ಅನ್ನುವ ಆದ್ಯಕ್ಷರ ಲೇಖಕ ಸ್ವತಃ ತನ್ನನ್ನು ಹಾಗೂ ಒಟ್ಟಾರೆಯಾಗಿ ಮನುಷ್ಯನನ್ನು ಸೂಚಿಸಲು ಇಟ್ಟುಕೊಂಡಿದ್ದಿರಬೇಕು ಎಂಬುದನ್ನು ಧ್ವನಿಸುತ್ತದೆ. ಮ್ಯಾಕ್ಸ್ ಬ್ರಾಡ್ ಪ್ರಕಾರ, ಕಾದಂಬರಿ ಬರೆಯಲು ಪ್ರಾರಂಭಿಸಿದಾಗ, ಮೊದಲಿಗೆ ಉತ್ತಮ ಪುರುಷದಲ್ಲಿದ್ದದ್ದು ಅನಂತರ

ಕಾಫ್ಕಾ 'ನಾನು' ಎಂದಿದ್ದ ಕಡೆ 'ಕೆ' ಎಂದು ಬದಲಾಯಿಸಿದ. 'ಕೆ'ನ ಸಹಾಯಕರೊಬ್ಬರು 'ಕೆ'ಗೆ ಹೇಳುತ್ತಾರೆ—"ನಿನಗೆ ಹಾಸ್ಯಪ್ರಜ್ಞೆ ಇಲ್ಲ." ಇದು ಕಾಫ್ಕಾನ ಮಟ್ಟಿಗೂ ನಿಜವೆನ್ನಿಸುತ್ತದೆ. ಅವನ ಹಾಸ್ಯ: ಜೀವನದ ಅಸಾಂಗತ್ಯಗಳನ್ನು ಕುರಿತಾದ ಸಹಾನುಭೂತಿಪೂರ್ಣ ವಿನೋದವಾಗಿರುವುದಕ್ಕಿಂತ ಹೆಚ್ಚಾಗಿ ಜೀವನದ ಅಸಂಗತಗಳ ಕಟುವ್ಯಂಗ್ಯ ಚಿತ್ರಣವೇ ಆಗಿದೆ.

ಕೆ. ಜಮೀನಿನ ಸರ್ವೇ ನಡೆಸಬೇಕಾಗಿದೆ. ಇದು ಸತ್ಯಶೋಧನೆಯ ಸಂಕೇತವೆ? ಹಳ್ಳಿಯವರು ಅವನನ್ನು ಒಪ್ಪಿಕೊಳ್ಳಲು ನಿರಾಕರಿಸುತ್ತಾರೆ. ಇದನ್ನು ಬರೆಯುವಾಗ ಕಾಫ್ಕಾ "ಎಲ್ಲರಿಂದಲೂ ತಿರಸ್ಕರಿಸಲ್ಪಟ್ಟ, ಕಡೆಗಣಿಸಲ್ಪಟ್ಟ ದುಃಖದುಮ್ಮಾನಗಳಿಗೆ ಚಿರಪರಿಚಿತನಾದ ಯಹೂದಿಯನ್ನು ಮನಸ್ಸಿನಲ್ಲಿಟ್ಟುಕೊಂಡಿದ್ದನೆ? ಅಥವಾ ಸತ್ಯಶೋಧಕನನ್ನು ಜನ ಯಾವಾಗಲೂ ಶಂಕೆಯಿಂದ ಕಾಣುತ್ತಾರೆಂದು ಅರ್ಥವೆ? ದುರ್ಗದ ಆಡಳಿತವನ್ನು ನೋಡಿಕೊಳ್ಳುವವರು ಗುಪ್ತ ಅಧಿಕಾರಿಗಳು. ಅದಕ್ಕೆ ತನ್ನದೇ ಆದ ಔಪಚಾರಿಕ ನಿಬಂಧನೆಗಳಿವೆ. ಇದು ಆಗ ತಾನೆ ಕೊನೆಗೊಂಡ ಆಸ್ಟ್ರಿಯಾದ ಊಳಿಗಮಾನ್ಯ ಪ್ರಭುತ್ವದ ನೆನಪೆ? ಅಥವಾ ದುರ್ಗ, ಬಹುಕಾಲದಿಂದ ಬಯಸಿದ, ಆದರೆ ಬಹುಕಾಲದಿಂದ ನಿರಾಕರಿಸಲ್ಪಟ್ಟ ಹಿಂದಿನ ತಲೆಮಾರಿನ ಮತ್ತು ಸಾಮಾಜಿಕ ಸಮ್ಮತಿಯ ಸಂಕೇತವೆ? ಇಲ್ಲಿ ಬರುವ ಜಮೀನುದಾರ, ನಮ್ಮ ಕೈಗೆ ಸಿಕ್ಕದೆ ಜಾರಿಕೊಳ್ಳುತ್ತಿರುವ ದೇವರ ಸಂಕೇತವೆ? ಆ ಜಮೀನುದಾರನ ಅಧಿಕಾರಿಗಳಾದರೋ ನ್ಯಾಯ, ನೀತಿ, ಧರ್ಮ, ಕರುಣೆ, ಪ್ರೇಮ, ಘನತೆಗಳಾವುವೂ ಲವಲೇಶವೂ ಇಲ್ಲದ ಆಕ್ರಮಣಕಾರಿ ನೀಚರು. ಅವರ ಪ್ರಭು, ದೇವನೇ ಆಗಿದ್ದರೆ, ಅವನೊಬ್ಬ ನ್ಯಾಯನೀತಿಗಳಿಲ್ಲದ ದೇವ ಹಾಗೂ ಅವನೊಂದು ಜಡ ವಿಶ್ವನಿಗೂಢತೆಯ ಪ್ರತಿಮೂರ್ತಿ. ಈ ದುರ್ಗಮವಾದ ದುರ್ಗವನ್ನು ಚಿತ್ರಿಸುವಲ್ಲಿ ಕಾಫ್ಕಾನ ಮನಸ್ಸಿನಲ್ಲಿ, ತನ್ನ ಪಾಲಿಗೆ ಕೊನೆಗೂ ಗಗನಕುಸುಮಗಳಾಗಿಯೇ ಉಳಿದ—ತಂದೆ ತಾಯಿಗಳ ವಾತ್ಸಲ್ಯ, ಸುಖೀದಾಂಪತ್ಯ, ಯಹೂದಿ ಮತ್ತು ಕ್ರಿಶ್ಚಿಯನ್ನರ ಸರ್ವಸಮಾನತೆ, ತತ್ತ್ವಜ್ಞಾನ ಮತ್ತು ದೈವವಾದಗಳ ಕಗ್ಗಂಟುಗಳಿಗೆ ಅಂತಿಮ ಪರಿಹಾರ–ಈ ವಿಚಾರಗಳೇ ಇದ್ದುವೆ? ಅವನು ಏಕಾಂತದಲ್ಲಿದ್ದಾಗ: ಈಗಾಗಲೇ ದೈವವಾದಿಗಳು ದಿವ್ಯಪ್ರಮಾಣಪೂರ್ವಕವಾಗಿ ಇದಮಿತ್ಥಂ ಎಂದು ತೀರ್ಮಾನಿಸಿಬಿಟ್ಟಿದ್ದ ಪ್ರಶ್ನೆಗಳ ವಿಷಯದಲ್ಲಿ ಹೆಚ್ಚು ಕಡಿಮೆ ಹುಚ್ಚನೇ ಆಗಿಬಿಡುತ್ತಿದ್ದ. ಅವನ ಪಾಲಿಗೆ ಧರ್ಮ ಎಂದೋ ಇಲ್ಲವಾಗಿತ್ತು. ಈಗಂತೂ ದೇವರಿಲ್ಲದ ಈ ಜಗತ್ತು ಅಸ್ವೈಚಾರಿಕತೆ ಮತ್ತು ಅಸಂಗತಗಳ ಕಲಸುಮೇಲೋಗರವಾಗಿ ಅವನಿಗೆ ತೋರುತ್ತಿತ್ತು. ಈ ಘಟ್ಟದಲ್ಲಿ ಕಾಫ್ಕಾನ ಮನಸ್ಥಿತಿಯೂ ಅಸ್ತಿತ್ವವಾದಿಗಳ ಮನಸ್ಥಿತಿಯೇ ಆಗಿತ್ತು. ಅಸ್ತಿತ್ವವಾದಿಗಳಂತೆ ಅವನೂ ಆಧ್ಯಾತ್ಮಿಕನೆಲೆಯಿಲ್ಲದ, ಅಭದ್ರಸ್ಥಿತಿಯ, ಆತಂಕದ ಮಾತ್ತು

ಅಪರಾಧೀ ಭಾವನೆಯನ್ನು ಅನುಭವಿಸಿದ. ಜಗತ್ತಿನಲ್ಲಿ ಇಷ್ಟೆಲ್ಲ ಅನ್ಯಾಯಗಳು ಮತ್ತು ಕ್ರೌರ್ಯವಾದರೂ ಏಕಿರಬೇಕು? ಹಾಗೂ ಜಗತ್ತಿನ ಇತಿಹಾಸವಲ್ಲಿಯೇ ಅವು ಕಂಡಹಾಗೆಯೇ ಎಂದೂ ಏಕೆ ಕಡಮೆಯಾಗುವದ್ದೇ ಇಲ್ಲ?

ಅವನು ದೈವ ವಾದದ ವಿಷಯಕ್ಕಾಗಲಿ, ಚರಿತ್ರೆಯ ವಿಷಯಕ್ಕಾಗಲಿ ಸಂದೇಹ ವಾದಿಯಾಗಿದ್ದ. ಪ್ರಗತಿಯನ್ನು ಅನುಮಾನದಿಂದ ನೋಡುತ್ತಿದ್ದ. ರೈತರು ಮತ್ತು ಕಾರ್ಮಿಕರ ಸಂಕಷ್ಟಗಳ ಬಗ್ಗೆ ಅವನಿಗೆ ತುಂಬ ಕರುಣೆ ಇತ್ತು. ಆದರೆ ಅವರ ಸಮಸ್ಯೆಗಳನ್ನು ರಾಜಕೀಯ ಕ್ರಾಂತಿಯಿಂದಾಗಲಿ, ಸುಧಾರಣೆಯಿಂದಾಗಲಿ ಬಗೆಹರಿಸ ಬಹುದೆಂಬುದರಲ್ಲಿ ಎಳ್ಳಷ್ಟೂ ನಂಬಿಕೆ ಇರಲಿಲ್ಲ. ಜನೌಕ್ ಒಮ್ಮೆ ಕೇಳಿದ—"ರಷ್ಯಾದ ಮಹಾಕ್ರಾಂತಿ ಎಲ್ಲೆಡೆಗೆ ವಿಸ್ತಾರವಾಗಿ ಹಬ್ಬಬೇಕೆಂಬುದರಲ್ಲಿ ನಿನಗೆ ವಿಶ್ವಾಸವಿಲ್ಲವೆ?" ಎಂದು. ಅದಕ್ಕೆ ಕಾಫ್ಕಾನ ಉತ್ತರ—"ಪ್ರವಾಹದ ನೀರು ವಿಸ್ತಾರಕ್ಕೆ ಹರಡಿದಷ್ಟೂ ತನ್ನ ಆಳವನ್ನು ನೀಗಿಕೊಂಡು ರಾಡಿಯಾಗುತ್ತಾ ಹೋಗುತ್ತದೆ. ಕ್ರಾಂತಿ ಆವಿಯಾಗಿ ಹೋಗುತ್ತದೆ. ತನ್ನ ಹಿಂದೆ ಹೊಸ ಅಧಿಕಾರಶಾಹಿಯ ಕೆಸರು ಮಣ್ಣನ್ನು ಬಿಟ್ಟು ಹೋಗುತ್ತದೆ. ಸಂಕಷ್ಟಕ್ಕೆ ಗುರಿಯಾದ ಜನತೆಯನ್ನು ಬಂಧಿಸಿರುವ ಸರಪಳಿ ಕೆಂಪು ಪಟ್ಟಿಯಿಂದಾಗಿದೆ." ಕೆಲವೊಮ್ಮೆ ಅವನು, ಮನುಷ್ಯ ಸ್ವಭಾವತಃ ದುಷ್ಟ ಎಂದು ಭಾವಿಸುತ್ತಿದ್ದ. ಮನುಷ್ಯನ ಪಾಪವೆಲ್ಲವೂ ವಿಧಿಲಿಖಿತವೆಂಬಂತೆ ಘೋಷಿಸುತ್ತಾನೆ:

"ನಿನ್ನನ್ನು ನೀನೇ ಅರಿಯಲು ಯತ್ನಿಸಿದಾಗ....ನಿನ್ನ ಬಗ್ಗೆಯೇ ನಿನಗೆ ತೀರ ಹೇಯವೆನಿಸುತ್ತದೆ. ನೀನೊಂದು ಕೇವಲ ಶೋಚನೀಯ ನೋಗಲಾಡಿಗಳ ಕಂತೆ ಎನಿಸುತ್ತದೆ....ಈ ಕೋಣೆಯಾದರೂ ತಂತಾನೇ ಇರುತ್ತದೆ. ನೀನು ಈ ಜಗತ್ತಿಗೆ ಬಂದದ್ದಾದರೂ ಈ ಕೋಣೆಯನ್ನು ಹೊತ್ತುಕೊಂಡೇ ಎಂದು ಗೊತ್ತಾಗುತ್ತದೆ ಮತ್ತು ಈ ಜಗತ್ತಿನಿಂದ ಯಾರ ಗಮನಕ್ಕೂ ಬಾರದೆ ಹೊರಟುಹೋಗುತ್ತೀಯೆ....ಅಥವಾ ಆ ಕೋಣೆಯ ದೆಸೆಯಿಂದಾಗಿ ತೀರಾ ಪರಿಚಿತನೆಂಬಂತೆ ಹೊರಟುಹೋಗುತ್ತೀಯೆ. ಈ ಕೋಣೆ ಅತ್ಯಂತ ಆಳದ ಆಳದಲ್ಲಿ ಸೇರಿಕೊಂಡಿದೆ ಎಂಬುದು ಅರಿವಾಗುತ್ತದೆ."

1915ರಲ್ಲಿ ಅವನ ಡೈರಿಯ ಪುಟಗಳಲ್ಲಿ ದೇವರನ್ನು ಕುರಿತು ಈ ಪ್ರಾರ್ಥನೆ ಇದೆ. ಈ ಪ್ರಾರ್ಥನೆಯಲ್ಲಿ ಅವನ ವಿಶ್ವಾಸಹೀನತೆ ಮತ್ತು ಭಗ್ನಹೃದಯದ ದೈನ್ಯತೆ ಗಳು ಪ್ರಕಟನಿಗೊಡುತ್ತಿರುವುದನ್ನು ಕಾಣಬಹುದು.

"ನನ್ನ ಮೇಲೆ ಕರುಣೆ ಇಡು. ನನ್ನ ಕಣಕಣವೂ ಅಪರಾಧಿ. ನನ್ನ ಕೊಡುಗೆ ಗಳಾದರೂ ತೀರಾ ಚಿರಸ್ಮರಣೀಯವಾದವೇನಲ್ಲ. ನನಗೂ ಕೆಲಮಟ್ಟಿನ ಪ್ರತಿಭೆ ಇತ್ತು. ಅದನ್ನು ಅಪವ್ಯಯ ಮಾಡಿಬಿಟ್ಟಿದ್ದೇನೆ....ಈಗ ನಾನು ಸಾವಿಗೆ ಸಮೀಪ ವಾಗುತ್ತಿದ್ದೇನೆ....ಈಗ ನನ್ನನ್ನು ಶಿಕ್ಷಿಸಿದ್ದೇ ಆದರೆ, ಸಾವಿನ ಶಿಕ್ಷೆ ನೀಡಿದಂತಾಗುತ್ತದೆ.

ಮಾತ್ರವಲ್ಲ; ಸಾಯುವವರೆಗೂ ಒಡ್ಡಾಡುವಂತೆ ಶಿಕ್ಷಿಸಿದಂತಾಗುತ್ತದೆ. ರಾತ್ರಿಯವೇಳೆ ನನಗೆ ನೆಮ್ಮದಿಯೊಂದೇ ಇರಲಿ."

## 4. ಅಂತ್ಯ

ಅನೇಕ ವೇಳೆ ಅವನು ಸಾವಿನ ಬಗ್ಗೆ ಆಲೋಚಿಸಿದ್ದುಂಟು. ಕೆಲವೊಮ್ಮೆ ಸಾವು ಬರಬೇಕೆಂದು ಆಶಿಸಿಯೂ ಇದ್ದ. "ಎಲ್ಲ ವಸ್ತುಗಳೂ ನಾಶವಾಗುತ್ತವೆ. ಆದರೆ ನನ್ನನ್ನು ಬಂಧಿಸಿರುವ ಸೆರೆಮನೆಯ ಈ ಹಾಳು ಬಿಳಿಗೋಡೆ ಮಾತ್ರ ಹಾಗೆಯೇ ಇರುತ್ತದೆ. ನಾನು ಆತ್ಮಹತ್ಯೆ ಮಾಡಿಕೊಂಡರೂ ನನ್ನನ್ನು ಅಪೇಕ್ಷಿಸುವವರು ಯಾರೂ ಇಲ್ಲ." 1916ರಲ್ಲಿ ಮೊದಲ ಬಾರಿಗೆ ರಕ್ತ ಕಾರಿಕೊಂಡಾಗ ತಾನಿನ್ನು ಬದುಕಿರುವುದು ಕೆಲವೇ ವರ್ಷ ಎಂದುಕೊಂಡ. ತುಂಬ ತವಕದಿಂದಲೇ ಚಿಕಿತ್ಸೆಯನ್ನೇನೋ ಮಾಡಿಸಿಕೊಂಡ. ಆದರೆ ವಾಸಿಯಾಗುತ್ತದೆಂಬ ಯಾವ ಭರವಸೆಯೂ ಇರಲಿಲ್ಲ. "ಈ ಮುವ್ವತ್ತೆಂಟು ವರ್ಷಗಳಿಂದ ಹೊತ್ತುಕೊಂಡು ಬಂದ ಈ ರಾಕ್ಷಸ ಕಸ ನನ್ನ ಶ್ವಾಸಕೋಶಗಳಲ್ಲಿ ಕಟ್ಟಿಕೊಂಡು ಕೂತಿದೆ." 1921ಲ್ಲಿ ಸ್ಲೋಕಿಯಾದ ಒಂದು ಸ್ಯಾನಿಟೋರಿಯಮ್‌ಗೆ ಸೇರಿಕೊಂಡ. ಅಲ್ಲಿಂದ ಗುಣ ಹೊಂದಿ ಪ್ರಾಗ್‌ಗೆ ಹಿಂತಿರುಗಿದ. ಆದರೆ ಬಹುಬೇಗನೆ, ಕೆಮ್ಮಿದಾಗ ಮತ್ತೆ ರಕ್ತ ಬರಲು ಶುರುವಾಯಿತು. 1923ರ ಬೇಸಿಗೆಯಲ್ಲಿ ಅವನ ಸೋದರಿ ಅವನನ್ನು ವಿಶ್ರಾಂತಿಗಾಗಿ ಮ್ಯೂರಿಟ್ಸ್‌ಗೆ ಕರೆದೊಯ್ದಳು. ಇದು ಬರ್ಲಿನ್ ಯಹೂದಿಗಳಿಗೆ ಪ್ರಿಯವಾಗಿದ್ದ, ಬಾಲ್ಟಿಕ್ ಸಮುದ್ರ ತೀರದ ಒಂದು ತಂಗುದಾಣ. ಅಲ್ಲಿ ಇಪ್ಪತ್ತರ ಹರೆಯದ ಡೋರಾ ಡೈಮಂಟ್‌ಳನ್ನು ಪ್ರೀತಿಸಿದ. ಕಾಫ್ಕಾನಿಗೆ ಆಗ ನಲವತ್ತು ವರ್ಷ. ಅವಳೊಂದಿಗೆ ಬರ್ಲಿನ್‌ಗೂ ಹೋದ. ಆದರೆ ಹಣದುಬ್ಬರದ ಪೀಡೆಯಿಂದಾಗಿ ಅವನ ಸಂತೋಷ ಕೇವಲ ಅಲ್ಪಾವಧಿಯದಾಗಿತ್ತು. 1924ರಲ್ಲಿ ಕೆಮ್ಮು ತೀವ್ರವಾಯಿತು. ಬ್ರಾಡ್ ಬಂದು ಅವನನ್ನು ಪ್ರಾಗ್‌ಗೆ ಕರೆದೊಯ್ದ. ಅವನ ತಂದೆ ತಾಯಿಗಳು ಪ್ರೀತಿ, ಆಸ್ಥೆಗಳಿಂದ ಬರಮಾಡಿಕೊಂಡರು. ಅವನ ಸ್ಥಿತಿ ತೀರಾ ವಿಷಮಿಸಿದ್ದರಿಂದ ವಿಯನ್ನಾದಲ್ಲಿನ ಸ್ಯಾನಿಟೋರಿಯಮ್‌ಗೆ ಸೇರಿಸಲಾಯಿತು. ಅಲ್ಲಿಂದ ಕಿರ್ಲಿಂಗ್‌ನ ಇನ್ನೊಂದು ಸ್ಯಾನಿಟೋರಿಯಮ್‌ಗೆ ಬದಲಾಯಿಸಿದರು. ಅಲ್ಲಿ ಡೋರಾ ಡೈಮಂಟ್ ಕೊನೆಯವರೆಗೂ ಅವನೊಂದಿಗೆ ಉಳಿದಳು. 1924ರ ಜೂನ್ 3ರಂದು ಆತ ತೀರಿಹೋದ. ಪ್ರಾಗ್‌ನಲ್ಲಿ ಯಹೂದಿಗಳ ರುದ್ರಭೂಮಿಯಲ್ಲಿ ಸಮಾಧಿ ಮಾಡಲಾಯಿತು. ಉಳಿದವರೆಂದರೆ ಅವನ ತಂದೆ ತಾಯಿಗಳು. ಅವರ ನಿಧನಾನಂತರ ಅವನ ಪಕ್ಕದಲ್ಲೇ ಅವರನ್ನೂ ಸಮಾಧಿ ಮಾಡಲಾಯಿತು.

ಸಾಯುವ ಮುನ್ನ ತನ್ನೆಲ್ಲ ಉಳಿದ ಹಸ್ತಪ್ರತಿಗಳನ್ನು ನಾಶಮಾಡಿಬಿಡಬೇಕೆಂದು ಮ್ಯಾಕ್ಸ್‌ಬ್ರಾಡ್‌ನನ್ನು ಕೇಳಿಕೊಂಡಿದ್ದ. ಬ್ರಾಡ್ ಕೆಲಕಾಲ ಅವನ್ನು ಹಾಗೆಯೇ ತನ್ನ

ಬಳಿ ಇಟ್ಟುಕೊಂಡಿದ್ದ. ಅನಂತರ ಜಗತ್ತಿನ ಪಾಲಿಗೆ ಅವನ್ನು ಉಳಿಸಿಕೊಟ್ಟ. ಹಾಗೆ ಉಳಿಸಿಕೊಟ್ಟದ್ದು ನಮ್ಮ ಕಾಲದ ಅತ್ಯಂತ ಮಹತ್ವಪೂರ್ಣ ಸಾಹಿತ್ಯವಾಗಿ ಉಳಿದಿದೆ. ಆತ ಹೀಗೆ ಮಾಡಿದ್ದರಿಂದ 'ದಿ ಟ್ರಯಲ್' ಮತ್ತು 'ಕ್ಯಾಸಲ್' (Castle)ಗಳು ಉಳಿಯಲು ಸಾಧ್ಯವಾಯಿತು. ನಾಜಿಗಳು ಕಳಪೆ ಸಾಹಿತ್ಯವೆಂದು ಸುಟ್ಟ ಪುಸ್ತಕಗಳಲ್ಲಿ ಕಾಫ್ಕಾನ ಪುಸ್ತಕಗಳೂ ಸೇರಿದ್ದವು. ಆ ಕೃತಿಗಳು ಬರಲಿರುವ ಭಯಾನಕ ಯುಗವನ್ನೂ, ನಿರಂಕುಶಾಧಿಕಾರವನ್ನೂ ಆಶ್ಚರ್ಯಕರವೆಂಬಂಥ ದಿವ್ಯದೃಷ್ಟಿಯಿಂದ ಅತ್ಯಂತ ಶಕ್ತಿಯುತವಾಗಿ ಬಣ್ಣಿಸಿದ್ದವು.

# ಪ್ರಭವದಿಂದ ಪ್ರಸ್ಥಾನದವರೆಗೆ

ಮೂಲ (ತೆಲುಗು) : ಏಟ್ಕೂರಿ ಪ್ರಸಾದ್
ಅನು : ಗೋನವಾರ ಕಿಶನ್‌ರಾವ

[ಹೈದ್ರಾಬಾದ್‌ನ ಕಾಲೇಜೊಂದರಲ್ಲಿ ತೆಲುಗು ಉಪನ್ಯಾಸಕ ಹುದ್ದೆಯಲ್ಲಿರುವ ಮತ್ತು ಶ್ರೀ ಶ್ರೀ ಸಾಹಿತ್ಯದ ಮೇಲೆ ಆಳವಾದ ಜ್ಞಾನ ಹೊಂದಿರುವ, ತೆಲುಗು ಸಾಹಿತ್ಯ, ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಚಿರಪರಿಚಿತರಾಗಿರುವ ಹೆಸರು ಎಂದರೆ "ಏಟುತೂರಿ ಪ್ರಸಾದ" ಇವರದು. 'ಅಭ್ಯುದಯ' ಎನ್ನುವ ಸಾಹಿತ್ಯಿಕ ಮಾಸ ಪತ್ರಿಕೆಯನ್ನು ನಡೆಸು ತ್ತಿದ್ದಾರೆ.]

ತೆಲುಗು ಸಾಹಿತ್ಯವನ್ನು 'ಭಾವ ಕವಿತ್ವ' ಪ್ರಚಂಡವಾಗಿ, ಪಸರಿಸಿದ್ದ ಕಾಲವದು. ಪ್ರತಿಯೊಂದು ಸಣ್ಣ ಘಟನೆಗೂ ಸ್ಪಂದಿಸುವ ಸಂವೇದನಾಶೀಲರೆಲ್ಲರೂ ಈ ಭಾವ ಕವಿತ್ವದಿಂದ ಪ್ರಭಾವಿತರಾಗಿದ್ದರು. 1910 ರಿಂದ 1940ರ ವರೆಗೆ, ಇಂಗ್ಲಿಷಿನ ರೊಮ್ಯಾಂಟಿಕ್ ಸಂಪ್ರದಾಯವನ್ನು ಹೋಲುವ ಈ ಪಂಥ ಕೆಲವರಿಗೆ ಬ್ಮೆಗುಳಾಗಿದ್ದರೆ, ಮತ್ತುಳಿದವರಿಗೆ, ಜ್ಞಾನವನ್ನು ಪಸರಿಸುವ ಜ್ಯೋತಿಯಾಗಿತ್ತು ಎಂದು ಹೇಳಲಾಗು ತ್ತದೆ. ಆಧುನಿಕ ತೆಲುಗು ಕಾವ್ಯದ ಅರುಣೋದಯ ಕಾಲದಿಂದ ಇದುವರೆಗೆ, ಕವಿಗಳ ಮೇಲೆ ಹೆಚ್ಚು ಪ್ರಭಾವ ಬೀರಿದವರು ಗುರಜಾಡ ಅಪ್ಪಾರಾಯರಾದರೂ, ಭಾವಕವಿತ್ವ ಪಂಥದ ಸ್ಫೂರ್ತಿನೆಲೆ 'ರಾಯಂಪ್ರೋಲು ಸುಬ್ಬಾರಾವ್' ಅವರ ಕಾವ್ಯ. ಭಾವಕವಿತ್ವ ವನ್ನು ಕುರಿತು ದೇವುಲಪಲ್ಲಿ ಕೃಷ್ಣಾಶಾಸ್ತ್ರಿಗಳು ಒಂದೆಡೆ ಹೇಳಿದ ಸಾಲುಗಳು ಇಲ್ಲಿ ಉಲ್ಲೇಖನೀಯ.

ಮೆರುಗು ಕಳ್ಳಜೊಳ್ಳು, ಗಿರಜಾಲು ಸರದಾಲು,
ಭಾವಕವಿತಿಲೇನೀ ವೇವಿಲೇವು,
ಕವಿತ ಯುಂದು ವಾಡನ್ನಿಂಟ.

[ಕನ್ನಡಕ, ಗಲ್ಲೀಮೀಸೆ, ಸರದಾರ,
ಹೀಗೆ ಭಾವಕವಿಗೆ ಎಲ್ಲವೂ ವಿಷಯಗಳೇ,
ಅಂದು ಇವುಗಳಿಲ್ಲದ ಕಾವ್ಯ ಯಾವುದಿತ್ತು ?]

ಎಂದು ಅವರು ವ್ಯಂಗ್ಯವಾಗಿ ಹೇಳಿದ್ದಾರೆಂದು ಕಂಡುಬಂದಿದೆ. ಭಾವಕವಿತ್ವಕ್ಕೆ ವಿರುದ್ಧವಾಗಿ ಸಿಡಿದೆದ್ದು ಹೊಸ ಪ್ರಯೋಗ ಮಾಡಿದವರಲ್ಲಿ ಟಿ. ಪಟ್ಟಾಭಿರಾಮರೆಡ್ಡಿ, ಶಿಷ್ಟ್ಲಾ, ಉಮಾಮಹೇಶ್ವರರಾವ, ನಾರಾಯಣಬಾಬು ಹಾಗೂ ಶ್ರೀ ಶ್ರೀ ಮುಖ್ಯರು ಎಂದು ಹೇಳಲಾಗುತ್ತದೆ. ಸ್ವಪ್ನಲೋಕದಲ್ಲಿ ಸಂಚರಿಸುವ ಕವಿ ಎಂದು ಹೆಸರು ಮಾಡಿದ್ದ ಶ್ರೀ ಶ್ರೀ ಪ್ರಾರಂಭದಲ್ಲಿ ಭಾವಕವಿತ್ವಕ್ಕೆ ಒಳಗಾಗಿದ್ದರೂ, ಅದರಿಂದ ಬೇಗನೇ ಹೊರಬಂದರು. ನಾರಾಯಣ ಬಾಬು ಅವರ ಮಾತುಗಳಲ್ಲಿ ಹೇಳಬೇಕಾದರೆ, "ಭಾವಕವಿತ್ವದ ಕಬ್ಬಿಣದ ಕಡಲೆಯನ್ನು ಜೀರ್ಣಿಸಿಕೊಂಡು ಸ್ವಲ್ಪಮಟ್ಟಿಗೆ ನಾವೂ ಕವನ ರಚನೆಯಲ್ಲಿ ತೊಡಗಿದ್ದೇವೆ. ಹಸಿವೆ ನೀರಡಿಕೆಗಳನ್ನು ತೊರೆದು ಕಾವ್ಯೋಪಾಸನೆಯಲ್ಲಿ ನಮ್ಮನ್ನೇ ನಾವು ತೊಡಗಿಸಿಕೊಳ್ಳಬೇಕಾದ ರಚನೆಗಳು ಇವು ಅಲ್ಲ ಎಂದು ನಮಗೆ ಮನವರಿಕೆಯಾಗಿದ್ದರೂ, ವಿಧಿ ಇಲ್ಲದೆ ಇವುಗಳನ್ನು ರಚಿಸಬೇಕಾಗಿತ್ತು. ಅಂತಹ ಸಂದರ್ಭದಲ್ಲಿ ಶ್ರೀಶ್ರೀಯವರ ಸಂಗ್ರಹ 'ಪ್ರಭವ' ಪ್ರಕಟಣೆಗೊಂಡಿತು(1928)".ಪ್ರಭವ ಸಂಕಲನದ ಬಗೆಗೆ ಶ್ರೀ ಶ್ರೀ ಯವರೆ ಹೇಳಿಕೊಂಡಿರುವದು ಇಲ್ಲಿ ಗಮನಾರ್ಹ. "ಮೊದಲ ಬಾರಿಗೆ ನನ್ನನ್ನೇ ಅಚ್ಚುಹಾಕಿ ಮಾರುಕಟ್ಟೆಗೆ ಬಿಡುಗಡೆ ಮಾಡಿದ್ದು ಈ ಪುಸ್ತಕವೇ ? 1926 ರಲ್ಲಿ ಪುಲಿಪಂಡಾ. ಅಪ್ಪಂಸ್ವಾಮಿ ವಡ್ಡಾದಿಯವರೊಂದಿಗೆ ಶ್ರೀ ಶ್ರೀ "ಕವಿತಾ ಸಮಿತಿ" ಯನ್ನು ಸ್ಥಾಪಿಸಿದ್ದರು. ಈ ಸಮಿತಿಯೇ 'ಪ್ರಭವ' ಸಂಕಲನವನ್ನು ಹೊರತಂದಿದ್ದು. "ಇವು ಸ್ವಚ್ಛಂದದ ದಿನಗಳು. ಈ ಸ್ವಚ್ಛಂದದ ದಿನಗಳಲ್ಲಿ ವಿಕಸಿಸಿದ್ದು ಪ್ರಭವ. ಕವಿ ಹೃದಯದಿಂದ ಹೊರಬಿದ್ದಿರುವ ಖಂಡ ಕಾವ್ಯಗಳು ಇವು" ಎಂದು ಪುಲಿಪಂಡಾ 'ಪ್ರಭವ' ಸಂಕಲನದ ಪ್ರಸ್ತಾವನೆಯಲ್ಲಿ ಹೇಳಿದ್ದಾರೆ. 1927 ಜುಲೈ ಸಂಚಿಕೆಯ 'ಭಾರತಿ'ಯಲ್ಲಿ ಶ್ರೀ ಶ್ರೀ ಬರೆದ 'ಅಭಿಸಾರಿಕೆ' ಕವನದಲ್ಲಿ ಭಾವಕವಿತ್ವದ ಛಾಯೆಯನ್ನು ಗುರುತಿಸಬಹುದಾಗಿದೆ. 1927-28ರ ಮಧ್ಯೆ ಬರೆದ 17 ಕವನಗಳು (ಖಂಡ ಕಾವ್ಯಗಳು !) 'ಪ್ರಭವ' ಸಂಕಲನದಲ್ಲಿವೆ. 'ಭಾವಕವಿತ್ವ' ಅಥವಾ 'ಪ್ರಭವ' ಸಂಕಲನಕ್ಕೆ ಸಂಬಂಧಿಸಿದ ಸೂಕ್ಷ್ಮವಾದ ವಿವರಣೆಯನ್ನು ಶ್ರೀ ನಾರಾಯಣರೆಡ್ಡಿಯವರ ಲೇಖನದಲ್ಲಿ ಕಾಣಬಹುದು. 'ಆತ್ಮಾಶ್ರಯತ್ವ, ದೇಶಭಕ್ತಿ, ಪ್ರಕೃತಿ ಆರಾಧನೆ, ಸಂಘ ಸಂಸ್ಕರಣ ಪ್ರಯತ್ನ, ಭಕ್ತಿಭಾವ ಸ್ಮೃತಿಗಳು ಬೇರೆ, ಬೇರೆ ಶಾಖೆಗಳಾಗಿ ವೃದ್ಧಿ ಹೊಂದಿವೆ' ಎಂದು ಅವರು ಹೇಳಿದ್ದಾರೆ. ಸೌಂದರ್ಯ, ಪ್ರೇಮ, ಪ್ರಕೃತಿ, ಪ್ರಣಯ, ಪ್ರಬೋಧ ಇವು ಭಾವಕವಿತ್ವದ ಲಕ್ಷಣಗಳು.

ಹೊಸ ಕವಿಗೆ ಪದಪುಂಜಗಳ ಮೇಲೆ ಇರುವ ಮೋಜು ನಮಗೆ 'ಪ್ರಭವ' ಸಂಕಲನದ ತುಂಬಾ ಕಂಡು ಬರುತ್ತದೆ. ನಡೆಯುತ್ತಿರುವ ಪ್ರಕ್ರಿಯೆಗೆ ಮತ್ತು ನಡೆ

ಯದೇ ಇರುವದಕ್ಕೂ ಸಹ ದೊಡ್ಡ ಸಮಾಸಗಳು ಪದಾಡಂಬರಗಳು ಇಲ್ಲಿ ಕಂಡು ಬರುತ್ತವೆ. "ಧ್ವಾಂತ ಸಂಕೀರ್ಣ, ಗಗನ ಹೃದಯ ವಿದೀರ್ಣ, ಶಕ್ತಿಯುಕ್ತ ಕ್ಷಣ ಪ್ರಭಲು", "ರಾತ್ರಿ ಅಂದುಲೋ ತೂಫಾನ ರಾತ್ರಿ, ಅಭಿಸಾರಿಕಲೋದಿದಿ, ಇಂತ ಗಂದರ ಗೋಳುಲೋನು, ಆವಿಡ, ಪ್ರಿಯುಣ್ಣಿ ಕಲವಟಾನಿಕಿ", "ಪ್ರಣಯ ರಾಜ್ಯ ರಮಾ ಪ್ರಾಣಪತಿ ಕೊರಕಯಿ ತರಲಿ ಯೆರಿಗಡು, ನಾ ಕವಾಂತರ ಮುಂಲಗನೇ ?" [ಪ್ರಭವ ಸಂಕಲನ, 1928] ಎಂದು ಕವಿ ಮುಗಿಸುವದು ಶ್ರೀ ಶ್ರೀ ಯವರಿಗೆ. ಭಾಷೆಯ ಮೇಲೆ ಇರುವ ಹಿಡಿತವನ್ನು ಸೂಚಿಸುವಂತಹದು ಆಗಿದೆ. ಇನ್ನೊಂದೆಡೆ ಬರುವ, ಶಿವನನ್ನು ನರ್ತಿಸು ಎಂದು ಸೂಚಿಸುವ, "ವಿಲಯಾಂಬೋದರ ಘೋಷ, ಸಮ್ಮಿಳಿತ ಗಂಭೀರಾಟ್ಟಹಾಸ, ಧ್ವನಿ ಚಲಿತ ಪ್ರಾಕಟ, ದಿಗ್ಗಜುಂಡ, ಪಗಚುನ ಸಂಪ್ರೀತಿ, ನರ್ತಿಂಪು" ಎಂದು ಸಮಾಸಗಳ, ಗಿರಿಗಿಟ್ಟೆಯನ್ನೇ ತೋರಿಸಿದ್ದಾರೆ. ಭಾವ ಕವಿಗಳಿಗೆ ಸಹಜವಾಗಿ ಇರುವ, ಸ್ವಚ್ಛಂದ ಛಂದಸ್ಸಿನ ಲಕ್ಷಣಗಳನ್ನು ದೇವುಲಪಲ್ಲಿ ಕೃಷ್ಣಶಾಸ್ತ್ರಿ ಮತ್ತು ಶ್ರೀ ಶ್ರೀಯವರಲ್ಲಿ ನೋಡಬಹುದಾಗಿದೆ. "ಎಲೆಗಳಲಿ ಎಲಿಗಳಾಗಿ, ಹೂಗಳಲಿ ಹೂವಾಗಿ...." ಎಂದು ಕೃಷ್ಣಶಾಸ್ತ್ರಿಯವರು ಹೇಳಿದರೆ, "ನಾನು ಕೂಡಾ ಪ್ರಪಂಚಾಗ್ನಿಗೆ ಸಮಿಧೆಯೊಂದನು ಆಹುತಿ ಕೊಟ್ಟೆ.... ನಾನು ಕೂಡಾ ಭುವನ ಭವನದ ಧ್ವಜವಾಗುವೆ" ಎಂದು ಶ್ರೀ ಶ್ರೀ ಹೇಳುತ್ತಾರೆ.

ಪ್ರಕೃತಿಯ ಆರಾಧನೆಯ ಭಾವವನ್ನು 'ಮಾತೃಗೀತೆ'ಯಲ್ಲಿ ನೋಡಬಹುದು. ಉಷೆಯ ವರ್ಣನೆಯಲ್ಲಿ, ಗಾಳಿಯ ಅಲೆಗಳನ್ನು ಅವುಗಳಿಂದ ಹೊರಹೊಮ್ಮುವ ಸಂಗೀತವನ್ನು ಕವಿ ನಮಗೆ ಕೇಳಿಸುತ್ತಾನೆ.

"ಮಂಜುಲ ಸಮೀರಣೊಲ್ಮಿಕಾ ಮರ್ಮರ ಧ್ವನಿ,
ವಿಷಮ್ಮುನ, ಬ್ರಕೃತಿಯೋಷಾಮ್ಯದೂತ್ತು
ಅಮೃತ ನಿಭುಮುಗ ಹರ್ಷದಾಯಕಮುಲಯ್ಯ"

ಎಂತಹ ಪುಳಕಿತಗೊಳ್ಳುವಂತಹ ಸಾಲುಗಳು ನಮಗೆ ದೊರೆಯುತ್ತವೆ. ಇಂತಹ ಇನ್ನೂ ಅನೇಕ ಸಾಲುಗಳು ನಂತರ ಬರೆದ, 'ಸಮುದ್ರ ಘೋಷ', 'ಮಾತೃಗೀತ', 'ಮಾತೃ ಪ್ರಭೋಧ' ಕವನಗಳಲ್ಲಿ ಇನ್ನೂ ಸ್ಪಷ್ಟವಾಗಿ ಮೂಡಿಬಂದಿವೆ.

ಪದವಿಪೂರ್ವ ಶಿಕ್ಷಣ ಮುಗಿಸುತ್ತಿದ್ದಂತೇ ಪ್ರಕಟವಾದ ಕವನ ಸಂಕಲನ "ಪ್ರಭವ". ಸಮಾಜದ ಪ್ರಭಾವದ ಜೊತೆಗೆ, ದೈವಭೀತಿ, ಮಾನವನನ್ನು ಮಾನವಾತೀತ ಶಕ್ತಿಯೊಂದು, ನಿಯಂತ್ರಿಸುತ್ತದೆ ಎನ್ನುವ ಭಾವ ಇದರಲ್ಲಿದೆ. ಒಬ್ಬ ಸಾಮಾನ್ಯ ಯುವಕನಾಗಿ, ಸಮಾಜದೊಂದಿಗೆ ಭಾವಾತ್ಮಕವಾಗಿ ಸ್ಪಂದಿಸಿದ ಕವನಗಳಿವು.

ಎಂದರೆ, ಮುಂಬರುವ ದಿನಗಳಲ್ಲಿ ಶ್ರೀ ಶ್ರೀ ಹೇಗೆ, ಮತ್ತು ಎಂತಹ ದೃಷ್ಟಿಕೋನವನ್ನು ಹೊಂದಿದ್ದರು ಎನ್ನುವ ನಿದರ್ಶನಗಳು ಕಂಡು ಬರುವದರ ಜೊತೆಗೆ,

ಲೌಕಿಕ ಭಾವದಿಂದ, ನಿರೀಶ್ವರವಾದಿಯಾಗಿ, ಶಬ್ದಬ್ರಹ್ಮನಾಗಿ, ವಿವಿಧ ಛಂದಸ್ಸುಗಳನ್ನು ನಿಯಂತ್ರಿಸುವವರಾಗಿ, ಮತಮರಹಂಕಾರವನ್ನು ತಿರಸ್ಕರಿಸುವರಾಗಿ, ಮಾರ್ಪಾಡು ಹೊಂದುವವರಾಗಿಯೂ, 'ನಾನು'ವಿನಿಂದ 'ನಾವೆಲ್ಲ' ಎನ್ನುವ ವಿರಾಟ ಸ್ವರೂಪವನ್ನು ತೋರಿಸುವದಕ್ಕೆ 'ಪ್ರಭವ' ಒಂದು 'ಮಿನಿಯೇಚರ್'.

ಇಂತಹ ಒಂದು 'ಭಾವಕವಿತ್ವ'ದ ಬಂಧನದಿಂದ ಬಿಡಿಸಿಕೊಂಡು ಮೇಲೇರುವದು ಸಾಮಾನ್ಯ ಸಂಗತಿಯಾಗಿರಲಿಲ್ಲ. ನಂತರದ ಶ್ರೀ ಶ್ರೀಯ ಕಾವ್ಯರಚನೆಯ ದಿನಗಳೇ 'ಅಭ್ಯುದಯ ಕವಿತ್ವ' ಪ್ರಕಾರಕ್ಕೆ ನಾಂದಿಯಾಯಿತು. 1930 ರಲ್ಲಿ ಶ್ರೀ ಶ್ರೀಯವರ ರಚನೆಗಳಲ್ಲಿ ಬದಲಾವಣೆ ಕಂಡುಬರುತ್ತದೆ. 1929ರಲ್ಲಿ ಶ್ರೀ ಶ್ರೀ ಬರೆದ "ಸುಪ್ತಾಸ್ಥಿತಲು" ಇವರ ಭಾವಕಾವ್ಯ ಪಂಥದ ಕವನಗಳಲ್ಲಿ ಕೊನೆಯದು. ಪುರಿಪಂಡಾರ ದೆಶೆಯಿಂದಾಗಿ, ಇಸ್ಲಾಂ ಕವಿತ್ವದ ಪರಿಚಯ ಶ್ರೀ ಶ್ರೀಯವರಿಗುಂಟಾಯಿತು. 1933 ರಿಂದ ಹೊರಬಂದ ಶ್ರೀ ಶ್ರೀಯವರ ಕವನಗಳು ಹೊಸ ಛಂದಸ್ಸು, ಹೊಸವಸ್ತು, ಹೊಸ ಭಾವನೆಗಳಿಂದ ಕೂಡಿದವು. 1933ರ ಪ್ರಾರಂಭದಲ್ಲಿ ಅವರು ಬರೆದ ಪ್ರಥಮ ಕವನ ಜಯಭೇರಿಯಲ್ಲಿ, ಫ್ಯೂಡಲಿಜಂ, ಡಾಡಾಯಿಸಂ, ಸರ್ರಿಯಲಿಸಂ ಮುಂತಾದುವುಗಳನ್ನು, ಕಂದಕೂರಿ, ಗುರಜಾಡ ಮುಂತಾದವರು ಹೇಗೆ ಎದುರಿಸಿದರು ಎನ್ನುವದನ್ನು ಅವರು ಕಂಡುಕೊಳ್ಳತೊಡಗಿದರು. ಅಬ್ಬೂರಿಯಂಥವರ ಸಹಚರ್ಯದಿಂದಾಗಿ, ಅನೇಕ ಸೋಷಲಿಸ್ಟ್ ಗ್ರಂಥಗಳ ಅಧ್ಯಯನ ಮಾಡಿದರು. ಪ್ರಪಂಚದ ಶ್ರೀಮಂತ ವರ್ಗದೊಂದಿಗೆ, ಸೋಷಲಿಷ್ಟ್ ಶಕ್ತಿಯನ್ನು ಹೋಲಿಸಿ ಅವುಗಳ ಮಧ್ಯೆ ಇರುವ ತಾರತಮ್ಯವನ್ನು ಕಂಡುಕೊಂಡರು. ಶ್ರಾಮಿಕ ಶಕ್ತಿಯ ಅಂತರ್‌ರಾಷ್ಟ್ರೀಯ ಭಾವನೆಯನ್ನು ಗುರುತಿಸಿಕೊಂಡರು.

ತಾನಿದುವರೆಗೆ ರಚಿಸಿದ ಕವನಗಳು ನಿರರ್ಥಕವೆಂದು, ಹೊಸರಕ್ತದಿಂದೊಡಗೂಡಿ, ಹೊಸಮಾರ್ಗದಲ್ಲಿ ಮುನ್ನಡೆಯಬೇಕೆಂದು ನಿರ್ಧರಿಸಿದರು. ಅದೇ "ಮಹಾಪ್ರಸ್ಥಾನ" ಕವನ ಸಂಕಲನದ ಬುನಾದಿಯಾಯಿತು. 1934 ರಿಂದ 1947ರ ವರೆಗೆ ಬರೆದ ಕವನಗಳ ಸಂಕಲನ ಇದು. ಹೆಚ್ಚಿನವು 1933–1937ರ ಅವಧಿಯಲ್ಲಿ ಬರೆದವುಗಳು.

"ಮಹಾಪ್ರಸ್ಥಾನ" ತೆಲುಗು ಕಾವ್ಯ ಕ್ಷೇತ್ರದಲ್ಲಿ ಇತಿಹಾಸವನ್ನೇ ಸೃಷ್ಟಿಸಿತು. 'ಮಹಾ ಪ್ರಸ್ಥಾನ' ಗೀತೆ ಓಜೋ ಗುಣ ಪ್ರಧಾನವಾದ ಪ್ರಪಂಚ ಜನತಾ ಗೀತೆ. ಈ ಗೀತೆಯಲ್ಲಿ ಶ್ರೀ ಶ್ರೀಯವರು ಹೆಸರಿಸಿದ ಮತ್ತೊಂದು ಪ್ರಪಂಚ, ಸ್ವರ್ಗವೋ ಬೇರೆ ಲೋಕವೋ ಅಲ್ಲ. ಅದು ಭೂಮಿಯಲ್ಲೇ ಕವಿ ಬಯಸಿದ ಸಮ ಸಮಾಜ.

'ಮಹಾಪ್ರಸ್ಥಾನ'ದಲ್ಲಿ ಕವಿ ಮುಖ್ಯವಾಗಿ ಮೂರು 'ಪ್ರಣಾಳಿಕೆ' (Manifesto) ಗಳನ್ನು ಕವಿತಾತ್ಮಕವಾಗಿ ಹೇಳಿದ್ದಾನೆ. ಮಾನವನ ಜೀವಿತ ಪರಿಪೂರ್ಣವಾಗಲು, ವಿವಿಧ ಕಂದಾಚಾರಗಳನ್ನು ತಿರಸ್ಕರಿಸುವ. ಅಭ್ಯುದಯ ಪಥ ನಿರ್ದೇಶಕತತ್ವಗಳುಳ್ಳ ಇನ್ನೊಂದು ವ್ಯವಸ್ಥೆಯನ್ನು ಜಾರಿಗೆ ತರುವದಕ್ಕಾಗಿ ಶ್ರಮಿಸಲು, ಕರೆ ನೀಡಿದ್ದಾನೆ.

ತಾನು ತೆಗೆದುಕೊಂಡ ಹೊಸಮಾರ್ಗವನ್ನು 'ಕವಿತಾ ಓ ಕವಿತಾ' (1937) ಕವನದ ಮೂಲಕ ಸೂಚಿಸಿದ್ದಾನೆ. ಇಂತಹ ಒಂದು ರಚನೆಗೆ ತಾನು ಎದುರಿಸಿದ ಕಷ್ಟನಷ್ಟಗಳು ಇದರಲ್ಲಿ ಮಾರ್ಮಿಕವಾಗಿ ಮೂಡಿಬಂದಿವೆ. ತನ್ನ ಸ್ಮರಣೆಗೆ ಬಂದ ಸಂಗತಿಗಳನ್ನು, 'ಕ್ಷ' ಕಿರಣದಿಂದ ವಿಶ್ಲೇಷಿಸಿ, ತನ್ನ ಹಳೆಯ ಕವನಗಳು ಸರಂಜಾಮುಗಳಾಗಿ, ನಿಘಂಟು ಗಳು ಸ್ಮಶಾನದಂತೆ, ವ್ಯಾಕರಣಾರ್ಥಗಳು ಸಂಕೋಲೆಗಳಂತೆ, ಛಂದಸ್ಸುಗಳು ವಿಷ ಸರ್ಪಗಳಂತೆ, ಮುತ್ತಿದ್ದು ಅವುಗಳಿಂದ ಬಿಡಿಸಿಕೊಂಡು ಹೊಸದಾರಿ ಕಂಡುಕೊಂಡ ವರ್ಣನೆ ಇದೆ. ತನ್ನ ಆದರ್ಶಗಳು, ಲೋಕಕ್ಕೆ ಆದರ್ಶವಾಗುವ ಹೆಬ್ಬಯಕೆ ಅದರಲ್ಲಿದೆ, ತನ್ನ ಕವನಗಳು ಜನರ ಹೃದಯವನ್ನು ಬಡಿದೆಬ್ಬಿಸಿ, ಅವರು ಪ್ರತಿನಿತ್ಯ ಹೇಳಿ ಕೊಳ್ಳುವ ಮಂತ್ರಗಳಾಗಬೇಕೆನ್ನುವ ಆಕಾಂಕ್ಷೆ ಅದರಲ್ಲಿದೆ.

## ಎರಡನೆಯದು ಎಂದರೆ "ಪ್ರತಿಜ್ಞೆ"

ತನ್ನ ಕವನ ಯಾವ ಆದರ್ಶವನ್ನು ಹೊಂದಿರಬೇಕು, ಎನ್ನುವದನ್ನು ಒಂದೆಡೆ ಬರೆದು, ಮುಖ್ಯ ಸೂತ್ರವನ್ನು ಉದ್ಯಮ ಸ್ವರೂಪದಲ್ಲಿ ವಿವರಿಸಿ, ಯಾವ ಆಶಯ ದಿಂದ ಶ್ರಮಿಸಬೇಕು ಎನ್ನುವ ಅಂತಾರಾಷ್ಟ್ರೀಯ ದೃಷ್ಟಿಯನ್ನು ಮೇಳವಿಸಿ ಬರೆದ 'ಪ್ರತಿಜ್ಞೆ' ಇದು. ಇದಕ್ಕೆ ಮುಖ್ಯ ಪ್ರೇರಣೆ ಅಬ್ಬೂರಿ ರಾಮಕೃಷ್ಣರಾವ. ಆಗಲೇ ದೇಶದಲ್ಲಿ ತಲೆ ಎತ್ತುತ್ತಿದ್ದ, ಶ್ರಾಮಿಕ ವರ್ಗಲಕ್ಷಣಗಳನ್ನು ಕಂಡುಕೊಂಡ ಕವಿ ತನ್ನ ಕವಿತ್ವವನ್ನು ಶ್ರಾಮಿಕ ವರ್ಗದವರ ಏಳ್ಗೆಗಾಗಿ ಬರೆಯಬೇಕೆಂದು ಹೇಳಿದ್ದಾನೆ. "ಕಾರ್ಮಿಕ ಲೋಕದ ಕಲ್ಯಾಣಕ್ಕೆ ಶ್ರಾಮಿಕ ಲೋಕವು ಸೌಭಾಗ್ಯಕ್ಕೆ" ಎನ್ನುವ ಕವನ ಅವರುಗಳಿಗೆ ಸಮರ್ಪಿಸಿದ್ದಾನೆ.

## ಮೂರನೆಯದು ಶ್ರಾಮಿಕ ವರ್ಗ ಪ್ರಣಾಳಿಕೆ

ಶಾಸ್ತ್ರೀಯ ಸಾಮ್ಯವಾದ ಪ್ರಣಾಳಿಕೆ "ದೇಶಚರಿತ್ರೆ". ಕಮ್ಯೂನಿಷ್ಟ್ ಸಿದ್ಧಾಂತ ಗಳ ಆಧಾರದ ಮೇಲೆ, ಚರಿತ್ರೆ, ನಿರ್ವಚನ, ವರ್ಗಗಳನ್ನು ಗುರುತಿಸುವದು. ಗುಂಪುಗಳ ಹೋರಾಟ, ದರೋಡೆ, ಅಂತರಾಷ್ಟ್ರೀಯತೆಯಂತಹ ಅಮೂಲ್ಯವಾದ ಅಂಶಗಳು ಇದ ರಲ್ಲಿ ಅಡಕವಾಗಿವೆ. 1937ರಲ್ಲಿ ಇದರ ರಚನೆಯಾಯಿತು. "ದೇಶಚರಿತ್ರೆ" ಕವನ ವನ್ನು ವಿಶಾಖಪಟ್ಟಣದ ಪಾರ್ಟಿ ಸಮಾವೇಶದಲ್ಲಿ ಶ್ರೀ ಶ್ರೀ ಇದನ್ನು ಓದಿದರು.

'ಮಹಾಪ್ರಸ್ಥಾನಂ' ಸಂಕಲನದ ಅನೇಕ ಗೀತೆಗಳ ಮೇಲೆ, ಮಾರ್ಕ್ಸಿಸಂ ಪ್ರಭಾವವಿದೆ. "ಪ್ರತಿಜ್ಞೆ", "ಅಭ್ಯುದಯಂ", "ಋುಕ್ಕಲು", "ಜಗನ್ನಾಥ ರಥ ಚಕ್ರಾಲು" ಮುಂತಾದುವು ನವ್ಯಕವಿಗಳ ಮೇಲೆ ಅಪಾರ ಪ್ರಭಾವವನ್ನು ಬೀರಿವೆ. 'ಸಿಂದೂರ', 'ರಕ್ತ ಚಂದನ', 'ಕೆಂಪು ಬಾವುಟ', 'ಕಾಳಿಯ ನಾಲಗೆ' ಮುಂತಾದುವು ನವ್ಯಕಾವ್ಯದ ವಸ್ತುಗಳೆಂದು ಶ್ರೀ ಶ್ರೀ ಸಾರಿದ್ದಾರೆ. ಕದಲುವದು, ಕದಲಿಸುವದು, ಬದಲಾಗುವದು, ಬದಲಾಯಿಸುವದು, ನವ್ಯಕಾವ್ಯಕ್ಕೆ ಬೇಕೆಂದರು. 'ಋುಕ್ಕಲು'

ಎಂಬ ಕವನದಲ್ಲಿ, ನಾಯಿಮರಿ, ಸಾಬೂನು, ಬೆಂಕಿಕಡ್ಡಿ, ಮುಂತಾದುವೂ ಕಾವ್ಯ ವಸ್ತುಗಳಾಗಬಹುದೆಂದು ಹೇಳಿ "ಪ್ರಪಂಚವೊಂದು ಪದ್ಮವ್ಯೂಹವೆಂದೂ, ಕವಿತ್ವವೊಂದು ತೀರದ ದಾಹವೆಂದೂ" ವಾಸ್ತವಿಕವಾದದ ತಮ್ಮ ನಿಲುವನ್ನು ವ್ಯಕ್ತಪಡಿಸಿದ್ದಾರೆ.

ಈ ದೇಶಚರಿತ್ರೆಯ ಕವನದಲ್ಲಿರುವ ಭಾವ ಜರ್ಮನಿಯ ಕವಿ ಬ್ರೆಕ್ಟನಲ್ಲಿ ಕೂಡಾ ಇದೆ. ಅವುಗಳನ್ನೋದಿ ಶ್ರೀ ಶ್ರೀ ಈ ಕವನ ಬರೆದಿದ್ದಾರೆಂದು ಆಪಾದಿಸಲಾಯಿತು. ಇದನ್ನು ಶ್ರೀ ಶ್ರೀ ಖಡಾಖಂಡಿತವಾಗಿ ಅಲ್ಲಗಳೆದಿದ್ದಾರೆ.

ಮಹಾಪ್ರಸ್ಥಾನದ ಗೀತೆಗಳಲ್ಲಿ ವಸ್ತು ನವ್ಯತೆ, ಭಾವ ನವ್ಯತೆ, ಶಬ್ದದ ಬಳಕೆಯಲ್ಲಿ ನವ್ಯತೆ, ಛಂದೋರೀತಿಗಳಲ್ಲಿ ನವ್ಯತೆಗಳನ್ನು ಸಮರ್ಪಕವಾಗಿ ಅಳವಡಿಸಿದ್ದಾರೆ. ತೆಲುಗು ಕಾವ್ಯ ಕ್ಷೇತ್ರದ ಧ್ರುವತಾರೆಯಾಗಿ ಮಿನುಗಿದ್ದಾರೆ. ತೆಲುಗು ಕಾವ್ಯವನ್ನು ವಿಶ್ವವ್ಯಾಪ್ತಿಗೊಳಿಸಿದ ಕೀರ್ತಿ ಶ್ರೀ ಶ್ರೀಯವರಿಗೆ ಸಲ್ಲುತ್ತದೆ.

# ಬದ್ಧತೆ ಮತ್ತು ಪಕ್ಷಪಾತ

ಮೂಲ : (ಇಂಗ್ಲಿಷ್) ರೇಮಾಂಡ್ ವಿಲಿಯಮ್ಸ್
ಅನು : ಎನ್. ಗಾಯತ್ರಿ

ಸಾಹಿತಿಗೂ ಮತ್ತು ಸಮಾಜಕ್ಕೂ ಇರುವ ಸಂಬಂಧವನ್ನು ಕುರಿತಂತೆ ನಡೆಯುವ ತೀವ್ರವೂ, ನಿರಂತರವೂ ಆದ ಚರ್ಚೆಯು ನಮ್ಮನ್ನು ಆಗಾಗ್ಗೆ 'ಬದ್ಧತೆ' ಮತ್ತು 'ಪಕ್ಷವಹಿಸುವಿಕೆ'ಯ ಪರಿಕಲ್ಪನೆಯತ್ತ ಕೊಂಡೊಯ್ಯುತ್ತದೆ. ಆದರೆ ಈ ತರ್ಕದಲ್ಲಿ ಹಲವಾರು ಪ್ರಶ್ನೆಗಳು ಹೆಣೆದುಕೊಂಡಿರುವುದನ್ನು ಗಮನಿಸಬೇಕು. 'ಬದ್ಧತೆ' ಮತ್ತು 'ಪಕ್ಷವಹಿಸುವಿಕೆ'ಗಳನ್ನು ಅರ್ಥೈಸುವಿಕೆಯಲ್ಲಿ ಕಂಡುಬರುವ ಸಂಪೂರ್ಣ ವಿಭಿನ್ನ ದೃಷ್ಟಿಕೋನಗಳು ಸಾಕಷ್ಟು ಗೊಂದಲಕ್ಕೆಡೆಮಾಡಿಕೊಡುತ್ತವೆ.

ಬರವಣಿಗೆಯನ್ನು ಕುರಿತಂತೆ ಅದನ್ನು ಆಡಿಪಾಯ ಮತ್ತು ಮೇಲ್‌ರಚನೆಯ ಸಂಬಂಧವಿರುವುದಾಗಿ ಸೂತ್ರೀಕರಿಸಲಿ ಅಥವಾ ಸಾಮಾಜಿಕ ಪ್ರಜ್ಞೆಯಿಂದ ಮೂಡಿ ಬರುವಂಥದು ಎಂದಾದರೂ ಹೇಳಲಿ, ಮಾರ್ಕ್ಸ್‌ವಾದದ ಮುಖ್ಯ ತತ್ವದ ಪ್ರಕಾರ ಬರವಣಿಗೆಯು ಉಳಿದೆಲ್ಲ ಕ್ರಿಯೆಗಳಂತೆ ಮುಖ್ಯವಾಗಿ ಯಾವುದಾದರೊಂದು ಪಕ್ಷ ವಹಿಸಿಯೇ ತೀರುತ್ತದೆ : ಅಂದರೆ ವ್ಯಕ್ತವಾದದ್ದಿರಲಿ, ಅವ್ಯಕ್ತವಾದದ್ದಿರಲಿ, ಬರವಣಿಗೆಯ ವೈವಿಧ್ಯಮಯ ಅಭಿವ್ಯಕ್ತಿಯು ನಿರ್ದಿಷ್ಟ ಆಯ್ದ ಅನುಭವವನ್ನು ನಿರ್ದಿಷ್ಟ ದೃಷ್ಟಿಕೋನದಿಂದ ರೂಪಿಸಿರುವುದೇ ಆಗಿರುತ್ತದೆ. ಅಂತಹ 'ದೃಷ್ಟಿಕೋನ'ದ ನಿರ್ದಿಷ್ಟ ಸ್ವರೂಪದ ಬಗೆಗೆ ಸಾಕಷ್ಟು ಚರ್ಚೆಗೆ ಅವಕಾಶವಿದೆಯೆಂಬುದೇನೋ ನಿಜ. ಹಿಂದಿನವರ ಅಭಿಪ್ರಾಯದಂತೆ ಅದು ಕೃತಿಯಿಂದ ಬೇರ್ಪಟ್ಟು 'ಪ್ರಚಾರ' ಸ್ವರೂಪದ್ದಾಗಿರಬೇಕೆಂದೇನೂ ಇಲ್ಲ. ನಿರ್ದಿಷ್ಟವಾಗಿ ರಾಜಕೀಯವಾದದ್ದಾಗಲೀ, ಅಥವಾ ಸಂಕುಚಿತಾರ್ಥದಲ್ಲಿ ಸಾಮಾಜಿಕವಾದದ್ದಾಗಲೀ ಆಗಿರಬೇಕಿಲ್ಲ. ಕಡೆಗೆ ಯಾವುದೇ ಕೃತಿಯಿಂದ ಬೇರ್ಪಡಿಸಬಹುದಾದಂತಹ ತತ್ವವೂ ಅದಾಗಿರುವುದಿಲ್ಲ. ಆದಾಗ್ಯೂ ಈ ಎಲ್ಲ ಗುಣವಿಶೇಷಗಳನ್ನು ಗುರುತಿಸುವುದು ನಮ್ಮ ಮೂಲವಾದವನ್ನು ದುರ್ಬಲಗೊಳಿಸಲೆಂದಲ್ಲ ; ಆದರೆ ಹೆಚ್ಚು ಸ್ಪಷ್ಟಪಡಿಸುವುದಕ್ಕೆ ಮಾತ್ರ. ಇಲ್ಲಿ 'ಪಕ್ಷವಹಿಸುವಿಕೆ' ಯೆಂದರೆ ನಿರ್ದಿಷ್ಟ ಸನ್ನಿವೇಶ ಮತ್ತು ಅನುಭವಗಳೊಂದಿಗೆ ಮನುಷ್ಯನ ನಿರ್ದಿಷ್ಟ

ಸಂಬಂಧವನ್ನು (ಮಾರ್ಕ್ಸ್‌ವಾದಿ ಪರಿಭಾಷೆಯಲ್ಲಿ 'ವರ್ಗ'ವನ್ನು) ಗುರುತಿಸುವುದೇ ಅಲ್ಲದೆ ಬೇರೇನೂ ಅಲ್ಲ. 'ವಸ್ತು ನಿಷ್ಠತೆ', 'ತಾಟಸ್ಥ್ಯ', 'ಸತ್ಯದ ಬಗೆಗಿನ ಮುಗ್ಧ ನಿಷ್ಠೆ'—ಮುಂತಾದ ಪರಿಕಲ್ಪನೆಗಳಿಗೆದುರಾಗಿ ಇಂತಹ ಗುರುತಿಸುವಿಕೆ ಅತ್ಯಂತ ಮುಖ್ಯವಾದುದು. ತಮ್ಮ ಅಭಿಪ್ರಾಯಗಳನ್ನು ಹಾಗೂ ವಿಧಾನವನ್ನು ಸಾರ್ವತ್ರಿಕವೆಂದು ಬಗೆಯುವವರನ್ನು ತಿದ್ದುವ ಸಂದರ್ಭದಲ್ಲಿ ಈ ಪರಿಕಲ್ಪನೆಯು ಮಹತ್ವದ್ದಾಗುತ್ತದೆ.

ಆದರೆ ಎಲ್ಲಾ ಸಾಹಿತ್ಯವು ಯಾವುದಾದರೊಂದು ಪಕ್ಷವಹಿಸುವುದೇ ಆದಲ್ಲಿ, ಯಾವುದಾದರೊಂದು ಸಮಯದಲ್ಲಿ ಒದ್ದು ತೆಯಬೇಕೆಂದು ಹೇಳುವುದಾದರೂ ಹೇಗೆ? ಬೇರೆ ದೃಷ್ಟಿಕೋನಗಳಿಗೆ ಆಸ್ಪದ ಕೊಡದೆ ಒಂದೇ ದೃಷ್ಟಿಕೋನದಿಂದ ಬರೆಯಬೇಕೆಂದು ಯಾವಾಗಲೂ ಒತ್ತಾಯಿಸಿದಂತೆ ಆಗುವುದಿಲ್ಲವೇ? ಒಂದು ರೀತಿಯಲ್ಲಿ ಅಧೀನಕ್ಕೊಳಗಾಗುವಂತೆ, ಪರಿವರ್ತನೆಗೊಳಗಾಗುವಂತೆ ಮತ್ತು ವಿಧೇಯವಾಗಿರುವಂತೆ ಒತ್ತಾಯಿಸಿದಂತೆ ಅಲ್ಲವೇ? ಈ ರೀತಿ ಒತ್ತಾಯದ ವಿರುದ್ಧ ಮಾರ್ಕ್ಸ್‌ವಾದದ ವಿರೋಧಿಗಳಿಂದ ಪ್ರತಿಭಟನೆಯು ಬಂದಿದೆ. ಮಾರ್ಕ್ಸ್‌ವಾದ ಮತ್ತು ಇದಕ್ಕೆ ಸಂಬಂಧಪಟ್ಟ ಚಳವಳಿಗಳೇ ಇದಕ್ಕೆ ಕಾರಣವೆಂದು ಅವರ ತಪ್ಪು ಅಭಿಪ್ರಾಯ. ಆದರೆ ಮಾರ್ಕ್ಸ್‌ವಾದಿಯೊಬ್ಬನಿಂದ ಬೇರೊಂದು ರೀತಿಯ ಪ್ರತಿಭಟನೆಯ ಉಲ್ಲೇಖವನ್ನು ಗಮನಿಸೋಣ. ಲ್ಯೂಕಾಚ್ ಮತ್ತು ಅವನ ಮಾಸ್ಕೋ ಸಂಗಾತಿಗಳ ವಿರುದ್ಧ 1930ರ ಸುಮಾರಿನಲ್ಲಿ ಬ್ರೆಕ್ಟ್ ಹೇಳಿದ್ದು :

"ಕರಾರುವಾಕ್ಕಾಗಿ ಹೇಳುವುದಾದರೆ ಅವರೆಲ್ಲಾ (ಅಂದರೆ, ಬದ್ಧತೆಯ ವಿರೋಧಿಗಳು) ರಂಗಪ್ರಯೋಗದ ಕಡುವೈರಿಗಳು. ರಂಗ ಪ್ರಯೋಗವೆಂದರೆ ಅವರಿಗೆ ಇರಿಸು ಮುರಿಸು, ರಂಗಪ್ರಯೋಗದ ಉದ್ದೇಶವು ಮೊದಲಿನಲ್ಲೇ ನಿರೀಕ್ಷೆಗೆ ಸಿಲುಕದ ವಿಷಯ. ಇದೀ ಪ್ರಯೋಗವು ಕಡೆಗೆ ಏನನ್ನು ಮಥಿಸಿ ತೋರಿಸಬಹುದೆಂಬುದು ಮೊದಲೇ ತಿಳಿಯುವುದಿಲ್ಲ. ಹೀಗಿರುವಲ್ಲಿ ಸ್ವತಃ ಅವರು ಮಾತ್ರ ರಂಗಪ್ರಯೋಗಕ್ಕೆ ಕೈಹಾಕಲು ತಯಾರಿರುವುದಿಲ್ಲ. ಅವರು ಕೇವಲ ರಂಗಮೇಸ್ತ್ರಿಗಳಾಗಿದ್ದು ಜನರನ್ನು ತಮ್ಮ ಹಿಡಿತದಲ್ಲಿಟ್ಟುಕೊಂಡಿರುತ್ತಾರೆ. ಅವರ ಪ್ರತಿಯೊಂದು ವಿಮರ್ಶಾ-ಸೂತ್ರದಲ್ಲೂ ಏನಾದರೊಂದು ಬೆದರಿಕೆಯ ಮಾತು ಇದ್ದೇ ತೀರುತ್ತದೆ. (ಡಬ್ಲ್ಯು. ಬೆಂಜಮಿನ್ ಅವರಿಂದ ಉದ್ಧರಿಸಲ್ಪಟ್ಟಿರುವ ಭಾಗ: ('ಬ್ರೆಕ್ಟ್‌ನೊಂದಿಗೆ ಸಂಭಾಷಣೆ', ನ್ಯೂ ಲೆಫ್ಟ್ ರೆವ್ಯೂ, 77, ೨5).

ವಾಸ್ತವ ಸನ್ನಿವೇಶವೊಂದರಲ್ಲಿ ಇದೊಂದು ವಾಸ್ತವ ಪ್ರತಿಭಟನೆ. ಸಮಾಜವಾದದ ಹೆಸರಿನಲ್ಲಿ ಅನೇಕ ಬರಹಗಾರರನ್ನು ಹುರಿದುಂಬಿಸಲಾಯಿತು, ದಮನ ಮಾಡಲಾಯಿತು, ಕಡೆಗೆ ನಾಶಪಡಿಸಲಾಯಿತು ಕೂಡ. ಹಾಗಿದ್ದರೂ ಬೇರೆ ಬೇರೆ ಕಾಲಗಳಲ್ಲಿ ಅನೇಕ ಬರಹಗಾರರ ಅಸಂಖ್ಯಾತ ಪ್ರತಿಭಟನೆಗಳ ಪೈಕಿ ಇದೊಂದು ಸರಳ ಉದಾಹರಣೆ. ರಂಗಪ್ರಯೋಗವನ್ನು ತಮ್ಮ ಹಿಡಿತದಲ್ಲಿಟ್ಟುಕೊಂಡಿರುವವರ ಮತ್ತು

ಮುಂದೆ ಇಟ್ಟುಕೊಳ್ಳಬಹುದಾದವರ ವಿರುದ್ಧ, ಹಾಗೂ ಚರ್ಚ್, ಪ್ರಭುತ್ವ ಅಥವಾ ಗಲ್ಲಾ ಪೆಟ್ಟಿಗೆಯ ಹಿಡಿತದ ವಿರುದ್ಧದ ಪ್ರತಿಭಟನೆ ಇದು.

ಲೇಖಕರ ಮೇಲಿನ ಈ ಬಗೆಯ ಪ್ರಾಯೋಗಿಕ ಅಥವಾ ಸೈದ್ಧಾಂತಿಕ ಒತ್ತಡಕ್ಕೂ 'ಬದ್ಧತೆ'ಗೂ ಅವಶ್ಯಕವಾಗಿ ಏನಾದರೂ ಸಂಬಂಧವುಂಟೇ ? 'ಬದ್ಧತೆ' ಯೆನ್ನುವುದಕ್ಕೆ ಅರ್ಥವಿರುವುದಾದರೆ, ಅದು ಖಂಡಿತವಾಗಿಯೂ ಪ್ರಜ್ಞಾಪೂರ್ವಕ ವಾದ, ಕ್ರಿಯಾತ್ಮಕವಾದ ಹಾಗೂ ಮುಕ್ತವಾದ ಸಂಗತಿಯಾಗಿರುತ್ತದೆ. ಅಂದರೆ, ನಿಲುವಿನ ಬಗ್ಗೆ ಅದೊಂದು ಖಚಿತವಾದ ಆಯ್ಕೆ. ಯಾವುವೇ ವಿಚಾರವನ್ನಾದರೂ ಒಬ್ಬ ಸ್ವಯಂಪ್ರತಿಷ್ಠಿಯುವನು ಅಥವಾ ಅಧಿಕಾರಯುತವಾದ ನಿಯಂತ್ರಕನು ದುರುಪ ಯೋಗಪಡಿಸಿಕೊಳ್ಳಲು ಶಕ್ಯವಿದೆ. ಉದಾಹರಣೆಗೆ, 'ಪ್ರಕಾಶನ ಸ್ವಾತಂತ್ರ್ಯ'ವನ್ನು 'ಲಾಭಗಳಿಕೆಗಾಗಿ ಪ್ರಕಾಶನ ಸ್ವಾತಂತ್ರ್ಯ'ವೆಂದು ವ್ಯಾವಹಾರಿಕವಾಗಿ ವ್ಯಾಖ್ಯಾನಿಸ ಬಹುದು. ಚಾರಿತ್ರಿಕ ವಿಶ್ಲೇಷಣೆಯಿಂದ ತಿಳಿದು ಬರುವಂತೆ ಬದ್ಧತೆ ಮತ್ತು ಪಕ್ಷ ವಹಿಸುವಿಕೆಗಳು ಸದಾ ಕಾಲದಲ್ಲೂ ರೂಢಿಯಲ್ಲಿದ್ದುವು ; ಪ್ರಸ್ತುತ ಅದು ಸಮಕಾಲೀನ ಪದ್ಧತಿಯಾಗಿ ಸಂಕ್ರಮಿಸಿದೆ. ಈಗ ಮೂಲಭೂತವಾದ ಪ್ರಶ್ನೆ ಹೀಗೆ ಉದ್ಭವಿಸು ತ್ತದೆ ; ಚಾರಿತ್ರಿಕ ವಿಶ್ಲೇಷಣೆಯ ದೃಷ್ಟಿಯಿಂದ ಗಮನಿಸಿದರೆ ಹಿಂದಿನ ಯಾವುದೇ ಬರವಣಿಗೆಯಲ್ಲಿ ಎಲ್ಲ ಬಗೆಯ ಪಕ್ಷವಹಿಸುವಿಕೆ ಮತ್ತು ಬದ್ಧತೆಯನ್ನು ಕಾಣಬಹು ದಾಗಿದೆ. ಆದರೆ ಸಮಕಾಲೀನ ಸಂದರ್ಭದಲ್ಲಿ ಈ ರೀತಿಯ ಪಕ್ಷವಹಿಸುವಿಕೆ ಮತ್ತು ಬದ್ಧತೆಯನ್ನು ತೀವ್ರವಾಗಿ ಪ್ರಶ್ನಿಸಲಾಗುತ್ತದೆ. ಈ ರೀತಿಯ ಪ್ರಶ್ನಾತ್ಮಕ ದೃಷ್ಟಿಯು ಕಳವಳಕಾರಿಯಾದುದೆಂದೇ ಹೇಳಬೇಕು. ಪ್ರಸ್ತುತ ಚಾಲ್ತಿಯಲ್ಲಿರದ ಎಷ್ಟೋ ನಿಲುವುಗಳನ್ನು ಸಹಿಸಬಹುದು, ಸಮರ್ಥಿಸಬಹುದು. ಅನುಕೂಲಕ್ಕೆ ತಕ್ಕಂತೆ ಮಾರ್ಕ್ಸ್‌ವಾದವನ್ನು ಕೇವಲ ಚಾರಿತ್ರಿಕ ವಿಶ್ಲೇಷಣೆಗೆ ಬಳಸಿಕೊಳ್ಳಲಾಗುವ ಪ್ರವೃತ್ತಿಯು ನಮ್ಮಲ್ಲಿ ಕಾಣಸಿಗುತ್ತದೆ. ಇದನ್ನು ಶೈಕ್ಷಣಿಕ ವ್ಯಾಸಂಗಗಳಲ್ಲಿ ಈಗಾಗಲೇ ಅಳವಡಿಸಿಕೊಳ್ಳುತ್ತಿರುವ ಸೂಚನೆಗಳಿವೆ. ಮಾರ್ಕ್ಸ್‌ವಾದದ ಕೇಂದ್ರ ತತ್ತ್ವವಾದ ಸಿದ್ಧಾಂತ ಮತ್ತು ಪ್ರಯೋಗದ ನಡುವಣ ಸಂಬಂದಕ್ಕೆ ಒತ್ತು ಕೊಡುವು ದನ್ನು ಮಾರ್ಕ್ಸ್‌ವಾದದಲ್ಲಿ ಗಣನೀಯ ಪ್ರಮಾಣದಲ್ಲಿ ನೋಡುತ್ತೇವೆ. ಬದ್ಧತೆಯ ವಿಷಯದಲ್ಲಿ ಮತ್ತು ಅದರಷ್ಟೇ ವಿವಾದಾಸ್ಪದವಾದ ಪಕ್ಷ ವಹಿಸುವಿಕೆಯಲ್ಲಿ ಇದು ಹೇಗೆ ಕಾರ್ಯಗತವಾಗುತ್ತದೆ.

'ನಿರ್ದಿಷ್ಟ ಧೋರಣೆಯನ್ನುಳ್ಳ ಸಾಹಿತ್ಯ'ವನ್ನು ಕುರಿತಂತೆ ಮಾರ್ಕ್ಸ್ ಮತ್ತು ಏಂಗೆಲ್ಸರು ನಿಷ್ಕೃಷ್ಟವಾದ ಕೆಲವು ವಿಷಯಗಳನ್ನು ಹೇಳಿದ್ದಾರೆ :

"ಓದುಗರ ಗಮನವನ್ನು ತಮ್ಮತ್ತ ಸೆಳೆಯಲು ರಾಜಕೀಯ ಘೋಷಣೆಗಳನ್ನು ತಮ್ಮ ಕೃತಿಗಳಲ್ಲಿ ತುರುಕಿ ತಮ್ಮ ಜಾಣ್ಮೆಯನ್ನು ಪ್ರಕಟಿಸುವ ಹಂಬಲ ಕೆಲವರಿಗಿದೆ. ವಿಶೇಷವಾಗಿ ಕೆಳ ದರ್ಜೆಯ ಲೇಖಕರಲ್ಲಿ ಇದು ಹೆಚ್ಚು ಹೆಚ್ಚು ಹವ್ಯಾಸವಾಗಿ ಹೋಗಿದೆ. ಕಾವ್ಯ, ಕಾದಂಬರಿ, ವಿಮರ್ಶೆ, ನಾಟಕ–ಪ್ರತಿಯೊಂದು ಸಾಹಿತ್ಯ ಕೃತಿಯೂ

ಈ 'ಪಕ್ಷಪಾತಿಸುಪಿಕೆಯು ಘೋರಣೆ'ಯಿಂದ ಕೂಡಿದ್ದಾಗಿದೆ. (ಏಂಗೆಲ್ಸ್, ಅಕ್ಟೋಬರ್ 1851, Cit, MEI, 119).

"....ಯೋಗ್ಯತೆಯಿಲ್ಲದ ಬರಹಗಾರನೊಬ್ಬ ಪ್ರತಿಭೆಯ ಕೊರತೆಯಿಂದಾಗಿ ತನ್ನ ದೃಢವಾದ ನಂಬಿಕೆಗಳನ್ನು ತೋರಿಸಲು ಪಕ್ಷಪಾತ ಪ್ರವೃತ್ತಿಯಿಂದ ಕೂಡಿದ ಕಳಪೆ ಕೃತಿಯನ್ನು ಸೃಷ್ಟಿಸುವ ಅತಿರೇಕಕ್ಕೆ ಹೋಗುವುದು ಮುಖ್ಯವಾಗಿ ಹೆಚ್ಚು ಓದುಗರನ್ನು ಮೆಚ್ಚಿಸಲೆಂದೇ." (ಏಂಗೆಲ್ಸ್. ಆಗಸ್ಟ್ 1881, Cit. MEL, 123).

ಮೇಲಿನ ಮಾತುಗಳ ತೀಕ್ಷ್ಣತೆಯನ್ನು ಬದಿಗೆ ಸರಿಸಿ ಗಮನಿಸಿದರೆ ಈ ವ್ಯಾಖ್ಯಾನದ ಮುಖ್ಯ ಅರ್ಥ ಸ್ಪಷ್ಟವಾಗುತ್ತದೆ: "ಅದೆಂದರೆ ಸಮಾಜವಾದಿ ಸಾಹಿತ್ಯದಲ್ಲೆಲ್ಲಾ ಅತ್ಯಂತ ಹೊಲಸಾದ ಬೂಸಾ ಸಾಹಿತ್ಯವೆನಿಸಿಕೊಳ್ಳುವ" ಯೂಜಿನ್ ಸ್ಯೂನ ಸಾಹಿತ್ಯ ಹಾಗೂ ಅಂತಹ ಇತರೇ ಸಾಹಿತ್ಯದಲ್ಲಿ ಕೇವಲ ರಾಜಕೀಯ ಅಭಿಪ್ರಾಯಗಳು ಹೇಳಿಕೆಗಳು ಮತ್ತು ಅಸಂಬದ್ಧವಾದ ನೈತಿಕ ಪ್ರತಿಕ್ರಿಯೆಗಳನ್ನು ಮಾರ್ಕ್ಸ್ ಗುರುತಿಸಿದಂತೆ ತೋರುತ್ತದೆ. (ದಿ ಹೋಲಿ ಫ್ಯಾಮಿಲಿ. 1995, Cit. MEL, 119). ಯಾವುದೇ ಸಾಹಿತ್ಯದಲ್ಲಿ ನಿರೂಪಿತವಾದ ಅಗಾಧ ಸಾಮಾಜಿಕ ಮತ್ತು ಚಾರಿತ್ರಿಕ ವಿಮರ್ಶೆ ಮತ್ತು ವಿಶ್ಲೇಷಣೆಯನ್ನು ಮೆಚ್ಚುವ ಮಾರ್ಕ್ಸ್ ಪ್ರಕಾರ ಉಳಿದ ಲೇಖಕರಿಗೂ ಯೂಜಿನ್ ಸ್ಯೂನಂತಹವರಿಗೂ ಬಹಳ ವ್ಯತ್ಯಾಸವಿದೆ. ಅದು ಬಾಲ್ಜಾಕ್‌ನಲ್ಲಿರುವಂತೆ ಅವ್ಯಕ್ತವಾದದ್ದಿರಬಹುದು ಅಥವಾ ಮಾರ್ಕ್ಸ್‌ನ ಮಾತುಗಳಲ್ಲೇ ಹೇಳುವುದಾದರೆ 'ಈಗಿನ ಇಂಗ್ಲೆಂಡಿನ ಕಥಾ ಸಾಹಿತ್ಯ ರಚನೆಯ ಸಾಹಿತಿ ಮಿತ್ರರ ಕೃತಿಗಳಲ್ಲಿರುವಂತೆ ವ್ಯಕ್ತವಾದದ್ದಿರಬಹುದು.' ಅವನು ಡಿಕೆನ್ಸ್. ಥ್ಯಾಕರೆ. ಮಿಸ್ ಬ್ರಾಂಟೆ ಮತ್ತು ಮಿಸೆಸ್ ಗ್ಯಾಸ್‌ಕೆಲ್–ಇವರುಗಳನ್ನು ಉದಾಹರಿಸುತ್ತಾ,

"ಕಣ್ಣಿಗೆ ಕಟ್ಟುವಂತಹ ಮತ್ತು ದಕ್ಷವಾದ ಇವರ ಬರವಣಿಗೆಗಳು ಜಗತ್ತನ್ನು ಕುರಿತಂತಹ ರಾಜಕೀಯವಾದ ಮತ್ತು ಸಾಮಾಜಿಕವಾದ ಸತ್ಯವನ್ನು ಪ್ರಕಟಿಸುತ್ತವೆ. ಯಾವ ರಾಜಕಾರಣಿಯೂ, ಪ್ರಚಾರಕನೂ, ನೀತಿಜ್ಞನೂ ಪ್ರಕಟಿಸಿರುವುದಕ್ಕಿಂತ ಹೆಚ್ಚಿನ ಸತ್ಯವು ಇವರ ಬರವಣಿಗೆಗಳಲ್ಲಿ ಇವೆ." (ದಿ ಇಂಗ್ಲಿಷ್ ಮಿಡ್ಲ್ ಕ್ಲಾಸ್, 184, Cit. MEL, 105.)

ಲಸಾಲ್‌ನ 'ಫ್ರಾಂಜ್ ಫಾನ್ ಸಿಕಿಂಗೆನ್' (MEL, 105–11) ನಾಟಕವನ್ನು ಕುರಿತಂತೆ ಮಾರ್ಕ್ಸ್ ಮತ್ತು ಏಂಗೆಲ್ಸ್‌ರ ಚರ್ಚೆಯು ಉಪಯುಕ್ತವಾದುದು. ಅತ್ಯಂತ ಸರಳೀಕೃತ ತೀರ್ಮಾನಗಳಿಗೆ ಬರುವುದರ ಬದಲು ಅಗಾಧವಾದ ಸಾಮಾಜಿಕ ಮತ್ತು ಚಾರಿತ್ರಿಕ ಬಿಕ್ಕಟ್ಟನ್ನು ಕುರಿತಂತಹ ತಿಳುವಳಿಕೆಗೆ ಇಲ್ಲಿ ಒತ್ತುಕೊಡಲಾಗಿದೆ. ಇಂತಹದೊಂದು ತಿಳುವಳಿಕೆ ಕಲಾತ್ಮಕವಾಗಿ ಅವಶ್ಯಕವಷ್ಟೇ ಅಲ್ಲದೆ ಇದಕ್ಕೂ ಸಾಮಾಜಿಕ ಮತ್ತು ಚಾರಿತ್ರಿಕ (ರಾಜಕೀಯವನ್ನೂ ಒಳಗೊಂಡ) ತಿಳುವಳಿಕೆಗೆ ತೀವ್ರವಾದ ಸಂಬಂಧವಿದೆಯೆಂಬುದರ ವಿಷಯದಲ್ಲಿ ಯಾರೂ ಶಂಕೆ ವ್ಯಕ್ತಪಡಿಸುವುದಿಲ್ಲ. ಅದ್ದ

ರಿಂದಲೇ ಪಕ್ಷಪಾತ ದೃಷ್ಟಿಯು ಸಾಹಿತ್ಯದ ನಿರೂಪಣೆಯು 'ಬದ್ಧತೆ'ಯ ವಿರೋಧಿಯಲ್ಲ ; ಅದು ಬದ್ಧತೆಯನ್ನು ಹೆಚ್ಚು ಗಂಭೀರವಾಗಿ ಪರಿಗಣಿಸುತ್ತದೆ. ಆ ಬದ್ಧತೆ ಸಾಮಾಜಿಕ ವಾಸ್ತವತೆಯನ್ನು ಕುರಿತದ್ದಾಗಿರುತ್ತದೆ. ಬದ್ಧತೆಯನ್ನು ಕುರಿತ ವಿವಾದ ಈ ಸಾಮಾನ್ಯ ಹಂತದಲ್ಲೇ ಉಳಿಯುವುದಿಲ್ಲ. ಅದು ವಿಭಿನ್ನ ಸಾಮಾಜಿಕ ಮತ್ತು ಚಾರಿತ್ರಿಕ ಸನ್ನಿವೇಶಗಳಲ್ಲಿ. ವಿಶೇಷವಾಗಿ ಬದ್ಧತೆಯು ಪ್ರಾಯೋಗಿಕವಾದಾಗ ಮತ್ತು ಕಾರ್ಯಕ್ರಮಗಳೊಂದಿಗೆ ಕೂಡಿದಾಗ, ಹೆಚ್ಚು ಕ್ರಿಯಾಶೀಲವಾದದ್ದುಂಟು. ನಿದರ್ಶನವೊಂದನ್ನು ಹೇಳುವುದಾದರೆ. ಬದ್ಧತೆಯನ್ನು ಕುರಿತ ಸಾರ್ತೆಯ ತರ್ಕ ಯೂರೋಪಿನ ಯುದ್ಧಾನಂತರದ ನಿರ್ದಿಷ್ಟ ಪರಿಸ್ಥಿತಿಯಲ್ಲಿ ಬದ್ಧತೆಯ ಅನಿವಾರ್ಯತೆಯನ್ನು ಆಧರಿಸಿತ್ತು.

"ಸಾಹಿತ್ಯವೇ ಲೇಖಕನ ಸರ್ವಸ್ವವೂ ಆಗದಿದ್ದಾಗ ಅದಕ್ಕೆ ಬೆಲೆಯಿಲ್ಲ. ನನ್ನ ದೃಷ್ಟಿಯಲ್ಲಿ 'ಬದ್ಧತೆ'ಯೆನ್ನುವುದು ಇದು. ಸಾಹಿತ್ಯವನ್ನು ಕೇವಲ ಮುಗ್ಧತೆಗ ಅಥವಾ ಕೇವಲ ಹಾಡುಗಳಿಗೆ ಇಳಿಸಿಬಿಟ್ಟರೆ ಈ ಬದ್ಧತೆಯು ಸೋರಗುತ್ತದೆ. ಮನುಷ್ಯ ಹಾಗೂ ಸಮಾಜದ ಎಲ್ಲ ಹಂತಗಳಲ್ಲೂ ಬರವಣಿಗೆಯ ಪ್ರತಿಯೊಂದು ವಾಕ್ಯವೂ ಪ್ರತಿಧ್ವನಿಸದಿದ್ದರೆ ಅಂತಹ ಬರವಣಿಗೆಗೆ ಅರ್ಥವಿಲ್ಲ. ಸಾಹಿತ್ಯದಲ್ಲಿ ಯುಗದ ವೈಶಿಷ್ಟ್ಯವು ಸಾರವತ್ತಾಗಿ ಮೈಗೂಡಿರದಿದ್ದರೆ ಯುಗದ ಸಾಹಿತ್ಯವೆನ್ನುವುದರ ಅರ್ಥವಾದರೂ ಏನು ? (ದಿ ಪರ್ಪಸಸ್ ಆಫ್ ರೈಟಿಂಗ್, 1960, ಇನ್ ಸಾರ್ತ್ರೆ (1974), 13-14).

ಅರ್ಥದ್ಯೋತಕದ ಬಗ್ಗೆ ಸದಾ ಮಗ್ನನಾಗಿರುವ ಲೇಖಕನು 'ಪ್ರಕಟಿಸುವ', 'ಪ್ರದರ್ಶಿಸುವ', 'ಪ್ರತಿನಿಧಿಸುವ' ಕೆಲಸ ಮಾಡುತ್ತಾನೆ. ನಂತರ ಇದರ ಓದುಗರಾದರೋ ಮುಖಾಮುಖಿಯಾಗಿ ನೋಡುವ ಮತ್ತು ತಮ್ಮಿಷ್ಟದಂತೆ ಕಾರ್ಯಪ್ರವೃತ್ತರಾಗುವ ಕ್ರಿಯೆಯಲ್ಲಿ ತೊಡಗಿರುತ್ತಾರೆ. (ಅದೇ, 25) 'ಶುದ್ಧಕಲೆ'ಯ ಪರಿಕಲ್ಪನೆಯ ವಿರುದ್ಧ ಸಾರ್ತ್ರೆ ಯಾವಾಗಲೂ ವಾದ ಹೂಡುತ್ತಿರುತ್ತಾರೆ. ಅವರ ಅಭಿಪ್ರಾಯದಲ್ಲಿ ಸಾಹಿತ್ಯ ಗಂಭೀರವಾಗಿರುವಾಗ (ಎಷ್ಟೇ ಅವ್ಯಕ್ತವಾಗಿದ್ದರೂ) ಅದು ಸದಾ ಸಾಮಾಜಿಕ ಬದ್ಧತೆಯ ಸ್ವರೂಪವನ್ನು ಪಡೆಯುತ್ತದೆ ; ಆದರೆ ಲಘುವಾಗಿರುವಾಗ ಸರಳವಾಗಿ ಅಲೆಯಂತೆ ತೇಲಿಹೋಗುತ್ತದೆ. ಅದೇ ಸಂದರ್ಭದಲ್ಲಿ ಗದ್ಯ ಮತ್ತು ಪದ್ಯಗಳ ನಡುವೆ ಕೃತಕ ವರ್ಗೀಕರಣವನ್ನು ಮಾಡುವುದರ ಮೂಲಕ ಆತ ಇದನ್ನು ಸಂಕೀರ್ಣಗೊಳಿಸಿದ್ದಾನೆ. ಅವನ ಅಭಿಪ್ರಾಯದಲ್ಲಿ ಗದ್ಯದಲ್ಲಿ ಮಾತ್ರ ಲೇಖಕ ತನ್ನ ಕೃತಿಯಲ್ಲಿ ಮೂಡಿಸುವ 'ಅರ್ಥ' ಅನಿವಾರ್ಯವಾಗಿ ಬದ್ಧತೆಯಿಂದ ಕೂಡಿರುತ್ತದೆ. ಅದೇ ಕವಿಯು ಕಾವ್ಯದಲ್ಲಾದರೋ ಇದನ್ನು ಮೀರಿದ ಆಯಾಮ ಕಂಡುಬರುತ್ತದೆ. ಅಲ್ಲಿ ಅರ್ಥ ಮತ್ತು ಭಾವಗಳು ಒಂದಕ್ಕೊಂದು ಮೂರ್ತವಾದ ದ್ರವ್ಯವಾಗಿ ಪರಿಣಮಿಸಿರುತ್ತವೆ. ಸಾರ್ತ್ರೆಯವರ ಈ ಅಭಿಪ್ರಾಯವನ್ನು ಕುರಿತ ಅಡೋರ್ನೋರವರ ವಿಮರ್ಶೆ ಒಪ್ಪಿಗೆಗೆ ಅರ್ಹವಾದದ್ದು. ಸಾಹಿತ್ಯವನ್ನು ಗದ್ಯ ಮತ್ತು ಪದ್ಯಗಳೆಂದು ಕೃತಕವಾಗಿ

ಬೇರ್ಪಡಿಸುವುದು ಕಾವ್ಯಕ್ಕೆಂದೇ ಮೀಸಲಾಗಿರುವ ವಲಯಕ್ಕೆ ಹೊರತಾದ ಬರವಣಿಗೆಯನ್ನು ಕೇವಲ ಪರಿಕಲ್ಪನೆಯ ಹಂತದಲ್ಲಿಯೇ ನಿಲ್ಲಿಸುತ್ತದೆ. ಈ ಕಾರಣದಿಂದಾಗಿ ಬದ್ಧತೆಗೆ ಸಂಬಂಧಿಸಿದ ಎಲ್ಲ ಪ್ರಶ್ನೆಗಳೂ ಬದಿಗೆ ಸರಿಯುತ್ತವೆ. (ಇಂತಹ ಪ್ರಶ್ನೆಗಳಿಗೆ ಸಮಾಧಾನ ನೀಡದಿರುವುದು ಬಹುಶಃ ಸ್ವಾತಂತ್ರ್ಯಕ್ಕೆ ತಮ್ಮ ಬದ್ಧತೆಯನ್ನು ತೋರಿಸುವ ಸಾರ್ತ್ರೆಯ ಶೈಲಿ ಇದಾಗಿರಬಹುದು !). ಮುಂದುವರಿದು ಅಡೋರ್ನೋ ತರ್ಕಿಸುವಂತೆ ಈ ಅತಿ ಸಾಮಾನ್ಯ ನಿರ್ವಚನೆಯಲ್ಲೂ 'ಎಲ್ಲಿಯವರೆಗೆ ಬದ್ಧತೆಯನ್ನು ಅಗ್ಗದ ಪ್ರಚಾರದ ಹಂತಕ್ಕಿಳಿಸುವುದಿಲ್ಲವೋ' ಅಲ್ಲಿಯವರೆಗೆ ಬದ್ಧತೆಯೆನ್ನುವುದು ರಾಜಕೀಯವಾಗಿ ಬಹುಮುಖವಾಗಿ ಉಳಿದಿರುತ್ತದೆ. ('ಕಮಿಟ್‌ಮೆಂಟ್', ನ್ಯೂ ಲೆಫ್ಟ್ ರೆವ್ಯೂ, 1974, 87–8).

ಇವುಗಳೆಲ್ಲಾ ಮಾರ್ಕ್ಸ್‌ವಾದಿ ಚಿಂತನೆಯ ಒಂದು ವಿಭಾಗದ ಲಕ್ಷಣಗಳು ಮತ್ತು ಸಡಿಲವಾದ ಸೂತ್ರಗಳೂ ಆಗಿವೆ. ಮೂಲ ಆಶಯದ ದೃಷ್ಟಿಯಿಂದ ಹೇಳುವುದಾದರೆ ಮಾರ್ಕ್ಸ್ ಮತ್ತು ಏಂಗೆಲ್ಸ್‌ರು ನಿರೂಪಿಸಿದ ತತ್ವಗಳಿಗೆ ಇದು ಅತೀ ಹತ್ತಿರವಾದುದು. ಇದಕ್ಕಿಂತ ಜಟಿಲವಾದ ಪ್ರಶ್ನೆಗಳು ಹಾಗೂ ಹೆಚ್ಚು ನಿಖರವಾದ ಸೂತ್ರಗಳು ಮುಕ್ತವಾದ ಕ್ರಾಂತಿಕಾರಿ ಆಚರಣೆಗಳ ನೇರವಾದ ಸಂಬಂಧದೊಂದಿಗೆ ಉದ್ಭವಿಸಿದುವು. ರಷ್ಯ ಹಾಗೂ ಚೀನಾದಲ್ಲಿ ನಡೆದ ಕ್ರಾಂತಿಗಳ ಸಂಬಂಧದಲ್ಲಿ ಇದನ್ನು ಕಾಣಬಹುದಾಗಿದೆ. ಲೆನಿನ್ ಮತ್ತು ಟ್ರಾಟ್‌ಸ್ಕಿ—ಇಬ್ಬರ ದೃಷ್ಟಿಯಲ್ಲೂ ಲೇಖಕರು ಉಳಿದ ಕಲಾವಿದರಂತೆ ಸಂಪೂರ್ಣವಾಗಿ ಅವರದೇ ರೀತಿಯಲ್ಲಿ ಕೆಲಸ ಮಾಡಲು ಸರ್ವಸ್ವತಂತ್ರರು : "ಅವನ ಆದರ್ಶಗಳಿಗನುಗುಣವಾಗಿ ಅನಿರ್ಬಂಧಿತ ಸ್ವಾತಂತ್ರ್ಯದಿಂದ ಸೃಷ್ಟಿಸಲು" (ಲೆನಿನ್ ಸಂಕಲಿತ ಕೃತಿಗಳು (1960) iv, 2, 114)—ಎನ್ನುವುದು ಲೆನಿನ್‌ನ ಅಭಿಪ್ರಾಯವಾದರೆ, ಟ್ರಾಟ್‌ಸ್ಕಿಯು "ಕಲೆಯು ತನ್ನ ಸ್ವಯಂ ನಿರ್ಧರಿತ ಮಾರ್ಗದಲ್ಲಿ ಸಾಗಲು ಯಾವುದೇ ಅಡಚಣೆಯಿಲ್ಲದಂತಹ ಮುಕ್ತಸ್ವಾತಂತ್ರ್ಯವಿರುವಂತೆ" (ಟ್ರಾಟ್‌ಸ್ಕಿ, ಸಾಹಿತ್ಯ ಮತ್ತು ಕ್ರಾಂತಿ, 242) ಇರಬೇಕೆಂದು ಬಯಸುತ್ತಾನೆ. ಆದರೆ ಅವರಿಬ್ಬರೂ ಇದಕ್ಕೆ ಸಂಬಂಧಿಸಿದ ಪರಿಮಿತಿಗಳನ್ನು ಸ್ಪಷ್ಟವಾಗಿ ಗುರುತಿಸಿಕೊಂಡಿದ್ದರು ; ಕ್ರಾಂತಿಯ ಸಂದರ್ಭದಲ್ಲಿ ಸಾಂಸ್ಕೃತಿಕ ನೀತಿಯ ಬಗ್ಗೆ ಮಾತನಾಡುತ್ತಾ ಲೆನಿನ್, "ಗೊಂದಲಗಳು ಯದ್ವಾ ತದ್ವಾ ಬೆಳೆಯಗೊಡದಂತೆ ಎಚ್ಚರಿಕೆ ವಹಿಸಬೇಕು"-ಎಂದು ಅಭಿಪ್ರಾಯಪಟ್ಟರೆ, ಕಲೆಯು ಸ್ವಯಂ ನಿರ್ಧರಿತ ಮಾರ್ಗವನ್ನು ನಿರ್ಧರಿಸುವಾಗ "ಕ್ರಾಂತಿಯ ಪರ ಅಥವಾ ವಿರೋಧವಾಗಿರುವಲ್ಲಿ ನಿಷ್ಕೃಷ್ಟವಾದ ನಿಲುವು ತಾಳುವುದು" ಎಂಬ ಆಧಾರವನ್ನು ಟ್ರಾಟ್‌ಸ್ಕಿ ಸೂಚಿಸಿದ. ಲೆನಿನ್ ಮತ್ತು ಟ್ರಾಟ್‌ಸ್ಕಿಯವರ ಅಭಿಪ್ರಾಯಗಳನ್ನು ಅರ್ಥೈಸುವಾಗ ಅವರು ಸೂಚಿಸಿರುವ ಪರಿಮಿತಿಗಳನ್ನು ಗಮನಿಸಬೇಕೇ ಹೊರತು ಕೇವಲ ಕೆಲವು ಉದ್ಧೃತ ಹೇಳಿಕೆಗಳನ್ನಲ್ಲ. ಇದರಿಂದ 'ಬದ್ಧತೆ'ಯನ್ನು ಕುರಿತ ಒಂದು ವ್ಯಾಖ್ಯೆ ಬಲಗೊಂಡಿತು. ಪರಿಮಿತಿಯಲ್ಲಿ ಸೂಚಿಸಲಾಗಿದ್ದ ಅಂಶದಿಂದಾಗಿ ಈ ರೀತಿ ಉಪಯುಕ್ತವಾದದ್ದು ಮತ್ತು ಬಲಗೊಂಡದ್ದು ಕ್ರಮೇಣ

ಸಾಮಾನ್ಯವಾದ ಸಾಂಸ್ಕೃತಿಕ ನೀತಿಯ ಹಂತದ ವಿಸ್ತರಣೆಯಾಗಿ, ಸಾಹಿತ್ಯದ ರೂಪ ಮತ್ತು ವಸ್ತುಗಳು ಬದ್ಧತೆಯಿಂದ ಕೂಡಿದ್ದು ಅಥವಾ ಸಮಾಜವಾದಿ ನಿಲುವು (ಈಗ ಬಳಕೆಯಲ್ಲಿರುವಂತೆ ಎರಡೂ ಸಮಾನಾರ್ಥ ಪದಗಳು)—ಎಂದು ರೂಪುಗೊಂಡಿತು. ಆಗ ರಚಿತವಾಗುತ್ತಿದ್ದಂತಹ ಎಲ್ಲ ಕೃತಿಗಳೂ 'ಪಕ್ಷಪಾತದೃಷ್ಟಿಯ ಸಾಹಿತ್ಯ'ವೇನೂ ಆಗಿರಲಿಲ್ಲ; ಅಥವಾ ಅಷ್ಟಕ್ಕೆ ಅವು ಸೀಮಿತವೂ ಆಗಿರಲಿಲ್ಲ. ಆದರೆ ಅಂದು ವ್ಯಾಪಕ ವಾಗಿ ಕಂಡುಬರುತ್ತಿದ್ದ ತರ್ಕಸರಣಿಯು ಮಾತ್ರ ಈ ರೀತಿಯದಾಗಿತ್ತು. ರಾಜಕೀಯ ಅಭಿಪ್ರಾಯದ ಅರ್ಥದಲ್ಲಿ ಬಳಸಲಾಗುತ್ತಿದ್ದ ಬದ್ಧತೆಯು ಹೆಚ್ಚು ಹೆಚ್ಚು ಸೂಕ್ಷ್ಮ ವಾದ ವ್ಯಾಖ್ಯಾನಗಳಿಗೆ (ಕೆಲವೊಮ್ಮೆ ವಾದ ಮತ್ತು ಆಡಳಿತ ದೃಷ್ಟಿಗಳಿಂದ ಬೆಸೆಯ ಲ್ಪಟ್ಟಿದ್ದು) ಗುರಿಯಾಯಿತು. ಮಾನವತೆಯ ಹಿತದ ಮೇಲಿದ್ದ ಒತ್ತು ಕ್ರಮೇಣ ಜನತೆಯ ಹಿತಕ್ಕೆ ಎಂದಾಯಿತು. ಜನತೆಯ ಹಿತವೆಂದರೆ ಕ್ರಾಂತಿ; ಅಂದರೆ ಪಕ್ಷ— ಕಡೆಗೆ ಆಯಾ ಕಾಲದಲ್ಲಿ ಪಕ್ಷವು ತಳೆಯುವ, ಬದಲಾಗುತ್ತಾ ಹೋಗುವ ನಿಲುವು,– ಇದು ಅಂದು ವ್ಯಾಪಕವಾಗಿ ಕಾಣಬರುತ್ತಿದ್ದ ತರ್ಕ ಸರಣಿಯಾಗಿತ್ತು.

ಮಾರ್ಕ್ಸ್‌ವಾದಿ ಚಿಂತನೆಯಲ್ಲಿ ಈ ರೀತಿ ಹುಟ್ಟಿಕೊಂಡ ಬಿಕ್ಕಟ್ಟು ಇಂದಿಗೂ ಬಗೆಹರಿದಿಲ್ಲ. ಇಂತಹ ವಾಗ್ವಾದದ ಮಧ್ಯೆ ಮಾವೋ ತ್ಸೆ ತುಂಗ್ ಅವರು ಮಂಡಿಸಿದ ತರ್ಕ ಬಹು ಉಪಯುಕ್ತವಾದುದು: "ಆಡಳಿತ ಯಂತ್ರದ ವಿಧಿ ವಿಧಾನಗಳನ್ನು ಬಳಸಿಕೊಂಡು ಒಂದು ನಿರ್ದಿಷ್ಟ ಕಲೆಯ ಶೈಲಿಯನ್ನೋ ಅಥವಾ ತಾತ್ವಿಕ ಸಿದ್ಧಾಂತ ವನ್ನೋ, ಕಲೆ ಮತ್ತು ವಿಜ್ಞಾನದ ಮೇಲೆ ಹೇರುವುದರಿಂದಾಗಲೀ ಅಥವಾ ನಿಷೇಧಿಸು ವುದರಿಂದಾಗಲೀ ಅವುಗಳ ಬೆಳವಣಿಗೆ ಕುಂಠಿತವಾಗುತ್ತದೆ. (ಮಾವೋ ತ್ಸೆ ತುಂಗ್, 1960, 137). ಆದರೆ ಇದು ಉದಾರವಾದಿ ಧೋರಣೆಯು ಮರುಕಳಿಸಿದಂತೇನೂ ಅಲ್ಲ. ಬದಲಾಗಿ ಅದು ಹೊಸ ಮತ್ತು ಹಳೆಯ ಬಗೆಗಳ ಪ್ರಜ್ಞೆಗಳ ನಡುವೆ ಹಾಗೂ ಹೊಸ ಮತ್ತು ಹಳೆಯ ಬಗೆಯ ಕೃತಿಗಳ ನಡುವೆ ಆಗ್ಗೆ ಇದ್ದ ಮುಕ್ತ ಹೋರಾಟದ ವಾಸ್ತವತೆಯನ್ನು ಒತ್ತಿ ಹೇಳುವುದು. ಅದೂ ಕೂಡ ಕೆಲವೊಂದು ಪರಿಮಿತಿಗಳಿಗೆ ಒಳಪಟ್ಟಿತ್ತು: "ಖಂಡಿತವಾಗಿಯೂ ಪ್ರತಿಕ್ರಾಂತಿಕಾರಿಗಳು ಮತ್ತು ಸಮಾಜವಾದದ ಧ್ಯೇಯವನ್ನು ಬುಡಮೇಲು ಮಾಡುವಂತಹವರೇ ಮುಂತಾದವರಿಗೆ ಸಂಬಂಧಿಸಿದಂತೆ ವಿಷಯ ಬಹಳ ಸರಳವಾದುದು—ಅವರಿಗೆ ವಾಕ್ ಸ್ವಾತಂತ್ರ್ಯ ಸಂಪೂರ್ಣವಾಗಿ ನಿಷಿದ್ಧ." (ಅದೇ. 141). ಮೊದ ಮೊದಲು ಕ್ರಾಂತಿಕಾರಿ ಸಮಾಜದ ಬರವಣಿಗೆಗೆ ಇಂತಹುದೇ ಶೈಲಿ ಇರಬೇಕೆಂದು ಯಾರೂ ಸೂತ್ರೀಕರಿಸಿರಲಿಲ್ಲ. 'ಮಾರ್ಕ್ಸ್‌ವಾದವು ಸಾಹಿತ್ಯ ದೃಷ್ಟಿಯಲ್ಲಿ ವಾಸ್ತವತೆ ಮತ್ತು ಕಲಾತ್ಮಕತೆಗೆ ಆದ್ಯತೆ ಕೊಡುತ್ತದೆಯೇ ವಿನಃ ಅವುಗಳ ಬದಲಾಗಿ ಬೇರೇನನ್ನೋ ಸ್ಥಾಪಿಸುವುದಿಲ್ಲ.' (ಅದೇ, 117) 'ಜನ ಸಾಮಾನ್ಯರು ಮತ್ತು ಶ್ರಮಜೀವಿಗಳಲ್ಲಿ ಆಳವಾಗಿ ಬೇರೂರಿರುವ' ಸೃಜನಶೀಲತೆಗೆ ಪ್ರಾಧಾನ್ಯತೆ ಕೊಡಲಾಗಿದ್ದು, ಅದಕ್ಕೆ ಬದಲಾಗಿ ಉಳಿದ ವರ್ಗಗಳ ಮತ್ತು ಸಿದ್ಧಾಂತ

ಗಳಿಂದ ಜನಿಸುವ ಸೃಜನಶೀಲತೆಯನ್ನು ವಿರೋಧಿಸಲಾಗುತ್ತದೆ. ಸಮಾಜವಾದಿ ಲೇಖಕನ ಕರ್ತವ್ಯವೇ ಇದು ಎಂಬುದನ್ನು ಮನಗಾಣಬೇಕು.

ಇದನ್ನು ಕಾರ್ಯತಃ ನಿರ್ವಹಿಸುವಲ್ಲಿ ಉಂಟಾಗುವ ಸಂಕೀರ್ಣತೆಯ ನಿರೂಪಣೆಯನ್ನು ಹಲವು ಮಟ್ಟಗಳಲ್ಲಿ ಬೆಳೆಸಲು ಸಾಧ್ಯವಿದೆ. ಆದರೆ, ಈ ಹಿಂದೆಯೇ ಪ್ರಚಲಿತವಿದ್ದ ಸಿದ್ಧಾಂತಗಳೊಂದಿಗೆ ಮಾವೋನ ತರ್ಕದಲ್ಲಿ ಸೈದ್ಧಾಂತಿಕವಾಗಿ ಕುತೂಹಲಕರವಾದ ಅಂಶವೇನೆಂದರೆ. ಜನತೆ ಮತ್ತು ಸಾಹಿತಿಗಳ ನಡುವಿನ ಸಾಮಾಜಿಕ ಸಂಬಂಧವನ್ನು ಕುರಿತ ಪರಿವರ್ತನೆಗೆ ಒತ್ತುಕೊಟ್ಟಿರುವುದು. ಇದನ್ನೇ ಇನ್ನೂ ಸರಳಗೊಳಿಸುವುದಾದರೆ, ಇದು ಕೆಲವು ತರಹದ ವಿಷಯ ಹಾಗೂ ಶೈಲಿಗಳಿಗೆ ಒತ್ತು ಕೊಡುವುದೇ ಆಗಿದೆ. ಇದೇ ಸಮಸ್ಯೆಯನ್ನು ಬದಲಿಸುವ ರೀತಿಯಲ್ಲಿ ಸಹ ಈ ತರ್ಕಸರಣಿಯನ್ನು ಬೆಳೆಸಲಾಗಿದೆ. ಇದುವರೆಗೆ ಪ್ರತ್ಯೇಕಗೊಳಿಸಲ್ಪಟ್ಟಿದ್ದ, ಸಾಮಾಜಿಕ ಮತ್ತು ರಾಜಕೀಯವಾಗಿ ದೂರೀಕರಿಸಿದ್ದ ಅಥವಾ ಪರಕೀಯತೆಯಿಂದೊಡಗೂಡಿದ್ದ ಬರಹಕ್ಕೆ ಒಂದು ರೀತಿಯ ತಿರುವು ಕೊಡುವುದೇ 'ಬದ್ಧತೆ'. ಮಾವೋ ಸೂಚಿಸುವ ಪರ್ಯಾಯವು ಸೈದ್ಧಾಂತಿಕವಾಗಿ ಮತ್ತು ಪ್ರಾಯೋಗಿಕವಾಗಿ ವಿಶೇಷವಾಗಿ ಒತ್ತು ಕೊಡುವುದು 'ತಾದಾತ್ಮ್ಯ'ಕ್ಕೆ. ತಾದಾತ್ಮ್ಯವೆಂದರೆ ಬರಹಗಾರರು ಸಾರ್ವಜನಿಕ ಜೀವನದೊಟ್ಟಿಗೆ ಮಿಲನಗೊಳ್ಳುವುದೆಂಬುದು ಅತಿ ಸಾಮಾನ್ಯವಾದ ಅರ್ಥ. ವೈಶಿಷ್ಟ್ಯಪೂರ್ಣ ಲೇಖಕನೊಬ್ಬ ಹೊಸ ಬಗೆಯ ಜನಪ್ರಿಯ ಸಾಹಿತ್ಯವನ್ನು ಸೃಷ್ಟಿಸುವಲ್ಲಿ ಬಹುಮಂದಿ ಇತರರ ಸಹಯೋಗವನ್ನು ಪಡೆದಿರುತ್ತಾನೆ. ತಾದಾತ್ಮ್ಯದ ಪರಿಕಲ್ಪನೆಯು ಈ ವಿಸ್ತೃತ ಅರ್ಥವನ್ನು ಒಳಗೊಂಡಿದೆ. ಕಾರ್ಯಾಚರಣೆಯಲ್ಲಿ ಇದು ಪ್ರಖರವಾದ ಸಂಕೀರ್ಣತೆಗೆ ಎಡೆಮಾಡಿಕೊಡುತ್ತದೆ, ನಿಜ ; ಆದರೂ ಸೈದ್ಧಾಂತಿಕವಾಗಿ ತೀವ್ರಗಾಮಿ ಮರುಚಿಂತನೆಯ ನೆಲೆ ಇರುವುದೇ ಇದರಲ್ಲಿ ಎನ್ನಬಹುದು.

ಬದ್ಧತೆಯನ್ನು ಕುರಿತ ಈವರೆಗಿನ ಬಹಳಷ್ಟು ಚರ್ಚೆಗಳು ರೂಢಿಯಲ್ಲಿ ಫಾರ್ಮಲಿಸಂ ('ಸಮಾಜವಾದಿ ಶೈಲಿ'ಯ ಅಮೂರ್ತ ವ್ಯಾಖ್ಯೆ ಅಥವಾ ಹೇರಿಕೆ) ಅಥವಾ ರೊಮ್ಯಾಂಟಿಸಿಸಂನ ಇತ್ತೀಚಿನ ಒಂದು ಆವೃತ್ತಿಯಂತೆ ಕಾಣಬಂದಿವೆ. – ಇವೆರಡರಲ್ಲೂ ಲೇಖಕ ಯಾವುದೋ ಒಂದು ಧ್ಯೇಯಕ್ಕಾಗಿ (ವ್ಯಕ್ತಿಯಾಗಿ ಮತ್ತು ಲೇಖಕನಾಗಿ ಅಥವಾ ಇವೆರಡರ ಯಾವುದಾದರೂ ಪ್ರಕಾರಗಳಿಗೆ) ಅತುಕೊಂಡಿರುವುದು ಸುಸ್ಪಷ್ಟ. ಯಾವುದೇ ಲೇಖಕನ ನೈಜವಾದ ಸಾಮಾಜಿಕ ಸಂಬಂಧಗಳು ಮತ್ತು ಅವನ ಕೃತಿಯ ಶೈಲಿ, ರೂಪ, ವಸ್ತು, ತೀವ್ರತರವಾದ ಮತ್ತು ಅನಿವಾರ್ಯವಾದ ಸಂಬಂಧವಿದೆಯೆಂಬುದನ್ನು ಗುರುತಿಸುವುದು ಮಾರ್ಕ್ಸ್‌ವಾದದ ಹೆಚ್ಚು ಗಮನಾರ್ಹವಾದ ನಿಲುವಾಗಿದೆ. ಸಾಮಾಜಿಕ ಸಂಬಂಧಗಳೆಂದರೆ, ಕೇವಲ ವೈಯಕ್ತಿಕವಾದವುಗಳಲ್ಲದೆ ಒಂದು ನಿರ್ದಿಷ್ಟ ಸಮಾಜ ಮತ್ತು ಕಾಲಗಳಲ್ಲಿ ಬರೆಯಲಾದ ಯಾವುದೇ ಪ್ರಕಾರದ ಸಾಹಿತ್ಯವೂ ಸಾಮಾಜಿಕ ಸಂಬಂಧಗಳನ್ನು ಒಳಗೊಂಡಿರುತ್ತವೆ. ಶೈಲಿ, ಸ್ವರೂಪ ಅಥವಾ ವಸ್ತುವೆಂದರೆ ಅಮೂರ್ತವಾದುದು, ಎಂದು ಭಾವಿಸ

ಲಾಗದು : ಲೇಖಕ ಮತ್ತು ಅನ್ಯ ಸಂಬಂಧಗಳ ಅಭಿವ್ಯಕ್ತಿ ಇದಾಗಿರುತ್ತದೆ. ಈ ರೀತಿ ಗುರುತಿಸುವಿಕೆಯು ಸ್ವತಃ ಅಮೂರ್ತ ಮತ್ತು ಸ್ಥಾಯಿಯಾಗಿರುವುದಾದರೆ ಅದು ದುರ್ಬಲವಾಗುತ್ತದೆ. ಸಾಮಾಜಿಕ ಸಂಬಂಧಗಳು ಕೇವಲ ಹೇಗಿರುತ್ತವೋ ಹಾಗೆ ಸ್ವೀಕರಿಸಲ್ಪಡುವಂತಹವಲ್ಲ : ಅವು ಸೃಷ್ಟಿಸಲ್ಪಡುತ್ತವೆ ಮತ್ತು ಪರಿವರ್ತನಯೋಗ್ಯ ವಾದವು ಕೂಡ. ಅವು ಎಷ್ಟರಮಟ್ಟಿಗೆ ನಿರ್ಣಾಯಕವಾದ ಸಾಮಾಜಿಕ ಸಂಬಂಧ ಗಳಾಗಿರುತ್ತವೋ ಅಷ್ಟರಮಟ್ಟಿಗೆ ಕೆಲವು ನೈಜವಾದ ಒತ್ತಡಗಳು ಮತ್ತು ಎಲ್ಲೆಗಳೂ ಇದ್ದೇ ತೀರುತ್ತವೆ. ಅವನ್ನು ನೈಜವಾದ ನಿರ್ಧಾರಕ ಸೂತ್ರಗಳು ಎನ್ನಬಹುದು. ವೈಯಕ್ತಿಕ ಕ್ರಿಯೆ ಮತ್ತು ದೃಷ್ಟಿಕೋನಗಳ ರೀತಿಯಲ್ಲಿ ವ್ಯಕ್ತವಾಗುವ ಬದ್ಧತೆಯ ವ್ಯಾಪ್ತಿಯನ್ನು ಇವುಗಳ ಆಯಕಟ್ಟಿನಲ್ಲಿ ಮಾತ್ರವೇ ಅರ್ಥಮಾಡಿಕೊಳ್ಳಬೇಕು.

ನಿಖರವಾಗಿ ಹೇಳುವುದಾದರೆ, ಬದ್ಧತೆಯು ಪ್ರಜ್ಞಾಪೂರ್ವಕವಾಗಿ ಬದಲಿಸು ವುದು. ಆದಾಗ್ಯೂ, ಬೇರೆಲ್ಲ ಆಚರಣೆಗಳಲ್ಲಿರುವಂತೆ ಮೂರ್ತವಾದ ಹಾಗೂ ಸಾಮಾಜಿಕ ಆಚರಣೆಯಾದ ಸಾಹಿತ್ಯದ ಕ್ಷೇತ್ರದಲ್ಲೂ ಲೇಖಕನು ಮಾಡಬಹುದಾದದ್ದು ಮತ್ತು ಪ್ರಯತ್ನಿಸಬಹುದಾದದ್ದು ಅವಶ್ಯಕವಾಗಿ ಅಸ್ತಿತ್ವದಲ್ಲಿರುವ ಅಥವಾ ಶೋಧಿಸಿ ಅರಿಯಬಹುದಾದ ನೈಜ ಸಂಬಂಧಗಳಿಂದ ಸೀಮಿತಗೊಂಡಿರುತ್ತದೆ. ಕೇವಲ ಆಶಯವಾಗಿ ಉಳಿದಿರುವಂತಹ ಆಚರಣೆಯನ್ನು ಸಾಮಾಜಿಕ ವಸ್ತುಸ್ಥಿತಿಯು ತಿದ್ದ ಬಲ್ಲುದು, ಅಳಿಸಿಹಾಕಬಲ್ಲುದು ಅಥವಾ ಊನಗೊಳಿಸಬಲ್ಲುದು. ಈ ಮಿತಿಗಳೊಳಗೆ 'ಬದ್ಧತೆ'ಯು ಒಂದು ಸೈದ್ಧಾಂತಿಕ ತಿಳುವಳಿಕೆಗಿಂತಲೂ ಹೆಚ್ಚಿನದಾಗಿ ಕಾರ್ಯನೇನನ್ನೂ ನಿರ್ವಹಿಸಲಾರದು ; (ಕೆಲವೊಮ್ಮೆ ದುರಂತದತ್ತ, ಇನ್ನು ಕೆಲವೊಮ್ಮೆ ಸಿನಿಕತನ ಅಥವಾ ಸಕ್ರಿಯವಾದ ಹೇಸಿಗೆಯತ್ತಲೂ ಇದು ಲೇಖಕನನ್ನು ಕೊಂಡೊಯ್ಯ ಬಹುದು.) ಪ್ರಜ್ಞಾಪೂರ್ವಕವಾದ 'ಸಿದ್ಧಾಂತ' ಮತ್ತು 'ನಿರ್ದಿಷ್ಟ ಧೋರಣೆ'ಗಳು ಪರಸ್ಪರ ಒಂದನ್ನೊಂದು ಬೆಂಬಲಿಸುತ್ತಾ ನಿರ್ದಿಷ್ಟವಾದ ಸಾಮಾಜಿಕ ಸಂಬಂಧಗಳನ್ನು ಅಥವಾ ಅದರ ಸೋಲನ್ನು ನಿರ್ದೇಶಿಸುವ ಪರಿಗಣನೆಗೆ ಬರಬೇಕು. ಆಚರಣೆಗೆ ಒತ್ತುಕೊಡುವ ಕಾರಣದಿಂದಾಗಿ ಮಾರ್ಕ್ಸ್‌ವಾದವು ಬಹಳ ಕುತೂಹಲಕಾರಿ ನಿಲು ವೊಂದನ್ನು ತಾಳುತ್ತದೆ : ಯಾವುದೇ ಕಾಲದಲ್ಲಾಗಲಿ ಒತ್ತಾಯಪೂರ್ವಕವಾದ ಮತ್ತು ಎಲ್ಲೆಗಳನ್ನು ನಿರ್ಧರಿಸುವ ಸನ್ನಿವೇಶಗಳಿರುತ್ತವೆ ; ಅವುಗಳನ್ನು ನಿರೂಪಿಸಿ, ಆ ಸನ್ನಿವೇಶಗಳ ಪರಿಧಿಯಲ್ಲಿ ಕೆಲವು ನಿರ್ದಿಷ್ಟ ಮಾದರಿಯ ಸಾಹಿತ್ಯದ ರಚನೆಗೆ ಮಾತ್ರ ಸಾಧ್ಯವೆಂದು ಸೂಚಿಸುವುದು ಈ ನಿಲುವಿನ ಸಾರಾಂಶ. ಹೀಗೆ ಮಾಡು ವಾಗ ಬೇರೆ ವಿಧಗಳ ಸಾಹಿತ್ಯ ರಚನೆಗೆ ಅಗತ್ಯವಿರುವ ಸಂಬಂಧಗಳನ್ನೂ ಸಹ ಸ್ಪಷ್ಟ ಪಡಿಸುತ್ತದೆ. ಜನತೆಯೊಡನೆ ಬೆಸೆದುಕೊಳ್ಳುವುದು ಮತ್ತು ವೈಶಿಷ್ಟ್ಯಪೂರ್ಣ ಲೇಖಕನೊಬ್ಬ ತನ್ನ ಪರಿಮಿತಿಯನ್ನು ದಾಟಿ ಮುಂದೆ ಹೋಗಬಹುದೆಂಬ ಚೀನಾದ ಆಲೋಚನೆಗಳು ಈ ನಿಟ್ಟಿನಲ್ಲಿ ಕೇವಲ ಘೋಷಣೆಗಳಾಗಿ ಉಳಿದುಬಿಡುತ್ತವೆ. ಹಾಗೆ

ಆಗದಿರಬೇಕಾದರೆ, ಸಾಮಾಜಿಕ ಆಚರಣೆಯು ಬದಲಾಗಿರಬೇಕು ; ಏಕೆಂದರೆ ಇಂತಹ ಆಲೋಚನೆಗಳಿಗೆ ಅದೇ ಆಸರೆ. ಆದ್ದರಿಂದ ಸಾಮಾಜಿಕ ಆಚರಣೆಯು ಸಕ್ರಿಯವಾಗಿದ್ದಾಗ ಮಾತ್ರ ಈ ರೀತಿಯ ಬೆಸುಗೆ ಇತ್ಯಾದಿಗಳು ಸಾಧ್ಯ. ಇದರರ್ಥವಾದರೂ ಇಷ್ಟೇ : ಅವುಗಳ ಗಂಭೀರ ರೂಪಗಳಲ್ಲಿ ಅವು ಸರಳ ಮತ್ತು ಅಮೂರ್ತ ಸೈದ್ಧಾಂತಿಕ ನಿಲುವುಗಳಲ್ಲ. ಯಾವುದೇ ನಿರ್ದಿಷ್ಟ, ಸಮಾಜದಲ್ಲಿ, ಒಂದು ನಿರ್ದಿಷ್ಟ ಹಂತದಲ್ಲಿ, ತಮ್ಮ ಬರವಣಿಗೆಗಳಲ್ಲಿ ಲೇಖಕರು ತಮ್ಮ ಸಾಮಾಜಿಕ ಸಂಬಂಧಗಳ ವಸ್ತುಸ್ಥಿತಿಯನ್ನು ಶೋಧಿಸಲು ಸಾಧ್ಯ. ಈ ಅರ್ಥದಲ್ಲಿ ಅವರು ತಮ್ಮ ಪಕ್ಷವಹಿಸುವಿಕೆಯನ್ನು ಗುರುತಿಸಿಕೊಳ್ಳಬಹುದು. ಅದನ್ನವರು ಬದಲಿಸಿಕೊಳ್ಳಲು ನಿರ್ಧರಿಸಿದರೆ ಇಡೀ ಸಾಮಾಜಿಕ ಪ್ರಕ್ರಿಯೆಯ ವಸ್ತುಸ್ಥಿತಿಯನ್ನೇ ಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ. ಫ್ಯಾಸಿಸ್ಟ್ ಪದ್ಧತಿಯಲ್ಲಿರುವ ಅಥವಾ ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಬದುಕುತ್ತಿರುವ ಅಥವಾ ತನ್ನ ದೇಶವನ್ನು ಬಿಟ್ಟು ಹೊರಗೆ ಉಳಿದಿರಬೇಕಾಗಿಬಂದಂತಹ ಲೇಖಕನ ಪರಿಸ್ಥಿತಿಗಿಂತ ಕ್ರಾಂತಿಯಲ್ಲಿ ಭಾಗಿಯಾಗಿರುವ ಲೇಖಕನ ಪರಿಸ್ಥಿತಿಯು ಖಂಡಿತವಾಗಿ ಭಿನ್ನವಾಗಿರುತ್ತದೆ.

ಅಂದರೆ, ಅಪೇಕ್ಷಣೀಯವಾದ ಬದಲಾವಣೆ ಉಂಟಾಗುವವರೆಗೂ ಲೇಖಕನು ತನ್ನ ಬರವಣಿಗೆಯನ್ನು ಮುಂದೂಡುತ್ತಾನೆಂದಾಗಲೀ, ಮುಂದೂಡಬೇಕೆಂದಾಗಲೀ ಅರ್ಥವಲ್ಲ. ಹಾಗೆ ಅರ್ಥೈಸಬೇಕಾಗಿಯೂ ಇಲ್ಲ. ಅಂತೆಯೇ, ಅವನು ತನ್ನ ಬರವಣಿಗೆಯನ್ನು ಕೈಬಿಡುತ್ತಾನೆ ಅಥವಾ ಕೈಬಿಡಬೇಕು ಎಂದೂ ಅಲ್ಲ. ಅಥವಾ ಉಂಟಾಗಿರುವ ಪರಿಸ್ಥಿತಿಯನ್ನು ಸ್ವೀಕರಿಸಿ ಅಸಹಾಯಕನಂತೆ ನಿಂತುಬಿಡುತ್ತಾನೆಂದೂ ಇದರರ್ಥವಲ್ಲ. ಎಲ್ಲ ಆಚರಣೆಯೂ ನಿರ್ದಿಷ್ಟವಾದದ್ದೆಂಬುದನ್ನು ಮರೆಯುವಂತಿಲ್ಲ. ಅತ್ಯಂತ ಗಂಭೀರವಾದ ಮತ್ತು ನೈಜವಾಗಿ ಬದ್ಧತೆಯನ್ನುಳ್ಳ ಬರವಣಿಗೆಯಲ್ಲಿ ಲೇಖಕನ ವ್ಯಕ್ತಿತ್ವವು ಇಡಿಯಾಗಿ ವ್ಯಕ್ತವಾಗುತ್ತದೆ : ಅಂದರೆ, ಅವಶ್ಯಕವಾಗಿ ಅದು ಅವನ ಸಾಮಾಜಿಕ ಇರುವಿಕೆಯ ಅಭಿವ್ಯಕ್ತಿಯಾಗಿರುತ್ತದೆ. ವ್ಯಕ್ತಿತ್ವದಲ್ಲಿ ಬಹಿರಂಗವಾಗಿ ಹೆಚ್ಚು ವ್ಯಕ್ತವಾಗಿರುವುದರಿಂದ ಹಿಡಿದು ಹೆಚ್ಚು ಅವ್ಯಕ್ತವಾಗಿರುವ ಎಲ್ಲ ಹಂತಗಳ ಅಭಿವ್ಯಕ್ತಿಯೂ ಇದರಲ್ಲಿ ಸಾಕಾರವಾಗಿರುತ್ತದೆ. ಹೀಗಿರುವಾಗ ಆಚರಣೆ ಮತ್ತು ಸನ್ನಿವೇಶಗಳನ್ನು ಬೇರ್ಪಡಿಸಿ ನೋಡಬಹುದೆಂಬುದು ಯಾವಾಗಲೂ ನಂಬಲರ್ಹವಲ್ಲ. ಎಲ್ಲ ಸನ್ನಿವೇಶಗಳು ಚಲನಶೀಲವಾದ್ದರಿಂದ ಆಚರಣೆಯು ಯಾವಾಗಲೂ ಸಕ್ರಿಯವಾಗಿದ್ದು ತೀವ್ರತರ ಬೆಳವಣಿಗೆಗೆ ವಿಷಯವಾಗಬಹುದಾಗಿರುತ್ತದೆ. ಆದರೆ ನಾವೀಗಾಗಲೇ ನೋಡಿರುವಂತೆ ನೈಜವಾದ ಸಾಮಾಜಿಕ ಸಂಬಂಧಗಳು ಬರವಣಿಗೆ ಎಂಬ ಆಚರಣೆಯಲ್ಲೇ ಆಳವಾಗಿ ಬೇರುಬಿಟ್ಟಿರುತ್ತವೆ; ಸಾಹಿತ್ಯವನ್ನು ಓದಲಾಗುವ ಸಂಬಂಧಗಳಲ್ಲೂ ಈ ನೈಜ ಸಾಮಾಜಿಕ ಸಂಬಂಧಗಳು ಹೊರಹೊಮ್ಮುತ್ತವೆ. ವಿವಿಧ ರೀತಿಗಳಲ್ಲಿ ಸಾಹಿತ್ಯವನ್ನು ರಚಿಸುವುದೆಂದರೆ ವಿವಿಧ ರೀತಿಗಳಲ್ಲಿ ಜೀವನ ನಡೆಸುವುದು ಎಂದರ್ಥ. ಸಾಹಿತ್ಯವನ್ನು ಓದುವುದರಲ್ಲೂ ವೈವಿಧ್ಯತೆ ಇರುತ್ತದೆ, ಬೇರೆ ಬೇರೆ

ಸಂಬಂಧಗಳಿರುತ್ತವೆ, ಮತ್ತು ಹಲವು ವೇಳೆ ಓದುವ ಜನಗಳು ಬೇರೆ ಬೇರೆ ಸ್ತರಗಳವರಾಗಿರಬಹುದು. ಸಾಧ್ಯತೆಯು ಮತ್ತು ತತ್ಕಾರಣವಾಗಿ ಆಯ್ಕೆಯು, ಈ ವಲಯವು ನಿರ್ದಿಷ್ಟವಾದುದೇ ಹೊರತು ಅಮೂರ್ತವಾದುದಲ್ಲ: ಈ ಪ್ರಕಾರವಾಗಿಯೇ ಬದ್ಧತೆಯು ಅತಿಮುಖ್ಯವಾದ ಅರ್ಥದಲ್ಲಿ ಅದು ನಿರ್ದಿಷ್ಟವಾಗಿಯೇ ಇರುತ್ತದೆ. ಒಂದು ರೀತಿಯ ಉತ್ಪಾದಕನಾಗಿ ಲೇಖಕನಿಗೆ ಸಾಮಾಜಿಕ ಸಂಬಂಧಗಳು ಕೆಲವು ವಾಸ್ತವವಾಗಿ ಉಂಟಾಗಿರುತ್ತವೆ ; ಇನ್ನೂ ಕೆಲವು ಸಾಧ್ಯತೆಯಿಂದ ಕೂಡಿರುತ್ತವೆ; ಇವುಗಳ ನಡುವೆ ಲೇಖಕನ ಬದ್ಧತೆ ನಿರ್ದಿಷ್ಟವಾದುದು. ಅಸ್ತಿತ್ವದಲ್ಲಿರುವ ಮತ್ತು ಸಾಧ್ಯತೆಯಿಂದ ಕೂಡಿದ ಹಾಗೂ ಮೂರ್ತ ಸ್ವರೂಪದ ಎಲ್ಲ ಸಂಬಂಧಗಳ ನಡುವೆಯೂ ಬದ್ಧತೆಯು ನಿರ್ದಿಷ್ಟವಾಗಿರುತ್ತದೆ. ಅಂತೆಯೇ ಅಸ್ತಿತ್ವದಲ್ಲಿರುವ ಮತ್ತು ಸಾಧ್ಯತೆ ಇರುವ ಎಲ್ಲ ಶ್ರೇಣಿ, ರೂಢಿ, ರೂಪ ಮತ್ತು ಭಾಷೆಗಳ ಸಂದರ್ಭಗಳಲ್ಲೂ ಬದ್ಧತೆಯು ನಿರ್ದಿಷ್ಟವಾಗಿರುತ್ತದೆ. ಆದೇನೂ ಅರಿಯಲಾಗದ ಸಂಗತಿಯಲ್ಲ. ಆದ್ದರಿಂದ ಪಕ್ಷವಹಿಸುವಿಕೆಯನ್ನು ಗುರುತಿಸುವುದೆಂದರೆ, ಬದ್ಧತೆಯ ನಿಷ್ಕೃಷ್ಟ ನಿರ್ದಿಷ್ಟತೆಗಳನ್ನು ತಿಳಿದುಕೊಳ್ಳುವುದೇ ಆಗಿದೆ.

# ಗ್ರಂಥದಿಂದ ಪಠ್ಯಕ್ಕೆ : ರೊಲಾಂಡ್ ಬಾರ್ತ್‌ಸನ ವಿಚಾರಗಳು

ಡಾ॥ ಕೇಶವಶರ್ಮ ಕೆ.

[ರೊಲಾಂಡ್ ಬಾರ್ತ್‌ಸ್ ಒಬ್ಬ ಫ್ರೆಂಚ್ ಭಾಷಾ ವಿಜ್ಞಾನಿ, ತತ್ವಜ್ಞಾನಿ ಮತ್ತು ಸಾಹಿತ್ಯ ತತ್ವಶಾಸ್ತ್ರಜ್ಞ. 1915ರಲ್ಲಿ ಹುಟ್ಟಿ ತನ್ನ ಗ್ರಂಥಗಳಿಂದ ಹೊಸದೊಂದು ಆಲೋಚನಾ ಕ್ರಮವನ್ನು ಬೆಳೆಸಿದವನು. S/Z, Writing Degree Zero, on Racine, The pleasure of the text, ಈತನ ಮುಖ್ಯ ಕೃತಿಗಳು.]

ಕಳೆದ ಅನೇಕ ವರ್ಷಗಳಿಂದ ಸಾಹಿತ್ಯಕೃತಿ ಮತ್ತು ಅದರ ಭಾಷೆಯ ಬಗೆಗಿನ ನಮ್ಮ ಆಲೋಚನಾ ಕ್ರಮವು ಬದಲಾಗತೊಡಗಿದೆ. ಭಾಷೆಯ ಕನಿಷ್ಟ ಘಟಕದಿಂದಲೇ ಈ ಯೋಚನೆಯ ಕಡೆಗೆ ತೊಡಗಿದ್ದೇವೆ. ಈ ರೀತಿಯ ಆಲೋಚನಾ ಕ್ರಮವು ತೀರಾ ಆಕಸ್ಮಿಕವಾದುದಲ್ಲ. ಈಗೀಗ ಆಲೋಚನಾ ಕ್ರಮದ ಬದಲಾವಣೆಯು ಭಾಷಾಶಾಸ್ತ್ರ, ಮಾನವಶಾಸ್ತ್ರ, ಮಾರ್ಕ್ಸ್‌ವಾದ, ಮನೋವಿಶ್ಲೇಷಣೆ ಕ್ಷೇತ್ರಗಳ ಕೊಂಡಿಯನ್ನು ಪಡೆದುಕೊಂಡಿದೆ. ('ಕೊಂಡಿ' ಎನ್ನುವ ಪದವನ್ನು ಉದ್ದೇಶಪೂರ್ವಕವಾಗಿ ತಾಟಸ್ಥ್ಯದ ಅರ್ಥದಲ್ಲಿ ಬಳಸಲಾಗಿದೆ; ಇದಕ್ಕೆ ಯಾವುದೇ ನಿಷ್ಟಯಗಳಿಲ್ಲ. ಇದು ದ್ವಂದ್ವಾತ್ಮಕವಾಗಿ, ಬೇರೆ ಬೇರೆ ಆಯಾಮಗಳನ್ನು ಪಡೆದುಕೊಳ್ಳುವ ಸಂಗತಿಯಾಗಿ ರೂಪಿತವಾಗಿದೆ.) ಆಂತರಿಕವಾಗಿ ಹೊಸದಾಗುವ ಯತ್ನದಲ್ಲಿ ಇದು ಜಾರದೆ, ಒಂದು ಚಲನೆಯಾಗಿ, ಒಂದು ವಸ್ತುವಾಗಿ ಬರುತ್ತದೆ. ಹೀಗಾಗಿ, ಸಾಂಪ್ರದಾಯಿಕವಾಗಿ ಇದನ್ನು ಇಲ್ಲಿ ಅವಲಂಬಿಸುವ ಪ್ರಶ್ನೆ ಇರುವುದಿಲ್ಲ.

ಅನ್ಯ ಶಿಸ್ತುಗಳ ಚಟುವಟಿಕೆ ಮತ್ತು ಮೌಲ್ಯಗಳು ಸಂಶೋಧನೆಯ ಮೇಲೆ ಪ್ರಭಾವ ಬೀರುತ್ತಿರುವಂತೆಯೇ ಜ್ಞಾನ ಶಾಖೆಯನ್ನು ವಿಸ್ತರಿಸಲು ಸಾಧ್ಯವಾಗುತ್ತದೆ. ಹೀಗಾಗಿ, ಅನ್ಯವಸ್ತುಗಳ ಬಳಕೆಯ ಕೆಲಸವು ತೀರಾ ಶಾಂತಿಯುತವಾದುದೇನಲ್ಲ. ಅನ್ಯ ಶಿಸ್ತುಗಳ ಬಳಕೆಯು ಹಳೆಯ ಶಿಸ್ತುಬದ್ಧವಾದ ಚಟುವಟಿಕೆಯನ್ನು, ಅದರ ಐಕ್ಯತೆಯನ್ನು ಭೇದಿಸುತ್ತದೆ. ಈ ರೀತಿಯ ವರ್ಗೀಕರಣವು ಅಷ್ಟು ಸುಲಭವಾದುದಲ್ಲ. ಬೇರೆ ಪ್ರಕಾರಗಳನ್ನು ಪರೀಕ್ಷಿಸಲು ಈ ವರ್ಗೀಕರಣವು ಸಹಾಯ ಮಾಡುತ್ತದೆ.

ಅಷ್ಟೇ ಅಲ್ಲ ಮಾಪಾ೯ಡುಗಳನ್ನು ಪರೀಕ್ಷಿಸುತ್ತದೆ. ಮಾಪಾ೯ಡುಗಳನ್ನು ಒಂದು ರಚನೆಯ ಅನುಕ್ರಮವಾದ ವರ್ಗಾಂತರದಲ್ಲಿ ಗ್ರಹಿಸಬಹುದು. ಅಲ್ಲಿ ನಿಜವಾದ ತಡೆಯಿರುವುದಿಲ್ಲ. ತಡೆಯನ್ನು (ಭೇದವನ್ನು) ಈಗಾಗಲೇ ಕಳೆದ ಶತಮಾನದಲ್ಲಿ ಮಾರ್ಕ್ಸವಾದ ಮತ್ತು ಫ್ರಾರಿಸ್ಟನ ಸಿದ್ಧಾಂತಗಳಲ್ಲಿ ಗುರುತಿಸಲಾಗಿದೆ. ಕಳೆದ ನೂರು ವರುಷಗಳಲ್ಲಿ ಮತ್ತೆ ಯಾವ ರೀತಿಯ ಭೇದವೂ ಕಾಣಿಸಿಕೊಂಡಿಲ್ಲ. ಅದುವೇ ಮತ್ತೆ ಮತ್ತೆ ಪುನರಾವರ್ತನೆಯಾಗುತ್ತಾ ಬಂದಿದೆ. ನಮ್ಮ ಚರಿತ್ರೆ, ಈ ದಿನದ ಚರಿತ್ರೆ ಬೇರೆ ಬೇರೆ ಸಂಗತಿಗಳನ್ನು, ನಿರಾಕರಣೆಯನ್ನು ಹೊಸದರ ಕಡೆಗೆ ಹೋಗುವ ಬಯಕೆ ಯನ್ನು ಒಳಗೊಳ್ಳುತ್ತಿದೆ. ಐನ್‌ಸ್ಟೈನ್‌ನ ವೈಶಿಷ್ಟ ಸಿದ್ಧಾಂತವು ವಸ್ತುವಿನ ಅಧ್ಯಯನವನ್ನು ಒಳಗೊಂಡಿದ್ದರೆ, ಅದು, ಮಾರ್ಕ್ಸ್‌ವಾದ, ಫ್ರಾಯ್ಡ್‌ನ ಸಿದ್ಧಾಂತ ದಲ್ಲಿಯೂ ಇದೆ. ರಚನಾ ಶಾಸ್ತ್ರದ ವೈಶಿಷ್ಟ್ಯವು ಸಾಹಿತ್ಯದ ಸಂದರ್ಭದಲ್ಲಿ ಬರಹ ಗಾರ, ಓದುಗ ಮತ್ತು ಪರೀಕ್ಷಕರ (ವಿಮರ್ಶಕ) ಸಂಬಂಧದಿಂದ ನಿರ್ಧೀತವಾಗುತ್ತದೆ. ಹಳೆಯ ರೀತಿಯ ವರ್ಗೀಕರಣದ ಕ್ರಮವು ಮತ್ತೆ ಬದಲಾಗುತ್ತದೆ. ಹೊಸ ವಸ್ತುವಿನ ಅವಶ್ಯಕತೆಯು ಹಳೆಯದರ ಗೈರು ಹಾಜರಿಯಿಂದ ಉದ್ಭೂತವಾಗಿದೆ. ಈ ವಸ್ತುವೇ ಪಠ್ಯ. ಈಗ ಪಠ್ಯವನ್ನು ಯಾವ ಕೇಂದ್ರದಲ್ಲಿ ಇರಿಸಲಾಗಿದೆಯೆಂದು ಸೂಚಿಸುವುದು ನನ್ನ ಉದ್ದೇಶವಾಗಿದೆ. ಈ ಸೂಚನೆಗಳನ್ನು ವಾದವೆಂದು ಭಾವಿಸದೆ ನಿರೂಪಣೆಯೆಂದು ಭಾವಿಸಬೇಕಾಗಿದೆ. ಇದು ಬರಿ ತಿಳಿಸುವ ಕ್ರಮ. ಈಗಾಗಲೇ ಹೇಳಲಾಗಿರುವಂತೆ ಸೂಚನೆಗಳು ಒಂದು ಕ್ರಮವನ್ನು ಅನುಸರಿಸುತ್ತವೆ. ಅದರಲ್ಲಿ ರೂಪ, ಸೂಚನೆ, ರೇಖೆ, ಓದುವ ಕ್ರಮ ಮತ್ತು ಸಂತೋಷಗಳು ಇರುತ್ತವೆ.

1) ಯಾವುದೇ ಪಠ್ಯವನ್ನು ಒಂದು ನಿರ್ದಿಷ್ಟವಾದ ವಸ್ತುವೆಂದು ಯೋಚಿಸ ಲಾಗುವುದಿಲ್ಲ. ಭೌತಿಕವಾಗಿಯೇ ಗ್ರಂಥವನ್ನು ಮತ್ತು ಪಠ್ಯವನ್ನು ಪ್ರತ್ಯೇಕವೆಂದು ಗ್ರಹಿಸುವುದು ಅನಗತ್ಯ. ಗ್ರಂಥವು ಶಾಸ್ತ್ರೀಯ, ಪ್ರಠ್ಯವು ಪ್ರಯೋಗಾತ್ಮಕ ಎಂದು ಹೇಳುವಾಗ ವಿಶೇಷವಾದ ಜಾಗ್ರತೆಯನ್ನು ವಹಿಸಬೇಕಾಗುತ್ತದೆ. ಈ ವ್ಯತ್ಯಾಸವು ಅತ್ಯಂತ ಬರಡಾದ ವಿಭಜನೆ ಆಗಿದ್ದು ಆಧುನಿಕತೆಯ ಹೆಸರಿನಲ್ಲಿ ಕಾಣಿಸಿಕೊಂಡಿದೆ. ಸಾಹಿತ್ಯಕೃತಿಯನ್ನು ಆಂತರಿಕವೆಂದೂ, ಉಳಿದುದನ್ನು ಬಾಹ್ಯವೆಂದು ಇದು ನಿರ್ದೇಶಿ ಸಿದೆ. ಅನುಕ್ರಮ ಸನ್ನಿವೇಶದ ಹಿನ್ನೆಲೆಯಲ್ಲಿ ರೂಪಿತವಾಗಿರುವ ವಿಚಾರವಿದು. ಪ್ರಾಚೀನ ಗ್ರಂಥಗಳು 'ಕೆಲವು ಪಠ್ಯ'ಗಳನ್ನು ಒಳಗೊಂಡಿದೆ. ಆದರೆ, ಸಮಕಾಲೀನ ಸಾಹಿತ್ಯ ಪಠ್ಯವೇ ಅಲ್ಲ. ವ್ಯತ್ಯಾಸ ಹೀಗಿದೆ ; ಗ್ರಂಥಗಳು ಮೂರ್ತವಾದವು. ಗ್ರಂಥಾಲಯಗಳಲ್ಲಿ ಅವಕ್ಕೊಂದು ಸ್ಥಾನ ಕಲ್ಪಿತವಾಗಿರುತ್ತದೆ. ಆದರೆ, ಇನ್ನೊಂದೆಡೆ ಯಿಂದ ಪಠ್ಯವು ತಾರ್ಕಿಕ ಕ್ಷೇತ್ರವಾಗಿರುತ್ತದೆ.

ಲ್ಯಾಕನ್ ಸೂಚಿಸಿದ 'ವಾಸ್ತವತೆ' ಮತ್ತು 'ವಾಸ್ತವ'ದ ಬಗೆಗಿನ ನೆನಪನ್ನು ಈ

ಸಂದರ್ಭದಲ್ಲಿ ಮಾಡಿಕೊಳ್ಳಬಹುದು. 'ವಾಸ್ತವ' ಎನ್ನುವುದು ಸ್ಪಷ್ಟವಾಗಿ ತೋರಿಸುವಂತಹುದು. 'ವಾಸ್ತವತೆ'ಯು ಪ್ರದರ್ಶನಾತ್ಮಕವಾಗಿರುವಂತಹುದು. ಅದೇ ರೀತಿಯಲ್ಲಿ ಗ್ರಂಥವನ್ನೂ ಪುಸ್ತಕದ ಅಂಗಡಿಗಳಲ್ಲಿ, ಕಾರ್ಡ್ ಕೆಟಲಾಗ್‌ಗಳಲ್ಲಿ ಕಂಡುಕೊಳ್ಳಬಹುದು. ಪಠ್ಯವಾದರೋ ಅದರಷ್ಟಕ್ಕೆ ಪ್ರಕಟಿತವಾಗುವಂತಹುದು. ಸ್ಪಷ್ಟವಾಗಿರುತ್ತದೆ ಅಥವಾ ಅದಕ್ಕೆ ಕೆಲವು ನಿಯಮಗಳಿರುತ್ತದೆ. ಗ್ರಂಥವು ಕೈಗೆ ಸಿಗುವಂತಿದ್ದರೆ, ಪಠ್ಯವು ಭಾಷೆಯನ್ನು ಹೊಂದಿರುತ್ತದೆ. ಹಾಗಾಗಿ ಪಠ್ಯವು ಸಂವಹನದಲ್ಲಿ ತನ್ನ ಸ್ಥಾನವನ್ನು ಪಡೆದುಕೊಳ್ಳುತ್ತದೆ. ಪಠ್ಯವು ಕೃತಿಯನ್ನು ಸಂಯೋಜಿಸುವುದಿಲ್ಲ. ಅದಕ್ಕಿಂತ ಹೆಚ್ಚಾಗಿ ಗ್ರಂಥವು ಪಠ್ಯದ ಕಾಲ್ಪನಿಕ ಬಾಲ ಅಷ್ಟೆ; ಬೇರೆ ಮಾತನ್ನು ಬಳಸಬೇಕಿದ್ದರೆ ಪಠ್ಯವು ಕ್ರಿಯಾತ್ಮಕ ಚಟುವಟಿಕೆಯ ಮೂಲಕ, ಅದರ ಉತ್ಪಾದನಾ ಕ್ರಮದ ಮೂಲಕ ಅನುಭವ ವೇದ್ಯವಾಗುತ್ತದೆ. ಹೀಗಾಗಿ ಪಠ್ಯವು ಗ್ರಂಥಾಲಯದ ಕಪಾಟುಗಳಲ್ಲಿಯೇ ನಿಲ್ಲುವುದಿಲ್ಲ. ಅದು ಪ್ರಯಾಣ ಬೆಳೆಸುತ್ತದೆ. ಅನೇಕ ಗ್ರಂಥಗಳನ್ನು ಹಾಯುತ್ತದೆ.

2) ಹಾಗೆಯೇ ಪಠ್ಯವು ಒಂದು ಸಾಹಿತ್ಯದಲ್ಲಿಯೇ ನಿಲ್ಲುವುದಿಲ್ಲ. ಅದು ಮಾಮೂಲು ಕ್ರಮತೆಯನ್ನು ಹೊಂದಿರುವುದಿಲ್ಲ ಅಥವಾ ತೀರಾ ಸರಳವಾದ ಬೇರೆ ಬೇರೆ ರೂಪಗಳಿಗೂ ಒಳಪಡುವುದಿಲ್ಲ. ಹಳೆಯ ನಂಬಿಕೆಗಳ ಪ್ರಕಾರ–ಪಠ್ಯವು ಬುಡ ಮೇಲು ಮಾಡುವ ಒತ್ತಡ. ಆದರೆ ಜಾರ್ಜ್ ಬಟೈಲ್ಲಿಯನ್ನು ಹೇಗೆ ವಿಭಜಿಸಲು ಸಾಧ್ಯ ? ಈ ಬರಹಗಾರ ಒಬ್ಬ ಕಾದಂಬರಿಕಾರನೆ ; ಒಬ್ಬ ಕವಿಯೇ ? ಒಬ್ಬ ಅರ್ಥ ಶಾಸ್ತ್ರಜ್ಞನೇ ? ತತ್ತ್ವಜ್ಞಾನಿಯೇ ? ಇದಕ್ಕೆ ಉತ್ತರ ಅನಿಶ್ಚಿತವಾದುದು. ಆದರೂ ಆತ ಬರೆದಿಲ್ಲವೇ ?

ಪಠ್ಯವು ವರ್ಗೀಕರಣದ ಸಮಸ್ಯೆಯನ್ನು ಯಾಕೆ ಎತ್ತುತ್ತದೆ ? ಯಾಕೆಂದರೆ ಅನುಭವದ ಮಿತಿಯನ್ನು ಒಳಗೊಳ್ಳುತ್ತದೆ ಎನ್ನುವುದಕ್ಕಾಗಿ ಪಠ್ಯದ ಓದಿಂವಿಕೆ ತರ್ಕ ಇತ್ಯಾದಿಗಳಾಚೆಗೆ ದಾಟುತ್ತದೆ. ಹಾಗಾಗಿ ಪಠ್ಯವು ಯಾವಾಗಲೂ ವಿರೋಧಾಭಾಸದಿಂದ ಕೂಡಿಕೊಂಡಿರುತ್ತದೆ.

3) ಪಠ್ಯವನ್ನು ಅದರ ಸೂಚನೆಯ ಅನುಸಾರವಾಗಿ ಗ್ರಹಿಸಲು ಸಾಧ್ಯ. ಆದರೆ ಗ್ರಂಥವು ಅದರಷ್ಟಕ್ಕೆ ಅದು ಸೂಚಿತದ ಹತ್ತಿರವಿರುತ್ತದೆ. ಎರಡು ರೀತಿಯ ಸೂಚಿತದ ಸಾಧ್ಯತೆಗಳಿರುತ್ತವೆ ; ಒಂದು ಅಕ್ಷರ ವಿಜ್ಞಾನದ ವಸ್ತುವಾಗಿ ಗ್ರಂಥವು ರೂಪಿತವಾಗುವುದು. ಮತ್ತೊಂದು ಈ ಸೂಚಿತವು ರಹಸ್ಯವಾಗಿರುತ್ತದೆ. ಅಂತಿಮವಾಗಿರುತ್ತದೆ. ಹಾಗಾಗಿ ಅದಕ್ಕಾಗಿ ಹುಡುಕಬೇಕಾಗುತ್ತದೆ. ಬೇರೆ ಬೇರೆ ಅನ್ವಯಗಳು ಈ ಕುರಿತಂತೆ ಸಾಧ್ಯವಾಗುತ್ತದೆ. ಉದಾಹರಣೆ ಮಾರ್ಕ್ಸ್‌ವಾದಿ ಅನ್ವಯ, ಮನಶ್ಶಾಸ್ತ್ರೀಯ ಅನ್ವಯ ಇತ್ಯಾದಿ. ಒಂದೇ ಮಾತಿನಲ್ಲಿ ಹೇಳಬೇಕೆಂದರೆ, ಗ್ರಂಥವು

ಸಾರ್ವತ್ರಿಕ ಸೂಚನೆಯಾಗಿ ಕೆಲಸ ನಿರ್ವಹಿಸುತ್ತದೆ. ನಾಗರೀಕತೆಯ ಸಾಂಸ್ಥಿಕ ಅಂಶವಾಗಿ ಗ್ರಂಥಕ್ಕೆ ಪ್ರಾತಿನಿಧ್ಯವಿದೆ. ಪಠ್ಯವು ಸೂಚಕನನ್ನು ಅವಲಂಬಿಸುವಂತಹುದು. ಸೂಚಕನ ಆಲೋಚನೆಯ ಆಟವಾಗಿ ಪಠ್ಯವು ರೂಪ ತಳೆಯುತ್ತದೆ. ಪಠ್ಯವು ಪೂರ್ಣವಾಗಿಯೇ ಸಾಂಕೇತಿಕವಾದುದು. ಪಠ್ಯವು ಭಾಷಿಕವಾದುದು. ಇದನ್ನು ರೂಪಿಸಬಹುದು. ವಿಕೇಂದ್ರೀಕರಿಸಬಹುದು.

4) ಪಠ್ಯವು ಬಹುಮುಖಿಯಾಗಿರುವಂತಹುದು. ಅದರ ಅರ್ಥ ಪಠ್ಯಕ್ಕೆ ಬಹು ಅರ್ಥಗಳಿವೆಯೆಂದಲ್ಲ. ಅನೇಕ ಅರ್ಥಗಳು ಪಠ್ಯಕ್ಕೆ ಸಂಪ್ರಾಪ್ತವಾಗುತ್ತದೆಯೆಂದು ಪಠ್ಯವನ್ನು ಬಟ್ಟೆಗೆ ಹೋಲಿಸಿದರೆ, ಅರ್ಥವು ನೂಲಿನ ಹೊದಿಕೆಯಂತಿರುತ್ತದೆ. ಹಾಗಾಗಿ ಪಠ್ಯದ ಬಹುಮುಖತೆಯು ಅಸ್ಪಷ್ಟತೆಯಿಂದ ಕೂಡಿರುವುದಿಲ್ಲ. ಅದಕ್ಕಿಂತ ಹೆಚ್ಚಾಗಿ ಸೂಚಕನು ಅದನ್ನು ಹೊಲಿಯುವ ರೀತಿಯನ್ನು ಅವಲಂಬಿಸಿರುತ್ತದೆ. ಓದುಗನು ತೌಲಿನಿಕವಾಗಿ ಪಠ್ಯವನ್ನು ಯೋಚಿಸುತ್ತಾನೆ. (ವಿಷಯವು ಓದುಗರ ಕಲ್ಪನೆಗೆ ಸಂಬಂಧಿಸಿರುತ್ತದೆ). ಓದುಗನ ಅಪರಿಚಿತವಾದ ಭಾವನೆಗಳು ಇದಕ್ಕೆ ಹೊಂದಿಕೊಳ್ಳುತ್ತದೆ. ಬೆಳಕು, ಬಣ್ಣ, ಬಿಸಿ, ಗಾಳಿ, ಶಬ್ದ, ಹಕ್ಕಿಗಳ ಧ್ವನಿ, ಮಕ್ಕಳ ಅಳು ಹಾಗೆಯೇ ಇನ್ನೊಂದು ಬದಿಯಲ್ಲಿ ಹಾದಿ, ಅಭಿನಯ, ಬಟ್ಟೆಯ ಹೊದಿಕೆ ಇವೆಲ್ಲಾ ಬೇರೆ ಬೇರೆಯಾಗಿರುತ್ತವೆ. ಇವಕ್ಕೆಲ್ಲಾ ಸಂಜ್ಞೆಗಳಿರುತ್ತವೆ. ಆದರೆ ಇವೆಲ್ಲಾ ಒಂದಕ್ಕೊಂದು ಭಿನ್ನತೆಯನ್ನು ಹೊಂದಿರುತ್ತವೆ. ಹೀಗೆಯೇ 'ಪಠ್ಯ'ದಲ್ಲಿಯೂ ಆಗುತ್ತದೆ. ಪಠ್ಯವು ಬೇರೆ ಬೇರೆ ಧ್ವನಿಗಳಿಂದ, ಮಾತುಗಳಿಂದ, ಆಧಾರಗಳಿಂದ ಹೋಲಿಗೆಯಿಂದ ಕೂಡಿರುತ್ತವೆ. ಇವೆಲ್ಲಾ ಸಾಂಸ್ಕೃತಿಕ ಭಾಷೆಯಾಗಿದ್ದು ಭೂತಕಾಲವನ್ನೋ, ವರ್ತಮಾನದ ಕ್ಷಣವನ್ನೋ, ಹಿಡಿಯುತ್ತಾ ಒಂದರಿಂದ ಮತ್ತೊಂದಕ್ಕೆ ಸಾಗುತ್ತದೆ.

ಯಾವುದೇ ಪಠ್ಯವು ಮತ್ತೊಂದು ಪಠ್ಯದ ಹೊಂದಿಕೆಯಲ್ಲಿರುತ್ತದೆ: ಪಠ್ಯದ ಉಗಮವು ತನ್ನ ಸಂಪತ್ತನ್ನು ಹುಡುಕುತ್ತಾ, ಪ್ರಭಾವವನ್ನು ಆಧರಿಸುತ್ತಾ ಗ್ರಂಥವಾಗುತ್ತದೆ. ಪಠ್ಯವು ಈಗಾಗಲೇ ಬಳಕೆಯಾಗಿರುವ ಮಾತುಗಳನ್ನು ಆಧರಿಸಿದ್ದರೂ ಅದಕ್ಕೆ ಉದ್ಧರಣಚಿಹ್ನೆಯೇ ಇರುವುದಿಲ್ಲ. ಗ್ರಂಥವು ಏಕತತ್ವವನ್ನು ಅವಲಂಬಿಸದೆ ಬಹುಮುಖತೆಯನ್ನು ಅಪ್ಪಿಕೊಳ್ಳುತ್ತದೆ. ಪಠ್ಯವು ಅವಲಂಬಿಸುವ ಶಬ್ದದ ಆದರ್ಶವನ್ನು ಒಳಗೊಂಡು ಬೆಳೆಯುತ್ತದೆ.

ಬಹುಸಾಧ್ಯತೆಯ ಬಂಧವನ್ನು ನೋಡಿಕೊಂಡು ಪಠ್ಯವನ್ನು ಗ್ರಂಥಕ್ಕಿಂತ ಬೇರೆಯಾಗಿ ನಿಲ್ಲಿಸಲು ಸಾಧ್ಯವಿದೆ. ಇದು ಓದುವ ಕ್ರಮಕ್ಕೆ ಸಂಬಂಧಿಸಿದ ಪ್ರಶ್ನೆ. ಕೆಲವು ಪಠ್ಯಗಳು 'ಲಿಖಿತ'ವಾಗಿದ್ದು ಅದಕ್ಕೊಂದು ಸಾಂಪ್ರದಾಯಿಕ ನೆಲೆಗಳಿರುತ್ತವೆ. ಮಾರ್ಕ್ಸ್‌ವಾದಿ ಅನ್ವಯವು ಏಕತತ್ವವನ್ನು ಆಧರಿಸುತ್ತದೆ. ಪಠ್ಯದ ಬಹುಮುಖತೆಯನ್ನು ಭೌತಿಕಗೊಳಿಸುತ್ತದೆ.

5) ಗ್ರಂಥದಲ್ಲಿ ಮೂರು ಅಂಶಗಳು ಮುಖ್ಯವಾಗುತ್ತವೆ; ಗ್ರಂಥವು ನಿರ್ಣಯವಾಗುವುದು ಬಾಹ್ಯದ ಜಗತ್ತಿನಲ್ಲಿ ಅದು ಜನಾಂಗದಿಂದ, ಚರಿತ್ರೆಯಿಂದ ಪ್ರೇರಿತ

ವಾಗಿರುತ್ತದೆ. ಎರಡನೆಯದು ಅದರಷ್ಟಕ್ಕೆ ಅವು ಅನುಕ್ರಮವಾಗಿರುತ್ತದೆ. ಮೂರನೆಯದು ಗ್ರಂಥವು ಬರಹಗಾರನನ್ನು ಗೊತ್ತುಮಾಡಿಕೊಳ್ಳುತ್ತದೆ. ಗ್ರಂಥಕರ್ತನು ಗ್ರಂಥದ ತಂದೆಯಿಂದೋ, ಅಥವಾ ಅದರ ಧನಿಯಿಂದೋ ತನ್ನ ಸ್ಥಾನವನ್ನು ಪಡೆದುಕೊಳ್ಳುತ್ತಾನೆ. ಗ್ರಂಥಕರ್ತನಿಗೂ ಗ್ರಂಥಕ್ಕೂ ಇರುವ ಸಂಬಂಧ ನ್ಯಾಯಬದ್ಧವಾಗಿದ್ದು, ಗ್ರಂಥದ ಕುರಿತು ಆತನಿಗೆ ಒಂದು ಹಕ್ಕು ಇರುತ್ತದೆ. ಸಾಹಿತ್ಯ ಸಂಶೋಧನೆಯಲ್ಲಂತೂ ಗ್ರಂಥಕ್ಕೆ ಗೌರವಯುತವಾದ ಸ್ಥಾನ ಕಲ್ಪಿತವಾಗಿರುವಂತೆ ಬರಹಗಾರನ ಉದ್ದೇಶಕ್ಕೂ ಗೌರವ ಕಲ್ಪಿತವಾಗಿರುತ್ತದೆ.

ಇನ್ನೊಂದು ಬದಿಯಿಂದ, ಪಠ್ಯವನ್ನಾದರೋ ಅದರ ತಂದೆಯ ಸಹಿಯಿಲ್ಲದೆಯೂ ಓದಬಹುದು. ಗ್ರಂಥಕ್ಕಿಂತ ಪಠ್ಯದ ವಿವರಣೆಯು ಬೇರೆಯಾದುದು. ಪಠ್ಯದ ರಚನೆಯು ಅಗತ್ಯವಾದ ವಿಸ್ತೃತತೆಯನ್ನು, ಅಭಿವೃದ್ಧಿಯನ್ನೂ ಹೊಂದಿರುತ್ತದೆ. (ಸೂಚ್ಯವಾಗಿ ಶಬ್ದದ ಅವ್ಯಕ್ತತೆಯು ಭೌತಿಕ ಮತ್ತು ಕ್ರಿಯಾತ್ಮಕವಾಗಿರುವುದರಿಂದ ಹೀಗಿರುತ್ತದೆ). ಪಠ್ಯವು ಬಲೆಯಂತಿರುತ್ತದೆ. ಪಠ್ಯವನ್ನು ವಿಸ್ತರಿಸಿದರೆ ಅದಕ್ಕೊಂದು ಅನುಚಿತವಾದ ಕ್ರಮಬದ್ಧವಾದ ಕಲ್ಪನೆಯುಬಂದುಬಿಡುತ್ತದೆ.

ಈ ಕಾರಣದಿಂದ ಪಠ್ಯಕ್ಕೆ ವಿಶೇಷವಾದ ಗೌರವ ಸಲ್ಲುವುದಿಲ್ಲ. ಇದು ಛೇದಿಕವಾಗಬಹುದು. 'ಪಠ್ಯ'ವನ್ನು ತಂದೆಯ ಭರವಸೆಯಿಲ್ಲದೆಯೂ ಓದಬಹುದು. ಪಠ್ಯಕ್ಕೆ ಈತ ಮರಳಿಬರುವ ಸಾಧ್ಯತೆಯೂ ಇಲ್ಲ. ಬರಹಗಾರನು ಕಾದಂಬರಿಕಾರನಾಗಿದ್ದ ಪಕ್ಷದಲ್ಲಿ ಅವನು ಕಾದಂಬರಿಯಲ್ಲಿ ಒಂದು ಪಾತ್ರವಾಗಿ ಬರುವ ಸಾಧ್ಯತೆಯಿರುತ್ತದೆ. ಪಾತ್ರವಾಗಿ ಬರುವಾಗ ಅವನು ತನ್ನನ್ನೇ ಚಿತ್ರಿಸುತ್ತಾನೆ. ಆತ 'ಹಾಳೆಯ ಗ್ರಂಥಕರ್ತ'ನಾಗುತ್ತಾನೆ, ಕತೆಯಲ್ಲಿ ಆತನೇ ಬರುವುದರಿಂದ ಗ್ರಂಥದಲ್ಲಿ ಜೀವನವೂ ಅವನದೇ ಆಗಿರುತ್ತದೆ. ಗ್ರಂಥಕ್ಕೆ ಜೀವನದ ಪರಿಣಾಮ ಹೇಗಿರುತ್ತದೋ ಹಾಗೆಯೇ ಗ್ರಂಥದಿಂದ ಜೀವನಕ್ಕೂ ಪರಿಣಾಮವಿರುತ್ತದೆ. ಫ್ರಾಸ್ಟ್ ಮತ್ತು ಜೆನೆಟ್ ಅವರ ಜೀವನವು ಗ್ರಂಥದಲ್ಲಿ ಓದಲು ಅವಕಾಶ ಕಲ್ಪಿಸುತ್ತದೆ. 'ಜೀವನ-ಚರಿತ್ರೆ' ಎನ್ನುವುದರ ಅರ್ಥವೇ ತುಂಬಾ ಪ್ರಬಲವಾಗಿರುವುದಕ್ಕೆ ಕಾರಣವಿದು. ಈ ಶಬ್ದವೇ ಈ ಅರ್ಥವನ್ನು ಸೂಚಿಸುತ್ತದೆ. ಹೀಗಾಗಿ ಸಾಹಿತ್ಯದಲ್ಲಿನ ನೈತಿಕತೆಯು ಅದ್ಭುತವಾಗುತ್ತದೆ. ತಪ್ಪಾದ ಸಮಸ್ಯೆಗಳನ್ನು ಸೃಷ್ಟಿಸುತ್ತದೆ. ನಾನೇ ಬರೆದ ಪಠ್ಯಗಳಲ್ಲಿ ಅದಕ್ಕಿಂತ ಹೆಚ್ಚಾಗಿ ನಾನು ಹಾಳೆಯಲ್ಲಿ ಮೂಡುತ್ತೇನೆ ಅಷ್ಟೆ !

6) ಗ್ರಂಥವು ಸಾಮಾನ್ಯವಾಗಿ ಗ್ರಾಹಕರ ವಸ್ತು. ಇಲ್ಲಿ ಗ್ರಾಹಕರ ಸಂಸ್ಕೃತಿಯನ್ನು ಗಮನಿಸಬೇಕು. ಆದರೆ ಒಂದು ನಿಜವನ್ನು ಇಲ್ಲಿ ಅರ್ಥಮಾಡಿಕೊಳ್ಳಬೇಕು... ಅದೆಂದರೆ ಗ್ರಂಥದ ಗುಣಮಟ್ಟ. (ಇದು ಮುಖ್ಯವಾಗಿ ಅಭಿರುಚಿಗೆ ಸಂಬಂಧಿಸಿದ್ದು) ಮತ್ತು ಓದುವ ಕ್ರಮಕ್ಕೆ ಅನುಸಾರವಾಗಿ ಒಂದು ಗ್ರಂಥಕ್ಕಿಂತ ಇನ್ನೊಂದು ಗ್ರಂಥ ಭಿನ್ನವಾಗಬಹುದು. ಹಾಗೆಂದು ಸಂಸ್ಕಾರರಹಿತ ಓದಿಗೂ, ಸಾಮಾನ್ಯ ಕಾರಣದ

ಓದಿಗೂ ರಚನೆಯ ದೃಷ್ಟಿಯಿಂದ ಅಷ್ಟೇನೂ ವ್ಯತ್ಯಾಸವಿಲ್ಲ. ಪಠ್ಯವು ಒಂದು ನಾಟಕವಾಗಿ, ಸಮಸ್ಯೆಯಾಗಿ, ಉತ್ಪಾದನೆಯಾಗಿ, ಕ್ರಿಯಾತ್ಮಕ ಚಟುವಟಿಕೆಯಾಗಿ ಇರುವಂತಹುದು. ಇದರರ್ಥ; ಪಠ್ಯವು ಬರಹ ಮತ್ತು ಓದಿನ ಅಂತರವನ್ನು ಕಡಿಮೆ ಮಾಡಲು ಪ್ರಯತ್ನಿಸುತ್ತದೆ. ಓದುಗನಿಗೆ ವೇಗವರ್ಧಕದಂತೆ ಇದು ಸಹಾಯ ಮಾಡುತ್ತದೆ.

ಬರವಣಿಗೆಗೂ ಓದಿಗೂ ಇರುವ ಅಂತರ ಚಾರಿತ್ರಿಕವಾದುದು. ಇದೊಂದು ಸಾಮಾಜಿಕ ವಿಭಾಗೀಕರಣಕ್ಕೆ ಸಂಬಂಧಿಸಿದುದು. ಓದು ಮತ್ತು ಬರಹ ಎರಡೂ ವರ್ಗದ ಸೂಚನೆಯಿಂದ ಬಂದಿರುವಂತಹುದು. (ಪ್ರಜಾಪ್ರಭುತ್ವದ ಸಂಸ್ಕೃತಿಯು ಬರುವ ಮೊದಲು ಇವೆರಡೂ ಒಂದೇ ವರ್ಗಕ್ಕೆ ಸಂಬಂಧಿಸಿತ್ತು). ಲಯಬದ್ಧವಾದ, ಮಹತ್ತ್ವದ ಸಾಹಿತ್ಯ ಸಂಜ್ಞೆಗಳು ಅಕಾಲ ಘಟ್ಟದಲ್ಲಿ ಬರವಣಿಗೆಯನ್ನು ಕಲಿಸಿದವು (ಹಾಗಿದ್ದರೂ ಭಾಷಣಗಳು ಮತ್ತು ಪಠ್ಯಗಳು ಉತ್ಪಾದನೆಯ ರೂಪದಲ್ಲಿ ಬರಲಿಲ್ಲ). ಪ್ರಜಾಪ್ರಭುತ್ವದ ಸಂಸ್ಕೃತಿಯಲ್ಲಿ ಇದು ಬದಲಾಗಿದೆ. ಈಗ ಶಾಲೆಯಲ್ಲಿ ಹೇಗೆ ಓದ ಬೇಕೆಂದು ಮತ್ತು ಬರೆಯಬೇಕೆಂದು ಕಲಿಸಲಾಗುತ್ತದೆ.

ಓದುವುದು ಎಂದರೆ ಗೃಹೀತ ಅರ್ಥದಲ್ಲಿ ಕೊಂಡುಕೊಳ್ಳುವುದು ಎಂದೇ ಆಗುತ್ತದೆ. 'ಪಠ್ಯ'ವು ಅದರಷ್ಟಕ್ಕೆ ಆದು ಆಟವಾಡುತ್ತದೆ. ಓದುಗ ಎರಡು ಬಾರಿ ಆಟವಾಡುತ್ತಾನೆ—ಒಮ್ಮೆ ಕೃತಿಯೊಂದಿಗೆ ಆಟವಾಡುತ್ತಾನೆ. ಮತ್ತೊಮ್ಮೆ ಸ್ವ-ಹುಡುಕಾಟದಲ್ಲಿ ಆಂತರಿಕ ಅನುಕರಣೆಯಲ್ಲಿ ಆಟವಾಡುತ್ತಾನೆ. ಸಂಗೀತದ ಅರ್ಥದಲ್ಲಿಯೂ ಪಠ್ಯದೊಂದಿಗೆ ಆಟವಾಡುತ್ತಾನೆ. ಸಂಗೀತದ ಚರಿತ್ರೆ (ಅಭ್ಯಾಸದ ಕ್ರಮವಾಗಿ ಸಂಗೀತ,–ಕಲೆಯಾಗಿ ಸಂಗೀತವಲ್ಲ.) ಮತ್ತು ಪಠ್ಯದ ಚರಿತ್ರೆಯು ಸಮಾನಾಂತರವಾದುದು. ಸಂಗೀತದ ಆಸಕ್ತಿಯುಳ್ಳವರು ಸಂಗೀತವನ್ನು ಅಭ್ಯಸಿಸಲು ಒಂದು ನಿರ್ದಿಷ್ಟ ಸಮಯವಿದೆ. ಆಟವಾಡುವುದು, ಕೇಳುವುದು ಕೂಡಾ ಇದೇ ರೀತಿಯ ಚಟುವಟಿಕೆಯನ್ನು ಹೊಂದಿದೆ. ಹಾಗಾಗಿ ಇದರ ಯಶಸ್ಸಿಗೆ ಎರಡು ಪಾತ್ರಗಳಿವೆ—ಒಂದು, ಅನ್ವಯಕಾರರದು, ಸಾರ್ವಜನಿಕರ ಎದುರು ಇವರು ತಮ್ಮ ಪ್ರದರ್ಶನ ಏರ್ಪಡಿಸುತ್ತಾರೆ. ಇನ್ನೊಂದು ಆಸಕ್ತರದು. ಸಂಗೀತ ಗೊತ್ತಿಲ್ಲದಿದ್ದರೂ ಕೇಳುವ ಆಸಕ್ತಿ ಇವರಿಗಿರುತ್ತದೆ.

ಪಠ್ಯವು ಈ ರೀತಿಯಿಂದ ಹೊಸ ತರಹದ್ದು. ಇದು ಓದುಗರ ಸಹಯೋಗವನ್ನು ಬಯಸುತ್ತದೆ. ಹೀಗಾಗಿ ನಮ್ಮನ್ನು ಒಂದು ಪ್ರಶ್ನೆ ಕೇಳುವಂತೆ ಇದು ಮಾಡುತ್ತದೆ; ಯಾರು ಈ ಕಾರ್ಯವನ್ನು ನಿರ್ವಹಿಸಿದರು ? ಇಂದು ವಿಮರ್ಶಕನೇ ಈ ಎರಡೂ ಕಾರ್ಯವನ್ನು ನಿರ್ವಹಿಸುತ್ತಾನೆ. ಓದು ಕಡಿತಗೊಂಡಾಗ ಅನೇಕರಿಗೆ ಪಠ್ಯವು ಬೋರ್ ಹೊಡೆಸುವ ಕ್ರಿಯೆಯಾಗುತ್ತದೆ. ಪಠ್ಯವು ಬೋರಾಗಲು ಕಾರಣವೆಂದರೆ, ಅವನಿಗೆ ಅದರೊಂದಿಗೆ ಆಟವಾಡಲು, ಪುನರ್ ನಿರ್ಮಿಸಲು ಸಾಧ್ಯವಾಗುವುದಿಲ್ಲ ಎಂದಷ್ಟೆ. ಪಠ್ಯವನ್ನು ಚಲಿಸಲು ಅವಕಾಶ ಕಲ್ಪಿಸಿದಾಗ ಅದು ಬೋರ್ ಹೊಡೆಯುವುದಿಲ್ಲ.

7) ಅಂತಿಮವಾಗಿ ಪಠ್ಯದ ಬಗೆಗಿನ ಅಂಶವೆಂದರೆ—ಸಂತೋಷ. ಸಂತೋಷವು ಗ್ರಂಥದ ಜೊತೆಗಿರುತ್ತದೆ ಎನ್ನುವುದರಲ್ಲಿ ಎರಡು ಮಾತಿಲ್ಲ. ಫ್ರಾಸ್ಟ್‌ನನ್ನು, ಬಾಲ್ಜಾಕ್‌ನನ್ನು, ಓದುವಾಗ ನನಗೆ ಖುಷಿಯಾಗಿದೆ. ಈಗ ಸಂತೋಷ ನಾವು ಕೊಂಡುಕೊಳ್ಳುವಾಗ ಉಂಟಾಗುವ ಸಂತೋಷವೂ ಹೌದು. ಯಾವುದೇ ಬರಹಗಾರನನ್ನು ಓದುವಾಗ ಅದರಂತೆ ನನಗೆ ಬರೆಯಲು ಸಾಧ್ಯವಿಲ್ಲ ಎನ್ನುವ ಖುಷಿ ಇರುತ್ತದೆ.

ಪಠ್ಯವು ಇನ್ನೊಂದೆಡೆಯಿಂದ ಆನಂದವನ್ನೂ, ತೃಪ್ತಿಯನ್ನೂ ಕೊಡುತ್ತದೆ. ಸೂಚಕನಿಗೆ ಅನುಗುಣವಾಗಿ ಪಠ್ಯವೂ ಸಾಮಾಜಿಕ ಪ್ರಕ್ರಿಯೆಲ್ಲಿ ಭಾಗವಹಿಸುತ್ತದೆ. ಚರಿತ್ರೆಯಲ್ಲಿ ತನ್ನ ಸ್ಥಾನವನ್ನು ಪಡೆದುಕೊಳ್ಳುತ್ತಾನೆ. ಕೊನೆಯಪಕ್ಷ ಭಾಷೆಯು ಪಾರದರ್ಶಕಗುಣದ ಸಂಬಂಧವನ್ನು ಹೊಂದಿರುತ್ತದೆ. ಭಾಷೆಯು ಇಲ್ಲಿ ಸುತ್ತಾಡುತ್ತದೆ.

ಇದಿಷ್ಟು 'ಪಠ್ಯ'ದ ಬಗೆಗಿನ ಕೆಲವು ಸೂಚನೆಗಳು. ಪಠ್ಯದ ಸಂವಹನವು ಪಠ್ಯವನ್ನೇ ಹೊಂದಿರುತ್ತದೆ. ಪಠ್ಯಕ್ಕಿರುವ ಸಾಮಾಜಿಕ ಅವಕಾಶದಿಂದ ಪಠ್ಯದ ಭಾಷೆ ಛೇದಗೊಳ್ಳದೆ ಉಳಿಯುವುದಿಲ್ಲ. 'ಪಠ್ಯ'ದ ಸಿದ್ಧಾಂತವು ಬರಹದ ಚಟುವಟಿಕೆಗೆ ಸಂಬಂಧಿಸಿದುದಾಗಿದೆ.

---

'ಪಠ್ಯ' ಎನ್ನುವುದನ್ನು 'Text' ಎನ್ನುವುದಕ್ಕೆ ಸಂವಾದಿಯಾಗಿ ಬಳಸಲಾಗಿದೆ. 'Text' ಎನ್ನುವುದಕ್ಕೆ ಲ್ಯಾಟಿನ್ 'tissue' ಸಂಯೋಜಿಸಿದ ಮಾಲೆ ಎನ್ನುವ ಅರ್ಥ ಬರುತ್ತದೆ. 'ವಾಕ್ಯವೃಂದ' ಎನ್ನುವುದನ್ನೇ ಪಠ್ಯವು ಸೂಚಿಸುತ್ತದೆ. (Roland Barthes 'From work to text' Josue, V. Harari 1979, Textual strategies, Methuen & Co. Ltd., New Fetter lane, London. (P-73-81). ಲೇಖನದ ಆಧಾರದಿಂದ ಇದನ್ನು ಸಿದ್ಧಪಡಿಸಲಾಗಿದೆ.

# ಲೇಖಕರ ವಿಳಾಸ


1 ರಾಮಚಂದ್ರದೇವ
166/ಎ, 22ನೇ ಮೇನ್‌ರಸ್ತೆ.
ಶ್ರೀನಗರ, ಬೆಂಗಳೂರು–560 050

2 ಸುಬ್ರಾಯ ಚೊಕ್ಕಾಡಿ
ಚೊಕ್ಕಾಡಿ, ದ. ಕ–574 212

3 ಶಂಕರ ಕಟಗಿ
ಇಂಗ್ಲಿಷ್ ಉಪನ್ಯಾಸಕ, ಸರಕಾರಿ ಪದವಿಪೂರ್ವ ಕಾಲೇಜು
ಗುಡಗೇರಿ–581 107
ತಾಲ್ಲೂಕು ಕುಂದಗೋಳ, ಧಾರವಾಡ ಜಿಲ್ಲೆ

4 ಜಿ. ಕುಮಾರಪ್ಪ
ಸಹಾಯಕ ಗ್ರಂಥಪಾಲಕ, ರಾಷ್ಟ್ರೀಯ ಗ್ರಂಥಾಲಯ (ಕನ್ನಡ ವಿಭಾಗ)
ಬೆಲ್ವೆದೆರೆ, ಕಲ್ಕತ್ತಾ–700 027

5 ವಿ. ಕೆ. ಜನಾರ್ದನ ಅಯ್ಯಂಗಾರ್
ಇಂಗ್ಲಿಷ್ ಪ್ರೊಫೆಸರ್, ಪಿ.ಇ.ಎಸ್. ಸೈನ್ಸ್ ಕಾಲೇಜ್
ಮಂಡ್ಯ–571 401
(ಕರ್ನಾಟಕ ರಾಜ್ಯ)

6 ಆರ್ವಿಯಸ್ ಸುಂದರಂ
ಕನ್ನಡ ಅಧ್ಯಯನ ಸಂಸ್ಥೆ,
ಮಾನಸ ಗಂಗೋತ್ರಿ,
ಮೈಸೂರು – 6

7 ಸುಮತೀಂದ್ರ ನಾಡಿಗ
38, 1ನೇ ಮೇನ್, 3ನೇ ಫೇಸ್, 6ನೇ ಬ್ಲಾಕ್,
ಬನಶಂಕರಿ 3ನೇ ಸ್ಟೇಜ್,
ಬೆಂಗಳೂರು–560 085

8 ಶ್ರೀಮತಿ ವಿಜಯಾ ಮುಖೋಪಾಧ್ಯಾಯ
ಫ್ಲಾಟ್ 3ಸಿ/1,
18/3, ಗರಿಯಾಹಟ್ ರೋಡ್,
ಕಲ್ಕತ್ತಾ–700 019

9 ಶರತ್ ಮುಖೋಪಾಧ್ಯಾಯ
ಫ್ಲಾಟ್ 3ಸಿ/1, 18/3, ಗರಿಯಾಹಟ್ ರೋಡ್
ಕಲ್ಕತ್ತಾ - 700 019

10 ಎಸ್. ವಿ. ಶ್ರೀನಿವಾಸರಾವ್
403, ಸೌರಭ,
17ನೇ ಮುಖ್ಯರಸ್ತೆ, ಶ್ರೀನಗರ, ಬೆಂಗಳೂರು - 560 050

11 ಶ್ರೀನಿವಾಸ್ ವಿ. ಸುತ್ರಾವೆ
658/ಬಿ, ಬಸವೇಶ್ವರ ಕೃಪ
ಕೆ. ಆರ್. ಪುರಂ, ಹಾಸನ - 573 201

12 ಪ್ರಿಯಾ ಸಿ. ಎಚ್.
ಕೇರಾಫ್ ಎಸ್. ರಾಧಾಕೃಷ್ಣ
ಚಂದ್ರಗಿರಿ ದೇವಸ್ಥಾನದ ಹತ್ತಿರ
ಚಂದ್ರಗಿರಿ ಪೋಸ್ಟ್, ಕಾಸರಗೋಡು - 670 317

13 ಶ್ರೀಮತಿ ಶೋಭಾ ವಾರಿಯರ್
117, ಎ.ಐ.ಸಿ.ಓ. ಬಿ.ಓ.ಓ. ನಗರ
ಮಡಿವಾಳ ಪೋಸ್ಟ್
ಬೆಂಗಳೂರು - 560 068

14 ಬಿ. ಆರ್. ಲಕ್ಷ್ಮಣರಾವ್
ಮಾರುತಿ ಸ್ಟುಡಿಯೋ, ಕೆ. ಆರ್. ಬಡಾವಣೆ
ಚಿಂತಾಮಣಿ (ಕೋಲಾರ ಜಿಲ್ಲೆ)

15 ಸ. ರಘುನಾಥ
ಅಧ್ಯಾಪಕರು, ಗೌನಿಪಲ್ಲಿ, ಶ್ರೀನಿವಾಸಪುರ ತಾಲ್ಲೂಕು
ಕೋಲಾರ ಜಿಲ್ಲೆ

16 ಡಿ. ಎಸ್. ಶ್ರೀನಾಥ್
ಅಸಿಸ್ಟೆಂಟ್ ಮಾಸ್ಟರ್, ಕಸ್ತೂರಬಾ ಗರ್ಲ್ಸ್ ಪ್ರಿ-ಯೂನಿವರ್ಸಿಟಿ ಕಾಲೇಜ್
(ಹೈಸ್ಕೂಲು ಸೆಕ್ಷನ್), ಶಿವಮೊಗ್ಗ-577 201

17 ಭೀಷ್ಮಸಾಹನಿ
8/30, ಈಸ್ಟ್ ಪಟೇಲ್‌ನಗರ
ನ್ಯೂ ದೆಹಲಿ-110 008

18 ಅ. ಬಾಲಕೃಷ್ಣಶೆಟ್ಟಿ ಪೊಳಲಿ
ಶ್ರೀದೇವೀ ಪ್ರಸಾದ
ಪರ್ಕಳ-576 123

19 ಶ್ರೀ ರಾಮಭಟ್ಟ
111, ಔಟ್‌ಹೌಸ್. 28ನೇ ಕ್ರಾಸ್, 2ನೇ ಮೈನ್, 7ನೇ ಬ್ಲಾಕ್
ಜಯನಗರ, ಬೆಂಗಳೂರು-560 082

20 ರಾ. ಲಕ್ಷ್ಮೀನಾರಾಯಣ
3283, ಪಾಪಣ್ಣನವರ ಮನೆಯ ಎದುರು, ಪಿ. ಸಿ. ಬಡಾವಣೆ
ಕೋಲಾರ-563 101

21 ಡಾ॥ ಏಟ್ಕೂರಿ ಪ್ರಸಾದ್
3-6-737/3, ಹಿಮಾಯತ್‌ನಗರ, ಹೈದರಾಬಾದ್-500 029

22 ಗೋನವಾರ ಕಿಷನ್‌ರಾವ
3-3-977/B, ಕುತುಬ್‌ಬಿಂಗ್‌ದಾ, ಹೈದರಾಬಾದ್-500 027

23 ಗಾಯತ್ರಿ ಎನ್.
ಬಿ–30, ಒಂದನೇ ಮೇನ್, ಆರ್. ಬಿ. ಐ. ಸ್ಟಾಫ್ ಕ್ವಾರ್ಟರ್ಸ್
9ನೇ ಕಾಸ್, ವಿಜಯನಗರ 2ನೇ ಘಟ್ಟ, ಬೆಂಗಳೂರು–560 040

24 ಡಾ॥ ಕೇಶವಶರ್ಮ
ಕನ್ನಡ ಅಧ್ಯಯನ ವಿಭಾಗ, ಕುವೆಂಪು ಯೂನಿವರ್ಸಿಟಿ
ಬಿ. ಆರ್. ಪ್ರಾಜೆಕ್ಟ್-577 115

25 ಪ್ರೊ. ಪಿ. ಶ್ರೀನಿವಾಸರಾವ್
ಕೇರಾಫ್, ಡಾ॥ ಸುಮತೀಂದ್ರನಾಡಿಗ

ಸಂ. 3-2
ಜುಲೈ 1990 - ಸೆಪ್ಟೆಂಬರ್ 1990

# ಅನಿಕೇತನ

ಇದು ಕನ್ನಡೇತರ ಸಾಹಿತ್ಯ ಪರಿಚಯಕ್ಕೆ
ಮೀಸಲಾದ ತ್ರೈಮಾಸಿಕ

ಸಂಪಾದಕರು :
ಬಿ. ವೈ. ಲಲಿತಾಂಬ
ಡಾ. ಆರ್ಬ್ವಿಯಸ್. ಸುಂದರಂ
ಡಾ. ಎಚ್. ಎಸ್. ವೆಂಕಟೇಶ ಮೂರ್ತಿ

---

ಚಂದಾ ಹಣವನ್ನು ರಿಜಿಸ್ಟ್ರಾರ್, ಕರ್ನಾಟಕ ಸಾಹಿತ್ಯ ಅಕಾಡೆಮಿ, ನಂ. 14/3-ಅ,
ನೃಪತುಂಗ ರಸ್ತೆ, ಬೆಂಗಳೂರು—560 002 ಇವರಿಗೆ ಕಳುಹಿಸಬೇಕು.